
ಒಂಭತ್ತನೇ ಯೋಜನೆ -
ಜನಕೀಯ ಯೋಜನೆ






DEVELOPMENT REPORT 1996

ಅಭಿವೃದ್ಧಿ ವರದಿ
1996


ಎಣ್ಮಕಜೆ ಗ್ರಾಮ ಪಂಚಾಯತ್




ದಿ। ದೇವಪ್ಪ ಆಳ್ವ (ಕುಂಬಳೆ ಗಾಂದಿ)
ಸ್ವಾತಂತ್ರ್ಯ ಹೋರಾಟಗಾರ




ಕೆ.ವೈ. ನಾರಾಯಣ ರೈ
ಮಾಜಿ ಅಧ್ಯಕ್ಷರು



ಕೇಶವ ಭಟ್
ಪತ್ರಡ್ಕ
ಮಾಜಿ ಅಧ್ಯಕ್ಷ



ಟಿ.ಆರ್.ಕೆ. ಭಟ್
ಮಾಜಿ ಅಧ್ಯಕ್ಷರು



ಆಡಳಿತ ಮಂಡಳಿ



ಶ್ರೀಮತಿ ಎಂ. ಪ್ರೇಮ
ಅಧ್ಯಕ್ಷೆ




ಶ್ರೀ ಸಂಜೀವ ರೈ
ಉಪಾಧ್ಯಕ್ಷ



ಶ್ರೀ ಬಿ.ಎಸ್. ಹಮೀದ್
ಸ್ಟ್ಯಾಂಡಿಂಗ್ ಕಮಿಟಿ
ಚೇರ್‌ಮೆನ್

ಸದಸ್ಯರು




ಶ್ರೀಮತಿ ಎಮ್. ಲಕ್ಷ್ಮಿ




ಶ್ರೀ ಪರಮೇಶ್ವರ ನಾಯ್ಕ



ಶ್ರೀಮತಿ ಚಿತ್ರಲೇಖ ರೈ




ಶ್ರೀ ಬಾಲಕೃಷ್ಣ ಎಮ್.ಕೆ.



ಶ್ರೀ ಕೆ. ನಾರಾಯಣ



ಶ್ರೀ ಎ. ಚಿನಿಯಪ್ಪ ಪೂಜಾರಿ



ಶ್ರೀ ಕೃಷ್ಣ ನಾಯ್ಕ



ಶ್ರೀಮತಿ ಎಮ್. ಜಲಜ ಪಿ. ಆಳ್ವ

ಜಿಲ್ಲಾ ರಿಸೋರ್ಸ್ ಪರ್ಸನ್ಸ್

ಅಹಮ್ಮದ್ ಅಲಿ, M.A. (Co-ordinator)

ಗುರುವಪ್ಪ ಪೆಲ್ತಾಜೆ M.A.

ಪರಮೇಶ್ವರ ನಾಯ್ಕ ಪಿ. B.A. Bed

ಲಕ್ಷ್ಮಣ ಪಿ. B.A.

ಚಂದ್ರಾವತಿ ಯಂ. B.A.

ಸಂಪಾದಕ ಮಂಡಳಿ

ಸಿ. ಸಂಜೀವ ರೈ (ಉಪಾಧ್ಯಕ್ಷರು)

ಶಿವ ಪಡ್ರೆ (ನಿವೃತ್ತ ಮುಖ್ಯೋಪಾಧ್ಯಾಯರು, ಸ್ವರ್ಗ)

ಮದನ ಮಾಸ್ಟರ್, ಸೇರಾಜೆ

ಅಬ್ದುಲ್ಲ ಕುಡ್ಪ (ನಿವೃತ್ತ ಅಧ್ಯಾಪಕರು)

ಸುಬ್ರಹ್ಮಣ್ಯ ಭಟ್. ಶಿರಂತಡ್ಕ (ನಿವೃತ್ತ ಪ್ರಿನ್ಸಿಪಾಲ್)

ನಾರಾಯಣ ಕಾಮತ್ ಕರೋಡಿ, ನಿವೃತ್ತ ಪಂಚಾಯತ್ ಯು.ಡಿ. ಕ್ಲಾರ್ಕ್

ಶಂಕರ್ ಮೋಹನ್‌ದಾಸ್ ಅಳ್ಪ (ನಿವೃತ್ತ ಮುಖ್ಯೋಪಾಧ್ಯಾಯರು)

ಅಭಿವೃದ್ಧಿ ವರದಿ ತಯಾರಿ

1. ಕೃಷಿ ಮತ್ತು ನೀರಾವರಿ	:	ಸತೀಶ್ ಪುಣ್ಚೆತ್ತಾಯ (ಅಧ್ಯಾಪಕರು)
	:	ಕುಸುಮ ಪಿ. (ಬಾಲವಾಡಿ ಟೀಚರ್ PRP)
	:	ಶ್ರೀನಿವಾಸ ಪೆರಿಕ್ಕಾನ (P.R.P.)
	:	ನಾರಾಯಣ ನಾಯ್ಕ ಪಿ. PRP
2. ಮೃಗ ಸಂರಕ್ಷಣೆ ಮತ್ತು ಮೀನುಗಾರಿಕೆ	:	ಸದಾನಂದ ಶೆಟ್ಟಿ (ಅಧ್ಯಾಪಕರು)
	:	ಶ್ಯಾಮಲ ಪಿ. PRP
	:	ಲಕ್ಷ್ಮಣ ಪಿ. DRP
3. ವಿದ್ಯಾಭ್ಯಾಸ	:	ಲೋಕನಾಥ ಶೆಟ್ಟಿ (ಅಧ್ಯಾಪಕರು)
	:	ಸುಧೀರ್ ಕುಮಾರ್ (ಅಧ್ಯಾಪಕರು)
	:	ಜನಾರ್ಧನ ಮಾಸ್ಟರ್ (ನಿವೃತ್ತ ಮುಖ್ಯೋಪಾಧ್ಯಾಯರು)
	:	ಗೋಪಾಲಕೃಷ್ಣ ಭಟ್ (ಅಧ್ಯಾಪಕರು)
4. ಕುಡಿಯುವ ನೀರು ಮತ್ತು ಆರೋಗ್ಯ	:	ಕು. ಲಲಿತಾ ಯಸ್. (ಅಂಗನವಾಡಿ ಟೀಚರ್) PRP
	:	ಲಕ್ಷ್ಮಣ ಪಿ. DRP
	:	ಗೋಪಾಲ ಕಾಟುಕುಕ್ಕೆ (PRP)
5. ಕೈಗಾರಿಕೆ	:	ಗೋಪಾಲ ಕಾಟುಕುಕ್ಕೆ (PRP)
	:	ರಮೇಶ್ ಸೇರಾಜೆ
	:	ಪರಮೇಶ್ವರ ನಾಯ್ಕ ಪಿ. DRP
6. ಸಾರಿಗೆ ಮತ್ತು ಚೈತನ್ಯ	:	ಶ್ರೀನಿವಾಸ್ ಪೆರಿಕ್ಕಾನ (P.R.P.)
	:	ಸತೀಶ್ ಪುಣ್ಚೆತ್ತಾಯ (ಅಧ್ಯಾಪಕರು)
	:	ರಮಾನಂದ ಕಿಣಿ, ಪೆರ್ಲ
ವಸತಿ ಮತ್ತು ಸಾಮಾಜಿಕ ಕ್ಷೇಮ	:	ಲಕ್ಷ್ಮಣ ಪಿ. DRP
	:	ಶ್ರೀನಿವಾಸ ನಾಯ್ಕ ಪೆರಿಕ್ಕಾನ (PRP)
	:	ಕು. ಲಲಿತಾ ಎನ್. (ಅಂಗನವಾಡಿ ಟೀಚರ್) PRP
	:	ಕು. ಚಂದ್ರಾವತಿ ಯಂ. DRP
8. ಸಾಂಸ್ಕೃತಿಕ	:	ಶಿವ ಪಡ್ರೆ (ನಿವೃತ್ತ ಮುಖ್ಯೋಪಾಧ್ಯಾಯರು)
	:	ಸುರೇಶ ಶಿರಂತ್ತಡ್ಕ

	:	ಸುಂದರ ಅಪ್ಪಯ್ಯ ಮೂಲೆ
	:	ನಾರಾಯಣ ಕಾಮತ್ ಕರೋಡಿ
9. ಪನಿತಾ/ಮಹಿಳಾ ಕ್ಷೇಮತ	:	ಶ್ರೀಮತಿ ಚಿತ್ರಲೇಖಾ ರೈ
		(ಪಂಚಾಯತ್ ಸದಸ್ಯರು)
	:	(ವಿಜಯಲಕ್ಷ್ಮಿ ಬಿ. (DRP)
	:	ಶ್ರೀಮತಿ ಜಲಜ ಸಿ. ಆಳ್ವ
		ಪಂಚಾಯತ್ ಸದಸ್ಯರು
10. ಸಹಕಾರಿ	:	ಶ್ರೀ ಕೆ. ಚಂದ ಪೆರ್ಲ
		ರಮೇಶ್ ಎಸ್. ಸೇರಾಜೆ
		ಕೃಷ್ಣಕುಮಾರ್ ಕೆ.
11. ಪ. ಜಾತಿ. / ಪ. ವರ್ಗ	:	ಲಕ್ಷ್ಮಣ ಪಿ. DRP
	:	ಸುಂದರ ಅಪ್ಪಯ್ಯಮೂಲೆ
	:	ಸೂರ್ಯ ನಾಯ್ಕ (PRP)
	:	ಐತ್ತು ನಾಯ್ಕ ಬಜಕೂಡ್ಲು
	:	ನಾರಾಯಣ ನಾಯ್ಕ ಪಿ. (PRP)
12. ಸಂಪನ್ಮೂಲ ಸಂಗ್ರಹ	:	ಲಕ್ಷ್ಮಣ ಪಿ. DRP
	:	ನಾರಾಯಣ
	:	ಅಹಮ್ಮದ್ ಆಲಿ ಎಂ.ಎ. Co-ordinator

ಭೂ ಪರ್ಯಟನ (ಅಧ್ಯಯನ ವಿಭಾಗ) ವಿಭಾಗ

1. ಶ್ರೀ ಕೃಷ್ಣ ರಾವ್ ಪೆರಿಯಾಲ್
2. ಪೆಲ್ತಾಜೆ ನಾರಾಯಣ ಭಟ್
3. ಪರಮೇಶ್ವರ ನಾಯ್ಕ ಕೆ. (ಸದಸ್ಯರು)
4. ಸಿ. ಸಂಜೀವ ರೈ (ಉಪಾಧ್ಯಕ್ಷರು)
5. ಕೃಷ್ಣ ಮಾಸ್ಟರ್ (ನಿವೃತ್ತ ಅಧ್ಯಾಪಕರು)
6. ತಿರುಮಲ ಚಂದ್ರ ಭಟ್ ಯಂ.
7. ನಾರಾಯಣ ಕೆ. (ಸದಸ್ಯರು)
8. ಬಾಲಕೃಷ್ಣ ಯಂ.ಕೆ. (ಸದಸ್ಯರು)
9. ಲಕ್ಷ್ಮಣ ಪಿ. DRP
10. ಯೂಸೆಫ್ ಅಮೆಕ್ಕಳ
11. ಯಂ. ಜಲಜ ಸಿ. ಆಳ್ವ (ಸದಸ್ಯರು)
12. ಚಂದ್ರಾವತಿ ಯಂ. DRP
13. ಶ್ರೀಮತಿ ಲಕ್ಷ್ಮಿ (ಮುಳಿಯಾಲ (ಸದಸ್ಯರು)
14. ಶ್ರೀ ಎ. ಚನಿಯಪ್ಪ ಪೂಜಾರಿ, ಸದಸ್ಯರು
15. ಶ್ರೀಮತಿ ಎಂ. ಪ್ರೇಮ, ಅಧ್ಯಕ್ಷರು

ಅನುಕ್ರಮಣಿಕೆ

	ವಿಷಯ	ಪುಟ
1.	ಮುನ್ನುಡಿ	8
2.	ಪಂಚಾಯತ್ - ಚರಿತ್ರೆ	9
3.	ಕೃಷಿ ಮತ್ತು ನೀರಾವರಿ	16
4.	ಮೀನುಗಾರಿಕೆ ಮತ್ತು ಮೃಗ ಸಂರಕ್ಷಣೆ	25
5.	ಶಿಕ್ಷಣ	29
6.	ಕುಡಿಯುವ ನೀರು ಮತ್ತು ಆರೋಗ್ಯ	36
7.	ಕೈಗಾರಿಕೆ	41
8.	ಸಾರಿಗೆ ಮತ್ತು ಚೈತನ್ಯ	50
9.	ವಸತಿ ಮತ್ತು ಸಾಮಾಜಿಕ ಕ್ಷೇಮ	61
10.	ಸಾಂಸ್ಕೃತಿಕ ರಂಗ	70
11.	ಮಹಿಳಾ ಕ್ಷೇಮ	74
12.	ಸಹಕಾರಿ ರಂಗ	78
13.	ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಕ್ಷೇಮ	81
14.	ಸಂಪನ್ಮೂಲ ಸಂಗ್ರಹ	92
15.	ಹಿನ್ನುಡಿ	98

ಮುನ್ನುಡಿ

ಸ್ವತಂತ್ರ ಭಾರತದ 94 ಕೋಟಿಗಿಂತ ಅಧಿಕವಾದ ವಿಪುಲ ಜನಾಂಗವನ್ನು ಸಮೃದ್ಧಿ ಹಾಗೂ ಸಮತ್ವಗಳ ಲಕ್ಷ್ಯದೆಡೆಗೊಯ್ಯುವ ಹಂತ ಹಂತವಾದ ಪಂಚವಾರ್ಷಿಕ ಯೋಜನೆಗಳ ಚರಿತ್ರೆಯಲ್ಲಿ ಈ ಒಂಬತ್ತನೆಯ ಯೋಜನೆಯನ್ನು ಶ್ರೀಸಾಮನ್ಯ ಜನತೆಗೆ ತಲುಪಿಸುವ ಆಶಯಗಳಿರುವುದರಿಂದ ನವ ಸಂಪುಟವೊಂದನ್ನು ತೆರೆದಂತಾಗಿದೆ.

ಪರಂಪರಾಗತವಾದ ಕೇಂದ್ರೀಕೃತ ಆಶಯಗಳಿಂದ ಭಿನ್ನವಾಗಿ ಸಾಮಾನ್ಯ ಜನ ಸಹಭಾಗಿತ್ವದಿಂದ ಕೂಡಿದ ವಿಕೇಂದ್ರೀಕೃತ ಯೋಜನೆಯ ಆಶಯಗಳು ನಮ್ಮ ಕೇರಳದಲ್ಲಿ ಕಾರ್ಯರೂಪಕ್ಕೆ ಬರುವ ಸನ್ನದ್ಧತೆಯಲ್ಲಿದೆ. ಅಧಿಕಾರ ವಿಕೇಂದ್ರೀಕರಣ ತತ್ವಗಳು ಯಾಥಾರ್ಥ್ಯ ಹೊಂದಬೇಕಾದರೆ ಅಭಿವೃದ್ಧಿ ಯೋಜನೆಗಳು ವಿಕೇಂದ್ರೀಕೃತವಾಗಬೇಕು.

ಸ್ವಾತಂತ್ರ್ಯ ಪ್ರಾಪ್ತಿಯ ಅರ್ಧ ಶತಮಾನೋತ್ಸವವನ್ನು ಆಚರಿಸುವ ಮುಹೂರ್ತಗಳು ಕೇವಲ ಕೆಲವೇ ತಿಂಗಳುಗಳ ಅನತಿದೂರದ ಭವಿಷ್ಯದಲ್ಲಿವೆ. ನಮ್ಮ ಪ್ರಜಾಪ್ರಭುತ್ವ ರಾಷ್ಟ್ರದ ಪ್ರಗತಿ ಸಾಧನೆಯ ಪಥದಲ್ಲಿ ಹಲವಾರು ಮೈಲುಗಲ್ಲುಗಳನ್ನು ದಾಟಿ ನಾವು ಮುಂದುವರಿದಿದ್ದರೂ ಜನ ಸಾಮಾನ್ಯನ ಮೌಲಿಕಾವಶ್ಯಕವಾದ ಪ್ರಶ್ನೆಗಳಿಗೆ ಸಮರ್ಪಕ ಪರಿಹಾರಗಳು ಇನ್ನೂ ಪ್ರಾಪ್ತವಾಗಿಲ್ಲ. ಎಂಟು ಪಂಚವಾರ್ಷಿಕ ಯೋಜನೆಗಳನ್ನು ಹಿನ್ನೋಟವಾಗಿರಿಸಿಕೊಂಡು ಉತ್ಕಂಠೆಯಿಂದ ಒಂಬತ್ತನೆಯ ಯೋಜನೆಯ ಮುನ್ನೋಟದಲ್ಲಿ ನಾವಿದ್ದೇವೆ. ನಾವು ಸಾಂಪ್ರದಾಯಕವಾಗಿ ಮುಂದುವರಿದು ಬಂದ ಯೋಜನೆಗಳಲ್ಲಿ ಕೆಲವೊಂದು ಮೌಲಿಕ ಲೋಪ, ದೋಷ, ವಿಕಲತೆಗಳಿರುವುದನ್ನು ಎಲ್ಲರೂ ಒಪ್ಪಿಕೊಂಡ ಒಂದು ಸತ್ಯ ಸಂಗತಿಯಾಗಿದೆ.

ಸಾಂವಿಧಾನಿಕವಾದ ತಿದ್ದುಪಡಿಗಳಿಂದ ಕೇವಲ ಮಾರ್ಗದರ್ಶಕ ತತ್ವ ವಿಧಾನಗಳೆಂಬ ಸ್ಥಿತಿಯಿಂದ ಪಂಚಾಯತ್ - ನಗರಪಾಲಿಕಾ ಸಂಸ್ಥೆಗಳು - ಭಾರತೀಯ ಆಡಳಿತಾ ವ್ಯವಸ್ಥೆಯ ಅವಿಭಾಜ್ಯವೂ ಅನಿವಾರ್ಯವೂ ಆದ ಘಟಕಗಳಾಗಿ ಪರಿವರ್ತಿತವಾಗಿದೆ.

ನಮ್ಮ ಜನ ಹಿತ ಯೋಜನೆಗಳು ಜನಸಾಮಾನ್ಯರ ಜೀವನ ಸೌಕರ್ಯಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸುವ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಸಂಪನ್ಮೂಲಗಳ ಉತ್ಪಾದನೆ, ನೀತಿ ಪೂರ್ವಕವಾದ ವಿತರಣೆಗಳು ಜನಹಿತ ಯೋಜನೆಗಳಿಗೆ ಅತ್ಯಂತಾಪೇಕ್ಷಿತವಾಗಿದೆ. 'ಕೇರಳ ಮೋಡೆಲ್' ಎನ್ನುವಂತಹ ಅಭಿವೃದ್ಧಿ ಯೋಜನೆಯ ಮಾದರಿಗಳು ಇಂದು ಲೋಕ ಶ್ರದ್ಧೆಯನ್ನೆ ಆಕರ್ಷಿಸಿದೆ. ಇದರ ಹಿನ್ನೆಲೆಯಲ್ಲಿ ಹಲವು ಹೋರಾಟಗಳ ಜ್ವಲಂತ ಸ್ಮರಣೆಗಳು ನೆಲೆಗೊಂಡಿದೆಯೆನ್ನುವುದು ನಿರ್ವಿವಾದ ವಿಚಾರವಾಗಿದೆ.

ಇಂದು ನಾವು ಅನುಭವಿಸುತ್ತಿರುವ ಜೀವನ ಸೌಲಭ್ಯಗಳು ನೆಲೆ ನಿಲ್ಲಬೇಕಾದರೆ ಉತ್ಪಾದನಾ ರಂಗದಲ್ಲಿ ಬದಲಾವಣೆಗಳು ಅನಿವಾರ್ಯವಾಗಿದೆ. ಆರ್ಥಿಕ ಉತ್ಪಾದನಾ ರಂಗದಲ್ಲಿ ಅಖಿಲ ಭಾರತ ಸರಾಸರಿಗಿಂತ ನಾವು ಬಹಳ ಹಿಂದುಳಿದಿದ್ದೇವೆ. 1995ರಲ್ಲಿ ಭಾರತೀಯನ ಸರಾಸರಿ ವಾರ್ಷಿಕ ಉತ್ಪಾದನೆ 8237 ರೂಪಾಯಿಯಿದ್ದರೆ ಕೇರಳೀಯನದ್ದು 6983 ರೂಪಾಯಿ ಮಾತ್ರವಾಗಿತ್ತು. ಈ ಅಂತರವನ್ನು ಅಗಾಧಗೊಳಿಸುವ ಸಾಮಾಜಿಕ, ರಾಜಕೀಯ ಪರಿಸರ, ವ್ಯವಸ್ಥೆಗಳುಂಟು ಮಾಡುವ ಗುರುತರವಾದ ಸಾಂಪತ್ತಿಕ ಸಂಧಿಗ್ಧತೆಗಳು ನಮಗೊಂದು ಪಂಥಾಹ್ವಾನವಾಗಿ ಪರಿಣಮಿಸಿದೆ.

ಅಧಿಕಾರಿಗಳು ಜನಸಾಮಾನ್ಯನಲ್ಲೆಂಬ ಆಶಯವು ಪ್ರಾಯೋಗಿಕವಾಗುವುದರೊಂದಿಗೆ ಗ್ರಾಮ ಪಂಚಾಯತುಗಳಿಗೆ ಯೋಜನಾಂಶದ 35ರಿಂದ 40 ಶೇಕಡಾ ಲಭ್ಯವಾದೀತೆಂಬ ನಿರೀಕ್ಷೆಯಿದೆ. ಈ ಮೊತ್ತವನ್ನು ಜನಸಾಮಾನ್ಯರ ಆವಶ್ಯಗಳಿಗಾಗಿ ಪೂರ್ಣವಾಗಿ ವಿನಿಯೋಗಿಸಬಹುದು. ಮಾತ್ರವಲ್ಲದೆ ಜನಜೀವನದಲ್ಲಿ ರುದ್ರ ತಾಂಡವವನ್ನಾಡುತ್ತಿರುವ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಬಹುದು. ಅದರೊಂದಿಗೆ ಅಭಿವೃದ್ಧಿ ಕಾರ್ಯಗಳಿಗೆ ಭಾಗಿಕ ಪರಿಹಾರವನ್ನಾದರೂ ಕಾಣಲು ಸಾಧ್ಯವಾಗಬಹುದು.

ಗ್ರಾಮಸಭೆಗಳಿಂದ ಉದಿಸಿ ಬಂದಿರುವ ಗ್ರಾಮ ಪುನರುಜ್ಜೀವನ ಸಂಬಂಧಿಯಾದ ಸಮಸ್ಯೆಗಳಿಗೆ ನಿವಾರಣೋಪಾಯಗಳನ್ನು ಸೂಚಿಸುವ ಕಾರ್ಯಕ್ರಮಗಳು ಅಭಿವೃದ್ಧಿ ಯೋಜನೆಗಳಲ್ಲಿ ಆ ಸೂತ್ರಿತವಾಗಿದೆ. ಒಂಬತ್ತನೆಯ ಪಂಚವಾರ್ಷಿಕ ಯೋಜನೆಯನ್ನು ಜನಸಾಮಾನ್ಯರ, ಜನಸಾಮಾನ್ಯರಿಂದ ಜನಸಾಮಾನ್ಯರಿಗಾಗಿರುವ ಯೋಜನೆಯೆಂಬುದಾಗಿ ಇಷ್ಟರಲ್ಲೇ ಸಂಬೋಧಿಸಲಾಗಿದೆ. ಒಂದು ಅಭಿವೃದ್ಧಿಕಾರಕ ಸಂಸ್ಕೃತಿಯನ್ನು ಬೆಳೆಸಿಕೊಂಡರೆ ಮಾತ್ರವೇ ಯೋಜನಾರಂಗದಲ್ಲಿ ಬರುವ ಸ್ಪರ್ಧಾಹ್ವಾನಗಳನ್ನು ಸ್ವೀಕರಿಸಲು ಸಾಧ್ಯ. ಸ್ವಾತಂತ್ರ್ಯ ಸಮರ ಕಾಲದಲ್ಲಿಯೂ, ಸ್ವಾತಂತ್ರ್ಯೋತ್ತರದಲ್ಲಿಯೂ ಅನೇಕ ಸ್ವಯಾ ಸೇವಾತ್ಮಕವಾದ ರಚನಾತ್ಮಕ ಕಾರ್ಯಕ್ರಮಗಳನ್ನು ನಾವು ಕೈಗೊಂಡಿದ್ದೆವು. ಸರ್ವ ಸಂಪನ್ನವೂ ಸಹಿಷ್ಣುತಾಯುಕ್ತವೂ ಆದ ಒಂದು ಭೂತಕಾಲವು ಪಿತ್ರಾರ್ಜಿತ ಹಕ್ಕಿನಂತೆ ನಮ್ಮದಾಗಿರುವಾಗ ಎಣ್ಮಕಜೆ ಪಂಚಾಯತಿನ ಸಮಗ್ರ ಪುರೋಗತಿಯ ಯಜ್ಞದಲ್ಲಿ ಸಹಭಾಗಿಗಳಾಗುವ ಪ್ರತಿಜ್ಞೆಯನ್ನು ನಾವು ತೊಟ್ಟುಕೊಳ್ಳೋಣ.

ಚರಿತ್ರೆ

ಶಿವ- ಪಡ್ರೆ

ಕಾಮತ್- ಕರೋಡಿ

ಎಣ್ಮಕಜೆ ಗ್ರಾಮ ಪಂಚಾಯತ್ ವಿಕಸನ ವರದಿ - 1996

ಪಂಚಾಯತಿನ ಹೆಸರು	:	ಎಣ್ಮಕಜೆ ಗ್ರಾಮ ಪಂಚಾಯತು.
ಒಳಗೊಳ್ಳುವ ಗ್ರಾಮಗಳು	:	ಎಣ್ಮಕಜೆ, ಪಡ್ರೆ, ಕಾಟುಕುಕ್ಕೆ ಮೈರೆ ಗ್ರಾಮ
ಬ್ಲೋಕ್ ಪಂಚಾಯತು ಡಿವಿಜನ್	:	ಬದಿಯಡ್ಕ
ಬ್ಲೋಕ್ ಪಂಚಾಯತು	:	ಮಂಜೇಶ್ವರ
ತಾಲೂಕು	:	ಕಾಸರಗೋಡು
ಜಿಲ್ಲೆ	:	ಕಾಸರಗೋಡು
ನಿಯೋಜಕ ಮಂಡಲ	:	ಮಂಜೇಶ್ವರ
ವಿಸ್ತೀರ್ಣ	:	78. 23 ಚ.ಕಿ.ಮೀ.
ಗಡಿಗಳು :-		
ಮೂಡು	:	ಪಾಣಾಜೆ (ಕರ್ನಾಟಕ)
ಪಡು	:	ಪುತ್ತಿಗೆ ಪಂಚಾಯತು
ತೆಂಕು	:	ಬದಿಯಡ್ಕ ಪಂಚಾಯತು
ಬಡಗು	:	ಮಾಣಿಲ ಗ್ರಾಮ ಮತ್ತು ಪುಣಚ ಗ್ರಾಮ (ಕರ್ನಾಟಕ)
ಜನಸಂಖ್ಯೆ	:	24,166 (1991 ಸರ್ವೆ)
ವಾರ್ಡುಗಳು	:	11
ಪ್ರೆಸಿಡೆಂಟರ ಹೆಸರು	:	ಶ್ರೀಮತಿ. M. ಪ್ರೇಮ
ವೈಸ್ ಪ್ರೆಸಿಡೆಂಟ್	:	ಸಿ. ಸಂಜೀವ ರೈ

ಯಾವುದೇ ಒಂದು ಪ್ರದೇಶದ ಪ್ರಾಕೃತಿಕ ಭೂಸ್ವರೂಪ ಚಾರಿತ್ರಿಕ ಘಟನಾವಳಿಗಳು, ಧಾರ್ಮಿಕ ಮನೋವೃತ್ತಿ, ಸಾಮಾಜಿಕ ಜನಜೀವನ, ಆರ್ಥಿಕ ಸ್ಥಿತಿಗಳು, ಸಾಂಸ್ಕೃತಿಕ ಪರಂಪರೆಯನ್ನು ಹೊಂದಿಕೊಂಡು ಆ ಪ್ರದೇಶದ ಸಂಸ್ಕೃತಿ, ನಾಗರಿಕತೆಗಳು, ನಡೆದುಕೊಂಡು ಬಂದ ದಾರಿಯನ್ನು ನಿರೂಪಿಸುತ್ತವೆ. ಕೇರಳದ ಅತೀ ಉತ್ತರದ, ಕರ್ನಾಟಕದ ಗಡಿ ಪ್ರದೇಶದಲ್ಲಿರುವ ಎಣ್ಮಕಜೆ ಗ್ರಾಮ ಪಂಚಾಯತು, ಸುಮಾರು 78.23 ಚ.ಕಿ.ಮೀ.ನಷ್ಟು ವಿಶಾಲವಾದ ಭೂಪ್ರದೇಶದಿಂದ ಒಳಗೊಂಡಿದೆ. ಪ್ರಕೃತಿ ಸೌಂದರ್ಯವನ್ನು ಪ್ರತಿಬಿಂಬಿಸುವ ಈ ಪ್ರದೇಶದ ಪ್ರತಿಯೊಂದು ದೃಶ್ಯವು ಮನೋಹರವಾಗಿದೆ. ಎತ್ತರದ ಗುಡ್ಡ ಬೆಟ್ಟಗಳು, ಹರಿದ್ವರ್ಣದ ನಾನಾ ಬಗೆಯ ಸಸ್ಯರಾಶಿ, ಹರಿಯುವ ತೊರೆ, ಬಯಲಿನ ಭೂಪ್ರದೇಶ, ಕಾಡು, ತೋಡುಗಳು, ತೆಂಗು, ಕಂಗು, ಬಾಳೆಗಳ ತೋಟಗಳು, ರಬ್ಬರ್ ತೋಟದ ನೋಟ, ಗೇರು ಬೀಜದ ನಿಗಮದಿಂದಾಗಿ ಅಭಿವೃದ್ಧಿ ಹೊಂದಿದೆ. ಈ ಫಲಭರಿತ ಮಣ್ಣು, ನಾನಾ ಮೂಲಗಳಿಂದ ಹರಿಯುವ ತೋಡು, ತೊರೆಗಳ ಸಡಗರ ಇಲ್ಲಿಯ ಜನಜೀವನದಲ್ಲಿ ಬಹಳಷ್ಟು ಪ್ರಭಾವ ಬೀರಿದೆ.

ಮಾನವನ ಬದುಕು ಪ್ರಕೃತಿಯ ಮಡಿಲಲ್ಲಿ ಸಾಗುತ್ತದೆ. ಪ್ರಕೃತಿ ಆತನಿಗೆ ತಾಯಿಯೂ ಹೌದು. ಮಾನವ ಪ್ರಕೃತಿಯ ಉಪಾಸಕ ಇದರ ಸಂಕೇತಗಳೇ ನಮ್ಮ ಬನಗಳು, ನಾಗ ಬನಗಳು, ಅಶ್ವತ್ಥ ಪೂಜೆ ಇತ್ಯಾದಿಗಳಾಗಿವೆ.

ಈ ಗ್ರಾಮ ಪಂಚಾಯತಿಗೆ ಒಳಪಟ್ಟ ಜನರಲ್ಲಿ ಸೌಂದರ್ಯದ ಪ್ರಜ್ಞೆ ಇದೆ. ಉತ್ಸವಗಳಿಂದ ಜನರು ಆನಂದ ಪಡುತ್ತಾರೆ. ಯುಗಾದಿ, ಚೌತಿ, ನಾಗರ ಪಂಚಮಿ, ಷಷ್ಠಿ, ಅಷ್ಟಮಿ, ನವರಾತ್ರಿ, ದೀಪಾವಳಿ, ವಿಷು ಸಂಕ್ರಮಣ ನಮ್ಮ ಪರ್ವದಿನಗಳಾಗಿವೆ. ಈ ದಿನಗಳಲ್ಲಿ ಮನೆ ಮನೆಗಳಲ್ಲಿ ಉತ್ಸವದ ವಾತಾವರಣವಿದೆ.

ನಮ್ಮ ಸಾಂಸ್ಕೃತಿಕ ಜೀವನ ಮೌಲ್ಯಗಳ ಪರಂಪರೆಯನ್ನು ಮುಂದುವರಿಸುವಲ್ಲಿ ನಮ್ಮ ಮಹಿಳೆಯರದು ಸಿಂಹಪಾಲು ಇದೆ. ಅವರಿಗೆ ಧರ್ಮ ಶ್ರದ್ಧೆ ಇದೆ. ಪರಂಪರಾಗತ ಸಂಸ್ಕಾರಗಳನ್ನು ಅವರು ಚಾಚೂ ತಪ್ಪದೆ ತಮ್ಮ ಮಕ್ಕಳಿಗೆ ಕಲಿಸುತ್ತಾರೆ. "ತಾಯಿಯೇ ಮೊದಲ ಗುರು" "ಮನೆಯೇ ಮೊದಲ ಪಾಠ ಶಾಲೆ"ಯಾಗಿದೆ.

ಇತಿಹಾಸದ ಪುಟಗಳನ್ನು ಅವಲೋಕಿಸಿದರೆ ಈ ಎಣ್ಮಕಜೆ ಪಂಚಾಯತಿಗೆ ಒಳಪಟ್ಟ ಪ್ರದೇಶ 'ಕುಂಬಳೆ ಸೀಮೆಗೆ' ಸೇರಿದುದು. ಆಗ ಇದು ಅಂಗಡಿಮೊಗರು ಮಾಗಣೆಯಾಗಿತ್ತು. ಆ ಕಾಲದಲ್ಲಿ ಕರಿಂಬಿಲ, ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸೇರಿತ್ತು. ಕುಂಬಳೆ ಅರಸರಿಗೆ ಸಲ್ಲತಕ್ಕ ತೆರಿಗೆ ಇತ್ಯಾದಿಗಳನ್ನು ವಸೂಲಿ ಮಾಡಲು ನಿಶ್ಚಿತ ಮನೆತನಗಳಿದ್ದುವು. ಕುಂಬಳೆ ಸೀಮೆಯ ಅಡೂರು, ಮಧೂರು, ಕಾವ್ಯ, ಕಣಿಪುರಗಳು ಈ ಪ್ರದೇಶದ ಜನರ ಆರಾಧ್ಯ ಕೇಂದ್ರಗಳೂ ಆಗಿದ್ದುವು. ಕಾಟುಕುಕ್ಕೆಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಈ ಪಂಚಾಯತಿಗೊಳಪಟ್ಟ ನಾಲ್ಕು ಗ್ರಾಮಗಳ ದೇವಸ್ಥಾನ ಹಾಗೂ ಆರಾಧನಾ ಕೇಂದ್ರವಾಗಿದೆ. ಬಜಕೂಡ್ಲು ಮಹಾಲಿಂಗೇಶ್ವರ ದೇವಾಲಯ ಪ್ರಸಿದ್ಧ ಕೂಡ್ಲು ಮನೆತನದ್ದಾಗಿದೆ.

ಎಣ್ಮಕಜೆ ಪಂಚಾಯತಿನ ರಚನೆ

1) ಹಿಂದಿನ ಕಾಲದ ಮದ್ರಾಸ್ ಸಂಸ್ಥಾನಕ್ಕೆ ಸೇರಿದ ಕಾಸರಗೋಡು ತಾಲೂಕಿನ ಅಂಗಡಿ ಮೊಗೇರು ಮಾಗಣೆ, ಮೈರೆ ಗ್ರಾಮ ಪಂಚಾಯತಿಗೆ ಕ್ರಮದಂತೆ 1949ರಿಂದ ಪದಾಧಿಕಾರಿಗಳು ಈ ಕೆಳಗಿನವರಾಗಿದ್ದಾರೆ.

ಶ್ರೀ ಕೆ. ಶಂಕರ ಭಟ್	(ಅಧ್ಯಕ್ಷರು)
ಶ್ರೀ ಯಸ್. ಲಿಂಗಣ್ಣ ನಾಯಕ್	(ಉಪಾಧ್ಯಕ್ಷರು)
ಶ್ರೀ ಮಹಾಬಲ ಆಳ್ವ	(ಸದಸ್ಯರು)
ಶ್ರೀ ಕುಂಞಮ್ಮದ್ ಬ್ಯಾರಿ	(ಸದಸ್ಯರು)
ಶ್ರೀ ಕರೋಡಿ ದೇವಪ್ಪ ನಾಯಕ್	(ಸದಸ್ಯರು)

1953ರಿಂದ :

ಶ್ರೀ ವೈ. ಕೃಷ್ಣಭಟ್	(ಅಧ್ಯಕ್ಷರು)
ಶ್ರೀ ಎಸ್. ಲಿಂಗಣ್ಣ ನಾಯಕ್	(ಉಪಾಧ್ಯಕ್ಷ)
ಶ್ರೀ ವೆಂಕಪ್ಪ ಭಟ್ (ಸದಸ್ಯರು)	
ಶ್ರೀ ಕರೋಡಿ ದೇವಪ್ಪ ನಾಯಕ್	(")
ಶ್ರೀ ಯಸ್. ಯಚ್. ಸುಬ್ಬಣ್ಣ ಆಳ್ವ	(")
ಶ್ರೀ ಜಿ. ಅಬ್ದುಲ್ಲ ಬ್ಯಾರಿ	

ಮೇಲೆ ಹೇಳದ ಕಾರ್ಯಕಾರಿ ಸಮಿತಿಯು 1961ರ ವರೆಗೆ ಗ್ರಾಮ ಪಂಚಾಯತಿನ ಆಡಳಿತೆಯನ್ನು ನಿರ್ವಹಿಸುತ್ತಿತ್ತು.

2) ಮೇಲ್ಕಾಣಿಸಿದ ಸಂಸ್ಥಾನ ಜಿಲ್ಲೆ, ತಾಲೂಕು, ಮಾಗಣಿಗೆ ಒಳಪಟ್ಟ ಎಣ್ಮಕಜೆ ಕಾಟುಕುಕ್ಕೆ ಗ್ರಾಮಗಳು ಸೇರಿ ಪ್ರಾರಂಭವಾದ ಪೆರ್ಲ ಪಂಚಾಯತಿಗೆ ಕ್ರಮದಂತೆ

1939	ಶ್ರೀ ಪಿ. ವೆಂಕಟರಮಣ ಭಟ್ (ಅಧ್ಯಕ್ಷರು)	
	ಶ್ರೀ ಗಣಪತಿ ಭಟ್ (ಉಪಾಧ್ಯಕ್ಷರು)	
	ಶ್ರೀ ಬೀರಣ್ಣ ರೈ	(ಸದಸ್ಯರು)
	ಶ್ರೀ ಸುಬ್ರಾಯ ಪೈ	(")
	ಶ್ರೀ ಯಸ್ ವೆಂಕಟರಮಣ ಭಟ್	(")
	ಶ್ರೀ ಅಬ್ದುಲ್ಲ ಬ್ಯಾರಿ ಸಾಹೇಬ್	(")
	ಶ್ರೀ ಬಿ. ಮಮ್ಮುಂಞಿ ಬ್ಯಾರಿ ಸಾಹೇಬ್, ಬಜಕೂಡ್ಲು	(")
	ಶ್ರೀ ಶಂಕರ ಭಟ್	(")
	ಶ್ರೀ ಸುಬ್ರಾಯ ಭಟ್	(")
	ಶ್ರೀ ಚಿಕ್ಕಪ್ಪ ಆಳ್ವ	(")
	ಶ್ರೀ ಐತ ಬಲಗೈ	(")
	ಶ್ರೀ ಸುಬ್ಬ ಭೈರ	(")
	ಶ್ರೀ ಮೊದೀನ್ ಕುಂಞಿ ಬ್ಯಾರಿ ಸಾಹೇಬ್	(")
	ಶ್ರೀ ರಾಮ ಭಟ್	(")
1-5-1941	ಶ್ರೀ ಯಸ್. ಕೃಷ್ಣ ಭಟ್	(ಅಧ್ಯಕ್ಷರು)
	ಶ್ರೀ ಟಿ. ವೆಂಕಟೇಶ್ ಪೈ	(ಉಪಾಧ್ಯಕ್ಷರು)
	ಶ್ರೀ ಯಮ್. ಕೃಷ್ಣ ಭಟ್	(ಸದಸ್ಯರು)
	ಶ್ರೀ ಕೆ. ಯನ್. ಗೋವಿಂದ ಭಟ್	(")
	ಶ್ರೀ ವಿ. ಶಂಕರನಾರಾಯಣ ಭಟ್	(")
	ಶ್ರೀ ಓ. ಆಲಿಕುಂಞಿ ಕೆ.	(")
	ಶ್ರೀ ವೈ. ಬೀರಣ್ಣ ರೈ	(")
	ಜಿ. ಯಮ್. ಮಮ್ಮುಂಞಿ	(")
	ಶ್ರೀ ಕೊರಗ	(")
	ಶ್ರೀ ಶಂಕರ ಭಟ್ ಎ.	(")
	ಶ್ರೀ ಕೆ. ಈಶ್ವರ ಭಟ್	(")

3. ಇದೇ ರೀತಿ ಮೇಲ್ಕಾಣಿಸಿದ ಸಂಸ್ಥಾನ, ಜಿಲ್ಲೆ, ತಾಲೂಕು, ಮಾಗಣಿಗೊಳಪಟ್ಟ ಪಡ್ರೆ ಗ್ರಾಮಕ್ಕೆ 'ಪಡ್ರೆ ವಿಲೇಜ್ ಪಂಚಾಯತು' ಎಂದು ನಾಮಕರಣ ಮಾಡಿ 1943ರಿಂದ 1961ರ ವರೆಗೆ ಕ್ರಮವಾಗಿ ಆಡಳಿತ ಮಾಡಿದ ಪದಾಧಿಕಾರಿಗಳು.

1949	ಶ್ರೀ ಯಸ್. ಶಂಕರ ಭಟ್	(ಅಧ್ಯಕ್ಷರು)
	ಶ್ರೀ ಟಿ. ಗಣಪತಿ ಭಟ್	(ಉಪಾಧ್ಯಕ್ಷರು)
	ಶ್ರೀ ಯಸ್. ಸುಬ್ರಾಯ ಭಟ್	(ಸದಸ್ಯರು)
	ಶ್ರೀ ಪಿ. ಪುರುಷೋತ್ತಮ ಭಟ್	(")
	ಶ್ರೀ ಕೊರಗ	(")
	ಶ್ರೀ ಪಿ. ನಾರಾಯಣ ಭಟ್	(")

ಶ್ರೀ ಪಕೀರ ಮೂಲ್ಯ	(")
ಶ್ರೀ ಈಶ್ವರ ಕಡಂಬಳಿತ್ತಾಯ	(")
ಶ್ರೀ ವೈ. ಅಚ್ಯುತ ಭಟ್	(")
ಶ್ರೀ ಯಸ್. ಮಹಾದೇವ ಭಟ್	(")
ಶ್ರೀ ಕೆ. ರಾಮಚಂದ್ರ ಭಟ್	(")

ತಾ. 30.12.1961 ರಲ್ಲಿ ಗಂಗಾಧರನ್ ನಾಯರ್ (ಸ್ಪೆಶಲ್ ಆಫೀಸರ್) ಆಗಿ ಪಡ್ರೆ ಪಂಚಾಯತು, ಮೈರೆ ಪಂಚಾಯತು ಮತ್ತು ಪೆರ್ಲ ಪಂಚಾಯತುಗಳು ಸೇರಿ, ಎಣ್ಮಕಜೆ ಪಂಚಾಯತು 1960ನೇ ಕೇರಳ ಪಂಚಾಯತು ಆಕ್ಟ್ ಪ್ರಕಾರ ರೂಪಿತವಾಯಿತು. 23.12.1963ರಲ್ಲಿ ಕೇರಳ ಪಂಚಾಯತು ಆಕ್ಟ್ ಪ್ರಕಾರ ಚುನಾವಣೆ ನಡೆದು ಕ್ರಮದಂತೆ ಈ ಕೆಳಗಿನವರು ಚುನಾಯಿಸಲ್ಪಟ್ಟು ಆಡಳಿತ ನಿರ್ವಹಿಸಿದರು.

ಶ್ರೀ ಕೆ. ವೈ. ನಾರಾಯಣ ರೈ	(ಅಧ್ಯಕ್ಷರು)
ಶ್ರೀ ಸರ್ಪ ಮಲೆ ಶಂಕರ ಭಟ್	(ಉಪಾಧ್ಯಕ್ಷರು)
ಶ್ರೀ ಸಾಯ ಕೃಷ್ಣ ಭಟ್	(ಸದಸ್ಯರು)
ಶ್ರೀ ಕೆ. ಪಿ. ಮದನ ಪೂಜಾರಿ	(")
ಶ್ರೀ ಯಸ್. ಗೋವಿಂದ ನಾಯಕ್	(")
ಶ್ರೀ ಯಮ್. ಕೆ. ಅಬ್ದುಲ್ ಖಾದರ್	(")
ಶ್ರೀ ಕೆ. ಕೃಷ್ಣ ನಾಯ್ಕ	(")
ಶ್ರೀಮತಿ ಗಂಗಮ್ಮ	(")
ಶ್ರೀ ಕೆ. ಸುಬ್ರಾಯ ಭಟ್	(")

ತಾರೀಕು 14.7.1967ರ ನಂತರ ಕೆಳಗಿನ ಮಹನೀಯರು ಮತ್ತು ಮಹಿಳೆ ಆಡಳಿತ ಸೂತ್ರವನ್ನು ವಹಿಸಿದರು.

ಶ್ರೀ ಕೆ. ವೈ. ನಾರಾಯಣ ರೈ.	(ಅಧ್ಯಕ್ಷರು)
ಶ್ರೀ ಯಸ್. ಶಂಕರ ಭಟ್	(ಉಪಾಧ್ಯಕ್ಷರು)
ಶ್ರೀ ಗೋವಿಂದ ನಾಯಕ್	(")
ಶ್ರೀ ಅಬ್ಬಾಸ್ ನಡುಬೈಲು	(")
ಶ್ರೀ ಪಿ. ಅಚ್ಚುತ ಭಟ್	(")
ಶ್ರೀಮತಿ ಗಂಗಮ್ಮ	(")
ಶ್ರೀ ಕೆ. ಕೃಷ್ಣ ನಾಯ್ಕ	(")
ಶ್ರೀ ಯಮ್. ಅಬ್ದುಲ್ಲ ಖಾದರ್	(")
ಶ್ರೀ ಸಾಯ ಕೃಷ್ಣ ಭಟ್	(")

ತಾರೀಕು : 27-9-1979 ರಿಂದ ಈ ಕೆಳಗಿನವರು ಚುನಾಯಿಸಲ್ಪಟ್ಟರು.

ಶ್ರೀ ಕೆ. ಕೇಶವ ಭಟ್	(ಅಧ್ಯಕ್ಷರು)
ಶ್ರೀ ವಿ. ಕೃಷ್ಣ ಭಟ್	(ಉಪಾಧ್ಯಕ್ಷರು)
ಶ್ರೀ ನಾರಾಯಣ ನ್ಯಾಕ್	(ಸದಸ್ಯರು)
ಶ್ರೀಮತಿ ವಾರಿಜಾ ಆರ್. ರೈ	(")
ಶ್ರೀ ಪಿ. ದೂಮಣ್ಣ ರೈ	(ಸದಸ್ಯರು)
ಶ್ರೀ ಕೆ. ನಾರಾಯಣ ಶಾಸ್ತ್ರಿ	(")
ಶ್ರೀ ಯಸ್. ಗೋವಿಂದ ನಾಯಕ್	(")
ಶ್ರೀ ಯಮ್ ಜತ್ತಪ್ಪ ರೈ	(")
ಶ್ರೀ ಕೆ.ಪಿ. ಮದನ ಮಾಸ್ತರ್	(")
ಶ್ರೀ ವೈ ಮಹಾಲಿಂಗ ಭಟ್	(")

ತಾರೀಕು 24-10-1984 ಸ್ಪೆಶಲ್ ಆಫೀಸರ್ (Administrator) ಎಂಬವರ ನೇಮಕವಾಗಿ ಆ ಸಮಯದಲ್ಲಿ ಅವರೇ ಆಡಳಿತ ನಿರ್ವಹಿಸುತ್ತಿದ್ದರು.

ತಾರೀಕು 8-2-1988 ರಿಂದ ನೂತನ ಪಂಚಾಯತ್ ಅಸ್ತಿತ್ವಕ್ಕೆ ಬಂದು ಈ ಕೆಳಗಿನ ಪದಾಧಿಕಾರಿಗಳಾಗಿ ಪಂಚಾಯತ್ ಆಡಳಿತೆ ನಡೆಸಿದರು.

ಶ್ರೀ ಟಿ. ಆರ್. ಕೆ. ಭಟ್	(ಅಧ್ಯಕ್ಷರು)
ಶ್ರೀ ಸಿ. ಸಂಜೀವ ರೈ	(ಉಪಾಧ್ಯಕ್ಷರು)
ಶ್ರೀ ಶೀನ ನಾಯ್ಕ	(ಸದಸ್ಯರು)
ಶ್ರೀ ವಿ. ಕೃಷ್ಣ ಭಟ್	(")
ಶ್ರೀಮತಿ ಸುಧಾ ಪೈ	(")
ಶ್ರೀಮತಿ ಗಂಗಮ್ಮ	(")
ಶ್ರೀ ಯಂ.ಕೆ. ಬಾಲಕೃಷ್ಣ	(")
ಶ್ರೀ ಕೆ. ಗಣಪತಿ ಭಟ್	(")
ಶ್ರೀ ಎ. ಚೆನಿಯಪ್ಪ ಪೂಜಾರಿ	(")
ಶ್ರೀ ವೈ. ಮಹಾಲಿಂಗ ಭಟ್	(")

1994ನೇ ಕೇರಳ ಗ್ರಾಮ ಪಂಚಾಯತ್ ಆಕ್ಟ್ ಜಾರಿಗೆ ಬಂತು. ಎಣ್ಮಕಜೆ ಪಂಚಾಯತ್ "ಎಣ್ಮಕಜೆ ಗ್ರಾಮ ಪಂಚಾಯತ್" ಆಗಿ ರೂಪಿತವಾಯಿತು.

ತಾರೀಕು 4-10-1995 ರಿಂದ ನೂತನ ಆಡಳಿತ ಮಂಡಳಿಯು ಅಧಿಕಾರಕ್ಕೆ ಬಂದು, ಈ ಕೆಳಗಿನ ಮಹನೀಯರು ಮತ್ತು ಮಹಿಳೆಯರು ಈಗ ಆಡಳಿತ ಸೂತ್ರವನ್ನು ಹಿಡಿದಿದ್ದಾರೆ.

ಶ್ರೀಮತಿ ಪ್ರೇಮ	(ಅಧ್ಯಕ್ಷೆ)
ಶ್ರೀ ಸಂಜೀವ ರೈ. ಸಿ.	(ಉಪಾಧ್ಯಕ್ಷರು)
ಶ್ರೀ ಬಿ. ಶಾಹುಲ್ ಹಮೀದ್	(ಸ್ಟಾಂಡಿಂಗ್ ಕಮಿಟಿ ಚೆಯರ್‌ಮ್ಯಾನ್)
ಶ್ರೀಮತಿ ಯಮ್. ಲಕ್ಷ್ಮಿ	(ಸದಸ್ಯರು)
ಶ್ರೀ ಕೆ. ಪರಮೇಶ್ವರ	(")
ಶ್ರೀಮತಿ ಚಿತ್ರಲೇಖಾ ರೈ	(")
ಶ್ರೀ ಬಾಲಕೃಷ್ಣ ಯಂ.ಕೆ.	(")
ಶ್ರೀ ನಾರಾಯಣ ಕೆ.	(")
ಶ್ರೀ ಎ. ಚೆನಿಯಪ್ಪ ಪೂಜಾರಿ	(")
ಶ್ರೀ ಕೆ. ಕೃಷ್ಣ ನಾಯ್ಕ	(")
ಶ್ರೀಮತಿ ಜಲಜ ಸಿ. ಆಳ್ವ	(")

ಮದ್ರಾಸ್ ಸರಕಾರದಲ್ಲಿ ಸೇರುವ ಮೊದಲೇ ಈ ಪ್ರದೇಶ ಅಚ್ಚ ತುಳುನಾಡಾಗಿತ್ತು. ಇಲ್ಲಿಯ ಮೂಲ ನಿವಾಸಿಗಳು ತುಳುವರು. ಕೃಷಿಯು ಇಲ್ಲಿಯ ಪ್ರಧಾನ ವ್ಯಕ್ತಿ. ಈ ಮಣ್ಣಿನ ಮಕ್ಕಳಲ್ಲಿ ಧರ್ಮ ಶ್ರದ್ಧೆ, ಭೂತದಯೆ, ಪ್ರಾಮಾಣಿಕ ದುಡಿಮೆ, ನಿಷ್ಕಲ್ಮಷ ಹೃದಯವಿತ್ತು. ಭೂತಾರಾಧನೆಯು ಈ ಮಣ್ಣಿನ ಗುಣ, ಆರ್ಯ, ದ್ರಾವಿಡ ಸಂಸ್ಕೃತಿಯ ಸಂಗಮದಿಂದ ಇಲ್ಲಿ ದೇವಾಲಯಗಳೂ ಭೂತಾಲಯಗಳೂ ನಿರ್ಮಿಸಲ್ಪಟ್ಟವು. ಶೈವ, ವೈಷ್ಣವ ಹಾಗೂ ಶಕ್ತ್ಯಾರಾಧನೆ ಬೆಳಗಿ ಬಂತು.

ಈ ಪ್ರದೇಶದಲ್ಲಿ ಹಿಂದುಗಳಂತೆ, ಮುಸ್ಲಿಂ ಮತ್ತು ಕ್ರೈಸ್ತ ಮತಗಳು ಮೆಲ್ಲ ಮೆಲ್ಲನೆ ಬೆಳಗಿದವು. ಮಸೀದಿಗಳು ಮುಸ್ಲಿಂ ಬಂಧುಗಳ ಆರಾಧನಾ ಕೇಂದ್ರಗಳಾದರೆ ಕ್ರೈಸ್ತ ಸಮುದಾಯಕ್ಕೆ ನೆರೆಯ ಉಕ್ಕಿನಡ್ಕ ಇಗರ್ಜಿ ಒಂದೇ ಇತ್ತು. ಆದರೆ ಕೆಲವು ವರ್ಷಗಳಿಂದ ಮಣಿಯಂಪಾರೆ ಎಂಬಲ್ಲಿ ಇಗರ್ಜಿ ಒಂದು ಸ್ಥಾಪಿಸಲ್ಪಟ್ಟಿದೆ.

ಪ. ಜಾತಿ ಮತ್ತು ಪಂಗಡಗಳ ಸಮುದಾಯಗಳ ಸಂಖ್ಯೆಯು ಸುಮಾರು ಸಮಗ್ರ ಪಂಚಾಯತಿನ ಜನಸಂಖ್ಯೆಯ 35%ರಷ್ಟು ಇದೆ. ಜಾತಿ ಮತ ಭೇದಗಳ ಜಂಜಾಟ ನಾವಿಲ್ಲಿ ಕಾಣೆವು. ಕೃಷಿ, ಗುಡಿ ಕೈಗಾರಿಕೆಗಳಲ್ಲದೆ ಕೃಷಿಯಲ್ಲಿ ಕೂಲಿ ವ್ಯಕ್ತಿಯಿಂದ ಜೀವಿಸುವವರೂ ಇದ್ದಾರೆ. ಬೀಡಿ ಉದ್ಯಮವು ಮಹಿಳೆಯರ ಆರ್ಥಿಕ ಮುಗ್ಗಟ್ಟನ್ನು ಸುಧಾರಿಸುವುದು ಮಾತ್ರವಲ್ಲ ಸ್ವಾವಲಂಬಿಗಳನ್ನಾಗಿ ಮಾಡಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ಈ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿವೆ. ಸ್ವಾತಂತ್ರ್ಯ ನಂತರದ ಕಳೆದ ಸುಮಾರು 49 ವರ್ಷಗಳಲ್ಲಿ ಹೊಸ ಒಂದು ಸರಕಾರಿ ಮತ್ತು 2 ಖಾಸಗೀ ಹೈಸ್ಕೂಲು ಬಿಟ್ಟರೆ ಬೇರೇನು ಸಾಧಿಸಿಲ್ಲ. ತಾರೀಖು 22-11-96ರಂದು ಕಾಟುಕಕ್ಕೆ ಗ್ರಾಮದ "ಬಾಳೆಮೂಲೆ" ಎಂಬಲ್ಲಿ ಕಿರಿಯ ಪ್ರಾಥಮಿಕ ಶಾಲೆಯೊಂದನ್ನು ತೆರೆಯಲಾಗಿದೆ.

ಹೈಸ್ಕೂಲುಗಳು ಈ ಪ್ರದೇಶದಲ್ಲಿ ಉದಯಿಸುವುದರ ಮೊದಲು ವಿದ್ಯಾಭ್ಯಾಸಕ್ಕೆ ಕಾಸರಗೋಡು, ನೀಲೇಶ್ವರ ಮಂಗಳೂರಿಗೆ ಹೋಗುತ್ತಿದ್ದರು. ಆ ಸಂಸ್ಥೆಗಳಲ್ಲಿ ಈ ಪ್ರದೇಶದ ವಿದ್ಯಾರ್ಥಿಗಳು ಪ್ರತಿಭಾವಂತರೆಂದು ಹೆಗ್ಗಳಿಕೆ ಇತ್ತು. ಶಾಲೆಗಳು ಜ್ಞಾನ ಮಂದಿರಗಳು ಅವುಗಳ ಮೂಲಕ ಈ ಪ್ರದೇಶ ಮುಂದುವರಿಯಲು ಕಾರಣವಾಯಿತು.

ಸ್ವಾತಂತ್ರ್ಯ ಸಮರದಲ್ಲಿ ಈ ಪ್ರದೇಶದ ಮುಂದಾಳುಗಳು ಮಂಚೂಣಿಯಲ್ಲಿದ್ದರು. ಇವರಲ್ಲಿ "ಕುಂಬಳೆ ಗಾಂಧಿ" ಬಿರುದಿನ ದಿ। ಶ್ರೀ ಬಿ. ದೇವಪ್ಪ ಆಳ್ವರು ಕಾರ್ಯಾಡು ಕೃಷ್ಣ ಭಟ್ಟರು ದೆಯ್ಯಂತೋಡಿ ಬೀರು ಶೆಟ್ಟರು ಸರ್ಪಮಲೆ ಗೋಪಾಲಕೃಷ್ಣ ಭಟ್ಟರು, ಸರ್ಪಂಗಳ ರಾಮ ಭಟ್ಟರು, ಬಿ. ಸುಬ್ರಾಯ ಪೈಗಳು ಹಾಗೂ ಪಡ್ರೆ ಗ್ರಾಮದ ಪಟೇಲ್ ಆನಂದ ರಾಯರು ಮುಖ್ಯವಾಗಿದ್ದಾರೆ. ಪರ್ತಜೆ ವೆಂಕಟ್ರಮಣ ಭಟ್ಟರು ಸಮಾಜ ಸೇವಾ ಕಾರ್ಯಕರ್ತರು ಮಾತ್ರವಲ್ಲದೆ ಪೆರ್ಲದ ಶಿಕ್ಷಣ ಕ್ಷೇತ್ರದ ಸ್ಥಾಪಕರು, ಹರಿಜನೋದ್ಧಾರ, ಮಧ್ಯಪಾನ ನಿಷೇಧ, ನೂಲುವುದು, ನೇಯುವುದು ಮುಂತಾದ ರಚನಾತ್ಮಕ ಚಟುವಟಿಕೆಗಳು ಪೆರ್ಲದಲ್ಲಿ ತೊಡಗಿದವು. ಈ ಪ್ರದೇಶವನ್ನು ಕೇರಳ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವುದನ್ನು ಪ್ರತಿಭಟಿಸಿ 1956-57ರಲ್ಲಿ ಜನಾಂದೋಲನವಾಯಿತು. ಈ ಪ್ರದೇಶದ ಜನಪ್ರಿಯ ಕಲೆ ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆ ಹಾಡುಗಾರಿಕೆಯಲ್ಲಿ ದಿ। ಬಲಿಪ ನಾರಾಯಣ ಭಾಗವತರು ಅವರ ಮೊಮ್ಮಗ ಬಲಿಪ ನಾರಾಯಣ ಭಾಗವತರು, ಮೃದಂಗವಾದಕ ಕುದುರೆಕ್ಕೋಡು ರಾಮ ಭಟ್ಟ್ ಅರ್ಥದಾರಿಗಳಾಗಿ ಪಡ್ರೆ ಶ್ರೀಪತಿ ಶಾಸ್ತ್ರಿ, ವೇಷಧಾರಿಗಳಾಗಿ ಪಡ್ರೆ ಚಂದು ಕುಂಞರಾಮ ಮಣಿಯಾಣಿ, ಅಡ್ಕಸ್ಥಳ ನಾರಾಯಣ ಶೆಟ್ಟಿ, ಅಡ್ಕಸ್ಥಳ ಸಂಜೀವ ಶೆಟ್ಟಿ, ಪಡ್ರೆ ಕುಂಞಪ್ಪ ನಾಯ್ಕ ಮುಂತಾದವರು ಸುಪ್ರಸಿದ್ಧರು. ಸಂಗೀತ ಅಧ್ಯಾಪಕರೆಂದೇ ಹೆಸರುವಾಸಿಯಾದ ದಿ । ನಡುಮನೆ ಪುರುಷೋತ್ತಮ ಭಟ್ಟರು ಕರ್ನಾಟಕ ಸಂಗೀತದಲ್ಲಿ ಖ್ಯಾತಿಯನ್ನು ಪಡೆದಿರುವರು. ಯಕ್ಷಗಾನದ ಧ್ರುವತಾರೆಗಳಾದ ಶ್ರೀ ಶೇಣಿ, ಪೆರ್ಲರು ನಮ್ಮ ಪಂಚಾಯತಿನ ಕಲಾವಿದರು ಎಂದು ಹೇಳಲು ನಾವು ತುಂಬಾ ಅಭಿಮಾನ ಪಡುತ್ತೇವೆ.

ಈ ಪಂಚಾಯತಿನ ಸದಸ್ಯೆ ಹಾಗೂ ಸಮಾಜ ಸೇವಾ ಕಾರ್ಯಕರ್ತೆ ಶ್ರೀಮತಿ ಪರ್ತಜೆ ಗಂಗಮ್ಮನವರು ಇಲ್ಲಿ ಪ್ರಥಮವಾಗಿ "ಮಹಿಳಾ ಸಮಾಜ" ಸ್ಥಾಪಿಸಿ ಬಾಲವಾಡಿ ಶಾಲೆ ನಡೆಸಲು ಕಾರಣರಾದರು. ಇನ್ನೋರ್ವ ಸಮಾಜ ಸೇವಾಸಕ್ತೆ ನಿವೃತ್ತ ಪ್ರಾಧ್ಯಾಪಕಿ ಹಾಗೂ ಸಾಹಿತಿ ಶ್ರೀಮತಿ ಗೌರಿ ಭಟ್ಟರು. ಶಿಶು ಸಾಹಿತ್ಯವನ್ನು ನಮ್ಮ ಮಕ್ಕಳಿಗೆ ಉಣಿಸಿದ ಶ್ರೀಮತಿ ಈಶ್ವರಿ ಕೆ. ಭಟ್ ಹಲವು ಪುಸ್ತಕಗಳನ್ನು ಬರೆದಿದ್ದಾರೆ.

"ಪಂಚಾಯತ್ ರಾಜ್ಯ"ದ ಕಲ್ಪನೆ ಭಾರತೀಯರಿಗೆ ಹೊಸತೇನಲ್ಲ. ಇದು ನಮ್ಮ ದೇಶದ ಪ್ರಾಚೀನ ರಾಜ್ಯ ಶಾಸ್ತ್ರದ ನಡವಳಿಕೆಯೇ ಆಗಿದೆ. ಗ್ರಾಮದಲ್ಲಿ ಸಾಮುದಾಯಕ ಕಾರ್ಯಕಲಾಪಗಳು ಸಾರ್ವಜನಿಕವಾಗಿ ನಡೆಯಬೇಕಾದ ಗ್ರಾಮ ಪಂಚಾಯತು ಸಭೆ ಸೇರಿ ನಿರ್ಣಯ ಕೈಗೊಳ್ಳುತ್ತಿತ್ತು. ಒಂದೆ ನ್ಯಾಯದಾನವು ಈ ಪಂಚಾಯತುಗಳ ಮೂಲಕವೇ ನಡೆಯುತ್ತಿತ್ತು. ಆದರೆ ಕ್ರಮೇಣ ಬ್ರಿಟಿಷ್ ಆಡಳಿತದಲ್ಲಿ ಇವೆಲ್ಲಾ ಶಿಥಿಲಗೊಂಡವು. ಈಗ ಮತ್ತೊಮ್ಮೆ ಗ್ರಾಮ ರಾಜ್ಯದ ಕಲ್ಪನೆ ಸಾಕಾರವಾಗುತ್ತಿರುವುದು ಸಂತಸದ ವಿಚಾರ.

ನಮಗೆ ಸ್ವಾತಂತ್ರ್ಯ ದೊರೆತು ಅರ್ಧ ಶತಮಾನವಾಗುತ್ತಾ ಬಂದರೂ, ನಮ್ಮ ಗ್ರಾಮ ಪಂಚಾಯತಿಗೆ ಕೆಳಸ್ತರದಲ್ಲಿ ಯಾವ ಅಧಿಕಾರವೂ ಇರಲಿಲ್ಲ. ಈ ತನಕ ನಡೆದು ಬಂದ ದಾರಿಯಂತೆ ಮೇಲಿನಿಂದ ಎಂದರೆ ಕೇಂದ್ರದಿಂದ ಪಂಚಾಯತಿಗೆ ಅವರೋಹಣವಾಗಿ ಸಂಪನ್ಮೂಲ ಬರಬೇಕಿತ್ತು. ಆದರೆ ಈಗ ಹೀಗಲ್ಲ. ಕೆಳಗಿನ ಅಂದರೆ ಗ್ರಾಮ ಪಂಚಾಯತಿನ ಜನರು ತಮ್ಮ ಆಶೋತ್ತರಗಳನ್ನು ಆಯೋಜಿಸಿ ಮೇಲಕ್ಕೆ 9ನೇ ಪಂಚವಾರ್ಷಿಕ ಯೋಜನೆಗಳು ಗ್ರಾಮ ಪಂಚಾಯತಿನ ಭದ್ರ ಬುನಾದಿಯಲ್ಲಿ ಯೋಜನೆಗಳನ್ನು ಕೈಗೊಂಡಿದ್ದರಿಂದ ಯೋಜನೆಗಳು ನೇರವಾಗಿ ಜನರೆಡೆಗೆ ಬಂದು ಸೇರುವುದರಲ್ಲಿ ಅನುಮಾನವಿಲ್ಲ.

ಕಾಸರಗೋಡಿನ ಸುಪ್ರಸಿದ್ಧ ವಕೀಲರೂ ಕನ್ನಡ ಹೋರಾಟಗಾರರೂ ಆಗಿದ್ದ ಶ್ರೀ ಬಿ.ಯಸ್. ಕಕ್ಕಿಲ್ಲಾಯರು ಕಾಸರಗೋಡನ್ನು ದೇವ ರಾಜ್ಯವೆಂದು ಕರೆದಿದ್ದಾರೆ. ಕಾರಣ ಈ ಪ್ರದೇಶದಲ್ಲಿರುವಷ್ಟು ದೇವ ಮಂದಿರಗಳು ಬೇರೆಲ್ಲೂ ಕಾಣಲಾರೆವು. ಎಣ್ಮಕಜೆ ಗ್ರಾಮ ಪಂಚಾಯತಿನಲ್ಲಿ ಹಲವು ದೇವಾಲಯಗಳು, ದೈವಸ್ಥಾನಗಳು ಇವೆ. ನಮ್ಮ ಬದುಕು, ಭಾಗ್ಯಗಳು, ಧನಧಾನ್ಯಗಳು, ಸಾಂಸ್ಕೃತಿಕ ಜೀವನ, ಕೃಷಿ ಕೈಗಾರಿಕೆ, ವಾಣಿಜ್ಯ ಮುಂತಾದವುಗಳೆಲ್ಲವು ಸುಗಮವಾಗಬೇಕಾದರೆ ನಮಗಿಂತ ದೊಡ್ಡದಾದ ಒಂದು ಚೈತನ್ಯ ಇದೆ ಎಂಬುದನ್ನು ನಮ್ಮ ಹಿರಿಯರು ಮನಗೊಂಡಿದ್ದರು. ಪ್ರತೀ ಸ್ಥಳಕ್ಕೂ ಒಂದೊಂದು ಪುರಾಣ ಇದೆ. ದೈವವಿದೆ. ಈ ಧರ್ಮದೇವಗಳು ನಮ್ಮನ್ನು ಕಾಪಾಡುವವರು. ಹಾಗೂ ನಮ್ಮ ಅಸ್ತಿತ್ವವನ್ನು ಶ್ರದ್ಧೆಯಿಂದ ಅವರಿಗೆ ಅರ್ಪಿಸಬೇಕು. ಆಗ ಅವು ನಮಗೆ ಶ್ರೇಯಸ್ಸನ್ನು ಕರುಣಿಸುವುದು. ಈ ನಂಬಿಕೆಯೇ ಮಾನವನಿಗೆ ಧೈರ್ಯ, ಸ್ಥೈರ್ಯ ಕೊಟ್ಟಿದೆ. ಪಂಜುರ್ಲಿ, ಧೂಮವತಿ, ಪಿಲಿಭೂತ, ರಕ್ತೇಶ್ವರಿ, ಕಲ್ಲುರ್ಟಿ, ಗುಳಿಗ ಮತ್ತು ಜಠಾಧಾರಿ ಎಂದು ಮುಂತಾಗಿ ಬೇರೆ ಬೇರೆ ಭೂತಗಳು ಇವೆ. ತುಳುವರು ಮುಖ್ಯವಾಗಿ ಈ ಮಣ್ಣಿನ ಮೂಲ ನಿವಾಸಿಗಳು.

ಧಾರ್ಮಿಕ ಮನೋವೃತ್ತಿಯಿಂದೊಡಗೂಡಿದ ಈ ಪ್ರದೇಶದ ಜನ ಸಮುದಾಯ ಕಷ್ಟ ಸಹಿಷ್ಣುಗಳು ದುಡಿದ ಜೀವಕ್ಕೆ ಬೇನೆ ಬೇಸರಗಳನ್ನು

ಓಡಿಸಲು ಮನೋಲ್ಲಾಸದಿಂದಿರಲು ಇಲ್ಲಿ ಹಲವಾರು ಹವ್ಯಾಸಗಳು ಇದ್ದುವು. ಹಿಂದೆ ಬೇಟೆಯಾಡುವುದು ಕೋಳಿ ಅಂಕ, ಕಂಬಳಗಳು ಮನೋರಂಜನೆಯನ್ನು ಕೊಡುತ್ತಿದ್ದುವು. ಬಯಲಿನಲ್ಲಿ ರಾತ್ರಿ ಇಡೀ ಜರಗುತ್ತಿದ್ದ ಬಯಲಾಟಗಳು ಜನರನ್ನು ಸತ್ಪಥದೆಡೆಗೆ ಮುನ್ನಡೆಸುತ್ತಿದ್ದುವು.

ಗ್ರಾಮೀಣ ಪ್ರದೇಶವಾದ ಈ ಹಳ್ಳಿಗಳಲ್ಲಿ ಜಾನಪದ ತನ್ನದೇ ಆದ ಸ್ಥಾನ ಪಡೆದಿದೆ. ಪುರುಷರು ಯಕ್ಷಗಾನದಲ್ಲಿ ಮೈಮರೆತರೆ ಸ್ತ್ರೀಯರು ತೋಭಾನೆ, ಜೋಗುಳ ಹಾಗೂ ಜಾನಪದ ಗೀತೆಗಳನ್ನು ಹಾಡುತ್ತಿದ್ದರು. ಭತ್ತ ಕುಟ್ಟುವಾಗ, ರಾಗಿ ಬೀಸುವಾಗ ಮೊಸರು ಕಡೆಯುವಾಗ, ನೇಜಿ ನೆಡುವಾಗ, ಅವರು ಹಾಡುವ ಹಾಡು ಕೇಳುವುದೇ ಸುಗ್ಗಿ !

ಆಧುನಿಕತೆಯ ಸೋಗಿನಲ್ಲಿ ಹೊಸ ಹೊಸ ಸಂಪರ್ಕ ಮಾಧ್ಯಮಗಳ ಸಂಪರ್ಕದಿಂದ, ಕೆಲಸಗಳ ಒತ್ತಡದಿಂದ ಮನುಷ್ಯನಿಗೆ ಈಗ ಸಮಯವೇ ಇಲ್ಲ. ನಮ್ಮ ಜನಪದ ಹಾಡುಗಳು ನಮ್ಮ ಜೀವನದಲ್ಲಿ ಬೇರ್ಪಟ್ಟಿವೆ.

ಇಲ್ಲಿನ ಆರಾಧನಾರಂಗ, ದೈವಗಳ ಮಹಿಮೆ, ಗುಳಿಗನ ಕೋಲ, ಆಟಿಯಲ್ಲಿ ಬರುವ ಕಳಂಜ ರಾತ್ರಿಯಲ್ಲಿ ಬರುವ ಕನ್ನೆಪ್ಪು. ಇವೆಲ್ಲ ಭಯ ಭಕ್ತಿ ಆಶ್ಚರ್ಯ, ಕುತೂಹಲಗಳಿಂದ ನೋಡುತ್ತಿದ್ದ ಕಾಲವೊಂದಿತ್ತು. ಆದರೆ ಈಗ ಆ ಕಾಲವೇ ಮಾಯವಾಗಿದೆ.

ಕಳೆದ ಐದು ದಶಕಗಳನ್ನು ಸಿಂಹಾವಲೋಕನ ಮಾಡಿದಾಗ ನಮ್ಮಲ್ಲಿ ನಿಜವಾಗಿಯೂ ಅಭಿವೃದ್ಧಿಯಾದುದು ಇತರ ಪ್ರದೇಶಗಳನ್ನು ಹೋಲಿಸಿದರೆ ಏನೇನೂ ಸಾಲದು. ಕೇರಳ ಸರಕಾರದ ಮಲತಾಯಿ ಧೋರಣೆಯಿಂದ ನಾವಿಂದು ತಬ್ಬಲಿಗಳಾಗಿದ್ದೇವೆ. ಸಾಕು ತಾಯಿಯಂತಿರುವ ಕೇರಳ ಮೊಸಳೆ ಕಣ್ಣೀರು ಸುರಿಸುತ್ತದೆ. ನಿಜಕ್ಕೂ ನಾವು ತಬ್ಬಲಿಗಳು. ಈ ಪಂಚಾಯತಿನ ಸಂಪನ್ಮೂಲವನ್ನು ಅವಲೋಕಿಸಿದರೆ ಹೀಗಿದ್ದೂ ನಮ್ಮ ಅವಸ್ಥೆ ಹೀನಾಯವಾಗಿದೆ. ಕಾರಣ, ನಾವು ಪಕ್ಷ, ರಾಜಕೀಯದ ದೊಂಬರಾಟದಲ್ಲಿ ಸಿಲುಕಿದ್ದೇವೆ. ಈ ಬಲೆಯಿಂದ ಬಿಡಿಸಲಾರದೆ ತೊಳಲಾಡುತ್ತಿದ್ದೇವೆ.

"ಗ್ರಾಮ ಪಂಚಾಯತ್" ಗಾಂಧೀಜಿಯವರ ಕಲ್ಪನೆಯ ಕೈಗೂಸು. ಪಂಚಾಯತ್ ತಮ್ಮದು ಎಂಬ ಹೆಮ್ಮೆ ಇಲ್ಲಿಯ ಜನ ಮನದಲ್ಲಿರಬೇಕು. ಪಂಚ್ಯಾತ್‌ನ ಕಾರ್ಯ ಕಲಾಪಗಳು ಇಂದಿನ ಯುವ ಜನರ ಮನಸ್ಸನ್ನು ಆಕರ್ಷಿಸಬೇಕು. ಪಂಚ್ಯಾತ್‌ನ ನಿಜವಾದ ಅರ್ಥದಲ್ಲಿ ಅವರು ಮಾನವ ಸಂಪನ್ಮೂಲಗಳಾಗಬೇಕು. ಆಗ ಮಾತ್ರ ಅಭಿವೃದ್ಧಿ ಸಾಧ್ಯ.

ಆರ್ಥಿಕ ಅಭಿವೃದ್ಧಿ ಮಾತ್ರ ಅಭಿವೃದ್ಧಿಯ ಮಾನದಂಡವಲ್ಲ. ಜನರು ಸತ್ಪ್ರಜೆಯಾಗಿ ಇರುವುದು, ಜೀವನದಲ್ಲಿ ಉನ್ನತ ಮೌಲ್ಯಗಳನ್ನು ಅನುಸರಿಸುವುದು ಶಿಕ್ಷಣ ಸಾರ್ವತ್ರಿಕವಾಗಿರುವುದು, ಪ್ರಜೆಗೆ ನಾಗರಿಕ ಹಕ್ಕುಗಳೊಂದಿಗೆ ಕರ್ತವ್ಯದ ಪ್ರಜ್ಞೆ ಯುವ ಜನರಲ್ಲಿ ಸಾರ್ವಜನಿಕ ಹಿತಾಸಕ್ತಿ ಮೂಡಿ ಬಂದಾಗ ನಿಜವಾದ ಅಭಿವೃದ್ಧಿ ಉಂಟಾಗುತ್ತದೆ.

ಕೃಷಿ ಮತ್ತು ನೀರಾವರಿ

ಎಣ್ಮಕಜೆ ಪಂಚಾಯತ್ ಕೃಷಿ ಪ್ರಧಾನ ಭೂಮಿಯಾಗಿದ್ದು ಹೆಚ್ಚಿನ ಆದಾಯ ಕೃಷಿಯಿಂದಲೇ ಲಭಿಸುತ್ತದೆ. ಅದಕ್ಕೆ ಅನುಗುಣವಾದ ಭೂ ಪ್ರಕೃತಿಯೂ ಇಲ್ಲಿ ಲಭ್ಯವಿದ್ದು ಅಧಿಕ ಇಳುವರಿ ಪಡೆಯಲು ಸಹಾಯಕವಾಗಿದೆ.

ಇಲ್ಲಿ ಭೂ ಸಂಬಂಧ ವಾದ ಮಾಹಿತಿಗಳು ಈ ಕೆಳಗಿನಂತಿವೆ.

ತೋಡು	44.54 Acre
ಕೊಳ	0.22 Acre
ನದಿ	162.05 Acre
ಬಂಜರು	102.81 Acre

ಇಲ್ಲಿ ಬೆಳೆಸುವ ಕೃಷಿಯೂ ಮುಖ್ಯವಾಗಿ ತೆಂಗು, ಕಂಗು, ಭತ್ತ, ಗೇರು, ಕರಿಮೆಣಸು, ಬಾಳೆ ಹಾಗೂ ಆಂಶಿಕ ರಬ್ಬರ್ ಆಗಿದೆ.

ಇಲ್ಲಿ ಹತ್ತು ವರ್ಷಗಳಿಂದ ಲಭಿಸುತ್ತಿರುವ ಮಳೆಯ ಪ್ರಮಾಣವು 3161.8 mm ಆಗಿರುತ್ತದೆ. ಇಲ್ಲಿನ ನೀರಿನ ಮುಖ್ಯ ಮೂಲಗಳು ತೋಡು, ಝರಿಗಳು, ಕೆರೆಗಳು, ಸುರಂಗಗಳು ಹಾಗೂ ಕೊಳವೆ ಬಾವಿಗಳಾಗಿವೆ. [ಸುರಂಗಗಳೆಂದರೆ 6 feet ಎತ್ತರ 1.5 feet ಅಗಲಕ್ಕೆ ಗುದ್ದವನ್ನು ಕೊರೆದು ನೀರನ್ನು ತೆಗೆಯುವ ವಿಧಾನ]

ಇಲ್ಲಿ ಮುಖ್ಯ ಲಭ್ಯವಿರುವ ಮಣ್ಣು ಕೆಂಪು ಮಣ್ಣು, ಕಲ್ಲು ಮಿಶ್ರಿತ ಕೆಂಪು ಮಣ್ಣು ಹಾಗೂ ಜೇಡಿ ಮಣ್ಣಾಗಿದೆ.

ಅಡಿಕೆ ಕೃಷಿಯು ವಾರ್ಷಿಕ ಬೆಳೆಯಾಗಿದ್ದು ಭತ್ತವು Seasonal ಬೆಳೆಯಾಗಿದೆ. ಈ ಬೆಳೆಗಳ ವಿಸ್ತೀರ್ಣ ಮತ್ತು ವಾರ್ಷಿಕ ಉತ್ಪಾದನೆ ಈ ಕೆಳಗಿನಂತಿದೆ.

ಬೆಳೆ	ವಿಸ್ತೀರ್ಣ ಹೆಕ್ಟೇರ್	ಉತ್ಪಾದನೆ	ಉತ್ಪಾದನಾ ಮಟ್ಟ ಹೆಕ್ಟೇರಿಗೆ Kg/Hct
ಭತ್ತ (ಮೊದಲ ಬೆಳೆ)	175	516.25 MT	2950
ಭತ್ತ (ಎರಡನೇ ಬೆಳೆ) 60	210.6 MT	3510	
ಭತ್ತ (ಮೂರನೇ ಬೆಳೆ)	15	34.5 MT	2300
ತರಕಾರಿಗಳು	30 Hq	30 MT	1000 Kg
ತೆಂಗು	360 interhelp	3424000	48 hunts/Paln/year
ಬಾಳೆ	550 interhelp	3355 MT	6100 Kg
ಕರಿಮೇಣಸು	125 Kg	40.625 MT	325 Kg
ಹಲಸು	40	4,00,000	1000 No.
ಗೇರು ಬೀಜ	970	1241.6 MT	1280 Kg
ಮಾವು	30	119.4 MT	3.9 MT
ರಬ್ಬರ್	55	66 MT	12,000 Kg
ಕಂಗು	780	631.8 MT	810 Kg

ಭೂ ಪ್ರಕೃತಿಗನುಸಾರವಾಗಿ ಎಣ್ಮಕಜೆಯನ್ನು ಮುಖ್ಯವಾಗಿ 4 ವಿಭಾಗಗಳಾಗಿ ಮಾಡಬಹುದು.

1. ಗುಡ್ಡಗಾಡು ಪ್ರದೇಶ
2. ಬಯಲು ಪ್ರದೇಶ
3. ಇಳಿಜಾರು ಪ್ರದೇಶ
4. ಉನ್ನತ ಸಮತಲ

ಕ್ರಮಸಂಖ್ಯೆ	ವಿಧ	ಮಣ್ಣಿನ ಗುಣ
1.	ಗುಡ್ಡಗಾಡು ಪ್ರದೇಶ	ಕಲ್ಲು ಮಿಶ್ರಿತ ಮಣ್ಣಿನ ಭೂಮಿ
2.	ಬಯಲು ಪ್ರದೇಶ	ಕೃಷಿಯೋಗ್ಯ ಭೂಮಿ, ನೀರಿನ ಆಶ್ರಯದ ಭೂಮಿ
3.	ಇಳಿಜಾರು ಪ್ರದೇಶ	ಕೃಷಿಯೋಗ್ಯವಲ್ಲದ ಭೂಮಿ, ನೀರಿನ ಆಶ್ರಯವಿಲ್ಲದ ಭೂಮಿ
4.	ಉನ್ನತ ಸಮತಲ	ಶಿಲಾವೃತ ಭೂಮಿ

ಎಣ್ಮಕಜೆ ಪಂಚಾಯತಿನ ಗುಡ್ಡ ಪ್ರದೇಶದಲ್ಲಿ ಗೇರು ಕೃಷಿಯಲ್ಲಿ ಅವಲಂಬಿಸಿದೆ.

Cashew Plantation — Perla Division

Extant in Ht	ಉತ್ಪಾದನೆ	No. Staff
783.14 Ht	998400 Kg	69

ಎಣ್ಮಕಜೆ ಪಂಚಾಯತ್ ಕೃಷಿ ಭವನದಿಂದ ದೊರೆತ ಮಾಹಿತಿ ಪ್ರಕಾರ ಈ ವರೆಗೆ ಈ ಕೆಳಗಿನ ಸೌಲಭ್ಯವನ್ನು ಒದಗಿಸಲಾಗಿದೆ.

		93-94				94-95				95-96			
		ರಸಗೊಬ್ಬರ		ಕೀಟನಾಶಕ		ರಸಗೊಬ್ಬರ		ಕೀಟನಾಶಕ		ರಸಗೊಬ್ಬರ		ಕೀಟನಾಶಕ	
Sl. No.		ಘನ	ದ್ರವ	ಘನ	ದ್ರವ	ಘನ	ದ್ರವ	ಘನ	ದ್ರವ	ಘನ	ದ್ರವ	ಘನ	ದ್ರವ
1.	S.C. Bank ಪೆರ್ಲ	1261.50	-	3463	-	92850	-	7556	-	103250	-	10750	-
2.	S.C. ಬೇಂಕ್ ಕಾಟುಕುಕ್ಕೆ	40605	-	1061	-	22443	-	1407	-	33025	-	965	-
3.	ನುರಾ ಎಂಟರ್‌ಪ್ರೈಸಸ್ ಖಾಸಗಿ	84 MT	3014	3000	90 MT	-	2250	360	80 MT	2375	300		
	ಒಟ್ಟು	232755	-	7628 Kg	3000	205293	-	11213	360	216275	2375	12065	

'95 - '96

ವಾರ್ಡ್	ಸಾರ್ವಜನಿಕ ನೀರಾವರಿ ಬಾವಿ	ಕೊಳವೆ ಬಾವಿ	ಒಟ್ಟು	ಆಣೆಕಟ್ಟು Ht.
11		2	99	- -

ನಾಟಿ ಮಾಡಲು ಗಿಡಗಳ ವಿತರಣೆ

ವರ್ಗ	1995-'96
ಗೇರು	2000
ಕರಿಮೆಣಸು	7050
ಕಂಗು	1440
ಕೊಕ್ಕೋ	220

ವರ್ಷ	ಪ್ರಕೃತಿ ಪೀಡಿತ ಪ್ರದೇಶದ ವಿಸ್ತೀರ್ಣ (ಹೆಕ್ಟೇರ್)					ವಿತರಿಸಲಾದ ಮೊತ್ತ
	ಪ್ರವಾಹ	ಬರಗಾಲ	ಬಿರುಗಾಳಿ	ಭೂಕುಸಿತ	ಅಧಿಕ ಸಹಾಯ ಲಭಿಸಿದವರ ಸಂಖ್ಯೆ	
1995-96	-	-	ಬಿರುಗಾಳಿ	-	425	2,88,538

ತೆಂಗಿನ ಕೃಷಿಯ ಕುರಿತಾದ ವಿವರ

ವಾರ್ಡು ನಂಬ್ರ	ತೆಂಗು ಕೃಷಿ ವಿಸ್ತೀರ್ಣ	ತೆಂಗಿನ ಮರಗಳ ಸಂಖ್ಯೆ			ರೋಗಪೀಡಿತ ತೆಂಗಿನಮರ					
		ಫಲವಿಲ್ಲದ	ಫಲಭರಿತ	ಒಟ್ಟು	ರೂಟ್ ವಿಲ್ಟ್	ಬಡ್ ರೋಡ್	ಲೀಫ್ ತೋಟ	ಸ್ಟೆಮ್ ಲೀಂಡಿಂಗ್	ಇತರ	ಒಟ್ಟು
1	2	3	4	5	6	7	8	9	10	11
1	36	1890	4410	6300	-	-	18	3	-	21
2	32	1680	3920	5600	-	-	24	4	-	28
3	30	1575	3625	5250	-	-	16	-	-	16
4	33	1732	4443	5775	-	-	23	3	-	26
5	28	1470	3430	4900	-	-	18	4	-	22
6	36	1890	1440	6300	-	-	12	3	-	15
7	38	1995	4655	6650	-	-	21	-	-	21
8	39	2047	4778	6825	-	-	19	3	-	22
9	32	1680	3920	5600	-	-	24	-	-	24
10	37	1942	4233	6475	-	-	20	2	-	22
11	29	1522	3553	5075	-	-	16	3	-	19
Total	430	20423	40017	60440	-	-	211	25	-	236

ಸದ್ರಿ ಪಂಚಾಯತ್ ಪ್ರದೇಶದಲ್ಲಿನ ಕೃಷಿಯು ಮುಖ್ಯವಾಗಿ ಕೊಳಗಳ ನೀರನ್ನೇ ಆಶ್ರಯಿಸಿಕೊಂಡಿದೆ. ಪಂಚಾಯತಿನ ಕೃಷಿ ಭವನದಿಂದ ಪಡೆದ ದಾಖಲೆಗಳಿಗೆ ಒಳಗೊಂಡಂತೆ ಹಿರಿದು ಕಿರಿದು ಎಲ್ಲಾ ಸೇರಿ ಈ ಕೆಳಗಿನಂತಿವೆ.

ವಾರ್ಡು ನಂಬ್ರ	ಕೊಳಗಳ ಸಂಖ್ಯೆ	ಒಡ್ಡು	ಅಣೆಕಟ್ಟು Ht
1	236		
2	342		
3	421		
4	415		
5	418	1	
6	314		
7	380		
8	438	1	
9	386	1	
10	284		
11	424		
ಒಟ್ಟು	4054	3	

ಮೇಲ್ಕಾಣಿಸಿದ ಎಲ್ಲಾ ಮಾಹಿತಿಗಳು ಎಣ್ಮಕಜೆ ಕೃಷಿ ಭವನದಿಂದ ಲಭ್ಯವಿದ್ದು ಆ ಪ್ರಕಾರ ಸಾಮಾನ್ಯವಾಗಿ ಅಭಿವೃದ್ಧಿ ಹೊಂದುತ್ತಿದ್ದರೂ ಅದು ಸರಿಯಾದ ಪಥದಲ್ಲಿ ಸಾಗದುದರಿಂದ ಕೆಲವೊಂದು ಅಭಿವೃದ್ಧಿಶೀಲ ಬದಲಾವಣೆಗಳು ಅತ್ಯಗತ್ಯವಾಗಿದೆ.

ಕೃಷಿ ಚರಿತ್ರೆ

ಶತಮಾನ ಪೂರ್ವದಲ್ಲಿ ಕಾಡೇ ತುಂಬಿದ್ದ ಎಣ್ಮಕಜೆ ಪಂಚಾಯತಿನಲ್ಲಿ ಭಾಗಶಃ ಭತ್ತ ಮತ್ತು ಅಲ್ಪ ಸ್ವಲ್ಪ ತೆಂಗು ಕೃಷಿ ನಡೆಯುತ್ತಿತ್ತು. ಕಾಲಾಂತರದ ಬದಲಾವಣೆಯಿಂದ ಭತ್ತ ಕೃಷಿಯು ವಿಕಸನಗೊಂಡಿತು. ಆದರೆ ಬರಬರುತ್ತಾ ಕಾರ್ಮಿಕರ ಕೊರತೆ, ಕಾಡು ಪ್ರಾಣಿಗಳ ಹಾವಳಿ ಕೃಷಿಗೆ ತಗಲಿದ ರೋಗಗಳಿಂದಾಗಿ ಭತ್ತದ ಕೃಷಿ ಕುಂಠಿತಗೊಳ್ಳಲು ನಾಂದಿಯಾಯಿತು.

ವರ್ಷಾಂತ್ಯಗಳಲ್ಲಿ ಜನಸಂಖ್ಯೆ ಹೆಚ್ಚುತ್ತಾ ಕಾಡು ಕಡಿಮೆಯಾಗುತ್ತಿದ್ದರೂ ಭತ್ತದ ಕೃಷಿಯ ಬಗ್ಗೆ ಜನರ ಒಲವು ಕಡಿಮೆಯಾಯಿತು. ಯಾಕೆಂದರೆ ಮಳೆ ಕಡಿಮೆಯಾಗಿ ಅಂತರ್ಜಲ ಮಟ್ಟ ಕುಸಿಯಿತು. ಸರಿಯಾದ ಮಾರುಕಟ್ಟೆ ಧಾರಣೆ ಸಿಗದೇ ಕಾರ್ಮಿಕರ ಕೊರತೆಯಿಂದ ಕೃಷಿಯು ಮುಸ್ತರವಾಯಿತು. ಅಡಿಕೆ ಕೃಷಿಯು ಕೃಷಿಕರ ಒಲವನ್ನು ಗಳಿಸುವಲ್ಲಿ ಸಫಲವಾಯಿತು.

ಅಡಿಕೆ ಕೃಷಿಯು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲು ಉತ್ತಮ ಕೃಷಿ ಎನಿಸಿದೆ. ಸಾಧಾರಣ ಜಲ ಪೂರೈಕೆ ಇರುವ ಗುಡ್ಡ ಪ್ರದೇಶದಲ್ಲೂ ಅಡಿಕೆಯನ್ನು ಬೆಳೆಸಬಹುದು. ಹೆಚ್ಚಾಗಿ ಸಾವಯವ ಗೊಬ್ಬರಗಳನ್ನೇ ಅವಲಂಬಿಸಿ ಈ ಬೆಳೆಯನ್ನು ಬೆಳೆಸುತ್ತಾರೆ. ಇದನ್ನು ಮನಗಂಡ ಸ್ಥಳೀಯರು ಮುಖ್ಯವಾಗಿ ಅಡಿಕೆ ಬಾಳೆ ತೆಂಗಿನ ಬೆಳೆಗೇ ಮಾರುಹೋದರು.

ಸರಕಾರದಿಂದ ದೊರೆತ ಪ್ರೋತ್ಸಾಹ ಹಾಗೂ ಮಾರುಕಟ್ಟೆ ಧಾರಣೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ರಬ್ಬರ್ ಹಾಗೂ ಗೇರು ಕೃಷಿಯು ಉತ್ತಮಗೊಳ್ಳುತ್ತಿದೆ. ಉದ್ಯೋಗದ ಆಮಿಷದಿಂದಲೋ ಹಣದ ದಾಹದಿಂದಲೋ ವರ್ತಮಾನ ಕಾಲದ ಯುವ ಪೀಳಿಗೆಯು ಹಳ್ಳಿ ಬಿಟ್ಟು ಪಟ್ಟಣ ಸೇರುತ್ತಿದ್ದರಿಂದಲೋ ಕೃಷಿಕರಿಗೆ ದೊರೆಯುವ ಸವಲತ್ತು ದಾಖಲೆ ಪತ್ರಗಳಲ್ಲಿ ಮಾತ್ರ ಲಭ್ಯವಿದ್ದು ನಿಜವಾದ ಅನುಭವಿಗೆ ಸಿಗದೇ ಮಾರ್ಗ ಮಧ್ಯದಲ್ಲಿ ಮಾಯವಾಗುತ್ತಿರುವುದರಿಂದ ಕೃಷಿಕರು ತಮ್ಮ ಕೃಷಿಯನ್ನು ಜೀವನಾಧಾರಕ್ಕೆ ಮಾತ್ರ ಎಂಬಂತೆ ಅನಿವಾರ್ಯವಾಗಿ ಬೆಳೆಸುತ್ತಾರೆ. ಆದರೆ ಸರಕಾರವು ಈಗ ಘೋಷಿಸುತ್ತಿರುವ ಉತ್ತಮ ಯೋಜನೆಗಳಿಂದ ಭತ್ತದ ಕೃಷಿಯ ಬಗ್ಗೆ ವಿಶೇಷ ಒಲವು ಹರಿಯತೊಡಗಿದೆ, ಎಂಬುದು ಸಂತೋಷದಾಯಕ.

ಕೆಲವು ದಶಕಗಳ ಹಿಂದೆ ಕೃಷಿಗೆ ದೊರಕುತ್ತಿದ್ದ ಸಾಮಾಜಿಕ ಹಾಗೂ ಆರ್ಥಿಕ ಪ್ರೋತ್ಸಾಹ ಕಡಿಮೆ ಇದ್ದುದರಿಂದ ಕೃಷಿಯು ಅಷ್ಟೊಂದು ಅಭಿವೃದ್ಧಿಯಲ್ಲಿ ವಿಫಲವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೃಷಿಕರು ಆಧುನಿಕ ತಂತ್ರಜ್ಞಾನಗಳನ್ನು ಬಳಸತೊಡಗಿದರು. ಅದಕ್ಕೆ ಹಣಕಾಸು ಸಂಸ್ಥೆಗಳ ಉತ್ತಮ ನೆರವು ದೊರಕಿ ಈ ರಂಗದ ಅಭಿವೃದ್ಧಿಗೆ ಸಹಾಯಕವಾಯಿತು.

ಇಂದಿನ ಬೆಳೆಯ ಕ್ರಮ :

ಪಂಚಾಯತಿನ ಈಗಿನ ಬೆಳೆಗಳು ಭತ್ತ, ತೆಂಗು, ಅಡಿಕೆ, ಗೇರು, ಕರಿಮೆಣಸು, ರಬ್ಬರ್ ಹಾಗೂ ಬಾಳೆ ಕೃಷಿಗಳಾಗಿವೆ.

ಭತ್ತವನ್ನು ಮೂರು ಬೆಳೆಯ ಭತ್ತದ ಗದ್ದೆ

ಎರಡು ಬೆಳೆಯ ಭತ್ತದ ಗದ್ದೆ

ಒಂದು ಬೆಳೆಯ ಭತ್ತದ ಗದ್ದೆ

ಎಂದು ವಿಂಗಡಿಸಬಹುದು.

ಅಡಿಕೆ, ತೆಂಗು, ಗೇರು, ಕರಿ ಮೆಣಸು ವಾರ್ಷಿಕ ಬೆಳೆಗಳಾಗಿವೆ. ರಬ್ಬರ್ ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯಾಗುತ್ತಿರುವ ಬೆಳೆಯಾಗಿದೆ. ಬಾಳೆಯು ಅಡಿಕೆ ತೋಟದ ಉಪ ಬೆಳೆಯಾಗಿದೆ. (ಇದರ ಅಂಕಿ ಅಂಶಗಳನ್ನು ಮುನ್ನುಡಿಯಲ್ಲಿ ಕಾಣಿಸಲಾಗಿದೆ)

ಉತ್ಪಾದನೆ : ಉತ್ಪಾದನಾ ಮಟ್ಟವನ್ನು ಬಾಧಿಸುವ ಕೆಲವು ಘಟಕಗಳು, ಕೊಳ ರೋಗ, ಕರಿಮೆಣಸಿನ ಹಳದಿ ರೋಗ, ತೆಂಗಿನ ಮತ್ತು ಭತ್ತದ ಬೆಂಕಿ ರೋಗ, ಬಾಳೆಯ ಮೊಂಡು ತಿರಿ ರೋಗ ಗೇರು ಬೀಜದ ಕಾಂಡ ಕೊರೆಯುವ ಹುಳು ಭಾದೆಗಳು ಆಗಿರುತ್ತದೆ. ಅಲ್ಲದೆ ಪ್ರಾಕೃತಿಕ ಅಸಮತೋಲನಗಳು (ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳಿಂದ) ಇತ್ಯಾದಿ ಉತ್ಪಾದನೆಗಿರುವ ಕತ್ತರಿಗಳಾಗಿವೆ.

ನೀರಾವರಿ ಸೌಕರ್ಯ : ನೀರಾವರಿಯ ಮುಖ್ಯ ಮೂಲಗಳು ಈ ಹಿಂದೆಯೇ ಹೆಸರಿಸಲ್ಪಟ್ಟಿವೆ. ಇತ್ತೀಚಿನ ದಿನಗಳಲ್ಲಿ ಅಧಿಕ ಸಂಖ್ಯೆಯ ಕೊಳವೆ ಬಾವಿಗಳಿಂದ ಅಂತರ್ಜಲ ಮಟ್ಟ ಕುಂಠಿತಗೊಂಡಿದೆ. ಹಾಗೂ ಕೆಲವು ಸಂಪೂರ್ಣವಾಗಿಯೂ ಕೆಲವು ಪರಂಪರಾಗತ ನೀರಿನ ಮೂಲಗಳು ಆಂಶಿಕವಾಗಿಯೂ ನಾಶವಾಗಿದೆ. ಜಲ ಮರುಪೂರಣೆ ಕೊಳವೆ ಬಾವಿಗಳ ನಿಯಂತ್ರಣ, ಗುಡ್ಡಗಳಲ್ಲಿ ಕೃಷಿಗೆ ಮಾಡುವ ತಟ್ಟುಗಳಿಂದ, ಗುಡ್ಡಗಳಲ್ಲಿ ಕಾಡನ್ನು ಬೆಳೆಸುವುದರಿಂದ ನೀರಿನ ಮೂಲಗಳು ಪುನಃ ಚೇತನಗೊಳ್ಳಬಹುದು.

ಪಂಚಾಯತಿನಲ್ಲಿ ಒಟ್ಟು ಉಪಯೋಗಿಸುವ ಕೃಷಿ ಸಲಕರಣೆಗಳು ಸಂಖ್ಯೆಯನ್ನು ಈ ಕೆಳಗೆ ಕಾಣಿಸಲಾಗಿದೆ.

ಫಾರ್ಮ ನಂಬ್ರ	ಉಳುವ ಯಂತ್ರಗಳು			ಮಣ್ಣು ಸಿಂಪಡಿಸುವ ಯಂತ್ರ					
	ಟ್ರಾಕ್ಟರ್	ಟಿಲ್ಲರ್	ನೇಗಿಲು	ರೋಕ್ ಸ್ಪೇಯರ್	ನಾಪ್ ಸ್ಯಾಕ್ ಸ್ಪೇಯರ್	ಇತರ power sprayer	ಕೊಯ್ಲು ಯಂತ್ರ	ತೆಂಗಿನ ಮರ ಹತ್ತುವ ಯಂತ್ರ	ಪಂಪು ಸೆಟ್ಟು
1	2	3	4	5	6	7	8	9	10
1					32	1			112
2					31				120
3					42	1			90
4					37				98
5					29		1		119
6			1		35	1		1	116
7			2		33			1	113
8			2		25				122
9			1		35				121
10			1		30				119
11					32			1	125
Total		6		361	3	1		3	1255

ಉನ್ನತ ಬೆಲೆ ಹಾಗೂ ಮಾರಾಟ : ಪಂಚಾಯತಿನಲ್ಲಿ ಲಭ್ಯವಿರುವ ಮಾರಾಟ ವ್ಯವಸ್ಥೆಯನ್ನು 1) ಸರಕಾರಿ, 2) ಖಾಸಗಿ ಎಂದು

ವರ್ಗೀಕರಿಸಬಹುದು. ಸರಕಾರಿ ಮಾರಾಟದಲ್ಲಿ Campco ಸಂಸ್ಥೆಯ ಎರಡು ಘಟಕಗಳು ಪೆರ್ಲ ಮತ್ತು ಕಾಟುಕುಕ್ಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಖಾಸಗೀ ರಂಗದಲ್ಲಿ ಹತ್ತಾರು ವ್ಯಾಪಾರಿಗಳು ಸ್ಪರ್ಧಾತ್ಮಕವಾಗಿ ವ್ಯಾಪಾರ ನಿರ್ವಹಿಸುತ್ತಿದ್ದಾರೆ.

ಆದರೂ ರೈತನಿಗೆ ಲಭಿಸಬೇಕಾದ ಬೆಲೆಯಲ್ಲಿ ಶೇಕಡಾ 25ರಿಂದ 30 ಮಧ್ಯವರ್ತಿಗಳ ಸಾಲಾಗುತ್ತಿದೆ ಎಂದು ಸೂಕ್ಷ್ಮವಾದ ಅಧ್ಯಯನದಿಂದ ತಿಳಿಯಬಹುದು.

ಸರಕಾರಿ ರಂಗದ 95-96ರ ಅಡಿಕೆಯ ಲೆಕ್ಕಾಚಾರವನ್ನು ಈ ಕೆಳಗಿನಂತೆ ತಿಳಿಯಬಹುದು.

Campco	4/95 ರಿಂದ 3/96ರ ವರೆಗೆ	
	ಖರೀದಿಸಿದ ಅಡಿಕೆ	3348 quintals
		31 Kg
		300 gm

ಕೂಲಿ ಸೇವಾ ವ್ಯವಸ್ಥೆಗಳು : ಪ್ರತಿಯೊಬ್ಬ ಕೂಲಿ ಕಾರ್ಮಿಕನು ದಿನಕ್ಕೆ ಸರಾಸರಿ 7ರಿಂದ 8 ಘಂಟೆಗಳ ಕಾಲ ಕೆಲಸ ಮಾಡುತ್ತಾನೆ. ಕೂಲಿಯ ಸಮಯವನ್ನು ಗಂಟೆಗಳಲ್ಲಿ ಹಿಡಿಯದೆ ಇಲ್ಲಿ ದಿನದ ಲೆಕ್ಕದಲ್ಲೇ ಹಿಡಿಯುವರು.

ಕೃಷಿ ಕೆಲಸಗಳಿಗೂ ಕೃಷಿ ಕಾರ್ಮಿಕರ ಕೂಲಿದರವನ್ನು ಈ ಕೆಳಗಿನಂತೆ ಸರಾಸರಿ ಲೆಕ್ಕದಲ್ಲಿ ವರ್ಗೀಕರಿಸಬಹುದು.

Work **ಉಳುವುದು, ಅಗೆಯುವುದು**	**Per day** **ರೂ. 75.00**
ನಾಟಿ ಮಾಡುವುದು ಕಳೆ ಕೀಳುವುದು ಕೊಯ್ಲು ಮದ್ದು ಸಿಂಪಡಿಸುವುದು	ರೂ. 40.00
ತೆಂಗಿನ ಕೊಯ್ಲು	ರೂ. 125.00 for half day

ಗೊಬ್ಬರದ ಉಪಯೋಗ : ಜೈವಿಕ ಗೊಬ್ಬರವನ್ನೇ ಮುಖ್ಯವಾಗಿ ಉಪಯೋಗಿಸುತ್ತಿದ್ದರೂ, ಕೃಷಿ ಭವನದಿಂದ, ಸಹಕಾರೀ ಸಂಘಗಳಿಂದ ದೊರಕುವ ರಾಸಾಯನಿಕ ಗೊಬ್ಬರಗಳನ್ನೂ ಇಲ್ಲಿನ ಕೃಷಿಕರು ಉಪಯೋಗಿಸುವರು.

ಯೋಜನೆಗಳ ಅವಲೋಕನ :

1. ಕೆಲವು ಪ್ರದೇಶಗಳಲ್ಲಿ ಮಣ್ಣಿನ ಫಲವತ್ತತೆ ಕಡಿಮೆಯಾಗಿದೆ. ಯಾಕೆಂದರೆ ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಆಮ್ಲೀಯತೆ ಹೆಚ್ಚಾಗಿದೆ. ಪ್ರಾಕೃತಿಕವಾಗಿ ಮರಗಳ ಕೊರತೆಯಿಂದ ಜೈವಿಕ ಉತ್ಪನ್ನಗಳು ಮಣ್ಣಿನಲ್ಲಿ ಕಡಿಮೆಯಾಗಿದೆ.

2. ಕೃಷಿ ನಡೆಸಬಹುದಾದ ಭೂಮಿಗೆ ಕೃಷಿಗೆ ಬೇಕಾದ ಸೌಲಭ್ಯಗಳ ಕೊರತೆ ಹಾಗೂ ಆರ್ಥಿಕ ಕೊರತೆಯಿಂದ, ನೀರಿನ ಅಭಾವ ಇತ್ಯಾದಿಗಳಿಂದ ಬಂಜರು ಭೂಮಿ ಉಂಟಾಗಿದೆ.

3. ಮಣ್ಣಿನ ಕೊರತೆ : ಕೊರತೆಗಳಿಂದ ಕೃಷಿ ಭೂಮಿ ನಾಶವಾಗುತ್ತಿದೆ. ಜೊತೆಗೆ ಫಲವತ್ತಾದ ಮಣ್ಣು ಕೊಚ್ಚಿ ಹೋಗುತ್ತಿದೆ.

4. ಕೆಲವು ಪ್ರದೇಶಗಳಲ್ಲಿ ಸರಿಯಾದ ಯೋಜನೆಗಳ ಕೊರತೆಯಿಂದ ನೀರು ಅನಾವಶ್ಯಕವಾಗಿ ಪೋಲಾಗುತ್ತದೆ. ಇದರಿಂದ ಕೃಷಿಕರು ಹೆಚ್ಚಿನ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಆದರೂ ಈಗ (1991-96) ಪೂರ್ತಿಗೊಂಡ ಕೆಲವು ಯೋಜನೆಗಳು ಈ ಕೆಳಗಿನಂತಿವೆ.

Sl. No.	ಯೋಜನೆಯ ಹೆಸರು ಅಥವಾ ಸ್ಥಳ	ಆರಂಭಗೊಂಡ ವರ್ಷ	ಮಂಜೂರಾದ ಹಣ	ವಿಸ್ತೀರ್ಣ	ಷರಾ Remarks	
1	2	3	4	5	6	7
1.	V.C.B. ನಿರ್ಮಾಣ ಮೊಗೇರು ತೋಡು ಕಾಟುಕುಕ್ಕೆ ಗ್ರಾಮ	12/91	6/96	8.80 ಲಕ್ಷ	264.86 Acre (107.23 Ht)	ಕೆಲಸ ಪೂರ್ಣವಾಗಿದೆ.
2.	ಪಾರ್ಶ್ವ ಭಿತ್ತಿ ನಿರ್ಮಾಣ ಪಡ್ರೆ - ನಾಕೂರು ತೋಡು					ಕೆಲಸ ಪ್ರಾರಂಭಗೊಂಡಿಲ್ಲ.
3.	V.C.B. ನಿರ್ಮಾಣ IHDP ಸ್ಕೀಮಿನಲ್ಲಿ ಖಂಡಿಗೆ ಎಣ್ಮಕಜೆ ಗ್ರಾಮ	12/94	4/95	3.40	14.57 H	ಪೂರ್ಣವಾಗಿದೆ.
4.	1 HDP ಯಲ್ಲಿ ಟ್ಯಾಂಕಿ ನಿರ್ಮಾಣ ಬಾಳೆಮೂಲೆ, ಕಾಟುಕುಕ್ಕೆ	3/952.50 C	13.30 H	ಪೂರ್ಣ ಹಂತದಲ್ಲಿದೆ.		
5.	ಕಾಟುಕುಕ್ಕೆ ದೇವಸ್ಥಾನದ ಬಳಿ ತೋಡಿಗೆ ಪಾರ್ಶ್ವ ಬಿತ್ತಿ ನಿರ್ಮಾಣ	4/961.70 ಲಕ್ಷ	ಪೂರ್ಣ ಹಂತದಲ್ಲಿದೆ.			

6. ಕೃಷಿಕರಿಗೆ ತುಂಬಾ ಹಾನಿ ಮಾಡುತ್ತಿರುವ ಕೀಟಗಳಿಂದ ಅತ್ಯಧಿಕ ಸಂಖ್ಯೆಯ ಕೃಷಿ ನಾಶವಾಗುತ್ತಿದೆ.

6. ಸರಿಯಾದ ಹೈಬ್ರಿಡ್ ತಳಿಗಳ ಬಳಕೆ ಇಲ್ಲ ಮಾತ್ರವಲ್ಲದೆ ಅದರ ಬಗ್ಗೆ ಮಾಹಿತಿಯೂ ದೊರಕುತ್ತಿಲ್ಲ.

7. ಮಳೆಗಾಲದಲ್ಲಿ ಈ ಪಂಚಾಯತಿನ XIನೇ ವಾರ್ಡಿನಲ್ಲಿ ಮತ್ತು ಇನ್ನಿತರ ಕೆಲವು ಕಡೆಗಳಲ್ಲಿ ಭತ್ತದ ಬೆಳೆಯು ಜಲಾವೃತವಾಗುತ್ತದೆ.

8. ರೈತರಿಗೆ ಲಭಿಸಬೇಕಾದ ಬೆಲೆಯಲ್ಲಿ ಮಧ್ಯವರ್ತಿಗಳು ಲಾಭ ನುಂಗುತ್ತಿರುವುದರಿಂದ ಮತ್ತು ಕೃಷಿ ಉಪಕರಣ, ಗೊಬ್ಬರ, ಕೀಟನಾಶಕಗಳ ಬೆಲೆ ಹೆಚ್ಚಾಗಿರುವುದರಿಂದ ಪರ್ಯಾಯವಾಗಿ ಕೃಷಿ ಕಾರ್ಮಿಕರ ಕೂಲಿ ದರ ಹೆಚ್ಚಾಗಿದೆ ಎಂದು ಪರಿಗಣಿಸಬಹುದು.

9. ಕೃಷಿ ಭವನದಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳೂ ಕಡತಗಳಲ್ಲಿ ಮಾತ್ರ ಉಲ್ಲೇಖಿಸಲ್ಪಟ್ಟಿದ್ದು ನಿಜವಾದ ಅನುಭವಿಗೆ ದೊರೆಯದೆ ಅಪ್ರತ್ಯಕ್ಷವಾಗುತ್ತಿರುವುದರಿಂದ ಎಣ್ಮಕಜೆ ಪಂಚಾಯತಿನ ಕೃಷಿಕರು ನಿಜವಾಗಿಯೂ ಕೃಷಿ ಭವನದ ಸವಲತ್ತುಗಳಿಂದ ವಂಚಿತರಾಗಿದ್ದಾರೆ.

10. ಗೇರು ಬೀಜ, ರಬ್ಬರ್ ಕರಿ ಮೆಣಸು ಮೊದಲಾದ ಕೃಷಿ ಉತ್ಪನ್ನಗಳಿಗೆ ಸರಿಯಾದ ಸಂಸ್ಕರಣಾ ಘಟಕಗಳ ಕೊರತೆಯಿಂದಾಗಿ ಕೃಷಿಕರು ಕಷ್ಟಪಡುತ್ತಿದ್ದಾರೆ.

ಸಾಧ್ಯತೆಗಳು :

1. ಪಾಳು ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿಸುವ ಕಾರ್ಯಕ್ರಮ : ಬಂಜರು ಭೂಮಿಯಲ್ಲಿ ಮರಗೆಣಸನ್ನು ಉತ್ತಮ ಕೃಷಿಯನ್ನಾಗಿಸಿ ಅದರಿಂದ ಹೆಚ್ಚಿನ ಲಾಭವನ್ನು ಗಳಿಸಬಹುದು. ಅಂತೆಯೇ ಹಲವು ವರ್ಷಗಳಿಂದೀಚೆಗೆ ಗೇರು ಹಾಗೂ ರಬ್ಬರ್ ಬೆಳೆಗಳಿಗೆ ಉತ್ತಮ ಪ್ರೋತ್ಸಾಹ ಹಾಗೂ ಮಾರುಕಟ್ಟೆ ಲಭಿಸುತ್ತಿರುವುದರಿಂದ ಅದನ್ನು ಬೆಳೆಸಬಹುದು. ಬಯಲು ಪ್ರದೇಶದಲ್ಲಿ ಅನಾವಶ್ಯಕವಾಗಿ ಹಾಳಾಗುತ್ತಿರುವ ನೀರನ್ನು ಎತ್ತರ ಪ್ರದೇಶಗಳಿಗೆ ಪಂಪುಗಳ ಮೂಲಕ ಒಯ್ದು ಅಲ್ಲಿನ ಪಾಳು ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡಬಹುದು.

   ಇದಕ್ಕೆ ಹಣಕಾಸು ಸಂಸ್ಥೆ, ಸರಕಾರದಿಂದ, 40ರಿಂದ 50 ಶೇಕಡಾ ರಿಯಾಯಿತಿ ಹಾಗೂ ಬಡ್ಡಿ ರಹಿತ ಸಾಲ ನೀಡಬೇಕು.

2. **ಮಣ್ಣು ಸಂರಕ್ಷಣೆ :** ಎಣ್ಮಕಜೆ ಪಂಚಾಯತ್ ಅಧಿಕ ಸಂಖ್ಯೆಯ ತೋಡು ಹಾಗೂ ಹೊಳೆಗಳಿಂದ ಕೂಡಿದ ಗ್ರಾಮ ಪಂಚಾಯತ್ ಆಗಿದೆ. ಅಲ್ಲಿ ಹರಿಯುವ ಈ ಕೆರೆ ತೋಡುಗಳಿಂದ ಅಧಿಕ ಸಂಖ್ಯೆಯ ಮಣ್ಣಿನ ಕೊರೆತ ಉಂಟಾಗಿ ತೀವ್ರ ಕೃಷಿ ನಾಶವಾಗುತ್ತಿದೆ. ಅದರಲ್ಲೂ ಮುಖ್ಯವಾಗಿ Vನೇ ವಾರ್ಡಿನಲ್ಲಿ ಅಧಿಕ ಕೊರೆತ ಉಂಟಾಗಿದೆಯೆಂದು ಅಧ್ಯಯನದಿಂದ ತಿಳಿದು ಬಂದಿದೆ. ಇದನ್ನು ತಡೆಗಟ್ಟಲು ತೋಡಿನ ದಡೆ ಕಟ್ಟುವಿಕೆಯನ್ನು ಮಾಡಿ ಮಣ್ಣಿನ ಕೊರೆತವನ್ನು ತಡೆಗಟ್ಟಬಹುದು. ಮೇಲ್ಮಣ್ಣು ಸವೆತ ಉಂಟಾಗದಂತೆ ಮರಗಳನ್ನು ನೆಟ್ಟು ಸವೆತವನ್ನು ತಡೆಯಬಹುದು.

ಪ್ರತೀ ವಾರ್ಡುಗಳಲ್ಲಿ ಕೃಷಿ ಭವನದ ತಜ್ಞರ ತಂಡದಿಂದ ತಿಂಗಳಿಗೊಮ್ಮೆ ಮಣ್ಣು ಪರೀಕ್ಷಣಾ ಶಿಬಿರವನ್ನು ನಡೆಸಬೇಕು.

ನೀರಾವರಿ ಸೌಲಭ್ಯ : ಕೆರೆ, ಹಳ್ಳ ಕೊಳಗಳಲ್ಲಿ ಮಣ್ಣು ತುಂಬಿ ಮಳೆಯ ನೀರು ಬಿದ್ದ ತಕ್ಷಣ ಹರಿದು ನಷ್ಟವಾಗುತ್ತದೆ. ಅಲ್ಲದೆ ಅಲ್ಲಿನ ನೈಜ ಒರತೆ ಕಡಿಮೆಯಾಗಿದೆ. ಅದಕ್ಕಾಗಿ ಹಳ್ಳ ಕೊಳ್ಳಗಳ ಹೂಳೆತ್ತುವ ಕಾರ್ಯಕ್ರಮ ಕೈಗೊಳ್ಳುವುದು. ಅತ್ಯಾವಶ್ಯಕವಾಗಿದೆ.

ಉದಾಹರಣೆಗೆ : ಬೆದ್ರಂಪಳ್ಳದ ಬನದ ಹತ್ತಿರ ಇರುವ ಹಳ್ಳ ಶಿರಿಯ ಆಣೆಕಟ್ಟಿನ ದುರಸ್ತಿ, ಅಡ್ಕಸ್ಥಳ, ಏಳ್ಕಾನ, ಪುತ್ತಿಗೆ ಮೊದಲಾದೆಡೆಗಳಲ್ಲಿ ಆಣೆಕಟ್ಟು ಕಟ್ಟಿ ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡಬೇಕು. ಇತರ ವಾರ್ಡುಗಳಲ್ಲಿ ತೋಡುಗಳಿಗೆ ಒಡ್ಡುಗಳನ್ನು ಮಾಡಿ ಕೃಷಿಗೆ ಉತ್ತಮ ನೀರಾವರಿ ಒದಗಿಸಬಹುದು. ಇಂಗು ಗುಂಡಿಗಳ ನಿರ್ಮಾಣದಿಂದ ನೀರಿನ ಶೇಖರಣೆಯನ್ನು ಜಾಸ್ತಿ ಮಾಡಬಹುದು. ಕೃಷಿಗೆ ಶೇಕಡಾ 50 ರಿಯಾಯಿತಿ ದರದಲ್ಲಿ ಪಂಪು ಸೆಟ್ಟುಗಳ ವ್ಯವಸ್ಥೆ ಮತ್ತು ಶೀಘ್ರ ವಿದ್ಯುತ್ತು ವ್ಯವಸ್ಥೆ ಮಾಡಬೇಕು. ಸಾಧ್ಯವಾದಷ್ಟು ಮಟ್ಟಿಗೆ ಕೃಷಿಗೆ ಸೌರ ಪಂಪು ಸೆಟ್ಟುಗಳ ವ್ಯವಸ್ಥೆ ಮಾಡಬೇಕು. V ಮತ್ತು VIನೇ ವಾರ್ಡುಗಳಲ್ಲಿ ನೀರಿಗೆ ಸುರಂಗಗಳೇ ಮುಖ್ಯ ಆಶ್ರಯವಾದ ಕಾರಣ ಅದಕ್ಕಾಗಿ ಶೇಕಡಾ 50ರ ರಿಯಾಯಿತಿ ದರದಲ್ಲಿ ಸಾಲ ನೀಡಬೇಕು.

4. **ಗದ್ದೆಗಳಿಗೆ ಮಣ್ಣು ತುಂಬಿಸುವುದರ ವಿರುದ್ಧ ನಿಯಂತ್ರಣ :**

ನೀರಿನಿಂದ ಸಮೃದ್ಧವಾಗಿದ್ದು ಭತ್ತದ ಕೃಷಿಗೆ ಯೋಗ್ಯವಾದ ಬಯಲು ಪ್ರದೇಶಗಳಲ್ಲಿನ ಭತ್ತದ ಕೃಷಿಕರು ಈ ಕೃಷಿಯು ಆರ್ಥಿಕವಾಗಿ ಲಾಭದಾಯಕವಲ್ಲ ಎಂಬ ದೃಷ್ಟಿಯಿಂದ ಗದ್ದೆಗಳಿಗೆ ಮಣ್ಣು ತುಂಬಿ ತೆಂಗು, ಕಂಗು, ಬಾಳೆ ಇತ್ಯಾದಿ ಕೃಷಿಗಳನ್ನು ಬೆಳೆಸುವ ಪ್ರವೃತ್ತಿ ಬೆಳೆದು ಬರುತ್ತಿದೆ. ಅವರಿಗೆ ಹೆಕ್ಟೇರುವಾರು ಭತ್ತದ ಕೃಷಿಯಲ್ಲಿ ಎಷ್ಟು ನಷ್ಟ ಬರುತ್ತಿದೆ ಎಂದು ಖಚಿತ ಮಾಹಿತಿ ಹಿಡಿದು ಆ ನಷ್ಟವನ್ನು ಸರಕಾರವು ಭರಿಸುವುದರ ಮೂಲಕ ಭತ್ತದ ಕೃಷಿಕರಿಗೆ ಪ್ರೋತ್ಸಾಹ ಕೊಡಬೇಕು. ಇದರಿಂದಾಗಿ ಗದ್ದೆಗಳಿಗೆ ಮಣ್ಣು ತುಂಬುವುದನ್ನು ನಿಯಂತ್ರಿಸಬಹುದು.

5. ಹೊಸ ನರ್ಸರಿಗಳ ಆರಂಭ : ರೈತರಿಗೆ ಉತ್ತಮ ಇಳುವರಿಯ ಗಿಡಗಳು ದೊರೆತರೆ ಮಾತ್ರ ಉತ್ತಮ ಫಸಲನ್ನು ಪಡೆಯಬಹುದು. ರಬ್ಬರ್, ತೆಂಗು, ಕಂಗು ಹೈಬ್ರಿಡ್ ತಳಿಗಳು ದೊರೆಯದ ಕಾರಣ ದೂರದಿಂದ ಆಮದು ಮಾಡಲು ಹೆಚ್ಚಿನ ವೆಚ್ಚವಾಗುತ್ತದೆ. ಇದನ್ನು ತಡೆಗಟ್ಟಲು ಮತ್ತು ಔಷಧಿಯ ಗಿಡಗಳನ್ನು ಬೆಳೆಸಲು ಹೊಸ ನರ್ಸರಿಗಳ ಆರಂಭ ಅತೀ ಅಗತ್ಯ.

6. ಯಂತ್ರೋಪಕರಣಗಳ ಆಗ್ರೋ ಕ್ಲಿನಿಕ್ ಸ್ಥಾಪನೆ : ಕೃಷಿಕರಿಗೆ ಅಗತ್ಯವಾದ ಯಂತ್ರೋಪಕರಣಗಳನ್ನು ಖರೀದಿಸುವರೇ ಪಂಚಾಯತ್ ಮಟ್ಟದಲ್ಲೊಂದು ಆಗ್ರೋ ಕ್ಲಿನಿಕ್ ಸ್ಥಾಪನೆ. ಪ್ರತೀ ವಾರ್ಡಿಗೊಂದರಂತೆ ಟಿಲ್ಲರ್, ಟ್ರಾಕ್ಟರ್ ಹಾಗೂ ಚಾಲಕನ ನೇಮಕ ಅತ್ಯಾವಶ್ಯಕ. ಬೆಳೆ ಕಟಾವು ಯಂತ್ರ ಸಬ್ಸಿಡಿ ದರದಲ್ಲಿ ಉತ್ತಮ ದರ್ಜೆಯ ಕೀಟನಾಶಕ, ಜೈವಿಕ ಗೊಬ್ಬರ, ಕಹಿ ಬೇವಿನ ಎಣ್ಣೆ ಕೃಷಿ ಭೂಮಿಗೆ ಅನುಗುಣವಾಗಿ ಕೊಡಬೇಕು.

7. **ಖರೀದಿ ಕೇಂದ್ರ ಸಾರ್ವಜನಿಕ ಮಾರುಕಟ್ಟೆ :**

ಉತ್ತಮ ದರ್ಜೆಯ ಬೆಳೆಗಳಿಗೆ ಸಹಕಾರೀ ಮಾರುಕಟ್ಟೆಯ ಸಹಾಯದಿಂದ ಯೋಗ್ಯ ಬೆಲೆ ದೊರೆಯುವಂತೆ ಮಾಡಬೇಕು. ಇದಕ್ಕಾಗಿ ಪಂಚಾಯತ್ ಮಟ್ಟದಲ್ಲಿ ವಾರದ ಸಂತೆಯನ್ನು ಏರ್ಪಡಿಸಬೇಕು. ಕೃಷಿಕರಿಗೆ ಸಂಪೂರ್ಣ ಮಾರಾಟ ತೆರಿಗೆಯಿಂದ ವಿನಾಯಿತಿ ದೊರೆಯಬೇಕು.

8. **ಸಾಲ ಸೌಕರ್ಯಗಳು :** ಸಹಕಾರೀ ಸಂಸ್ಥೆಗಳಿಂದ ಹಾಗೂ ಹಣಕಾಸು ಸಂಸ್ಥೆಗಳಿಂದ ಉತ್ತಮ ಸಾಲ ಸೌಕರ್ಯ ನೀಡುತ್ತಿದ್ದರೂ ಅದರ ಅವಧಿಯು ಕಡಿಮೆ. ಬಡ್ಡಿಯ ದರವೂ ಹೆಚ್ಚಾಗಿ ರೈತರಿಗೆ ಸಿಗುವ ಬೆಲೆಯಲ್ಲಿ ಅದನ್ನು ನಿಭಾಯಿಸುವುದು ಕಷ್ಟವಾಗಿದೆ. ಆದುದರಿಂದ ಈ ಅವಧಿಯನ್ನು ಹೆಚ್ಚಿಸಿ ಬಡ್ಡಿ ದರವನ್ನು ಕಡಿಮೆಗೊಳಿಸಬೇಕು. ಅಂತೆಯೇ ರೈತರಿಗೆ ಕೃಷಿ ಸಾಲವನ್ನು ಕಡಿಮೆ ಪಕ್ಷ ರೂ. 25,000=00ಕ್ಕೆ ಏರಿಸಬೇಕು. ಕನಿಷ್ಠ ಪಕ್ಷ 25 cent ಸ್ಥಳ ಇರುವವರಿಗೂ ಕೃಷಿ ಅಭಿವೃದ್ಧಿ, ನೀರಾವರಿ ಸಾಲ ನೀಡಬೇಕು.

9. **ಕೃಷಿ ಅಭಿವೃದ್ಧಿ ಕಾರ್ಯಕ್ರಮ :** ಕೃಷಿ ಭವನದ ಮಾಹಿತಿ ಕೇಂದ್ರಗಳನ್ನು ಪ್ರತೀ ವಾರ್ಡುಗಳಲ್ಲಿ ತೆರೆಯಬೇಕು. ಕಾಲಕಾಲಕ್ಕೆ ಬರುವ ಕೃಷಿ

ಯೋಜನೆಗಳು ಅನುಭವಿಗೆ ದೊರೆಯುವಂತೆ ಮಾಡಬೇಕು. ಪಂಪು ಸೆಟ್ಟುಗಳಿಗೆ ದೊರೆಯುವ ಸೀಮೆ ಎಣ್ಣೆ ಪರ್ಮಿಟನ್ನು ಪಂಚಾಯತಿನಿಂದಲೇ ದೊರೆಯುವಂತೆ ಮಾಡಬೇಕು.

10. **ಕೃಷಿ ಸಂಸ್ಥೆಗಳು :** ಕೇರ ಸಮಿತಿ ಕರಿ ಮೆಣಸು ಅಭಿವೃದ್ಧಿ ನಿಗಮ ನಿಧಾನವಾಗಿಯಾದರೂ ಉತ್ತಮ ಕಾರ್ಯ ನಿರ್ವಹಿಸುತ್ತಾ ತೆಂಗಿನ ಕೃಷಿ ಮತ್ತು ಕರಿ ಮೆಣಸಿನ ಕೃಷಿಗೆ ಪ್ರೋತ್ಸಾಹ ನೀಡುತ್ತಿವೆ.

ಸರಕಾರವು ಮೇಲೆ ಪ್ರಸ್ತಾಪಿಸಿದ ಎಲ್ಲಾ ಕಾರ್ಯಗಳನ್ನೂ ಅನುಷ್ಠಾನಗೊಳಿಸಿದರೆ ಕೃಷಿಯಲ್ಲಿ ಮುಖ್ಯವಾಗಿ ಭತ್ತದ ಕೃಷಿಯನ್ನು ಉತ್ತಮ ಬೆಳೆಯನ್ನು ಪಡೆಯುವುದು ಖಚಿತ. ಮನೆಯ ಹಿತ್ತಲಲ್ಲೇ ಬೆಳೆಯಬಹುದಾದ ತುಳಸಿ, ರಾಮಚ್ಚ, ಭೃಂಗರಾಜ, ಹಂಸರಾಜ, ಪಾತಾಳಗರುಡ, ಕಹಿಬೇವು, ಪಲ್ಲಿ ಸೊಪ್ಪು, ನೀಲ ಸೊಪ್ಪು, ಒಂದೆಲಗ, ಕಿರಾತಕಡ್ಡಿ, ಸಾಮ್ರಾಣಿ ಮುಂತಾದ ಔಷಧಿಯ ಸಸ್ಯಗಳನ್ನು ಬೆಳೆಸಲು ಪ್ರೋತ್ಸಾಹಿಸಿದರೆ ಪ್ರಾಚೀನ ವೈದ್ಯಕೀಯ ಸಂಸ್ಕೃತಿಯೂ ಉಳಿದು ಶಾರೀರಿಕ ಕ್ಷೇಮವೂ ದೊರೆಯುವುದು.

ವೈವಿಧ್ಯಮಯ ಸಸ್ಯಗಳಾದ ಮಾಂಜಿಯಂ, ನೀಲಗಿರಿ, ಸಾಗುವಾನಿ, ಮಾಗುವಾನಿ ಮೊದಲಾದ ಮರಗಳನ್ನು ಬೆಳೆಸಿದರೆ ಪ್ರಕೃತಿಯಾ ಸಮತೋಲನವೂ, ಕಾಡನ್ನು ಬೆಳೆಸಿದಂತೆಯೂ ಆಗುತ್ತದೆ.

ಹೀಗೆ ಕೃಷಿ ಮತ್ತು ನೀರಾವರಿಯಲ್ಲಿ ವೈವಿಧ್ಯಮಯವಾದ ಯೋಜನೆಗಳನ್ನು ಹಮ್ಮಿಕೊಂಡು ಅದರ ಸೂಕ್ತ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಸಹಕಾರಿಯಾಗಬಹುದು. ಅದಲ್ಲವಾದರೆ ಕೃಷಿಯನ್ನು ನಾವೇ ನಾಶಪಡಿಸಿದಂತಾಗಿ ಪರದೇಶಗಳನ್ನು ಅವಲಂಬಿಸಬೇಕಾಗುತ್ತದೆ. ಮಾತ್ರವಲ್ಲ ಎಣ್ಮಕಜೆ ಪಂಚಾಯತ್ ಕ್ಷೇತ್ರಕ್ಕೊಳಪಟ್ಟ ಭೂಪ್ರದೇಶದಿಂದ ಸೊಪ್ಪು, ಸೌದೆ, ಮೋಪಿನ ಮರ ಕಡಿದು ಪಂಚಾಯತ್‌ನ ಹೊರಗೆ ಸಾಗಿಸುವುದನ್ನು ಹತ್ತು ವರ್ಷಗಳ ವರೆಗಾದರೂ ನಿಷೇಧಿಸಬೇಕು.

ಮೀನುಗಾರಿಕೆ ಮತ್ತು ಮೃಗ ಸಂರಕ್ಷಣೆ

ಎಣ್ಮಕಜೆ ಗ್ರಾಮ ಪಂಚಾಯತು 78.23 ಚ.ಕಿ.ಮೀ. ವಿಸ್ತೀರ್ಣವಿದ್ದರೂ ಕಡಲ ತೀರದಲ್ಲಿರದಿರುವುದರಿಂದ ಮತ್ತು ವರ್ಷದ ಎಲ್ಲಾ ದಿನಗಳಲ್ಲಿ ನೀರಿನ ಸೌಕರ್ಯದ ಕೊರತೆಯಿರುವುದರಿಂದ ಮೀನುಗಾರಿಕೆಗೆ ಅಷ್ಟೊಂದು ಯೋಗ್ಯ ಪ್ರದೇಶವಲ್ಲ. ಆದುದರಿಂದ ಇಲ್ಲಿನ ಜನರಿಗೆ ಮೀನುಗಾರಿಕೆಯಲ್ಲಿ ಪರಂಪರಾಗತವಾದ ಜ್ಞಾನವಿರುವುದಿಲ್ಲ. ಆದರೂ ಇಲ್ಲಿನ ಕೆಲವು ಜನರು ಕಡಲಿನಿಂದ ಹಿಡಿದ ಮೀನನ್ನು ವಾಹನಗಳಲ್ಲಿ ತಂದು ಮಾರುವ ಮತ್ತು ಆ ಮೂಲಕ ತಮ್ಮ ಜೀವನವನ್ನು ಸಾಗಿಸುವ ಕುಟುಂಬಗಳು ತುಂಬಾ ಇವೆ.

ಈ ಪ್ರದೇಶದ ಹೆಚ್ಚಿನ ಜನರು ಬಸ್ಸುಗಳಲ್ಲಿಯೂ ಇತರ ವಾಹನಗಳಲ್ಲಿಯೂ ಮೀನನ್ನು ತಂದು ಕೆಲವರು ಮನೆ ಮನೆಗೆ ಹೋಗಿ ಮೀನನ್ನು ಮಾರುತ್ತಿದ್ದರೆ ಇನ್ನು ಕೆಲವರು ಸೈಕಲಿನಲ್ಲಿ ತಂದು ಹಳ್ಳಿ ಹಳ್ಳಿಗಳಿಗೆ ಹೋಗಿ ಮಾರುವ ವ್ಯವಸ್ಥೆಯೂ ಇದೆ.

ನಮ್ಮ ಪಂಚಾಯತಿನ ಒಂದೇ ಒಂದು ಕುಟುಂಬವಾದರೂ ಸಮುದ್ರದಿಂದ ಮೀನನ್ನು ಹಿಡಿಯುವ ಅನುಭವವನ್ನು ಹೊಂದಿಲ್ಲ. ಆದರೆ ಮೀನಿನ ವ್ಯಾಪಾರವನ್ನು ದೊಡ್ಡ ಮಟ್ಟದಲ್ಲಿ ಮಾಡುವ ವ್ಯಾಪಾರಿಗಳು ಇದ್ದಾರೆ. ಆದರೆ ಅವರಿಗೆ ವ್ಯಾಪಾರ ಮಾಡಲು ಬೇಕಾದ ಸುಸಜ್ಜಿತವಾದ ಮೀನು ಮಾರುಕಟ್ಟೆಯ ವ್ಯವಸ್ಥೆ ನಮ್ಮ ಪಂಚಾಯತಿನಲ್ಲಿ ಇಲ್ಲ. ಮಾರ್ಗದ ಬದಿಗಳಲ್ಲಿ ಜಡಿಮಳೆಗಳನ್ನೋ ಉರಿಬಿಸಿಲನ್ನೋ ಲೆಕ್ಕಿಸದೆ ಕುಳಿತು ತಮ್ಮ ಜೀವನೋಪಾಯಕ್ಕೆ ಬೇಕಾಗಿ ಕಷ್ಟ ಪಡುತ್ತಿದ್ದಾರೆ.

ನಮ್ಮ ಪಂಚಾಯತಿನಲ್ಲಿ ಮೀನು ಉತ್ಪಾದನೆಯನ್ನು ನಡೆಸುವಂತಹ ಭೂಪ್ರಕೃತಿಯೂ ಇಲ್ಲವೆಂದೇ ಇಲ್ಲಿನ ಜನರ ಅಭಿಪ್ರಾಯ. ಆದುದರಿಂದ ಮೀನುಗಾರಿಕಾ ಇಲಾಖೆಯು ಬಂದು ಇಲ್ಲಿನ ಭೂಪ್ರಕೃತಿಯನ್ನು ಪರಿಶೋಧಿಸಿ ಇಲ್ಲಿನ ಪರಿಸರಕ್ಕೆ ಯೋಗ್ಯವಾದ ರೀತಿಯಲ್ಲಿ ಹೇಗೆ ಕೈಗೆತ್ತಿಕೊಳ್ಳಬಹುದು ಎಂಬ ಸೂಕ್ತ ಮಾರ್ಗದರ್ಶನದ ಆವಶ್ಯಕತೆ ಇದೆ.

ಎಣ್ಮಕಜೆ ಪಂಚಾಯತು ಮೃಗ ಸಂರಕ್ಷಣಾ ಕ್ಷೇತ್ರದಲ್ಲಿ ಮುಂದುವರಿದಿದೆಯಾದರೂ ಈ ವಲಯದಲ್ಲಿ ನಮ್ಮ ಪಂಚಾಯತಿನ ಅಭಿವೃದ್ಧಿ ಇನ್ನೂ ನಡೆಯಬೇಕಾಗಿದೆ. ನಮ್ಮ ಪಂಚಾಯತಿನ ದನ ಕರುಗಳ ಒಡೆತನದ ಬಹುಪಾಲು ಜನರು ಕಿರು ರೈತರೂ ಕೃಷಿಕರು ಕಾರ್ಮಿಕರೂ ಆಗಿದ್ದಾರೆ. ಆದುದರಿಂದ ಜನ ಜೀವನದ ನೆಲೆಯನ್ನು ಊರ್ಜಿತಗೊಳಿಸಲು ಯೋಜನೆಗಳನ್ನು ಆವಿಷ್ಕರಿಸುವಾಗ ನಮ್ಮ ಪಂಚಾಯತಿನ ಮೃಗ ಸಂರಕ್ಷಣಾ ರಂಗಕ್ಕೆ ಬಹಳಷ್ಟು ಪ್ರಾಧಾನ್ಯತೆ ನೀಡಬೇಕು.

ಮೃಗ ಸಂರಕ್ಷಣಾ ವಲಯಕ್ಕೆ ಬೇಕಾದಷ್ಟು ಆರ್ಥಿಕ ಸಹಾಯದ ಕೊರತೆ, ಕಡಿಮೆಯಾಗುತ್ತಿರುವ ಮೇವು ಸ್ಥಳ, ಹೆಚ್ಚುತ್ತಿರುವ ಉತ್ಪಾದನಾ ಖರ್ಚು, ಪಶು ಆಹಾರ ಉತ್ಪಾದನೆಗೆ ಅಗತ್ಯವಾದ ಕಚ್ಚಾ ವಸ್ತುಗಳ ಕೊರತೆ, ಉತ್ತಮ ತಳಿಯ ಹುಲ್ಲಿನ ಕೃಷಿಗೆ ಯೋಗ್ಯ ಮಾರ್ಗದರ್ಶನ ಮತ್ತು ಆರ್ಥಿಕ ಸಹಾಯದ ಕೊರತೆಗಳಿಂದ ನಮ್ಮ ಪಂಚಾಯತು ಮೃಗ ಸಂರಕ್ಷಣೆಯಲ್ಲಿ ಸಾಕಷ್ಟು ಮುಂದುವರಿಯಲು ವಿಫಲವಾಗಿದೆ.

ನಮ್ಮ ಪಂಚಾಯತಿನಲ್ಲಿ ಮೀನುಗಾರಿಕೆ ಮತ್ತು ಮೃಗ ಸಂರಕ್ಷಣೆಗೆ ಒಳಪಟ್ಟು 8ನೇ ಪಂಚವಾರ್ಷಿಕ ಯೋಜನೆಯ ಮುಕ್ತಾಯ ಹಂತದಲ್ಲಿ ಇರುವ ಸವಲತ್ತುಗಳು ಮತ್ತು ಸಾಕುತ್ತಿರುವಂತಹ ಜಾನುವಾರುಗಳು ಅವುಗಳಿಂದ ಪಡೆಯುವ ಹಾಲು ಉತ್ಪಾದನೆಯ ವಿವರ ಮತ್ತು ಕೋಳಿ ನಾಯಿ ಇತ್ಯಾದಿ ಪ್ರಾಣಿಗಳ ವಿವರ ರೋಗ ಪ್ರತಿರೋಧಕ ಚುಚ್ಚುಮದ್ದುಗಳ ವಿವರ ಕೃತಕ ಗರ್ಭಧಾರಣೆಯ ವಿವರಗಳನ್ನು ವಿವರವಾಗಿ ಕೊಡಲಾಗಿದೆ. ಮಾತ್ರವಲ್ಲದೆ ನಮ್ಮ ಪಂಚಾಯತಿನ ಜನರಲ್ಲಿ ಮೀನುಗಾರಿಕೆ ಮತ್ತು ಮೃಗ ಸಂರಕ್ಷಣೆಗೆ ಒಳಪಟ್ಟ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಸವಿವರವಾಗಿ ಈ ಕೆಳಗೆ ವಿವರಿಸಲಾಗಿದೆ.

ನಮ್ಮ ಪಂಚಾಯತಿನಲ್ಲಿರುವ ಮೃಗಾಸ್ಪತ್ರೆಗಳು

ಆಸ್ಪತ್ರೆಗಳ ಸಂಖ್ಯೆ	ಆಸ್ಪತ್ರೆ ಇರುವ ಸ್ಥಳ
1	ಪೆರ್ಲ
ಒಟ್ಟು	1
ಎಣ್ಮಕಜೆ ಪಂಚಾಯತಿನಲ್ಲಿ ತಿಂಗಳಿಗೆ ಉತ್ಪಾದನೆಯಾಗುವ ಹಾಲು	
ದನ	38,729 ಲೀ
ಎಮ್ಮೆ	6,000 ಲೀ
ಆಡು	150 ಲೀ
ಒಟ್ಟು	44,879 ಲೀ

ಜಾನುವಾರುಗಳ ಸಂಖ್ಯೆ	
ದನಗಳು	3,276
ಎಮ್ಮೆಗಳು	527
ಆಡುಗಳು	154
ಕೋಣ	1
ನಾಯಿಗಳು	506
ಬೀಜದ ಹೋರಿ	68
ಇತರ ಹೋರಿಗಳು	150
ಒಟ್ಟು	4,682
ಸಾಕು ಪ್ರಾಣಿಗಳು	
ಹುಂಜಗಳು	153
ಮೊಟ್ಟೆ ಇಡುವ ಹೆಂಟೆಗಳು	2,038
ಮೊಟ್ಟೆ ಇಡದ ಹೆಂಟೆಗಳು	2,102
ಒಟ್ಟು	4,293

ಕೃತಕ ಗರ್ಭಧಾರಣೆಯ ವಿವರ

ಸಾಕುಪ್ರಾಣಿಗಳ ವಿವರ	ಒಟ್ಟು ಸಂಖ್ಯೆ	ಕೃತಕ ಗರ್ಭಧಾರಣೆ ನಡೆಸಿದವುಗಳು	ಗರ್ಭಧಾರಣೆ 2ಕ್ಕಿಂತ ಹೆಚ್ಚು ಸಲ ನಡೆಸಿದವುಗಳು
ದನ	1,500	530	-
ಎಮ್ಮೆ	91	53	-

ಹುಚ್ಚು ನಾಯಿಗಳ ಪ್ರತಿರೋಧಕ ಚುಚ್ಚು ಮದ್ದು

ರೋಗ ಪ್ರತಿರೋಧ ಚುಚ್ಚು ಮದ್ದು	ನಾಯಿ ಕಡಿತದ ನಂತರ ಪಡೆದ ನಾಯಿಗಳು	ನಾಯಿ ಕಡಿತದ ನಂತರ ಚುಚ್ಚು ಮದ್ದು ಕೊಟ್ಟ ದನಗಳು
100		25 10

ಸಮಸ್ಯೆಗಳು

1) ಮುಂಗಾರು ಕಾಲದಲ್ಲಿ ಹಸಿರು ಹುಲ್ಲಿಗೆ ನಮ್ಮ ಪಂಚಾಯತಿನಲ್ಲಿ ವಿಶೇಷ ಕಷ್ಟವಿಲ್ಲದಿದ್ದರೂ ಬೇಸಿಗೆಯಲ್ಲಿ ಹುಲ್ಲಿನ ಸಮಸ್ಯೆಯು ತುಂಬಾ ಇದೆ.

2) ಹಾಲಿನ ಮಾರಾಟಕ್ಕೆ ಆವಶ್ಯಕವಾದಂತಹ ಹಾಲಿನ ಸೊಸೈಟಿ ಇಲ್ಲ.

3) ಪ್ರಾಣಿ ಸಾಕಣೆಗೆ ಆವಶ್ಯಕವಾದ ಆರ್ಥಿಕ ತೊಂದರೆ

4) ಜೇನು ನೊಣ ಮೊಲ ಸಾಕಣೆ ಮತ್ತು ಕೋಳಿ ಸಾಕಣೆಗೆ ಬೇಕಾದ ಯೋಗ್ಯ ರೀತಿಯ ತರಬೇತಿಯ ಕೊರತೆ

5) ಯೋಗ್ಯವಾದ ತಳಿಯ ಕೊರತೆ

6) ಯೋಗ್ಯ ತಳಿಯ ಹುಲ್ಲಿನ ಕೃಷಿಗೆ ಅಗತ್ಯವಿರುವ ಮಾರ್ಗದರ್ಶನದ ಕೊರತೆ

7) ಮೀನುಗಾರಿಕೆಗೆ ಸೌಕರ್ಯವಿರುವ ಕೃಷಿಕರಿಗೆ ತರಬೇತಿ ಮತ್ತು ಹಣದ ಕೊರತೆ

8) ಅಕ್ವೇರಿಯಂ ತಯಾರಿಕೆಯ ಬಗ್ಗೆ ತರಬೇತಿಯ ಕೊರತೆ

9) ಉತ್ತಮ ತರದ ಮೀನು ಮಾರಾಟ ವ್ಯವಸ್ಥೆಯ ಕೊರತೆ

10) ಉತ್ತಮ ಮಾರ್ಗದರ್ಶನದ ಕೊರತೆ

11) ಜಾನುವಾರುಗಳಿಗೆ ಉತ್ತಮ ತರದ ಪೌಷ್ಟಿಕಾಂಶಗಳ ವಿತರಣಾ ಕೇಂದ್ರಗಳ ಕೊರತೆ

12) ಅವಶ್ಯವಿದ್ದಷ್ಟು ಮೃಗಾಸ್ಪತ್ರೆಗಳ ಕೊರತೆ ಇರುವ ಆಸ್ಪತ್ರೆಯ ಉಪಯೋಗವನ್ನು ಪಡಕೊಳ್ಳುವಲ್ಲಿ ಜನರ ವೈಫಲ್ಯ.

ಬೇಡಿಕೆಗಳು

1. ಎಣ್ಮಕಜೆ ಪಂಚಾಯತಿನ ಹೃದಯ ಭಾಗವಾದ ಪೆರ್ಲದಲ್ಲಿ ಒಂದು ಸುಸಜ್ಜಿತ ಮೀನು ಮಾರುಕಟ್ಟೆಯ ವ್ಯವಸ್ಥೆ.
2. ಪೆರ್ಲದಲ್ಲಿರುವ ಮೃಗಾಸ್ಪತ್ರೆಗೆ ವೈದ್ಯರಿಗೆ ಮತ್ತು ಸಿಬಂದಿ ವರ್ಗದವರಿಗೆ ವಸತಿ ಸೌಕರ್ಯಗಳನ್ನೊಳಗೊಂಡ ಒಂದು ಕಟ್ಟಡ ನಿರ್ಮಾಣ
3. ಅಲೆಮಾರಿ ದನಗಳ ತೊಂದರೆಗಳನ್ನು ನಿವಾರಿಸಲು ಇನ್ನು ಹೆಚ್ಚಿನ ಸವಲತ್ತು ಮತ್ತು ಸಹಾಯ
4. ಮೀನುಗಾರಿಕೆಗೆ ಬೇಕಾದ ತಾಂತ್ರಿಕ ಮಾಹಿತಿ ಮತ್ತು ಪ್ರೋತ್ಸಾಹ ಮತ್ತು ಆರ್ಥಿಕ ಸಹಾಯ
5. ಏಡಿ ಸಾಕಣೆಗೆ ಮತ್ತು ಸಿಗಡಿ ಸಾಕಣೆಗೆ ತರಬೇತಿ ಮತ್ತು ಆರ್ಥಿಕ ಸಹಾಯ
6. ಏಡಿ ಮತ್ತು ಸಿಗಡಿ ಸಾಕಣೆಗೆ ಬೇಕಾದ ಆಹಾರ ಪದಾರ್ಥಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು ಮತ್ತು ಯೋಗ್ಯ ಮಾರುಕಟ್ಟೆಯ ವ್ಯವಸ್ಥೆ.
7. ವಾರ್ಡಿಗೊಂದು ಮೃಗಾಸ್ಪತ್ರೆಯಂತೆ ಕೊಟ್ಟು ಸಹಕರಿಸಬೇಕು.
8. ಬಡವರಿಗೆ ಜಾನುವಾರು ಸಾಕಣೆಗೆ ಆರ್ಥಿಕ ಸಹಾಯ. ಈ ಸಹಾಯಕ್ಕೆ ರಿಯಾಯಿತಿ ದರದಲ್ಲಿ ಸಾಲದ ಸೌಕರ್ಯ.
9. ಮಾಂಸದ ಕೋಳಿ ಸಾಕಣಾ ಕೇಂದ್ರಗಳನ್ನು ಪ್ರಾರಂಭಿಸಲು ಯೋಗ್ಯ ತರಬೇತಿ ಮತ್ತು ರಿಯಾಯಿತಿ ಬಡ್ಡಿ ದರದಲ್ಲಿ ಹೆಚ್ಚಿನ ಆರ್ಥಿಕ ಸಹಾಯ.
10. ಅಕ್ವೇರಿಯಂ ತಯಾರಿಕೆಯ ಬಗ್ಗೆ ತರಬೇತಿ ಮತ್ತು ರಿಯಾಯಿತಿ ಬಡ್ಡಿ ದರದಲ್ಲಿ ಹೆಚ್ಚಿನ ಆರ್ಥಿಕ ಸಹಾಯ.
11. ಯೋಗ್ಯ ತಳಿಯ ಹುಲ್ಲನ್ನು ಬೆಳೆಸಲು ಅಗತ್ಯವಾದ ಮಾರ್ಗದರ್ಶನ ಸಲಹೆ ಸೂಚನೆಗಳು.
12. ಉತ್ತಮ ತಳಿಯ ಜಾನುವಾರುಗಳ ವಿತರಣೆಗೆ ಸಹಾಯ.

ಮೃಗಾಸ್ಪತ್ರೆಗಳ ಪ್ರಯೋಜನವನ್ನು ಹೆಚ್ಚಿನವರು ಉಪಯೋಗಿಸಿಕೊಳ್ಳುವುದಿಲ್ಲ. ಈ ವೈಫಲ್ಯತೆಯನ್ನು ನಿವಾರಿಸಲು ಜನರಿಗೆ ಸೂಕ್ತ ಮಾರ್ಗದರ್ಶನವನ್ನು ಕೊಡಿಸುವ ವ್ಯವಸ್ಥೆ.

ನಿರುದ್ಯೋಗಿಗಳನ್ನು ಮತ್ತು ಗ್ರಾಮೀಣ ಸ್ತ್ರೀಯರನ್ನು ಮೃಗ ಸಂರಕ್ಷಣಾ ಕಾರ್ಯದಲ್ಲಿ ಶ್ರದ್ಧಾವಂತರಾಗುವಂತೆ ಅವರಿಗೆ ಸೂಕ್ತ ಮಾರ್ಗದರ್ಶನ.

ಪಶು ಆಹಾರ ಉತ್ಪಾದನಾ ರಂಗದಲ್ಲಿ ಇಂದು ಇರುವ ಸ್ವಂತ ಹಿತಾಸಕ್ತಿಗಾರರಿಂದ ಕೃಷಿಕರನ್ನು ರಕ್ಷಿಸಲು ಉತ್ಪಾದನೆಯಲ್ಲಿ ಮತ್ತು ವಿತರಣೆಯಲ್ಲಿ ಸಹಕಾರಿ ಸಂಘದ ವ್ಯವಸ್ಥೆ.

ಅತೀ ಕಡಿಮೆ ಖರ್ಚಿನಲ್ಲಿ ಮೊಟ್ಟೆ ಉತ್ಪಾದಿಸುವ ಬಗ್ಗೆ ಯೋಗ್ಯ ಮಾರ್ಗದರ್ಶನ.

ಕೋಳಿ ಮೊಟ್ಟೆ ಮತ್ತು ಮಾಂಸಗಳಿಗೆ ಉತ್ತಮ ಬೆಲೆಯು ಸಿಗುವಂತೆ ಮಾಡಲು ಒಂದು ಸಹಕಾರಿ ಸಂಘದ ಸ್ಥಾಪನೆ.

ಆಡು ಸಾಕಣೆಗೆ ನಮ್ಮ ಪಂಚಾಯತಿನ ಹವಾಮಾನವು ಯೋಗ್ಯವೋ ಎಂದ ಪರಿಶೋಧಿಸಿ ಸಾಧ್ಯವೆಂದಾದರೆ ಉತ್ತಮವಾದ ತಳಿಯನ್ನು ವಿತರಿಸುವ ಯೋಜನೆ ಮತ್ತು ಸೂಕ್ತವಾದ ಮಾರ್ಗದರ್ಶನ ಮತ್ತು ಮಾರುಕಟ್ಟೆಯ ವ್ಯವಸ್ಥೆ.

ಹಂದಿ ಸಾಕಲು ಆಸಕ್ತಿಯುಳ್ಳವರಿಗೆ ಉತ್ತಮ ಮಾರ್ಗದರ್ಶನ ಮತ್ತು ಆರ್ಥಿಕ ಸಹಾಯ.

ಗೋಬರ್ ಗೇಸ್ ನಿರ್ಮಿಸಲು ಧನಸಹಾಯ ರಿಯಾಯಿತಿ ಬಡ್ಡಿ ದರದಲ್ಲಿ ಒದಗಿಸಬೇಕು.

ಗೂಳಿ, ಕರು ಪರಿಪಾಲನೆಯ ವಿಷಯದಲ್ಲಿ ತರಬೇತಿ.

ಕೃಷಿಕರಿಗೆ ತೊಂದರೆ ಕೊಡುವ ಕಾಡು ಪ್ರಾಣಿಗಳಾದ ಕಾಡು ಹಂದಿ ಮುಂತಾದವುಗಳಿಂದ ರಕ್ಷಣೆ ಪಡೆಯಲು ಅಗತ್ಯವಿದ್ದವರಿಗೆ ಕೋವಿಯನ್ನು ಪಡೆಯಲು ಸುಲಭದಲ್ಲಿ ಪರವಾನಗಿ ಒದಗಿಸಬೇಕು.

ಅಲೆಮಾರಿ ದನಗಳ ತೊಂದರೆಗಳನ್ನು ನಿವಾರಿಸಲು ದೊಡ್ಡಿಗಳ ಸ್ಥಾಪನೆ.

ಹೈನುಗಾರಿಕೆಗೆ 75% ಆರ್ಥಿಕ ಸಹಾಯ.

ಪಂಚಾಯತಿನ ಎಲ್ಲಾ ವಾರ್ಡುಗಳಿಗೂ ಒಂದೊಂದು ಹಾಲಿನ ಡೈರಿಯ ಒದಗಿಸುವಿಕೆ.

ಮೊಲ ಸಾಕಣೆಯನ್ನು ಫಲಪ್ರದವಾಗುವಂತೆ ಮಾಡುವ ಉತ್ತಮ ಯೋಜನೆಯನ್ನು ಜಾರಿಗೊಳಿಸುವುದು.

ಹೈನುಗಾರಿಕೆ ಮತ್ತು ಇತರ ಸಾಕು ಪ್ರಾಣಿಗಳ ಉತ್ಪಾದನೆಯನ್ನು ಅಭಿವೃದ್ಧಿಗೊಳಿಸುವಂತೆ ಮಾಡಲು ಗ್ರಾಮೀಣ ವನಿತೆಯರ ಸಂಘಗಳನ್ನು ರೂಪೀಕರಿಸಿ ಸಾಮೂಹಿಕ ಕ್ಷೇಮ ಖಾತೆಯ ಯೋಜನೆಯಲ್ಲಿ ದೊರೆಯುವ ಧನ ಸಹಾಯವನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ಮತ್ತು ಈ ಯೋಜನೆಯ ಒಟ್ಟು ಖರ್ಚಿನಲ್ಲಿ ಅರ್ಧಾಂಶವನ್ನು ಸಾಲ ರೂಪದಲ್ಲಿ ವಿತರಿಸುವುದು. ಈ ಮೇಲೆ ತೋರಿಸಿದಂತಹ ಎಲ್ಲಾ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸೂಕ್ತ ಪರಿಹಾರವನ್ನು ಒದಗಿಸಿ ಎಣ್ಮಕಜೆ ಪಂಚಾಯತಿನ ಜನತೆಯ ಜೀವನವನ್ನು ಬಡತನ ರೇಖೆಯಿಂದ ಮೇಲೆತ್ತಿ ಸುಗಮ ಜೀವನಕ್ಕೆ ಕಾಲಿಡಲು ಸಹಕಾರಿಯಾಗಲೆಂದು ನಿರೀಕ್ಷಿಸುತ್ತೇವೆ.

ಶಿಕ್ಷಣ (Education)

ಶಿಕ್ಷಣವೆಂದರೆ ಪ್ರತಿಯೊಬ್ಬ ವ್ಯಕ್ತಿಯನ್ನು ಪರಿಪೂರ್ಣ ನಾಗರಿಕನನ್ನಾಗಿ ಮಾಡುವ ಒಂದು ಪ್ರಕ್ರಿಯೆಯಾಗಿದೆ. ವಿದ್ಯಾಭ್ಯಾಸವನ್ನು ಪಡೆಯದ ಮಾನವ ಪರಿಪೂರ್ಣತೆಯನ್ನು ಸಾಧಿಸುವಲ್ಲಿ ವಿಫಲನಾಗುತ್ತಾನೆ. ಆದುದರಿಂದ ಮನುಷ್ಯನ ಪ್ರಾಥಮಿಕ ಆವಶ್ಯಕತೆಗಳೊಂದಿಗೆ ಶಿಕ್ಷಣವನ್ನು ನೀಡಿದಾಗ ಆ ವ್ಯಕ್ತಿ ಶ್ರೇಷ್ಠತೆಯನ್ನು ಪಡೆಯುವುದರೊಂದಿಗೆ ತನ್ನ ರಾಷ್ಟ್ರದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವಂತಾಗುವುದು. ಇಂದಿನ ಪ್ರಪಂಚದಲ್ಲಿ ಶಿಕ್ಷಣದ ಪಾತ್ರ ಮಹತ್ತರವಾದುದು.

ಭಾರತದ ರಾಜ್ಯಗಳಲ್ಲಿ ಸಂಪೂರ್ಣ ಸಾಕ್ಷರತಾ ರಾಜ್ಯವೆಂಬ ಖ್ಯಾತಿಯನ್ನು ಪಡೆದ ರಾಜ್ಯ ನಮ್ಮ 'ಕೇರಳ'. ನಾವು ಎಷ್ಟರ ಮಟ್ಟಿನ ಸಾಕ್ಷರತೆಯನ್ನು ಹೊಂದಿದ್ದೇವೆ ಎನ್ನುವುದನ್ನು ಚಿಂತಿಸುವ ಸಂದರ್ಭ ಒದಗಿ ಬಂದಿದೆ. ಈ ನಿಟ್ಟಿನಲ್ಲಿ ಮುಂದೆ ಜಾರಿಗೆ ಬರಲಿರುವ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಣ್ಮಕಜೆ ಪಂಚಾಯತಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾದ ಕೆಲವೊಂದು ರೂಪುರೇಷೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಕೇರಳದ ಅತ್ಯಂತ ಉತ್ತರ ದಿಕ್ಕಿನಲ್ಲಿರುವ ಜಿಲ್ಲೆಯಾದ ಕಾಸರಗೋಡಿನ ಎಣ್ಮಕಜೆ ಪಂಚಾಯತು ಹಲವು ವೈವಿಧ್ಯಗಳಿಂದ ಕೂಡಿದ ಒಂದು ಗ್ರಾಮ ಪ್ರದೇಶವಾಗಿದೆ. ಈ ಪಂಚಾಯತು ಹನ್ನೊಂದು ವಾರ್ಡುಗಳಿಂದ ಕೂಡಿದ್ದು ಇಲ್ಲಿ ಹಲವು ಭಾಷೆಗಳನ್ನು ಮಾತನಾಡುವ ಜನರು ವಾಸವಾಗಿರುತ್ತಾರೆ. ಅವುಗಳಲ್ಲಿ ಕನ್ನಡ ಹಾಗೂ ಮಲೆಯಾಳ ಶಿಕ್ಷಣ ಮಾಧ್ಯಮ ಭಾಷೆಯಾಗಿದ್ದು, ತುಳು, ಮರಾಠಿ, ಕೊಂಕಣಿ, ಮೊದಲಾದ ಭಾಷೆಗಳೂ ಬಳಕೆಯಲ್ಲಿವೆ.

ಈ ಪಂಚಾಯತಿನಲ್ಲಿ ವಿದ್ಯಾರ್ಥಿಗಳ ವಿದ್ಯಾರ್ಜನೆಗಾಗಿ ಒಟ್ಟು 18 ಶಾಲೆಗಳಿದ್ದು ಅವುಗಳಲ್ಲಿ 4 ಹೈಸ್ಕೂಲುಗಳು, 5 ಹಿರಿಯ ಪ್ರಾಥಮಿಕ ಶಾಲೆಗಳು, 9 ಕಿರಿಯ ಪ್ರಾಥಮಿಕ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಶಾಲೆಗಳಲ್ಲಿ ಪ್ರಸ್ತುತ 2983 ಹುಡುಗರೂ, 2675 ಹುಡುಗಿಯರೂ ಆಗಿ ಒಟ್ಟು 5658 ವಿದ್ಯಾರ್ಥಿಗಳು ಕಲಿಯುತ್ತಿದ್ದು ಈ ವಿದ್ಯಾರ್ಥಿಗಳಿಗೆ ಒಟ್ಟು 201 ಅಧ್ಯಾಪಕರು ಬೋಧಿಸುತ್ತಿದ್ದಾರೆ. ಈ ಕುರಿತಾದ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ವಿವರಗಳನ್ನು ಪಟ್ಟಿ 1-Aಯಲ್ಲಿ ನಮೂದಿಸಲಾಗಿದೆ. ಇದಲ್ಲದೆ 5 ವರ್ಷದ ವಯೋಮಿತಿಗಿಂತ ಕಡಿಮೆ ಪ್ರಾಯದ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿ ಮೂಡಿಸುವಲ್ಲಿ 4 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಮೇಲಿನ ವಿದ್ಯಾ ಸಂಸ್ಥೆಗಳಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ಹೈಸ್ಕೂಲು ಕಾಟುಕುಕ್ಕೆ ಶಾಲೆಯು ಪಂಚಾಯತಿನ 4ನೇ ವಾರ್ಡಿನಲ್ಲಿಯೂ ಶ್ರೀ ಶಾರದಾಂಭಾ ಹೈಸ್ಕೂಲು ಶೇಣಿ ಶಾಲೆಯು 7ನೇ ವಾರ್ಡಿನಲ್ಲಿಯೂ ಸರಕಾರಿ ಹೈಸ್ಕೂಲು ಪಡ್ರೆ ಶಾಲೆಯು 5ನೇ ವಾರ್ಡಿನ ಪಡ್ರೆ ವಾಣಿನಗರದಲ್ಲಿಯೂ ಶ್ರೀ ಸತ್ಯ ನಾರಾಯಣ ಹೈಸ್ಕೂಲು ಪೆರ್ಲ ಶಾಲೆಯು 11ನೇ ವಾರ್ಡಿನಲ್ಲಿಯೂ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ಹಿರಿಯ ಪ್ರಾಥಮಿಕ ಶಾಲೆಗಳಾದ ಶ್ರೀ ದುರ್ಗಾಪರಮೇಶ್ವರಿ ಎಯಿಡೆಡ್ ಹಿರಿಯ ಪ್ರಾಥಮಿಕ ಶಾಲೆ ಬಣ್ಪುತ್ತಡ್ಕ ಶಾಲೆಯು 7ನೇ ವಾರ್ಡಿನಲ್ಲಿಯೂ ಶ್ರೀ ಮಂಜಯ್ಯ ಮೆಮೋರಿಯಲ್ ಎಯಿಡೆಡ್ ಹಿರಿಯ ಪ್ರಾಥಮಿಕ ಶಾಲೆ ಮುಂಡಿತ್ತಡ್ಕವು 10ನೇ ವಾರ್ಡಿನಲ್ಲಿಯೂ ಶ್ರೀ ಶಾರದಾಂಬಾ ಎಯಿಡೆಡ್ ಹಿರಿಯ ಪ್ರಾಥಮಿಕ ಶಾಲೆ ಶೇಣಿಯು 7ನೇ ವಾರ್ಡಿನಲ್ಲಿಯೂ ಶ್ರೀ ವಿವೇಕಾನಂದ ಎಯಿಡೆಡ್ ಹಿರಿಯ ಪ್ರಾಥಮಿಕ ಶಾಲೆ ಸ್ವರ್ಗವು 5ನೇ ವಾರ್ಡಿನಲ್ಲಿಯೂ ಬಾಲಪ್ರಭಾ ಎಯಿಡೆಡ್ ಹಿರಿಯ ಪ್ರಾಥಮಿಕ ಶಾಲೆ ಕಾಟುಕುಕ್ಕೆಯು 4ನೇ ವಾರ್ಡಿನಲ್ಲಿಯೂ ಸ್ಥಾಪಿಸಲ್ಪಟ್ಟಿವೆ. ಮಾತ್ರವಲ್ಲದೆ ಶ್ರೀ ದುರ್ಗಾಪರಮೇಶ್ವರಿ ಕಿರಿಯ ಪ್ರಾಥಮಿಕ ಶಾಲೆ ಸಾಯವು 1ನೇ ವಾರ್ಡಿನಲ್ಲಿಯೂ ವಾಗ್ದೇವಿ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆ ನಲ್ಕವು ಶಾಲೆಯು 2ನೇ ವಾರ್ಡಿನಲ್ಲಿಯೂ ಗಿರಿಜಾಂಭಾ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆ ಬೆಂಗಪದವು ಶಾಲೆಯು 3ನೇ ವಾರ್ಡಿನಲ್ಲಿಯೂ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆ ಚಿದ್ರಂಪಳ್ಳ ಶಾಲೆಯು 3ನೇ ವಾರ್ಡಿನಲ್ಲಿಯೂ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಜಂಪಾಡಿ ಶಾಲೆಯು 6ನೇ ವಾರ್ಡಿನಲ್ಲಿಯೂ ಎಯಿಡೆಡ್ ಜ್ಯೂನಿಯರ್ ಬೆಸಿಕ್ ಶಾಲೆ ಎಳ್ಳಾನ ಶಾಲೆಯು 10ನೇ ವಾರ್ಡಿನಲ್ಲಿಯೂ ಶ್ರೀ ಸತ್ಯನಾರಾಯಣ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆ ಪೆರ್ಲವು 11ನೇ ವಾರ್ಡಿನಲ್ಲಿಯೂ ಮುನವ್ವಿರುಟ್ ಇಸ್ಲಾಂ ಕಿರಿಯ ಪ್ರಾಥಮಿಕ ಶಾಲೆ ಪೆರ್ಲವು 11ನೇ ವಾರ್ಡಿನಲ್ಲಿಯೂ ಶ್ರೀ ವಸಿಷ್ಠಾಶ್ರಮ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆ ಪೆರ್ಲವು 11ನೇ ವಾರ್ಡಿನಲ್ಲಿಯೂ ವಿದ್ಯಾದಾನ ಮಾಡುತ್ತಿವೆ. ಇವುಗಳಲ್ಲದೆ 4ನೇ ವಾರ್ಡಿನ ಕಾಟುಕುಕ್ಕೆಯಲ್ಲಿಯೂ, 11ನೇ ವಾರ್ಡಿನ ಪೆರ್ಲ ಎಂಬಲ್ಲಿಯೂ 5ನೇ ವಾರ್ಡಿನ ಸ್ವರ್ಗ ಎಂಬಲ್ಲಿಯೂ 9ನೇ ವಾರ್ಡಿನ ಬೇಂಗಪದವು ಎಂಬಲ್ಲಿಯೂ ಶಾಲಾ ಪೂರ್ವ ಮಕ್ಕಳಿಗಾಗಿ ಒಂದೊಂದು ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿವೆ.

ತಾಂತ್ರಿಕ ಜ್ಞಾನಾಭಿವೃದ್ಧಿಗಾಗಿ 11ನೇ ವಾರ್ಡಿನ ಪೆರ್ಲದಲ್ಲಿ ಒಂದು ಬೆರಳಚ್ಚು ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿವೆ.

ಈ ಪಂಚಾಯತಿನಲ್ಲಿ ಈ ರೀತಿಯ ವಿದ್ಯಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದರೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಮಾತ್ರವಲ್ಲದೆ ಕೆಲವೊಂದು ಪ್ರದೇಶಗಳಲ್ಲಿ ಇನ್ನೂ ಅನಕ್ಷರತೆಯು ತಾಂಡವವಾಡುತ್ತಿವೆ. ಅದರ ನಿರ್ಮೂಲನಕ್ಕಾಗಿ ಮತ್ತು ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಕೆಲವು ಸಲಹೆಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

ಪಂಚಾಯತಿನ 8ನೇ ವಾರ್ಡಿನಲ್ಲಿರುವ ಬಾಳೆಮೂಲೆ ಪ್ರದೇಶವು ತೀರಾ ಕುಗ್ರಾಮವಾಗಿದ್ದು ಪರಿಶಿಷ್ಟ ಜಾತಿ ಮತ್ತು ಪ. ಪಂಗಡದ ಜನರು ಅಧಿಕವಾಗಿರುತ್ತಾರೆ. ಇಂತಹ ಜನರಿಗೆ ವಿದ್ಯಾರ್ಜನೆಗಾಗಿ 6 ಕಿ.ಮೀ. ದೂರದ ಕಾಟುಕುಕ್ಕೆಗೆ ನಡೆದು ಹೋಗಬೇಕಾಗುತ್ತದೆ ಮಾತ್ರವಲ್ಲದೆ ದಾರಿ ಮಧ್ಯದಲ್ಲಿ ಒಂದು ಹೊಳೆಯು ಹರಿಯುವುದರಿಂದ ಚಿಕ್ಕ ಮಕ್ಕಳಿಗೆ ದಾಟಲು ತುಂಬಾ ಅನನುಕೂಲವಾಗುತ್ತದೆ. ಈ ರೀತಿಯ ಸಮಸ್ಯೆಯನ್ನು ಬಗೆ ಹರಿಸುವರೇ ಬಾಳೆಮೂಲೆಯಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆಯ ಸ್ಥಾಪನೆ ಅತೀ ಅಗತ್ಯವಾಗಿದೆ.

1ನೇ ವಾರ್ಡಿನ ಸಾಯ ಪ್ರದೇಶವು ಕುಗ್ರಾಮವಾಗಿದ್ದು ಕರ್ನಾಟಕ ಮತ್ತು ಕೇರಳದ ಗಡಿ ಪ್ರದೇಶವಾಗಿದೆ ಇಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆಯು ಕಾರ್ಯ ನಿರ್ವಹಿಸುತ್ತಿದ್ದು ಹಿರಿಯ ಪ್ರಾಥಮಿಕ ಶಾಲೆಗಾಗಿ ಕರ್ನಾಟಕಕ್ಕೆ ಹೋಗಬೇಕಾದ ಪರಿಸ್ಥಿತಿಯು ಒದಗಿದೆ. ಆದುದರಿಂದ ಕೇರಳದ ಮಕ್ಕಳು ಹಿರಿಯ ಪ್ರಾಥಮಿಕ ಶಾಲೆಗಾಗಿ ಕರ್ನಾಟಕವನ್ನು ಆಶ್ರಯಿಸಬೇಕಾಗುವುದನ್ನು ತಪ್ಪಿಸುವುದಕ್ಕಾಗಿ ಸಾಯ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಭಡ್ತಿಗೊಳಿಸುವುದು ಉತ್ತಮ.

2ನೇ ವಾರ್ಡಿನ ನಲ್ಕ ಎಂಬಲ್ಲಿ ಕಿರಿಯ ಪ್ರಾಥಮಿಕ ಶಾಲೆಯು ಕಾರ್ಯ ನಿರ್ವಹಿಸುತ್ತಿದ್ದು ಇಲ್ಲಿನ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕಾಗಿ 3ರಿಂದ 4 ಕಿ.ಮೀ. ದೂರದ ಶಾಲೆಗಳಿಗೆ ನಡೆಯಬೇಕಾಗುತ್ತದೆ. ಆದುದರಿಂದ ಅಗತ್ಯವಾಗಿ ಈ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿ ಭಡ್ತಿಗೊಳಿಸುವುದು ಉಚಿತ.

3ನೇ ವಾರ್ಡಿನ ಬೆಂದ್ರಂಪಳ್ಳ ಶಾಲೆಯು ವಾರ್ಡಿನಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಯಾಗಿದ್ದು ಈ ವಾರ್ಡಿನ ಮಕ್ಕಳ ಉನ್ನತ ವಿದ್ಯಾಭ್ಯಾಸದ ಅಸೌಕರ್ಯವನ್ನು ಪರಿಗಣಿಸಿ ಕೂಡಲೇ ಸದ್ರಿ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಭಡ್ತಿಗೊಳಿಸುವುದು ಮತ್ತು ಗಿರಿಜಾಂಬಾ ಎಯಿಡೆಡ್ ಕಿರಿಯ ಪ್ರಾಥಮಿಕ ಶಾಲೆ ಬೇಂಗಪದವು ಒಂದು ಕುಗ್ರಾಮ ಪ್ರದೇಶದ ಶಾಲೆಯಾಗಿರುವುದರಿಂದ ಈ ಶಾಲೆಯ ಮಕ್ಕಳು ಉನ್ನತ ವಿದ್ಯಾಭ್ಯಾಸಕ್ಕಾಗಿ 5 ಕಿ.ಮಿ. ದೂರ ಹೋಗಬೇಕಾಗಿರುವುದರಿಂದ ಈ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಭಡ್ತಿಗೊಳಿಸುವುದು ಅಗತ್ಯ.

6ನೇ ವಾರ್ಡಿನ ಕಜಂಪಾಡಿ ಕಿರಿಯ ಪ್ರಾಥಮಿಕ ಶಾಲೆಯನ್ನು ಮಕ್ಕಳ ಉನ್ನತ ವಿದ್ಯಾಭ್ಯಾಸದ ಕೊರತೆಯನ್ನು ನೀಗಿಸುವರೇ ಸದ್ರಿ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಭಡ್ತಿಗೊಳಿಸುವುದು ಆವಶ್ಯಕವಾಗಿದೆ.

10ನೇ ವಾರ್ಡಿನ ಏಣ್ಕನ ಕಿರಿಯ ಪ್ರಾಥಮಿಕ ಶಾಲೆಯನ್ನು ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಭಡ್ತಿಗೊಳಿಸಬೇಕಾಗಿದೆ.

ಈ ಪಂಚಾಯತಿನ ಏಕೈಕ ಮಲೆಯಾಳ ಮಾಧ್ಯಮ ಶಾಲೆಯಾದ 11ನೇ ವಾರ್ಡಿನ M.I.A.L.P ಪೆರ್ಲ ಶಾಲೆಯನ್ನು ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಭಡ್ತಿಗೊಳಿಸುವುದು ಅತ್ಯಂತ ಅಪೇಕ್ಷಣೀಯವಾಗಿದೆ.

10ನೇ ವಾರ್ಡಿನ ಶ್ರೀ ಮಂಜಯ್ಯ ಮೆಮೋರಿಯಲ್ ಎಯಿಡೆಡ್ ಹಿರಿಯ ಪ್ರಾಥಮಿಕ ಶಾಲೆ ಮುಂಡಿತ್ತಡ್ಕ ಶಾಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ ಹಾಗೂ ಅಲ್ಪ ಸಂಖ್ಯಾತ ವಿಭಾಗ, ಮತ್ತು ಇತರ ಹಿಂದುಳಿದ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿರುವುದರಿಂದ, ಏಳೆಂಟು ಕಿ.ಮೀ. ದೂರದಲ್ಲಿ ಬೇರೆ ಯಾವುದೇ ಹೈಸ್ಕೂಲು ಇಲ್ಲದಿರುವುದರಿಂದ ಈ ಭಾಗದ ಎಲ್ಲಾ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಶೀಘ್ರದಲ್ಲಿಯೇ ಈ ಶಾಲೆಯನ್ನು ಹೈಸ್ಕೂಲು ಆಗಿ ಭಡ್ತಿಗೊಳಿಸುವುದು ಅತೀ ಅಗತ್ಯ.

ಕೇರಳ ಮತ್ತು ಕರ್ನಾಟಕದ ಗಡಿ ಪ್ರದೇಶವಾದ 5ನೇ ವಾರ್ಡಿನ ಸ್ವರ್ಗ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕವನ್ನು ಆಶ್ರಯಿಸಿ ಹೋಗಬೇಕಾಗಿರುವುದರಿಂದ ಅಲ್ಲದೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅಧಿಕವಾಗಿರುವುದರಿಂದ ಅವರ ಆರ್ಥಿಕ ಕೊರತೆಯಿಂದ ದೂರದ ಸ್ಥಳಗಳಿಗೆ ಮಕ್ಕಳನ್ನು ಉನ್ನತ ವಿದ್ಯಾಭ್ಯಾಸಕ್ಕೆ ಕಳುಹಿಸಲು ಅನನುಕೂಲವಾಗಿರುವುದರಿಂದ ಈ ಶಾಲೆಯನ್ನು ಹೈಸ್ಕೂಲು ಆಗಿ ಭಡ್ತಿಗೊಳಿಸುವುದು.

4ನೇ ವಾರ್ಡಿನ ಕಾಟುಕುಕ್ಕೆಯಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ಹೈಸ್ಕೂಲು ಕಾರ್ಯ ನಿರ್ವಹಿಸುತ್ತಿದೆ. ಈ ಶಾಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶ ಉನ್ನತ ಮಟ್ಟದಲ್ಲಿದ್ದು ಪಂಚಾಯತಿನಲ್ಲಿರುವ ಹೈಸ್ಕೂಲುಗಳಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ. ಅಲ್ಲದೆ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಮಕ್ಕಳು ಶೇಕಡಾ 45%ರಷ್ಟಿದ್ದು ಈ ಶಾಲೆಯಲ್ಲಿ ಕಲಿತ ಮಕ್ಕಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕವನ್ನು ಅನಿವಾರ್ಯವಾಗಿ ಆಶ್ರಯಿಸಬೇಕಾಗುತ್ತದೆ ಅಥವಾ 40 ಕಿ.ಮೀ. ದೂರದ ಜಿಲ್ಲಾ ಕೇಂದ್ರವಾದ ಕಾಸರಗೋಡಿಗೆ ಹೋಗಬೇಕಾಗುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕನಿಷ್ಟ ಈ ಶಾಲೆಯನ್ನು ಪದವಿಪೂರ್ವ ಕಾಲೇಜನ್ನಾಗಿಯಾದರೂ ಭಡ್ತಿಗೊಳಿಸುವುದು ಅತ್ಯಗತ್ಯವಾಗಿದೆ.

5ನೇ ವಾರ್ಡಿನಲ್ಲಿರುವ ಪಡ್ರೆ ಸರಕಾರಿ ಹೈಸ್ಕೂಲು ಕರ್ನಾಟಕದ ಗಡಿ ಪ್ರದೇಶವಾಗಿರುವುದರಿಂದ ಅಲ್ಲಿನ ಮಕ್ಕಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕಕ್ಕೆ ಹೋಗಬೇಕಾಗಿರುವುದು ಅಲ್ಲದೆ ಪ್ರಸ್ತುತ ಈ ಶಾಲೆಯ ಅಂಗವಾಗಿ ಒಂದು ಪರಿಶಿಷ್ಟ ಪಂಗಡ ಮತ್ತು ಜಾತಿಯ

ವಿದ್ಯಾರ್ಥಿ ನಿಲಯವು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದುದರಿಂದ ಈ ಶಾಲೆಯನ್ನು ಪದವಿ ಪೂರ್ವ ಕಾಲೇಜಾಗಿ ಭಡ್ತಿಗೊಳಿಸುವುದು.

ಪಂಚಾಯತ್ ಕೇಂದ್ರವಾದ ಪೆರ್ಲದಲ್ಲಿ ಸತ್ಯನಾರಾಯಣ ಹೈಸ್ಕೂಲು ಸುಮಾರು 50 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಪ್ರಸ್ತುತ ಈ ಶಾಲೆಯಲ್ಲಿ 1000ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಮುಖ್ಯವಾಗಿ ಕರ್ನಾಟಕವನ್ನು ಆಶ್ರಯಿಸಿರುತ್ತಾರೆ ಅಥವಾ ದೂರದ ಕಾಸರಗೋಡಿಗೆ ಪ್ರಯಾಣ ಬೆಳೆಸಬೇಕಾಗುತ್ತದೆ. ಅಲ್ಪ ಸಂಖ್ಯಾತರು ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಮಾತ್ರವಲ್ಲದೆ ಇತರ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಅಧಿಕವಾಗಿರುತ್ತಾರೆ ಅಲ್ಲದೆ ಆರ್ಥಿಕ ಅಡಚಣೆಯಿಂದ ಕೂಡಿರುತ್ತಾರೆ. ಮೇಲಿನ ಎಲ್ಲಾ ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತವಾಗಿ ಬಗೆಹರಿಸುವರೇ ಇಲ್ಲಿರುವ ಹೈಸ್ಕೂಲನ್ನು ಪ್ರಥಮ ದರ್ಜೆ ಕಾಲೇಜನ್ನಾಗಿ ಶೀಘ್ರದಲ್ಲಿಯೇ ಭಡ್ತಿಗೊಳಿಸುವುದು ಪಂಚಾಯತಿನ ಒಂದು ಶೈಕ್ಷಣಿಕ ಆವಶ್ಯವಾಗಿದೆ ಹಾಗೂ ಪಂಚಾಯತಿನ ವಾಣಿ ನಗರ ಪ್ರದೇಶವು ಬೊಳ್ಳೂರು ಕುಂಬ್ಡಾಜೆ ಪಂಚಾಯತಿಗೆ ಕೇಂದ್ರ ಸ್ಥಳವಾಗಿರುವುದರಿಂದಲೂ ಈ ಪ್ರದೇಶ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರು ಹೆಚ್ಚಾಗಿ ಇರುವುದರಿಂದಲೂ ಅಲ್ಲಿ ಒಂದು ಕಾಲೇಜನ್ನು ಸ್ಥಾಪಿಸಬೇಕು.

ಅಂಗನವಾಡಿಗಳು : ಪಂಚಾಯತಿನಲ್ಲಿ ಪ್ರಸ್ತುತ ಕೇವಲ ನಾಲ್ಕು ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿದ್ದು ಪಂಚಾಯತು ಅಂಗೀಕರಿಸಿ ICDS ಕಳುಹಿಸಿದ ಸ್ಥಳಗಳಲ್ಲಿ ಕೂಡಲೇ ಅಂಗನವಾಡಿಗಳನ್ನು ತೆರೆಯುವ ವ್ಯವಸ್ಥೆ ಮಾಡುವುದು.

1ನೇ ವಾರ್ಡಿನ ಸಾಯ, ಕೂರ್ಲಿಗಾಯ, ಬಾಕಿಲಪದವು, ಪಾಂಡಿದಯ, ಮುಳಿಯಾಳ.

2ನೇ ವಾರ್ಡಿನ ಬೆರ್ಮುಲೆ, ನಲ್ಕ, ಗುಂಡಿಯಡ್ಕ, ಕೊಂಕಣೆಸಾಲೆ, ಅಡ್ಕ ಸ್ಥಳಗಳಲ್ಲಿ ಅಂಗನವಾಡಿಯ ನಿರ್ಮಾಣ

3ನೇ ವಾರ್ಡಿನ ಮಣಿಯಂಪಾರೆ, ಬೆದ್ರಂಪಳ್ಳಿ ಸೇರಾಜೆ

4ನೇ ವಾರ್ಡಿನ ಕೆಂಗಣಾಜೆ, ಕಾಟುಕುಕ್ಕೆ ದೇವಸ್ಥಾನ ಸಮೀಪ, ಕೆಚೆಕ್ಕಾರು

5ನೇ ವಾರ್ಡಿನ ಕೊಡಂಕಿರಿ, ವಾಣಿ ನಗರ, ಸೈಪಂಗಲ್ಲು

6ನೇ ವಾರ್ಡಿನ ಕಜಂಪಾಡಿ, ಪೆರಿಯಲಡ್ಕ, ಸೆಟ್ಟಬೈಲು, ಇಳಂತೋಡಿ ಕಾಲನಿ, ಸರವು

7ನೇ ವಾರ್ಡಿನ ಬಲತ್ತಕಲ್ಲು, ಸರ್ವೆ (ಬೊಳಂತನಡ್ಕ)

10ನೇ ವಾರ್ಡಿನ ಮುಂಡಿತ್ತಡ್ಕ, ಗುಣಾಜೆ, ಮಲಂಗರೆ

ಮೇಲ್ಕಾಣಿಸಿದ ಪಂಚಾಯತಿನ ಎಲ್ಲಾ ಸ್ಥಳಗಳಲ್ಲಿ ಶಾಲಾ ಪೂರ್ವ ವಿದ್ಯಾಭ್ಯಾಸವನ್ನು ಪಡೆಯುವರೇ ಚಿಕ್ಕ ಮಕ್ಕಳಿಗೆ ಯಾವುದೇ ರೀತಿಯ ಅನುಕೂಲತೆಗಳು ಇಲ್ಲದಿರುವುದರಿಂದ ಮಕ್ಕಳಲ್ಲಿ ಶಾಲೆಗೆ ಬರುವಂತೆ ಆಸಕ್ತಿಯನ್ನು ಮೂಡಿಸಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿ ಭವಿಷ್ಯದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಾಗುವಂತೆ ಪ್ರೋತ್ಸಾಹಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಗನವಾಡಿಗಳನ್ನು ಸೂಕ್ತವಾದ ಸೌಕರ್ಯಗಳೊಂದಿಗೆ ಪ್ರಾರಂಭಿಸಬೇಕಾಗಿದೆ.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ LP, UP, HS ವಿಭಾಗಗಳಲ್ಲಿ ಒಟ್ಟು 5658 ಮಕ್ಕಳಲ್ಲಿ 2578 ವಿದ್ಯಾರ್ಥಿಗಳು ಕಿರಿಯ ಪ್ರಾಥಮಿಕ ವಿಭಾಗದಲ್ಲೂ, 1725 ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ವಿಭಾಗದಲ್ಲೂ, 1355 ವಿದ್ಯಾರ್ಥಿಗಳು ಹೈಸ್ಕೂಲು ವಿಭಾಗದಲ್ಲೂ ಕಲಿಯುತ್ತಿದ್ದಾರೆ ಈ ಕುರಿತ ವಿವರಗಳನ್ನು ಪಟ್ಟಿ 1(B)ಯಲ್ಲಿ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಒಟ್ಟು 1990 ಇದ್ದು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 417 ವಿದ್ಯಾರ್ಥಿಗಳೂ ಹಿರಿಯ ಪ್ರಾಥಮಿಕ ವಿಭಾಗದಲ್ಲಿ 724 ವಿದ್ಯಾರ್ಥಿಗಳೂ, 849 ವಿದ್ಯಾರ್ಥಿಗಳು ಹೈಸ್ಕೂಲು ವಿಭಾಗದಲ್ಲೂ ವಿದ್ಯಾರ್ಜನೆ ಮಾಡುತ್ತಿದ್ದಾರೆ ಈ ಕುರಿತ ವಿವರಗಳನ್ನು ಪಟ್ಟಿ 1(C)ಯಲ್ಲಿ ನಮೂದಿಸಲಾಗಿದೆ.

ಪಂಚಾಯತಿನಲ್ಲಿ 153 ವಿದ್ಯಾರ್ಥಿಗಳು ಕಲಿಕೆ ನಿಲ್ಲಿಸಿದ್ದು ಈ ಕುರಿತಾದ ವಿವರಗಳನ್ನು ಪಟ್ಟಿ 1(D)ಯಲ್ಲಿ ನಮೂದಿಸಲಾಗಿದೆ.

ಶೈಕ್ಷಣಿಕ ಮಟ್ಟ : ಶೈಕ್ಷಣಿಕ ಮಟ್ಟವು ಮಧ್ಯಮ ಪ್ರಮಾಣದಲ್ಲಿದ್ದು Iನೇ ತರಗತಿಯಿಂದ 10ನೇ ತರಗತಿಯ ವರೆಗಿನ ಶೈಕ್ಷಣಿಕ ಮಟ್ಟವು ಕುಸಿಯುತ್ತಾ ಬರುತ್ತಿದೆ ಎಂದು ತೋರುತ್ತಿದೆ ಈ ಕುರಿತಾದ ವಿವರಗಳನ್ನು ಪಟ್ಟಿ 6(A) ಮತ್ತು 6(B)ಯಲ್ಲಿ ನಮೂದಿಸಲಾಗಿದೆ.

ವಿದ್ಯಾಸಂಸ್ಥೆಗಳ ಭೌತಿಕ ಪರಿಸ್ಥಿತಿ : ಪಂಚಾಯತಿನ ಎಲ್ಲಾ ಶಾಲೆಗಳಲ್ಲಿರುವ ಕಟ್ಟಡ ಪೀಠೋಪಕರಣಗಳು ಹಾಗೂ ಇತರ ಎಲ್ಲಾ ಪ್ರಾಥಮಿಕ ಆವಶ್ಯಕತೆಗಳ ಕುರಿತು ಸಮೀಕ್ಷೆ ನಡೆಸಿದಾಗ ಹಲವಾರು ಕುಂದು ಕೊರತೆಗಳು ಎದ್ದು ಕಾಣುತ್ತಿವೆ. ಈ ಕುರಿತಾದ ವಿವರಗಳನ್ನು ಪಟ್ಟಿ

Vರಲ್ಲಿ ನೀಡಲಾಗಿದೆ.

ಪೀಠೋಪಕರಣಗಳು ಕಟ್ಟಡ ಶುಚಿತ್ವ (ಶೌಚಾಲಯ ಮತ್ತು ಪಾಯಿಖಾನೆ) ಕುಡಿಯುವ ನೀರಿನ ವ್ಯವಸ್ಥೆ. ಆಟದ ಮೈದಾನ. ಬೋಧನೋಪಕರಣಗಳು, ವಾಚನಾಲಯ, ಪ್ರಯೋಗಾಲಯ ಸುಸಜ್ಜಿತವಾಗಿ ಕಂಡು ಬರುವುದಿಲ್ಲ. ಇತರ ಬೇಡಿಕೆಗಳಾದ ಚಿಕ್ಕ ಮಕ್ಕಳ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಯೋಗ್ಯ ರೀತಿಯ ಸೌಕರ್ಯಗಳೊಂದಿಗೆ ಒದಗಿಸುವುದು. ಮಕ್ಕಳ ಆರೋಗ್ಯ ತಪಾಸಣೆಯನ್ನು ಮಾಡಿ ಯೋಗ್ಯ ರೀತಿಯ ಚಿಕಿತ್ಸೆಯನ್ನು ನೀಡುವುದು. ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ನೆರವು ಮತ್ತು ಮಾರ್ಗದರ್ಶನವನ್ನು ನೀಡುವುದು. ಮಕ್ಕಳ ಜ್ಞಾನಾಭಿವೃದ್ಧಿಗಾಗಿ ದೂರದರ್ಶನ, ರೇಡಿಯೋ, ಪ್ರೊಜೆಕ್ಟರ್‌ಗಳನ್ನು ಒದಗಿಸುವುದು. ವೃತ್ತಿಪರ ಶಿಕ್ಷಣಕ್ಕೆ ಶಾಲೆಗಳಲ್ಲಿ ಸರಿಯಾದ ಪ್ರೋತ್ಸಾಹವನ್ನು ಕೊಟ್ಟು ಮಕ್ಕಳ ಭಾವೀ ಜೀವನದಲ್ಲಿ ಅವರು ಸ್ವತಂತ್ರವಾಗಿ ಜೀವಿಸಲು ಅನುವು ಮಾಡಿಕೊಡುವುದು. ಎಲ್ಲಾ ಶಾಲೆಗಳಿಗೂ ದೈಹಿಕ ಶಿಕ್ಷಕರನ್ನು ನೇಮಕ ಮಾಡಿ ಸುಸಜ್ಜಿತ ಆಟದ ಸಾಮಗ್ರಿಗಳೊಂದಿಗೆ ವಿದ್ಯಾರ್ಥಿಗಳನ್ನು ಮಾನಸಿಕವಾಗಿಯೂ ಶಾರೀರಿಕವಾಗಿಯೂ ದೃಢಕಾಯರಾಗಿರುವಂತೆ ಮಾಡುವುದು. ಪಠ್ಯ ಪುಸ್ತಕಗಳನ್ನು ಸಮವಸ್ತ್ರಗಳನ್ನು ಎಲ್ಲಾ ಮಕ್ಕಳಿಗೆ ಉಚಿತವಾಗಿ ನೀಡುವುದು. ಅಧ್ಯಾಪಕರಿಗೆ ಕೆಲಸದ ಒತ್ತಡವನ್ನು ಲಘುಕರಿಸುವುದಕ್ಕಾಗಿ ಎಲ್ಲಾ ಶಾಲೆಗಳಿಗೂ ಗುಮಾಸ್ತರನ್ನು ನೇಮಕಗೊಳಿಸುವುದು. ಶಾಲೆಗಳಲ್ಲಿ ರಾಜಕೀಯವನ್ನು ನಿಷೇಧಿಸುವುದು. ಶಿಕ್ಷಕ-ರಕ್ಷಕ ಸಂಘ, ಮಾತೃಸಂಗಮವು ಎಲ್ಲಾ ಶಾಲೆಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು. ಜನಸಾಮಾನ್ಯರಲ್ಲಿ ವಿದ್ಯಾಭ್ಯಾಸದ ಜನಜಾಗೃತಿಯನ್ನು ಮೂಡಿಸಿ ಮಕ್ಕಳನ್ನು ಸರಿಯಾಗಿ ಶಾಲೆಗೆ ಹಾಜರಾಗುವಂತೆ ಮನವೊಲಿಸುವುದು ಸರಕಾರವು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು ಸಂಪೂರ್ಣ ಸಾಕ್ಷರತೆಯನ್ನು ಸಾಧಿಸುವುದು. ಎಲ್ಲಾ ಶಾಲೆಗಳಿಗೂ ದೂರವಾಣಿ ಸಂಪರ್ಕವನ್ನು ಕಲ್ಪಿಸುವುದು.

ಎಲ್ಲಾ ಶಾಲೆಗಳಿಗೂ ಆವರಣ ಗೋಡೆಯನ್ನು ನಿರ್ಮಿಸುವುದು. ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಪ್ರತಿ ವಾರ್ಡಿನಲ್ಲಿಯೂ ತೆರೆಯುವುದು ವಿದ್ಯುತ್ ಉಪಕರಣದ ಬಳಕೆಗಾಗಿ ಎಲ್ಲಾ ಶಾಲೆಗಳಿಗೂ ವಿದ್ಯುತ್ ಪೂರೈಕೆಯನ್ನು ಕಲ್ಪಿಸುವುದು. ಶೈಕ್ಷಣಿಕ ಅಭಿವೃದ್ಧಿಯ ನಲುವಿನಲ್ಲಿ ಮಾಡಬೇಕಾದ ಸುಧಾರಣೆಗಳಾಗಿವೆ. ಈ ಕುರಿತ ಶೈಕ್ಷಣಿಕ ಸೌಕರ್ಯಗಳ ಪಟ್ಟಿ IVನ್ನು ನೀಡಲಾಗಿದೆ.

ಶಿಕ್ಷಣದ ಗುಣಮಟ್ಟ :

ಶಿಕ್ಷಣದ ಗುಣಮಟ್ಟದ ಬಗ್ಗೆ ವಿವೇಚಿಸಿದಾಗ ಈ ಪಂಚಾಯತಿನ ಮಟ್ಟವು ವರ್ಷದಿಂದ ವರ್ಷಕ್ಕೆ ಕುಸಿಯುತ್ತಾ ಬರುತ್ತಿದೆ. ಈ ಕುಸಿತಕ್ಕೆ ಪ್ರಧಾನ ಕಾರಣಗಳಲ್ಲಿ ಒಂದು ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆಯಾಗಿರುತ್ತದೆ. ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನೇ ಒದಗಿಸಿ ಕಾರ್ಯಗತಗೊಳಿಸಬೇಕಾಗಿದೆ. (ಮಾತ್ರವಲ್ಲದೆ) ರಕ್ಷಕರ ಬಡತನ, ಅನಕ್ಷರತೆ, ಮದ್ಯಪಾನದಲ್ಲಿ ಆಸಕ್ತಿ, ಮಕ್ಕಳನ್ನು ಹೆತ್ತವರು ಶಾಲಾ ಕೆಲಸಗಳಿಗೆ ತೊಡಗಿಸುವುದನ್ನು ಬಿಟ್ಟು ತಮ್ಮ ಮನೆಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು, ಅಲ್ಲದೆ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ಬದಲಿಸುವುದು. ಒಂದು ತರಗತಿಯಿಂದ ಮುಂದಿನ ತರಗತಿಗೆ ಮಕ್ಕಳನ್ನು ಶೈಕ್ಷಣಿಕ ಪ್ರಗತಿಯನ್ನು ಪರಿಗಣಿಸದೆ ತೇರ್ಗಡೆಗೊಳಿಸುವ ಸರಕಾರದ ಕಾನೂನು ಇವೇ ಮೊದಲಾದ ಕಾರಣಗಳು ಶಿಕ್ಷಣದ ಗುಣಮಟ್ಟ ಕುಸಿತಕ್ಕೆ ಕಾರಣಗಳಾಗಿವೆ.

ಮೇಲೆ ತಿಳಿಸಿದ ಎಲ್ಲಾ ವಿಷಯಗಳನ್ನು ಪಂಚಾಯತು ಮಟ್ಟದಲ್ಲಿ ಜನರನ್ನು ಒಗ್ಗೂಡಿಸಿ ಚರ್ಚಿಸಿ ಪರಿಹಾರಗಳನ್ನು ಕಂಡುಕೊಂಡು, ಜನರಿಗೆ ಶಿಕ್ಷಣದ ಮಹತ್ವದ ಬಗ್ಗೆ ಪ್ರಜ್ಞೆ ಮೂಡಿಸಿ ಪರಿವರ್ತನೆಗೊಳಿಸುವುದರಿಂದಲೂ ಯೋಗ್ಯ ಸೌಕರ್ಯಗಳ ಪೂರೈಕೆಯಿಂದ ಶಿಕ್ಷಣದ ಮಟ್ಟವನ್ನು ಉತ್ತಮ ಪಡಿಸಿ ಈ ಪಂಚಾಯತನ್ನು ಒಂದು ಮಾದರಿ ಪಂಚಾಯತನ್ನಾಗಿ ರೂಪಿಸಬಹುದಾಗಿದೆ.

ಪಟ್ಟಿ - 1-A

ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು

ಕ್ರಮ ಸಂಖ್ಯೆ	ಶಾಲೆಯ ಹೆಸರು	ಖಾಸಗಿ/ ಸರಕಾರಿ	ವಿದ್ಯಾರ್ಥಿಗಳ ಸಂಖ್ಯೆ			ಅಧ್ಯಾಪಕರ ಸಂಖ್ಯೆ		
			B	G	T	M	F	T
1	SNHS, PERLA	ಖಾಸಗಿ	605	553	1158			34
2.	SSHS KATUKUKKE	ಖಾಸಗಿ	97	90	187	9	2	11
3	GHS PADRE	ಸರಕಾರಿ	356	297	653			21
4	SSHS, SHENI	ಖಾಸಗಿ	165	138	303			14
5	BAUPS KATUKUKKE	ಖಾಸಗಿ	210	203	413		14	

6	SDPAUPS BANPUTHADKA	ಖಾಸಗಿ	163	144	307		16	
7	SMMAUPS MUNDITHADKA	ಖಾಸಗಿ	237	231	468	6	7	13
8	SSAUPS SHENI	ಖಾಸಗಿ	297	232	529			19
9	SVAUP?S SWARGA	ಖಾಸಗಿ	136	118	254			9
10	SGALPS BENGAPADAVU	ಖಾಸಗಿ	58	54	112		4	
11	VALPS NALKA	ಖಾಸಗಿ	63	73	136			4
12	GWLPS KAJAMPADY	ಸರಕಾರಿ	49	55	104			5
13	VALPS UKKINADKA	ಖಾಸಗಿ	51	53	104			4
14	ALPS BEDRAMPALLA	ಖಾಸಗಿ	55	49	104		4	
15	SNALPS PERLA	ಖಾಸಗಿ	231	206	437	6	5	11
16	MILPS PERLA	ಖಾಸಗಿ	61	62	123			5
17	AJBS YELKANA	ಖಾಸಗಿ	92	70	162			9
18	SDALPS SAYA	ಖಾಸಗಿ	57	47	104			4
	TOTAL		2983	2675	5658			201

ಪಟ್ಟಿ 1 (B)

LP, UP, HS ವಿಭಾಗಗಳ ಒಟ್ಟು ವಿದ್ಯಾರ್ಥಿಗಳ ವಿವರ

ಒಟ್ಟು ವಿದ್ಯಾರ್ಥಿಗಳು	LP			UP			HS			ಒಟ್ಟು		
	B	G	T	B	G	T	B	G	T	B	G	T
5658	1335	1243	2578	944	781	1725	708	647	1355	2987	2671	

ಪಟ್ಟಿ 1 (C)

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ವಿವರ

LP			UP			HS		
ಒಟ್ಟು	SC/ST	%	ಒಟ್ಟು	SC/ST	%	ಒಟ್ಟು	SC/ST	%
2578	417	30.10	1725	724	36.73	1355	849	38.55
								35%

ಪಟ್ಟಿ IV

ಶೈಕ್ಷಣಿಕ ಸೌಕರ್ಯಗಳು

	ಲೈಬ್ರೆರಿ	ಪ್ರಯೋಗಾಲಯ	ಓವರ್‌ಹೆಡ್ ಪ್ರೊಜೆಕ್ಟರ್	ವಿಸಿಆರ್, ವಿಸಿಪಿ	ಪರಸ್ಪರೋಪಕರಣಗಳು	ಸ್ಲೈಡ್ ಪ್ರೊಜೆಕ್ಟರ್	ರೇಡಿಯೋ	ಟೇಪ್ ರೆಕಾರ್ಡರ್	ಟಿ.ವಿ. ಸೆಟ್	ಸಿನಿಮಾ ಪ್ರೊಜೆಕ್ಟರ್	ಕರಿಹಲಗೆ : ಈಗ ಇರುವವು ಮತ್ತು ಅಗತ್ಯ	ಮಾತೃ ಸಂಗಮ ಕ್ರಿಯಾತ್ಮಕ/ಇಲ್ಲ	ತರಗತಿ ಮುಚ್ಚುವ ಪಿ.ಟಿ.ಎ. ಕಾರ್ಯನಿರ್ವಹಿಸುತ್ತಿದೆ/ಇಲ್ಲ
ಇರುವುದು	10	6	3	ಇಲ್ಲ	4	4	8	10	ಇಲ್ಲ	ಇಲ್ಲ	5	15	16
ಇಲ್ಲದ್ದು (ಬೇಕಾದುದು)	8	12	15	18	14	14	10	8	18	18	13	3	2

ಕುಡಿಯುವ ನೀರು ಮತ್ತು ಆರೋಗ್ಯ

ಶುದ್ಧ ನೀರು, ಶುದ್ಧ ವಾಯು, ಶುಚಿಯಾದ ಪರಿಸರ ಮತ್ತು ವಸತಿ ಸೌಕರ್ಯ ಇದು ಜನರ ಆರೋಗ್ಯದ ಪ್ರಧಾನ ಘಟಕಗಳು. ಈ ಘಟಕಗಳು ಸರಿಯಾದ ಕ್ರಮದಲ್ಲಿ ಇರದಿದ್ದರೆ ಜನರ ಆರೋಗ್ಯವು ಕೆಡುವುದು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ನಾವು ಕುಡಿಯುವ ನೀರು, ಆರೋಗ್ಯ ಮತ್ತು ಶುಚಿತ್ವದ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ ಮತ್ತು ಇದರ ಮಹತ್ವವನ್ನು ತಿಳಿಯಪಡಿಸುವುದು ಆದ್ಯ ಕರ್ತವ್ಯವಾಗಿದೆ. ಎಲ್ಲಿ ಹೇಗಿರುವ ನೀರನ್ನು ಕುಡಿಯಲು ಉಪಯೋಗಿಸಬೇಕು ಎಂಬ ತಿಳುವಳಿಕೆಯನ್ನು ಜನರಿಗೆ ಕೊಡಬೇಕು. ಆರೋಗ್ಯದ ದೃಷ್ಟಿಯಲ್ಲಿ ಕುಡಿಯುವ ನೀರಿನ ಶುಚಿತ್ವವಲ್ಲದೆ, ಜನರು ವಾಸಿಸುವ ಪರಿಸರವೂ ಶುಚಿಯಾಗಿರಬೇಕು. ಮಾತ್ರವಲ್ಲದೆ ನಾವು ವಾಸಿಸುತ್ತಿರುವ ವಸತಿ ಸೌಕರ್ಯವು ಕೂಡಾ ಬಹಳ ಶುಚಿಯಾಗಿರಬೇಕು.

ಕುಡಿಯುವ ನೀರು : ಕುಡಿಯುವ ನೀರಿಗಾಗಿ ಶೇಕಡಾ 85ರಷ್ಟು ಜನರು ಬಾವಿಗಳ ನೀರನ್ನು ಉಪಯೋಗಿಸುತ್ತಾರೆ. ಇದರಲ್ಲಿ 585 ಸುರಕ್ಷಿತ ಬಾವಿಗಳು ಮತ್ತು 702 ಸಾಧಾರಣ ಬಾವಿಗಳು, 99 ಕೊಳವೆ ಬಾವಿಗಳು ಇವೆ. ನದಿ ನೀರನ್ನು ಕುಡಿಯಲು ಉಪಯೋಗಿಸುವವರ ಸಂಖ್ಯೆಯು 1502 ಮಂದಿ ಮತ್ತು ನಳ್ಳಿ ನೀರನ್ನು ಉಪಯೋಗಿಸುವವರು 800 ಕುಟುಂಬಗಳು ಸಾಮಾನ್ಯವಾಗಿ ಮಾರ್ಚ್‌ನಿಂದ ಜೂನ್ ವರೆಗೆ 70% ಜನ ಸಂಖ್ಯೆಗೆ ಕುಡಿಯುವ ನೀರಿನ ಕ್ಷಾಮವಿದೆ. ಪಂಚಾಯತಿನ ಒಟ್ಟು ಜನ ಸಂಖ್ಯೆಯಲ್ಲಿ 50% ರಷ್ಟು ಜನರಿಗೆ ಶುದ್ಧ ಕುಡಿಯುವ ನೀರಿನ ಕೊರತೆಯಿದೆ.

ಕುಡಿಯುವ ನೀರಿನ ಮೂಲ

ನಳ್ಳಿ ನೀರು	ಬಾವಿಗಳು			ಕೊಳವೆ ಬಾವಿ	
	ಸಾರ್ವಜನಿಕ	ಸುರಕ್ಷಿತ	ಸಾಧಾರಣ	ವಾರ್ಡು	ಸಂಖ್ಯೆ
800	15	585	702	I	5
ಕುಟುಂಬಗಳು				II	4
				III	9
				IV	13
				V	15
				VI	7
				VII	12
				VIII	9
				IX	6
				X	11
				XI	8

1993-1996ರ ವರೆಗೆ ಕುಡಿಯುವ ನೀರಿನ ಅಭಾವದಿಂದಾಗಿ 13 ಜನರಿಗೆ ಜಲಜನ್ಯ ರೋಗಗಳು ಉಂಟಾದುವು. ಮಾರ್ಚ್‌ನಿಂದ ಜೂನ್ ವರೆಗೆ ಅಧಿಕ ಕುಟುಂಬಗಳಿಗೂ ಕುಡಿಯುವ ನೀರಿನ ಅಭಾವದಿಂದಾಗಿ ಕಿಲೋ ಮೀಟರ್‌ಗಳಷ್ಟು ದೂರ ನಡೆದು ಹೋಗಿ ನೀರು ಹೊತ್ತು ತರುವ ಪರಿಸ್ಥಿತಿ ಉಂಟಾಗುತ್ತದೆ.

ಗ್ರಾಮ ಸಭಾ ವರದಿಯಿಂದ ಕುಡಿಯುವ ನೀರಿನ ಬಗ್ಗೆ ಕೆಳಗೆ ಸೂಚಿಸಿದ ಮಾಹಿತಿಗಳು ದೊರಕಿವೆ.

ವಾರ್ಡು ನಂಬ್ರ I : ಈ ವಾರ್ಡಿನ ಕುಡಿಯುವ ನೀರಿನ ಆವಶ್ಯಕತೆಗಳಿಗಾಗಿ ನಿಶ್ಚಿತ ಸ್ಥಳಗಳಲ್ಲಿ ಕೆರೆ, ಬಾವಿಗಳ ವ್ಯವಸ್ಥೆ ಬಾವಿಗಳಿಗೆ ಧನ ಸಹಾಯವನ್ನು ನೀಡುವಂತೆ ಸುರಂಗ ಮಾಡುವುದಕ್ಕೂ ಧನ ಸಹಾಯವನ್ನು ನೀಡಬೇಕು. ವಾರ್ಡು ನಂಬ್ರ II : ಕೇರಿ ಮೂಲೆ, ನಲ್ಕ, ಪಾಲುತಡ್ಕ, ಅಡ್ಕ ಸ್ಥಳ ಮತ್ತು ಬಿರು ಮೂಲೆ ಎಂಬೀ ಕಡೆಗಳಲ್ಲಿ ಸಾರ್ವಜನಿಕ ಬಾವಿ ಮತ್ತು ಪೈಪ್‌ಲೈನ್ ಹಾಕಿಸುವುದು.

ವಾರ್ಡುನಂಬ್ರ III : ಸೋಮಾಜೆ, ಪೆಲ್ತಾಜೆ, ದೇರಡ್ಕ, ಸರ್ಪಂಗಳ, ಮುಂಗ್ಲಿಪದವು ಮತ್ತು ಬೀಜಂತಡ್ಕ ಎಂಬೀ ಕಡೆಗಳಲ್ಲಿ ಕುಡಿಯುವ ನೀರಿನ ಬಾವಿಗಳ ಅಗತ್ಯವಿದೆ.

ವಾರ್ಡು IV : ಪಿಲಿಂಗಲ್ಲು, ಸೂರ್ಡೆಲು, ಬೋಳುಬೈಲು ಕಡೆಗಳಲ್ಲಿ ಸಾರ್ವಜನಿಕ ಬಾವಿಗಳು.

ವಾರ್ಡು ನಂಬ್ರ V : ಗೋಳಿ ಕಟ್ಟೆ, ಮೂಡಾಯಿಗುಡ್ಡೆಗಳಲ್ಲಿ ನೀರು ಸಂಗ್ರಹಣೆ ಮತ್ತು ಪೈಪ್‌ಲೈನ್ ಮೂಲಕ ವಿತರಣಾ ವ್ಯವಸ್ಥೆ ಸ್ವರ್ಗ S.V.A.U.P. ಶಾಲೆ ಹಾಗೂ ಅಂಗನವಾಡಿಗಳಿಗೆ ನೀರಿನ ವ್ಯವಸ್ಥೆ. ಪಡ್ಪು, ಬದಿ, ಕೊಡಂಕೆರಿ, ದುಗ್ಗಜ ಮೂಲೆ ಮತ್ತು ಗಾಳಿ ಗೋಪುರ ಎಂಬಿ ಕಡೆಗಳಲ್ಲಿ ಸಾರ್ವಜನಿಕ ಬಾವಿ ವ್ಯವಸ್ಥೆ. ವಾಣೀ ನಗರ ನೀರು ಸರಬರಾಜಿನ ಪೈಪ್ ಲೈನ್ ವಿಸ್ತರಣೆ.

ವಾರ್ಡು ನಂಬ್ರ VI : ಪೆರಿಯಾಲ್ ಕೊರಗ ಕಾಲನಿ, ಗೋಳಿಯಡಿ ಕೊರಗ ಕಾಲನಿ, ಕುತ್ತಾಜೆ ಹರಿಜನ ಕಾಲನಿ, ದೇಶ ಮೂಲೆ, ಪಳ್ಳತ ಮೂಲೆ ಗಿರಿಜನ ಕಾಲನಿ, ಕುತ್ತಾಜೆ ಹರಿಜನ ಕಾಲನಿ, ಬೈಲ ಮೂಲೆ ಗಿರಿಜನ ಕಾಲನಿ, ಈಳಂತೋಡಿ ಕಜಂಪಾಡಿ ಕಾಲನಿಗಳಿಗೆ ಪೈಪು ವಾಟರ್ ಅಥವಾ ಬಾವಿ ನೀರಿನ ವ್ಯವಸ್ಥೆಗಳನ್ನು ಮಾಡಬೇಕು.

ವಾರ್ಡುನಂಬ್ರ VII : ಕುಕ್ಕಿಲ ಪದವು, ಪಾಯಿತಡ್ಕ, ಕರೋಡಿ ಪರಪ್ಪಳ್ಳ ಮುಂತಾದ ಸ್ಥಳಗಳಿಗೆ ಬಾವಿ ನೀರಿನ ವ್ಯವಸ್ಥೆ ಅಲ್ಲದೆ ಕಾರೆ ಎಂಬಲ್ಲಿ ಕೊರಗ ಕಾಲನಿಗೆ ಕುಡಿನ ನೀರಿನ ಬಾವಿ ನಿರ್ಮಾಣ.

ವಾರ್ಡು VIII : ಈ ವಾರ್ಡಿನ ಹಲವಾರು ಸ್ಥಳಗಳಲ್ಲಿ ಕುಡಿಯುವ ನೀರಿಗಾಗಿ ಬಾವಿಗಳ ಅಗತ್ಯವಿರುತ್ತದೆ.

ವಾರ್ಡು ನಂಬ್ರ IX : ವಾರ್ಡಿನ ಎಲ್ಲಾ ಹರಿಜನ, ಗಿರಿಜನ ಮತ್ತು ಕೊರಗ ಕಾಲನಿಗಳಿಗೆ ಮತ್ತು ಇತರ ಜನಾಂಗದವರಿಗೂ ಕುಡಿವ ನೀರಿನ ವ್ಯವಸ್ಥೆಯಾಗಬೇಕು.

ವಾರ್ಡು ನಂಬ್ರ X : ವಾರ್ಡಿನ ಮೈರೆ, ನೂಜಿಲ, ಏಳ್ಕಾನ, ಮತ್ತು ಕುಂದಕಟ್ಟೆ ಎಂಬ ಸ್ಥಳಗಳಲ್ಲಿ ಪೈಪ್‌ಲೈನ್ ಅಥವಾ ಬಾವಿ ನೀರಿನ ವ್ಯವಸ್ಥೆ.

ವಾರ್ಡು ನಂಬ್ರ XI : ವಾರ್ಡಿನ ಎಲ್ಲಾ ಎಸ್‌ಸಿ/ಎಸ್‌ಟಿ ಕಾಲನಿಗಳಿಗೂ, M.I.A.L.P. ಶಾಲೆಗೂ ಕನ್ನಟಿಕಾನ, ಕುದ್ಪ ಮುಂತಾದ ಸ್ಥಳಗಳಿಗೆ ಬಾವಿಗಳು ಅಥವಾ ಪೈಪ್‌ಲೈನ್‌ಗಳ ಮುಖಾಂತರ ನೀರಿನ ವ್ಯವಸ್ಥೆಯಾಗಬೇಕು.

ಪ್ರಕೃತಿ ಮೂಲಗಳಿಂದ ದೊರಕುವ ನೀರಿನ ರಕ್ಷಣೆ ಮತ್ತು ವಿತರಣೆ : ಗುಡ್ಡ ಪ್ರದೇಶಗಳಲ್ಲಿ ಬೀಳುವ ಮಳೆಯ ನೀರನ್ನು ಟ್ಯಾಂಕುಗಳ ಮೂಲಕ ವಿತರಣೆ ಮಾಡುವುದು. ನಮ್ಮ ಪ್ರದೇಶವು ಗುಡ್ಡ ಪ್ರದೇಶಗಳಾಗಿರುವುದರಿಂದ ಈ ಪ್ರದೇಶಗಳಲ್ಲಿ ಅಲ್ಲಲ್ಲಿ ಹಿಂಗು ಗುಂಡಿಗಳನ್ನು ಮಾಡಿ ಮಳೆ ನೀರನ್ನು ಬಹಳಷ್ಟು ಪ್ರಮಾಣದಲ್ಲಿ ಹಿಂಗಿಸಿ ಭೂಮಿಯಲ್ಲಿ ನೀರಿನ ಸಂಗ್ರಹಣೆಯನ್ನು ಮಾಡಬೇಕು. ಇದರಿಂದ ಬಾವಿಗಳ ನೀರಿನ ಮಟ್ಟವನ್ನು ಏರಿಸಬಹುದು. ನದಿಗಳಿಂದಲೂ ತೋಡುಗಳಿಂದಲೂ ಹರಿಯುವ ನೀರನ್ನು ಅಡ್ಡ ಗೋಡೆಗಳನ್ನು ಕಟ್ಟಿ ಸಂಗ್ರಹಿಸಿ ಶುದ್ಧೀಕರಿಸಿ ಉಪಯೋಗ ಸ್ಥಳಗಳಿಗೆ ಕೊಳವೆಗಳ ಮೂಲಕ ರವಾನಿಸುವ ಮುಖಾಂತರ ನೀರಿನ ಕೊರತೆಯನ್ನು ನಿವಾರಿಸಬಹುದು.

ಗ್ರಾಮ ಸಭಾ ವರದಿಯ ಕ್ರೋಢೀಕರಣ :

1. ಕುಡಿಯುವ ನೀರಿನ ಪೂರೈಕೆಗಾಗಿ ಆವಶ್ಯ ಸ್ಥಳಗಳಲ್ಲಿ ಕೆರೆ ಬಾವಿಗಳ ನಿರ್ಮಾಣ. ಕುಡಿಯುವ ನೀರಿಗಾಗಿ ಬಾವಿ, ಕೆರೆ ಮತ್ತು ಸುರಂಗ ನಿರ್ಮಾಣ ಮಾಡಲು ಬಡ್ಡಿ ರಹಿತ ಧನ ಸಹಾಯ ನೀಡಬೇಕು.
2. ಎಸ್ಸಿ, ಎಸ್‌ಟಿ ಕಾಲನಿಗಳಿಗೆ ಕುಡಿವ ನೀರಿನ ಪೂರೈಕೆಗೆ ಧನ ಸಹಾಯ ಮಾಡಬೇಕು.
3. ಆವಶ್ಯ ಸ್ಥಳಗಳಲ್ಲಿ ಸಾರ್ವಜನಿಕ ಬಾವಿಗಳ ವ್ಯವಸ್ಥೆಯಾಗಬೇಕು.
4. ಎತ್ತರದ ಪ್ರದೇಶಗಳಲ್ಲಿ ನೀರನ್ನು ಸಂಗ್ರಹಿಸಿ ಕೊಳವೆಗಳ ಮುಖಾಂತರ ಆವಶ್ಯ ಸ್ಥಳಗಳಿಗೆ ನೀರಿನ ಸರಬರಾಜು ಮಾಡಬೇಕು.
5. Geologistಗಳ ಸಹಾಯದಿಂದ ಪೈಪ್‌ಲೈನ್ ಮಾಡಿಸಬೇಕು.
6. ಪ್ರತೀ ಶಾಲೆಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಬೇಕು.
7. ಭೂಮಿಯ ಭೌಗೋಳಿಕ ಸ್ಥಿತಿಗನುಸಾರವಾಗಿ ಗುಡ್ಡ, ಬಯಲುಗಳನ್ನು ನೋಡಿಕೊಂಡು ಕೆರೆ, ಸುರಂಗಗಳನ್ನು ನಿರ್ಮಿಸಲು ಧನಸಹಾಯ ಒದಗಿಸಬೇಕು.
8. ಈಗ ವ್ಯವಸ್ಥೆಯಲ್ಲಿರುವ ನಳ್ಳಿ ನೀರಿನ ಟೇಪ್ ಜೋಡನೆಯು ತುಂಬಾ ಅಂತರಗಳಲ್ಲಿ ಇರುವುದರಿಂದ ಆ ಸ್ಥಳಗಳನ್ನು ಗುರುತಿಸಿ ನಾಗರಿಕರಿಗೆ ಇದರ ಸೌಲಭ್ಯ ದೊರೆಯುವಂತೆ ಮಾಡಲು ಅದರ ಮಧ್ಯೆ ಹೊಸ ಟೇಪ್ ಜೋಡಣೆ ಮಾಡಬೇಕು.

ಆರೋಗ್ಯ

2000ನೇ ಇಸವಿಗೆ ಎಲ್ಲರಿಗೂ ಆರೋಗ್ಯ ಇದು ಲೋಕಾರೋಗ್ಯ ಸಂಸ್ಥೆ (W.H.O.) ಇದರ ಉಲ್ಲೇಖವಾಗಿದೆ.

ಆರೋಗ್ಯ ಅಂದರೆ ರೋಗವಿಲ್ಲದ ಅವಸ್ಥೆಯಲ್ಲ. ವ್ಯಕ್ತಿಯು ಶಾರೀರಿಕವೂ, ಮಾನಸಿಕವೂ, ಸಾಮೂಹಿಕವೂ ಮಾತ್ರವಲ್ಲದೆ ಆಧ್ಯಾತ್ಮಿಕ ಮಾನಸಿಕ ಸುಸ್ಥಿತಿ ಎನ್ನುತ್ತಾರೆ.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಮ್ಮ ಈ ಪಂಚಾಯತ್‌ನ ಜನರು ನಾಡ ವೈದ್ಯರುಗಳನ್ನು ಅವಲಂಬಿಸಿಕೊಂಡಿದ್ದರು. ಆ ಕಾಲದಲ್ಲಿ ಆಧುನಿಕ ವೈದ್ಯಕೀಯ ಪದ್ಧತಿಗಳಾಗಲೀ, ವೈದ್ಯಕೀಯ ಚಿಕಿತ್ಸಾ ಕೇಂದ್ರಗಳಾಗಲೀ ಇರಲಿಲ್ಲ. ಈ ವೈದ್ಯರುಗಳು ನೂಲು ಮಂತ್ರಿಸುವುದು, ಭಸ್ಮ ಮಂತ್ರಿಸುವುದು, ನೀರು ಮಂತ್ರಿಸುವುದು ಮಾತ್ರವಲ್ಲದೆ ದೇವಸ್ಥಾನಗಳಿಗೆ ಬಲಿವಾಡುಗಳನ್ನು ಹರಕೆ ಹೇಳುವುದು ಮತ್ತು ದೈವಸ್ಥಾನಗಲಿಗೆ ಪ್ರಾಣಿ ಬಲಿ ನೀಡುವುದು. ಇವುಗಳ ಮೂಲಕ ರೋಗ ನಿವಾರಣೆಗೆ ಪ್ರಯತ್ನಿಸುತ್ತಿದ್ದರು. ಇವು ಕೇವಲ ಪ್ರಯತ್ನವಾಗುತ್ತಿತ್ತೇ ಹೊರತು ರೋಗ ಗುಣವಾಗುತ್ತಿರಲಿಲ್ಲ. ಬದಲು ರೋಗಿಯ ಮರಣ ಹೊಂದುವುದೇ ಅಧಿಕವಾಗುತ್ತಿತ್ತೇ ಹೊರತು ಕಡಿಮೆಯಾಗುತ್ತಿರಲಿಲ್ಲ. ಆದರೆ ಅಂದಿನ ಕಾಲಗಳಲ್ಲಿ ಇಂತಹವುಗಳಲ್ಲಿ ಜನರಿಗೆ ವಿಶ್ವಾಸವಿತ್ತು. ಜನರು ಇದಕ್ಕೆ ಪ್ರಾಧಾನ್ಯವನ್ನು ಕೊಡುತ್ತಿದ್ದರು.

ಇದೇ ಮಾತ್ರವಲ್ಲದೆ ಆಯುರ್ವೇದ ಪದ್ಧತಿಯು ಜಾರಿಯಲ್ಲಿತ್ತು. ಈ ವೈದ್ಯರುಗಳು ಆ ಕಾಲೇಜುಗಳಲ್ಲಿ ತರಬೇತಿ ಹೊಂದಿದವರಾಗಿರಲಿಲ್ಲ. ವಂಶ ಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಬರುತ್ತಿತ್ತು.

1970ರಲ್ಲಿ ಆರಂಭವಾದ ಪ್ರಾಥಮಿಕ ಆರೋಗ್ಯ ಕೇಂದ್ರವು ಪಂಚಾಯತಿನ ಜನರಲ್ಲಿ ಆಧುನಿಕ ವೈದ್ಯಕೀಯ ಚಿಕಿತ್ಸಾ ರೀತಿಯ ಬಿರುಗಾಳಿಯನ್ನೆಬ್ಬಿಸಿತು. ಆದರೂ ಕೂಡಾ ಹೆಚ್ಚಿನ ಜನರು ಒಲವು ತೋರಿಸದಿರುವುದು ವಿಷಾದನೀಯ. ಇದು ಮಾತ್ರವಲ್ಲದೆ ಸರಕಾರೀ ಆಯುರ್ವೇದ ಆಸ್ಪತ್ರೆಯು ತೆರೆಯಲ್ಪಟ್ಟಿತು. ಇದಲ್ಲದೆ ಪೆರ್ಲದಲ್ಲಿ ಎಣ್ಮಕಜೆ ಪಂಚಾಯತ್‌ನ ಇತರ ಸ್ಥಳಗಳಾದ ವಾಣೀ ನಗರ, ಕಾಟುಕುಕ್ಕೆ ಮತ್ತು ಉಡ್ಯ ಸ್ಥಳಗಳಲ್ಲಿ ಕುಟುಂಬ ಕಲ್ಯಾಣ ಕೇಂದ್ರಗಳೂ ಆರಂಭವಾಗಿದೆ. ಇವುಗಳಲ್ಲದೆ ಎಣ್ಮಕಜೆ ಪಂಚಾಯತಿನ ಕೇಂದ್ರ ಬಿಂದುವಾದ ಪೆರ್ಲದಲ್ಲಿ ಒಂದು ಖಾಸಗೀ ನರ್ಸಿಂಗ್ ಹೋಮ್ ಅಲ್ಲದೆ ಕೆಲವು ವೈದ್ಯರುಗಳ ಕ್ಲಿನಿಕ್‌ಗಳೂ ಇಲ್ಲಿವೆ.

ಆಯುರ್ವೇದ ವೈದ್ಯರುಗಳು (BMS) ಹಾಗೂ 3 ಆಯುರ್ವೇದ ಔಷಧಿಗಳು ಮತ್ತು ಒಂದು ಇಂಗ್ಲೀಷ್ ಮದ್ದಿನ ಅಂಗಡಿಯೂ ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೆ ಸಾಧಾರಣ ಹತ್ತು ಮಂದಿ ಪರಂಪರಾಗತ ವೈದ್ಯರುಗಳು ಇದ್ದಾರೆ. ಇದಲ್ಲದೆ ಪಂಚಾಯತಿನ ಇತರ ವಾರ್ಡುಗಳಲ್ಲಿ MBBS ವೈದ್ಯರುಗಳ ಕ್ಲಿನಿಕ್‌ಗಳು ಇವೆ. ಇವಿಷ್ಟು ಸಂಸ್ಥೆಗಳು ಆರೋಗ್ಯ ರಂಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ ವಿಶಾಲವಾದ ಈ ಪಂಚಾಯತ್ ಜನರ ಆರೋಗ್ಯ ಮಟ್ಟದಲ್ಲಿ ಹೆಚ್ಚಿನ ಬದಲಾವಣೆ ಕಾಣಿಸುತ್ತಿಲ್ಲ. ಹೆಚ್ಚಿನ ಕಡೆಗಳಿಂದ ವಾಂತಿ ಭೇದಿ, ಜ್ವರ, ಕ್ಷೋರ, ವಾತ ಅಲ್ಲದೆ ಕೆಲವು ಸಾಂಕ್ರಾಮಿಕ ರೋಗಗಳು ಕಾಣುತ್ತಿವೆ.

ಇದಲ್ಲದೆ 1993-96ರ ವರೆಗೆ 132 ನೀರಿನಿಂದ ಬರುವ ರೋಗಗಳು, 115 ವಾಯುವಿನ ಮೂಲಕ ಹರಡುವ ರೋಗಗಳು, 8 ಪ್ರಾಣಿಗಳಿಂದ ಹರಡುವ ರೋಗಗಳು ಕಂಡು ಬಂದಿವೆ. ಮಾತ್ರವಲ್ಲದೆ ವಿಷ ಹಾವುಗಳ ಕಡಿತಗಳೂ ವರದಿಯಾಗಿದೆ. ಇದಲ್ಲದೆ ಅರಿವಿಲ್ಲದೆ, ಹಣದ ಕೊರತೆಯಿಂದ ಖಾಯಂ ಆಗಿ ರೋಗ ಪೀಡಿತರಾದವರ ಸಂಖ್ಯೆಯೂ ದೊಡ್ಡದಿದೆ. ರಕ್ತದೊತ್ತಡದ ರೋಗಿಗಳು 325, ಪ್ರಮೇಶ 652 ಕ್ಯಾನ್ಸರ್ 20, ಕ್ಷಯ 7, ಕುಷ್ಠ ರೋಗ 7, ಮತ್ತು ಹೃದಯ ರೋಗಗಳು 13 ಎಂದು ಎರಡನೇ ಡಾಟ ಸಂಗ್ರಹದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದವರು ಕೊಟ್ಟ ಮಾಹಿತಿಯಿಂದ ತಿಳಿದು ಬಂದಿದೆ. ಇದು ಮಾತ್ರವಲ್ಲದೆ ಬುದ್ಧಿ ಮಾಂದ್ಯದ ವಿವರ ಹೀಗಿದೆ.

ಪ್ರಾಯ	ಸಂಖ್ಯೆ
0-5	2
6-10	4+2
11-18	8+4
18ಕ್ಕಿಂತ ಹೆಚ್ಚು	10+9

ಅಂಗವಿಕಲರ ಸಂಖ್ಯೆ ಹೀಗಿದೆ.

ಕುರುಡರು	11
ಕಿವುಡರು	5

ಮೂಗರು	4
ಕಿವುಡರು ಮತ್ತು ಮೂಗರು	4
ಶಾರೀರಿಕ ಅಂಗವಿಕಲತೆ	18

ವಿಶಾಲವಾದ ಈ ಎಣ್ಮಕಜೆ ಗ್ರಾಮ ಪಂಚಾಯತಿನ ನಿವಾಸಿಗಳು ವೈದ್ಯಕೀಯ ಚಿಕಿತ್ಸೆಗಾಗಿ ಪಂಚಾಯತಿನ ಹೃದಯ ಭಾಗವಾದ ಪೆರ್ಲವನ್ನು ಆಶ್ರಯಿಸಬೇಕಾಗಿದೆ. ಪೆರ್ಲವನ್ನು ತಲಪಲು ಸುತ್ತುಮುತ್ತಲಿನ ನಿವಾಸಿಗಳು ಸರಾಸರಿ ಹತ್ತು ಕಿ.ಮೀ. ದೂರದಿಂದ ಬರಬೇಕಾಗಿದೆ. ಪೆರ್ಲದಲ್ಲಿ ಪ್ರಸ್ತುತ ಈಗಿರುವ ಆರೋಗ್ಯ ಕೇಂದ್ರದಲ್ಲಿ ಯಾವುದೇ ಸೌಲಭ್ಯಗಳಿಲ್ಲ. ದಿನವಿಡೀ ವೈದ್ಯರ ಸೌಲಭ್ಯವಿಲ್ಲ. ಔಷಧಿಗಳ ಸರಬರಾಜಿಲ್ಲ. ಬೇಕಾದ ನೌಕರರ ಕೊರತೆ ಇದೆ. ಇದ್ದ ನೌಕರರಿಗೆ ಪ್ರದೇಶಿಕ ಭಾಷೆಯ ಅರಿವಿಲ್ಲ. ಮತ್ತೆ ಇಲ್ಲಿ ಎಕ್ಸ್‌ರೇ ಮತ್ತು ಸ್ಕೇನಿಂಗ್ ಮತ್ತು ರಕ್ತ ಪರೀಕ್ಷೆ ಮತ್ತು ಇತರ ಪರೀಕ್ಷಾ ಸೌಲಭ್ಯಗಳಿಲ್ಲ. ಇದಕ್ಕಾಗಿ 35 k.m. ದೂರದ ಜಿಲ್ಲಾ ಕೇಂದ್ರವಾದ ಕಾಸರಗೋಡು ಅಥವಾ ಹತ್ತಿರದ ಮಂಗಳೂರು ಹೋಗುವಂತಹ ಪರಿಸ್ಥಿತಿ. ಜನರಿಗಾಗುತ್ತಿರುವ ಈ ತೊಂದರೆಗಳನ್ನು ಪರಿಹರಿಸಲು ಎಲ್ಲಾ ಸೌಕರ್ಯಗಳೂ ಇರುವಂತಹ ಸುಸಜ್ಜಿತ ಸರಕಾರೀ ಆಸ್ಪತ್ರೆಯ ಅವಶ್ಯಕತೆ ಇದೆ. ಮತ್ತೆ ಇಲ್ಲಿ ಸ್ತ್ರೀರೋಗ ತಜ್ಞರ ಮತ್ತು ಇತರ ತಜ್ಞ ವೈದ್ಯರ ನೇಮಕವಾಗಬೇಕು. ಅಲ್ಲದೆ ಪ್ರಾದೇಶಿಕ ಭಾಷೆ ತಿಳಿದಿರುವ ನೌಕರರ ನೇಮಕಾತಿ ಅತೀ ಅಗತ್ಯವಾಗಿದೆ.

ಸಂಸ್ಥೆಯ ಹೆಸರು	ಸ್ಥಳ	ನೌಕರರ ಸಂಖ್ಯೆ
ಪ್ರಾಥಮಿಕ ಆರೋಗ್ಯ ಕೇಂದ್ರ	ಪೆರ್ಲ XIನೇ ವಾರ್ಡು	22 Medical Officer -1, Pharmacist -1, Nsg. Asst. -1, L.D.C. - 1, Peon - 1., H.A. Gr - I - 1 Sweeper -1 L.H. I. Gr - II - 1 J. H.I. Gr - I 1 H.I. Gr- I J.H.I. Gr-II1 J.P.H.N. 8 Leprosy Inspector - 1
ಆಯುರ್ವೇದಿಕ್ ಆಸ್ಪತ್ರೆ	ಪೆರ್ಲ XIನೇ ವಾರ್ಡು	
ಆಯುರ್ವೇದಿಕ್ ಆಸ್ಪತ್ರೆ	VIIನೇ ವಾರ್ಡು ಪಧ್ಯಾನ	

ಗ್ರಾಮ ಸಭೆಗಳ ವರದಿಯ ಕ್ರೋಢೀಕರಣದ ಪ್ರಕಾರ ಸಂಗ್ರಹಿಸಿದ ಮಾಹಿತಿಗಳು ಈ ಕೆಳಗಿನಂತಿವೆ.

1. ಪಂಚಾಯತಿನಲ್ಲಿರುವ ಎಲ್ಲಾ ವಾರ್ಡುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕುಟುಂಬ ಕಲ್ಯಾಣ ಕೇಂದ್ರಗಳ ಸ್ಥಾಪನೆ.
2. ಕುಟುಂಬ ಕಲ್ಯಾಣ ಕೇಂದ್ರಗಳಲ್ಲಿ ಪ್ರಾದೇಶಿಕ ಭಾಷೆ ತಿಳಿದಿರುವ ಆರೋಗ್ಯ ಕಾರ್ಯಕರ್ತೆಯರ ನೇಮಕ.
3. ಪ್ರಸ್ತುತ ಈಗ ಇರುವ ಕುಟುಂಬ ಕಲ್ಯಾಣ ಕೇಂದ್ರಗಳಿಗೆ ವೈದ್ಯರ ನಿಗದಿತ ಭೇಟಿ ಮತ್ತು ತುರ್ತು ಔಷಧಿಗಳ ಸರಬರಾಜು.
4. ಕುಟುಂಬ ಕಲ್ಯಾಣ ಕೇಂದ್ರದಲ್ಲಿರುವ ಆರೋಗ್ಯ ಕಾರ್ಯಕರ್ತೆಯರ ಕರ್ತವ್ಯದ ಮೇಲೆ ನಿಗಾ ಇಡುವುದು ಮತ್ತು ನಿರ್ದೇಶನ ನೀಡುವುದು.
5. ಒಳ ರೋಗಿಗಳನ್ನಾಗಿ ದಾಖಲು ಮಾಡಲು ಸುಸಜ್ಜಿತ 10 ಬೆಡ್ಡುಗಳ ಆಸ್ಪತ್ರೆಯನ್ನು ಒದಗಿಸುವುದು.
6. ಎಲ್ಲಾ ವಾರ್ಡುಗಳಲ್ಲಿ ಮಹಿಳಾ ಸ್ವಸ್ಥ ಸಂಘ (MSS)ಗಳ ಸ್ಥಾಪನೆ.
7. ಮಾತೆಯರಿಗೆ ಆರೋಗ್ಯ ಪರಿಸರ ಶುಚಿತ್ವ, ವ್ಯಕ್ತಿ ಶುಚಿತ್ವ ಮತ್ತು ಮಕ್ಕಳಿಗೆ ಕೊಡಬೇಕಾದ ಚುಚ್ಚು ಮದ್ದುಗಳ ಕುರಿತು ಬೋಧನಾ ಶಿಬಿರವನ್ನು ನಡೆಸುವುದು.

ಶೌಚಾಲಯ : ಸಾರ್ವಜನಿಕ ಆರೋಗ್ಯವನ್ನು ಕಾಪಾಡುವಲ್ಲಿ ಶೌಚಾಲಯವು ಪ್ರಧಾನ ಪಾತ್ರವನ್ನು ವಹಿಸುತ್ತದೆ. ಪ್ರತಿಯೊಂದು ಮನೆಗೆ ಶೌಚಾಲಯವು ಅತೀ ಅಗತ್ಯವಾಗಿದೆ. ಇವುಗಳ ನಿರ್ಮಾಣದಿಂದಾಗಿ ಹುಳು ಬಾಧೆ, ವಾಂತಿ ಭೇದಿ ಹಾಗೂ ಇತರ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದು. ಈ ಪಂಚಾಯತನ್ನು ಸಂಪೂರ್ಣ ಸ್ಯಾನಿಟರಿ ಪಂಚಾಯತನ್ನಾಗಿ ಘೋಷಿಸಲು ಬೇಕಾದ ಏರ್ಪಾಡನ್ನು ಮಾಡುವುದು. ಅದಕ್ಕೆ

ಬೇಕಾದ ಧನಸಹಾಯವನ್ನು ಸರಕಾರದಿಂದ ಒದಗಿಸಲು ಪಂಚಾಯತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು.

ಗ್ರಾಮ ಸಭೆಗಳಿಂದ ಬಂದ ವರದಿ :

1. ಮನೆಗೊಂದರಂತೆ ಶೌಚಾಲಯಗಳ ನಿರ್ಮಾಣ.
2. ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಶಾಲೆ, ಬಸ್ಸು ನಿಲ್ದಾಣ, ಮಸೀದಿ ಹಾಗೂ ಚರ್ಚ್‌ಗಳಿರುವ ಕಡೆಗಳಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ಕೊಡಬೇಕು.
3. S.C ಮತ್ತು S.T. ಕಾಲನಿಗಳಿರುವ ಕಡೆ ಶೌಚಾಲಯದ ನಿರ್ಮಾಣ.

ಪರಿಸರ ಶುಚಿತ್ವ : ಸಾರ್ವಜನಿಕ ಆರೋಗ್ಯ ರಕ್ಷಣೆಯ ಕಾರ್ಯದಲ್ಲಿ ಪರಿಸರ ಶುಚಿತ್ವ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಇದರ ಕುರಿತು ಜನರಿಗೆ ವರ್ಷಕ್ಕೆರಡರಂತೆ ಬೋಧನಾ ಶಿಬಿರವನ್ನು ನಡೆಸುವುದು.

ಗ್ರಾಮ ಸಭೆಗಳಿಂದ ಬಂದ ವರದಿ :

1) ಪೆರ್ಲ ಪೇಟೆಯಲ್ಲಿ ಮಳೆ ನೀರು ಹರಿದು ಹೋಗಲು ಸರಿಯಾದ ಚರಂಡಿಗಳ ವ್ಯವಸ್ಥೆ.
2) ಪೇಟೆಯಲ್ಲಿ ಅಲ್ಲಲ್ಲಿ ಕಸದ ತೊಟ್ಟಿಗಳನ್ನು ಸ್ಥಾಪಿಸುವುದು ಮತ್ತು ಇವುಗಳನ್ನು ಆಗಾಗ ತೆರವುಗೊಳಿಸಲು ವ್ಯವಸ್ಥೆ ಮಾಡುವುದು.
3) ಹೋಟೇಲುಗಳಿಂದ ಹರಿದು ಹೋಗುವ ಕೊಳಚೆ ನೀರಿಗೆ ಸರಿಯಾದ ಚರಂಡಿ ವ್ಯವಸ್ಥೆ
4) ಸಾರ್ವಜನಿಕ ಶೌಚಾಲಯಗಳನ್ನು ತೆರೆದು ಉಪಯೋಗಪ್ರದವಾಗುವಂತೆ ಮಾಡಲು ವ್ಯವಸ್ಥೆ.
5) ತರಕಾರಿ ಮತ್ತು ಮೀನುಗಳ ಮಾರಾಟಕ್ಕಾಗಿ ಪ್ರತ್ಯೇಕ ಮಾರುಕಟ್ಟೆಗಳ ನಿರ್ಮಾಣ.
6) ಪೆರ್ಲ ಕೊಳಚೆ ಪ್ರದೇಶಗಳಿಗೂ ಮತ್ತು ಪ್ರತಿಯೊಂದು ಮನೆಯ ಸುತ್ತಲೂ ಔಷಧಿ ಸಿಂಪಡಣೆ.
7) ಹೋಟೇಲುಗಳಲ್ಲಿ ತಂಪು ಪಾನೀಯ ಕೇಂದ್ರಗಳಲ್ಲಿ ಹಾಗೂ ಇತರ ಆಹಾರ ವಸ್ತುಗಳನ್ನು ಮಾರುವ ಕೇಂದ್ರಗಳನ್ನು ಆರೋಗ್ಯ ನಿಯಮಗಳ ನಿಯಂತ್ರಣಕ್ಕೆ ಒಳಪಡಿಸಬೇಕು.
8) ಜಿಲ್ಲಾ ಬಾವಿಗಳಿಗೂ ಕ್ಲೋರಿನೇಶನ್ ಮಾಡಬೇಕು.

ನಡೆಯಬೇಕಾದ ಕಾರ್ಯಗಳು :

ಸಾಂಕ್ರಾಮಿಕ ರೋಗಗಳನ್ನು ತಡೆಯಲು ಸೊಳ್ಳೆ ಮತ್ತು ನೊಣಗಳ ನಿಯಂತ್ರಣ. ಎಲ್ಲಾ ಮನೆಗಳಲ್ಲಿಯೂ ಸ್ಯಾನಿಟೇಶನ್ ಸೊಪ್ಪು, ಕಸ ಕಡ್ಡಿಗಳನ್ನು ಬಿಸಾಡಲು ಕಸದ ಗುಂಡಿಗಳನ್ನು ರಚಿಸಬೇಕು. ನೀರು ನಿಲ್ಲುವ ಸ್ಥಳಗಳಲ್ಲಿ ಸೀಮೆ ಎಣ್ಣೆ ಮತ್ತು ಡಿ.ಡಿ.ಟಿ. ಸಿಂಪಡಣೆ. ಈ ಕಾರ್ಯಕ್ರಮದಲ್ಲಿ ಆರೋಗ್ಯ ಕಾರ್ಯಕರ್ತರು ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳ ಸಹಾಯವನ್ನು ಪಡೆಯಬೇಕು.

ಪಂಚಾಯತ್ ಮಟ್ಟದಲ್ಲಿ ನಡೆಸಬೇಕಾದ ಕಾರ್ಯಗಳು :

ಜನರ ಶಾರೀರಿಕ ಆರೋಗ್ಯವನ್ನು ಕಾಪಾಡುವಲ್ಲಿ ಪಂಚಾಯತ್‌ನಲ್ಲಿ ಒಂದು ಯೋಗ ಕೇಂದ್ರವನ್ನು ಸ್ಥಾಪಿಸುವುದು. ವೃದ್ಧರ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು. ವೃದ್ಧರ ಶಾರೀರಿಕ, ಮಾನಸಿಕ, ಆರೋಗ್ಯ ಮಟ್ಟವನ್ನು ಸುಧಾರಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ತರಬೇತಿ ಹೊಂದಿದ ಕಾರ್ಯಕರ್ತರನ್ನೊಳಗೊಂಡ ಒಂದು ವೃದ್ಧಾಶ್ರಮ ಕೇಂದ್ರದ ಸ್ಥಾಪನೆ.

ಆರೋಗ್ಯ ಕಾರ್ಡು : ಪಂಚಾಯತ್‌ನ ಎಲ್ಲಾ ನಿವಾಸಿಗಳಿಗೂ ಆರೋಗ್ಯದ ಎಲ್ಲಾ ವಿವರಗಳನ್ನೊಳಗೊಂಡ ಒಂದು ಆರೋಗ್ಯ ಕಾರ್ಡನ್ನು ವಿತರಿಸಬೇಕು. ಪಂಚಾಯತ್‌ನಲ್ಲಿರುವ ಮನೆ ವೈದ್ಯರುಗಳು, ನಾಟಿ ವೈದ್ಯರುಗಳು, ಆಳಿವಿನಂಚಿಲ್ಲಿರುವ ಔಷಧಿ ಸಸ್ಯಗಳು ಇವುಗಳ ಸಂರಕ್ಷಣೆಗೆ ಎಲ್ಲಾ ತರದ ಸೌಕರ್ಯಗಳನ್ನು ಒದಗಿಸಿಕೊಡುವುದು. ಆರೋಗ್ಯವಂತ ಜನತೆಯೇ ಒಂದು ಪಂಚಾಯತಿನ ರಾಜ್ಯದ ಹಾಗೂ ದೇಶದ ಸಂಪತ್ತು. ಆದುದರಿಂದ ಜನರ ಆರೋಗ್ಯ ಸಂರಕ್ಷಣೆಯ ಆದ್ಯ ಕರ್ತವ್ಯವು ಪಂಚಾಯತಿಗಿದೆ. ಜನರ ಆರೋಗ್ಯ ಮಟ್ಟ ಸುಧಾರಿಸಲು ಬೇಕಾದ ಕಾರ್ಯಕ್ರಮಗಳನ್ನು ಪಂಚಾಯತ್ ಹಮ್ಮಿಕೊಂಡು ಜನರ ಸಹಕಾರವನ್ನು ಪಡೆದು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಹಾಗಾದಲ್ಲಿ ಮಾತ್ರ ನಮ್ಮ ಈ ಪಂಚಾಯತು ಪ್ರಗತಿಯ ಪಥದಲ್ಲಿ ಮುಂದುವರಿದೀತು. ಆರೋಗ್ಯವಂತ ಜನರೇ ಪಂಚಾಯತಿನ ದೊಡ್ಡ ಆಸ್ತಿ.

ಕೈಗಾರಿಕೆ

ಎಣ್ಮಕಜೆ ಪಂಚಾಯತ್ ಕೃಷಿ ಪ್ರಧಾನ ಪ್ರದೇಶವಾಗಿದ್ದು ಕೈಗಾರಿಕಾ ರಂಗದಲ್ಲಿ ಕನಿಷ್ಠ ಪ್ರಗತಿಯನ್ನು ಸಾಧಿಸಿಲ್ಲ. ಪಂಚಾಯತ್‌ನಲ್ಲಿ ಖಾಸಗಿ ಅಥವಾ ಸಾರ್ವಜನಿಕ ರಂಗದ ಯಾವುದೇ ಉದ್ದಿಮೆ ಸ್ಥಾಪನೆಯಾಗಿಲ್ಲ. ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುವ ಸ್ಪಷ್ಟವಾದ ಆಸಕ್ತಿ ಕೂಡಾ ಕಂಡು ಬರುವುದಿಲ್ಲ. ನಮ್ಮ ಪಂಚಾಯತ್ ಕೈಗಾರಿಕಾ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವೆಂದು ಹೇಳಬಹುದು.

ಪಂಚಾಯತ್‌ನಲ್ಲಿ ಸಿದ್ಧ ಆಹಾರ, ಇಂಜಿನಿಯರಿಂಗ್, ಗುಡಿಕೈಗಾರಿಕೆ ವಲಯದಲ್ಲಿ ಕಿರು ಉದ್ಯಮಗಳು ಸ್ಥಾಪಿಸಲ್ಪಟ್ಟಿವೆ. ಗುಡಿಕೈಗಾರಿಕೆಗಳನ್ನು ಹೊರತು ಪಡಿಸಿದರೆ ಉಳಿದೆಲ್ಲ ಉದ್ದಿಮೆಗಳು ಹದಿನೈದು ವರ್ಷಗಳಿಂದ ಈಚೆಗೆ ಸ್ಥಾಪನೆಯಾಗಿರುವುದು ಕಂಡು ಬರುತ್ತದೆ. ಪ್ಲಾಸ್ಟಿಕ್ ಉದ್ದಿಮೆಯೊಂದು ಎರಡು ವರ್ಷಗಳ ಹಿಂದೆ ಸ್ಥಾಪನೆಯಾಯಿತು. ಇವೆಲ್ಲ ಉದ್ದಿಮೆಗಳು ಏಕವ್ಯಕ್ತಿ ಒಡೆತನದಲ್ಲಿದೆ.

ಪಂಚಾಯತ್‌ನಲ್ಲಿ ಹೆಚ್ಚು ಜನರಿಗೆ ಉದ್ಯೋಗ ನೀಡಿರುವ ಉದ್ದಿಮೆಗಳೆರಡು ಸಹಕಾರಿ ರಂಗದಲ್ಲಿವೆ. ನೇಕಾರರ ಸಹಕಾರಿ ಸಂಘ ಮತ್ತು ದಿನೇಶ್ ಬೀಡಿ ಕಂಪೆನಿ ಇವೆರಡು ಸಂಸ್ಥೆಗಳು.

ಪಂಚಾಯತ್‌ನಲ್ಲಿ ಕೆಲವು ಗುಡಿ ಕೈಗಾರಿಕೆಗಳು ನಶಿಸಿರುವುದು ಅಥವಾ ಅವುಗಳ ಸಂಖ್ಯೆ ಕಡಿಮೆಯಾಗಿರುವುದು ಕಂಡು ಬರುತ್ತದೆ.. ತೆಂಗಿನ ನಾರಿನ ಹುರಿಹಗ್ಗ ಮನೆಗಳಲ್ಲಿ ನೂಲು ಸುತ್ತುವ, ಬಟ್ಟೆ ನೇಯುವ, ಕಬ್ಬಿನಿಂದ ಬೆಲ್ಲ ತಯಾರಿಸುವ ಗಾಣದಿಂದ ಎಣ್ಣೆ ತೆಗೆಯುವ ಗುಡಿ ಕೈಗಾರಿಕೆಗಳು ಕಣ್ಮರೆಯಾಗ ತೊಡಗಿವೆ. ಪರ್ಯಟನ ವರದಿ ಪ್ರಕಾರ ಒಂದೆರಡು ಕಡೆ ಮಡಕೆ ತಯಾರಿಸುವ ಸಂಪ್ರದಾಯ ಉಳಿದಿರುವುದು ಕಂಡು ಬಂದಿದೆ.

ಸಾಂಪ್ರದಾಯಿಕ ಕಸುಬುಗಳಲ್ಲಿ ಬರುವ ಚರ್ಮ ಹದ ಮಾಡುವ, ಲೋಹದ ಕೃಷಿ ಉಪಕರಣಗಳನ್ನು ತಯಾರಿಸುವ ಕಮ್ಮಾರ ಕೊಟ್ಟಿಗೆ ಇತ್ಯಾದಿಗಳ ಸಂಖ್ಯೆ ಮತ್ತು ಉತ್ಪಾದನಾ ಕ್ಷಮತೆ ಕಡಿಮೆಯಾಗಿದೆ.

ಬೆರಳೆಣಿಕೆ ಕಂಖ್ಯೆಯ ಮರದ ಫರ್ನಿಚರ್ ತಯಾರಿಸುವ ಕೇಂದ್ರಗಳು ಸ್ಥಾಪನೆಯಾಗಿರುವುದು ಕಂಡು ಬರುತ್ತದೆ.

ಸಿದ್ಧ ಆಹಾರ ತಯಾರಿಸುವ ಬೇಕರಿ, ಲಘು ಪಾನೀಯ ತಯಾರಿಕಾ ಘಟಕಗಳು ಆರಂಭಗೊಂಡಿವೆ. ಇಂಜಿನಿಯರಿಂಗ್ ಮತ್ತು ಮೋಟಾರ್ ರಿಪೇರಿ ಘಟಕಗಳು ಈಗ ಕಾರ್ಯಚರಣೆಗೆ ತೊಡಗಿವೆ.

ಪಂಚಾಯತಿನ ಬೇಡಿಕೆ ಮತ್ತು ಸಂಪನ್ಮೂಲಗಳ ಇರುವಿಕೆಯನ್ನು ಗಣನೆಗೆ ತೆಗೆದುಕೊಂಡರೆ ಇಲ್ಲಿ ವಿವಿಧ ರಂಗದಲ್ಲಿ ಸ್ಥಾಪನೆಯಾಗಿರುವ ಉದ್ದಿಮೆಗಳು ಏನೇನೂ ಸಾಲದು. ಪಂಚಾಯತಿನ ಶೇ. 1ರಷ್ಟು ಮಂದಿ ಮಾತ್ರ ಇಲ್ಲಿನ ಖಾಸಗಿ ಕಿರು ಉದ್ದಿಮೆಗಳಲ್ಲಿ ಉದ್ಯೋಗಿಗಳಾಗಿದ್ದಾರೆ ಕೆಲವೇ ಮಂದಿ ಸಹಕಾರಿ ರಂಗದ ಉದ್ದಿಮೆಗಳಲ್ಲಿ ಅವಕಾಶಗಳಿಸಿದ್ದಾರೆ. ಒಟ್ಟು ಜನ ಸಂಖ್ಯೆ (24,166)ಯ 30ಶೇ. ಮಂದಿ ನಿರುದ್ಯೋಗಿಗಳಾಗಿದ್ದಾರೆ. ಇದರಲ್ಲಿ ಒಂದು ಅಂಶ ಅರೆಕಾಲಿಕ ಉದ್ಯೋಗ ಹೊಂದಿದ್ದಾರೆ.

ಸ್ಥಿತಿಗತಿ:-

ಸಹಕಾರಿ ರಂಗದಲ್ಲಿರುವ ಎರಡು ಉದ್ದಿಮೆಗಳು ಮುಚ್ಚುವ ಸ್ಥಿತಿಯಲ್ಲಿವೆ. ಈ ರಂಗದಲ್ಲೇ ಹೆಚ್ಚಿನ ಸಂಖ್ಯೆಯ ಉದ್ಯೋಗಿಗಳಲ್ಲಿ ಶೇ. 95ರಷ್ಟು ಮಂದಿ ಮಹಿಳೆಯರು ಸೇರಿದ್ದಾರೆ. ಸತ್ಯನಾರಾಯಣ ನೇಕಾರರ ಸಹಕಾರೀ ಸಂಘ ಗತಕಾಲದಲ್ಲಿ ಬಹು ಬೇಡಿಕೆಯ ಸಂಸ್ಥೆಯಾಗಿದ್ದರೆ ಹತ್ತು ಲಕ್ಷ ರೂ ವಾರ್ಷಿಕ ವಹಿವಾಟಿನ ಹೊರತಾಗಿಯೂ ಎರಡೂವರೆ ಲಕ್ಷ ರೂ ನಷ್ಟದಲ್ಲಿದೆ. ಇಲ್ಲಿ ಉತ್ಪಾದನಾ ವೆಚ್ಚ ಹೆಚ್ಚಾಗಿದ್ದು ಕಾರ್ಮಿಕರಿಗೆ ತೀರ ಕಡಿಮೆ ವೇತನ ದೊರೆಯುತ್ತಿದೆ. ಸರಕಾರದ ವಿಳಂಬ ನೀತಿ ಸಂಸ್ಥೆಯ ಸಂಕಟವನ್ನು ಇನ್ನಷ್ಟು ಹೆಚ್ಚಿಸಿದೆ. ಪಂಚಾಯತಿನಲ್ಲಿ 150 ಮಂದಿ ತರಬೇತಿ ಹೊಂದಿದ ನೇಕಾರರಿದ್ದು ಕೇವಲ 35 ಮಂದಿ ಇಲ್ಲಿ ಉದ್ಯೋಗದಲ್ಲಿದ್ದಾರೆ. ಉದ್ದಿಮೆಯ ಆಧುನೀಕರಣ, ಹೆಚ್ಚಿನ ಬಂಡವಾಳ ಹೂಡಿಕೆ, ಉತ್ಪಾದನೆ ಹೆಚ್ಚಳ, ಉತ್ಪಾದನಾ ವಸ್ತುವಿನ ಬದಲಾವಣೆ ಈ ಉದ್ದಿಮೆಯನ್ನು ಎಲ್ಲ ನಿಟ್ಟಿನಲ್ಲಿ ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯ.

ದಿನೇಶ್ ಬೀಡಿ ಕಾರ್ಖಾನೆಯನ್ನು ಜಿಲ್ಲಾ ಮಟ್ಟದಲ್ಲಿ ಬೇರೆ ರೀತಿಯ ಉತ್ಪಾದನಾ ಘಟಕಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಆರಂಭಗೊಂಡಿರುವುದರಿಂದ ಹೆಚ್ಚಿನ ಚರ್ಚೆ ಇಲ್ಲಿ ಅನಗತ್ಯ.

ಪಂಚಾಯತಿನ ಇತರ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರಿಗೆ ಈಗ ದೊರಕುವ ಸವಲತ್ತುಗಳು ಕಡಿಮೆಯಾಗಿರುತ್ತದೆ.

ಪಂಚಾಯತಿನಲ್ಲಿ ನೇಕಾರರ ಸಂಘ ಹೊರತು ಪಡಿಸಿದರೆ ಉಳಿದೆಲ್ಲ ಉದ್ದಿಮೆ ಲಾಭದಾಯಕವಾಗಿವೆ.

ಮೂಲಭೂತ ಸೌಕರ್ಯ:-

ಪಂಚಾಯತ್ 78.23 ಚ. ಕೀ. ವಿಸ್ತೀರ್ಣದಲ್ಲಿ ಹರಡಿಕೊಂಡಿದ್ದು 102.81 ಎಕರೆ ಬಂಜರು ಭೂಮಿಯನ್ನು ಹೊಂದಿದೆ. ವಿಟ್ಲ-

ಕಾಸರಗೋಡು-ಪೆರ್ಲ-ಕುಂಬಳೆ- ಮಂಗಳೂರು, ಪೆರ್ಲ-ಸ್ವರ್ಗ-ಪುತ್ತೂರು ಪಂಚಾಯತಿನಲ್ಲಿ ಹಾದು ಹೋಗುವ ಪ್ರಧಾನ ರಸ್ತೆಗಳಾಗಿದ್ದು ನವ ಮಂಗಳೂರು ಬಂದರಿಗೆ 75 ಕಿ. ಮೀ. ಹತ್ತಿರದಲ್ಲಿ ಪಂಚಾಯತ್ ಕೇಂದ್ರ ಪೆರ್ಲದಲ್ಲಿದೆ. ಮಂಗಳೂರು, ಬಂಟ್ವಾಳ, ಪುತ್ತೂರು ಕಾಸರಗೋಡು ಪಂಚಾಯತಿಗೆ ಸನಿಹದಲ್ಲಿರುವ ನಗರಗಳು.

ಪಂಚಾಯತ್ ರಸ್ತೆ ಸಾರಿಗೆ ಸಂಪರ್ಕವಿಲ್ಲದೆ ಉತ್ತಮವೆನ್ನಬಹುದಾದ ದೂರ ಸಂಪರ್ಕ ವ್ಯವಸ್ಥೆ ಹೊಂದಿದೆ. ಪಂಚಾಯತ್‌ಗೆ ದೊರಕುವ ವಿದ್ಯುತ್ ಪೂರೈಕೆ ಕೈಗಾರಿಕಾ ಸ್ಥಾಪನೆಗೆ ಉತ್ಸಾಹದಾಯಕವಾಗಿಲ್ಲ.

ಪಂಚಾಯತ್‌ನಲ್ಲಿ ಕೈಗಾರಿಕಾ ವಲಯವೆಂದು ವಿಂಗಡಿಸಿ ಕಾದಿರಿಸಿದ ಸ್ಥಳವಿಲ್ಲ. ಹಾಗೆಂದು ಸರಕಾರಿ ಸ್ಥಳವು ಲಭ್ಯವಿಲ್ಲ. ಆದರೆ ಕಪ್ಪು ಕಲ್ಲಿನಿಂದ ಕೂಡಿದ ಬಂಜರು ಭೂಮಿ 50 ಎಕರೆಗಿಂತ ಹೆಚ್ಚಿದ್ದು ಇಂತಹ ಸ್ಥಳಗಳಲ್ಲಿ ಉದ್ದಿಮೆ ಸ್ಥಾಪಿಸುವುದು ಸೂಕ್ತ.

ಅವಕಾಶಗಳು:-

ಕೃಷಿ ಆಧಾರಿತ, ಸಾಂಪ್ರದಾಯಿಕ ಮತ್ತು ಇತರ ಎಂಬ ಮೂರು ಸ್ತರಗಳಲ್ಲಿ ಯಾವ ಕೈಗಾರಿಕೆಗಳನ್ನು ತಯಾರಿಸ ಬಹುದೆಂಬ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ.

1. ಅಡಿಕೆ ಹಾಳೆಯಿಂದ ಸಾಮಾಗ್ರಿ ತಯಾರಿ.
2. ಅಡಿಕೆ ಹುಡಿ ತಯಾರಿ (ಸುಫಾರಿ)
3. ತೆಂಗಿನ ನಾರಿನಿಂದ ಹುರಿಹಗ್ಗ, ಚಾಪೆ ಇತ್ಯಾದಿ.
4. ತೆಂಗಿನ ಗೆರೆಟೆಯಿಂದ ಸಾಮಾಗ್ರಿ ಮತ್ತು ಅಲಂಕಾರ ಸಾಮಾಗ್ರಿ
5. ಗೇರು ಬೀಜ ಸಂಸ್ಕರಣೆ (4)
6. ಗೇರು ಹಣ್ಣು ಸಂಸ್ಕರಣ, ಕೇಶ್ಯೂ ಫೆನ್ನಿ ಡಿಸ್ಟಿಲರಿ.
7. ಬಾಳೆಹಣ್ಣು ಚಿಪ್ಸ್, ಜಾಮ್ ಇತ್ಯಾದಿ ಸಿದ್ಧ ಆಹಾರ
8. ರಬ್ಬರ್ ಸಂಸ್ಕರಣೆ.
9. ಕೊಕ್ಕೋ ಸಂಸ್ಕರಣೆ.
10. ಕಾಫಿ ಸಂಸ್ಕರಣೆ.
11. ಜೈವಿಕ ಗೊಬ್ಬರ ತಯಾರಿ.
12. ಕೋಳಿ ಫಾರ್ಮಿಗೆ ಸಿದ್ಧ ಆಹಾರ ತಯಾರಿ.
13. ಅನನಾಸು ಸಂಸ್ಕರಣ.
14. ಜೇನು ವ್ಯವಸಾಯ.
15. ಪುಷ್ಪೋದ್ಯಮ.
16. ಅಣಬೆ ಕೃಷಿ
17. ಹಲಸಿನ ಹಣ್ಣಿನಿಂದ ಆಹಾರ.

ಸಂಪ್ರದಾಯಿಕ:-

1. ಮಣ್ಣಿನ ಪಾತ್ರೆ.
2. ಬಟ್ಟೆ ತಯಾರಿ.
3. ಚರ್ಮದ ಉತ್ಪನ್ನ.

4. ಕಬ್ಬಿಣದ ಸಲಕರಣೆ.

5. ಚಾಪೆ ಹೆಣೆಯುವುದು.

6. ಮರದ ಸಲಕರಣೆ.

7. ಚಿನ್ನದ ಆಭರಣ ತಯಾರಿ.

8. ಬುಟ್ಟಿ ಹೆಣೆಯುವುದು.

9. ಆಯುರ್ವೇದ ಔಷಧ ತಯಾರಿ.

10. ಉಪ್ಪಿನ ಕಾಯಿ- ಹಪ್ಪಳ-ಸಂಡಿಗೆ.

11. ಅಡಿಕೆ ಹಾಳೆಯಿಂದ ಮುಟ್ಟಪಾಲೆ ತಯಾರಿ.

ಇತರ ಕೈಗಾರಿಕೆಗಳು:-

1. ಅಲ್ಯುಮಿನಿಯಂ ಪಾತ್ರೆ ತಯಾರಿ.

2. ರದ್ದಿ ಕಾಗದಗಳ ಸಂಸ್ಕರಣ.

3. ಹಿತ್ತಾಳೆ, ಕಂಚಿನ ಪಾತ್ರೆಗಳ ನವೀಕರಣ.

4. ಟಯರ್ ರಿಸೋಲಿಂಗ್.

5. ಮೊಟ್ಟೆ ಉತ್ಪಾದನಾ ಘಟಕ.

6. ಸಾಬೂನು ತಯಾರಿ.

7. ವಾಹನ ಸಲಕರಣೆ ತಯಾರಿ (ಇಂಜಿನಿಯರಿಂಗ್).

8. ವಾಹನ ರಿಪೇರಿ.

9. ಸಿದ್ಧ ಆಹಾರ ತಯಾರಿ.

10. ಇಲೆಕ್ಟ್ರಾನಿಕ್ಸ್, ವಸ್ತುಗಳ ರಿಪೇರಿ ಕೇಂದ್ರ.

11. ಸೋಲಾರ್ ವಿದ್ಯುತ್ ಸಲಕರಣೆಗಳ ತಯಾರಿ.

12. ನೆಲ್ಲಿಕಾಯಿ ಸಂಸ್ಕರಣೆ.

13. ಡಿಸ್‌ಪೊಸಲ್ ಸಿರಿಂಜ್ ತಯಾರಿ.

14. ಸಿದ್ಧ ವಸ್ತು ತಯಾರಿ.

15. P.V.C. ಪೈಪ್ಸ್ ಕಾರ್ಖಾನೆ.

16. ಕನ್ನಡಿ, Glassಬಾಟ್ಲಿಂಗ್ ತಯಾರಿ ಘಟಕ.

17. ಗ್ರೀಟಿಂಗ್ ಕಾರ್ಡ್, ಕವರ್, ಸೇಫ್ಟಿ ಪಿನ್ ತಯಾರಿ.

18. ಸ್ಕ್ರೀನ್ ಪ್ರಿಂಟಿಂಗ್.

19. ಹೋಟೇಲ್ ಉದ್ಯಮ.

20. ಆಯುರ್ವೇದ ಔಷಧಿ ಫಾರ್ಮಸಿ.

ಕೃಷಿ ಆಧಾರಿತ ಕೈಗಾರಿಕೆ:-

ನಮ್ಮ ಪಂಚಾಯತಿಗೆ ಕೃಷಿ ಆಧಾರಿತ ಕೈಗಾರಿಕೆ ಅತ್ಯಂತ ಸೂಕ್ತವಾದುದು. ನಮ್ಮಲ್ಲಿ ಅಡಿಕೆ, ತೆಂಗು, ಗೇರು ಬೀಜ, ಬಾಳೆ, ಕರಿಮೆಣಸು, ರಬ್ಬರ್ ಇತ್ಯಾದಿ ಇಲ್ಲಿ ಬೆಳೆಸುತ್ತಿದ್ದರೂ ಅದರ ಸಂಸ್ಕರಣ ಇಲ್ಲಿ ನಡೆಯುವುದಿಲ್ಲ. ಅಡಿಕೆಯ ಸಂಸ್ಕರಿತ ವಸ್ತುಗಳು ಹೊರನಾಡಿನಿಂದ ಇಲ್ಲಿಗೆ ಬಂದು ವಿಕ್ರಯಗೋಳ್ಳುತ್ತದೆ. ಪಂಚಾಯತಿನ ಕೃಷಿ ಉತ್ಪಾದನೆಯ ಪಟ್ಟಿಯು ಕೃಷಿ ಆಧಾರಿತ ಕೈಗಾರಿಕೆಗೆ ದೊರಕಬಹುದಾದ ಕಚ್ಚಾ ಸಾಮಾಗ್ರಿಯ ಸ್ಥೂಲ ಮಾಹಿತಿ ಕಂಡು ಬರುವುದು.

ಪಂಚಾಯತಿನ ಕೃಷಿ ಉತ್ಪನ್ನಗಳ ಪಟ್ಟಿ:-

ಕ್ರಮ ಸಂಖ್ಯೆ	ಬೆಳೆ	ವಿಸ್ತೀರ್ಣ	ಉತ್ಪಾದನೆ.
1.	ಭತ್ತ	175 Hc.	700 MT.
2.	ಅಡಿಕೆ.	780 Hc	631 MT.
3.	ತೆಂಗಿನ ಕಾಯಿ	360 Hc	3 ಕೋಟಿ.
4.	ಗೇರುಬೀಜ	970	1241 MT.
5.	ಬಾಳೆ	-	3,355 MT.
6.	ಕರಿಮೆಣಸು	-	24 MT.
7.	ಹಲಸು	-	4ಲಕ್ಷ
8.	ರಬ್ಬರ್	55 Hc	66 MT.
9.	ಮಾವು	-	100MT.
10.	ಮರಗೆಣಸು	-	10MT.

ಅಡಿಕೆ:- ಪಂಚಾಯತಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ ಪ್ರಧಾನ ವಾಣಿಜ್ಯ ಬೆಳೆ ಅಡಿಕೆಯಾಗಿದೆ. ಅಡಿಕೆಯ ಒಣಗಿದ ಬೀಜವನ್ನು ಸಂಸ್ಕರಿಸದೆ ನೇರವಾಗಿ ಹೊರ ಪ್ರದೇಶಕ್ಕೆ ಕಳುಹಿಸುವ ಈಗಿನ ವ್ಯವಸ್ಥೆಯ ಬದಲು ಉತ್ಪಾದನೆಯ ನಾಲ್ಕನೇ ಒಂದಂಶವನ್ನಾದರೂ ಸಂಸ್ಕರಿಸುವ ಕಾರ್ಖಾನೆಗಳು ಸ್ಥಾಪನೆಯಾಗಬೇಕಾಗಿದೆ. ಸ್ವೀಟ್ ಸುಪಾರಿ, ಗುಟ್ಕಾ ಪ್ಯಾಕೇಟ್‌ಗಳನ್ನು ಇಲ್ಲೆ ಸ್ಥಾಪಿಸಿದ ಕಾರ್ಖಾನೆಗಳಲ್ಲಿ ತಯಾರಿಸಬಹುದು.

ಗೇರು ಬೀಜ ಮತ್ತು ಹಣ್ಣು:- ಗುಡ್ಡ ಗಾಡಿನಲ್ಲಿ ಬೆಳೆಯುವ ಗೇರು ಬೀಜ ಪಂಚಾಯತ್‌ನಲ್ಲಿ 970 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತದೆ. ಇದರಲ್ಲಿ ಸರಕಾರ 783.14 ಹೆಕ್ಟೆರ್ ಪ್ರದೇಶದಲ್ಲಿ ಬೆಳೆಸುತ್ತದೆ. 1241 ಮೆಟ್ರಿಕ್‌ಟನ್ ಗೇರು ಬೀಜ ಉತ್ಪಾದನೆಯಾಗುತ್ತದೆ. ಮಾತ್ರವಲ್ಲದೆ, ಅಷ್ಟೇ ಪ್ರಮಾಣದ ಗೇರುಹಣ್ಣು ಸಂಗ್ರಹವಾಗುತ್ತದೆ. ಆದರೆ ಪಂಚಾಯತಿನಲ್ಲಿ ಒಂದೇ ಒಂದು ಗೇರು ಹಣ್ಣು ಅಥವಾ ಗೇರು ಬೀಜ ಘಟಕವಿಲ್ಲ. ನಮ್ಮ ಗೇರು ಬೀಜ ಮಾರಾಟ ತೆರಿಗೆ ತಪ್ಪಿಸಿ ಧಾರಾಳವಾಗಿ ಕರ್ನಾಟಕಕ್ಕೆ ಸೋರಿ ಹೋಗುತ್ತದೆ. ಪಂಚಾಯತಿನಲ್ಲಿ, ವಲಯಕ್ಕನುಗುಣವಾಗಿ ಕನಿಷ್ಟ 5 ಗೇರು ಬೀಜ ಸಂಸ್ಕರಣ ಘಟಕಗಳನ್ನು ಎರಡು ಗೇರು ಹಣ್ಣಿನ ಫೆನ್ನಿ ಡಿಸ್ಟಿಲರಿ ಆರಂಭಿಸಬಹುದು.

ಗೇರು ಬೀಜವನ್ನು ಅವಲಂಬಿಸಿ ಪಂಚಾಯತಿನಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆ ಸ್ಥಾಪಿಸಲು ಸಾಧ್ಯ.

ಬಾಳೆ- ಮಾವು- ಹಲಸು- ಮರಗೆಣಸು- ಪುನರ್‌ಪುಳಿ:-

ಬಾಳೆ, ಮಾವು, ಹಲಸು, ಮರಗೆಣಸು, ಸಿಹಿಗೆಣಸುಗಳನ್ನು ಕಚ್ಚಾ ವಸ್ತುಗಳನ್ನಾಗಿ ತೆಗೆದುಕೊಂಡು ವಿವಿಧ ರೀತಿಯ ಕರಿದ ಸಿದ್ಧ ಆಹಾರ ಪೊಟ್ಟಣಗಳನ್ನು ತಯಾರಿಸುವ ಉದ್ದಿಮೆ ಸ್ಥಾಪನೆಗೆ ವ್ಯಾಪಕ ಅವಕಾಶವಿದೆ. ಇವುಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುವುದರಿಂದ ತಾಂತ್ರಿಕ ಪ್ರಗತಿ ಹೊಂದಲು ಸಾಧ್ಯ. ಈ ಕೃಷಿಯುತ್ಪನ್ನಗಳು ಪ್ರಕೃತ ಕಚ್ಚಾ ಸ್ಥಿತಿಯಲ್ಲಿ ಅಷ್ಟೇನು ಬೇಡಿಕೆಯನ್ನು ಹೊಂದಿರುವುದಿಲ್ಲ.

ಮಾವು ಮತ್ತು ಹಲಸಿನ ಸ್ಕ್ವಾಷ್ ಜ್ಯೂಸ್, ಎಸೆನ್ಸ್‌ಗಳನ್ನು ತಯಾರಿಸಬಹುದು.

ರಫ್ತು ಉದ್ದೇಶಿತ ಉದ್ದಿಮೆಗಳು

1. ಗೇರು ಬೀಜ (ಸಂಸ್ಕರಿತ)
2. ಸಿದ್ಧ ಉಡುಪು.
3. ಪುಷ್ಪೋದ್ಯಮ.
4. ಆರ್ಯುವೇದ ಫಾರ್ಮಸಿ.
5. ತೆಂಗಿನ ಗೆರಟೆಯಿಂದ ಉತ್ಪನ್ನ.
6. ಕಂಗಿನ ಹಾಳೆಯ ಉತ್ಪನ್ನ.

ದೈನಂದಿನ ಬಳಕೆಯ ವಸ್ತುಗಳ ತಯಾರಿ

ದೈನಂದಿನ ಬಳಕೆಯ ವಸ್ತುಗಳಾದ ಟೂತ್ ಪೇಸ್ಟ್, ಟೂತ್ ಬ್ರಷ್, ಸ್ನಾನದ ಸಾಬೂನು, ಬಟ್ಟೆ ಒಗೆಯುವ ಸಾಬೂನು, ವಾಷಿಂಗ್ ಪೌಡರ್-ಲಿಕ್ವಿಡ್ ವೈಟ್‌ನರ್, ಹಿಡಿಸೂಡಿ ಇತ್ಯಾದಿಗಳನ್ನು ಬೃಹತ್ ಕಂಪೆನಿಗಳು ತೀರ ಅಲ್ಪ ವೆಚ್ಚದಲ್ಲಿ ತಯಾರಿಸಿ ಶೇ.400ಕ್ಕಿಂತ ಹೆಚ್ಚು ದರ ವಸೂಲು ಮಾಡುತ್ತದೆ. ಸಾಧಾರಣ ಸ್ನಾನದ ಸಾಬೂನಿನ ತಯಾರಿಕಾ ವೆಚ್ಚ 135 ಪೈಸೆಯಾಗಿದ್ದರೆ ಅದರ ಮಾರಾಟ ಕ್ರಯ 8ರಿಂದ 10ರೂ. ವರೆಗೆ ಏರುತ್ತದೆ. ಇದಕ್ಕೆ ಕಾರಣ ದುಬಾರಿ ಜಾಹಿರಾತು, ಸಾಗಾಟ ವೆಚ್ಚ ಮತ್ತು ಅಧಿಕ ಲಾಭಾಂಶ. ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಸಾಬೂನು ತಯಾರಿ. ಇಲ್ಲೂ ಸಾಧ್ಯವಾಗಬಹುದು. ಗುಡಿ ಕೈಗಾರಿಕೆಯಾಗಿದ್ದ `ನಿರ್ಮಾ' ಕಂಪೆನಿಯ ಚರಿತ್ರೆ ಮಾರ್ಗದರ್ಶಕವಾಗಬಲ್ಲುದು.

ಮಡಿಕೆ ಉದ್ಯಮ:-

ಆಧುನಿಕ ನಮೂನೆಯ ಅಡುಗೆ ಪಾತ್ರೆಗಳು ಬರತೊಡಗಿದ ಅನಂತರ ಮಡಕೆ ಉದ್ಯಮ ಹಿಂದುಳಿಯ ತೊಡಗಿತು. ಆದರೆ ಪಂಚಾಯತ್‌ನ ಹೆಚ್ಚಿನ ಮನೆಗಳಲ್ಲಿ ಮಣ್ಣಿನ ಪಾತ್ರೆಯ ಉಪಯೋಗ ಸಂಪೂರ್ಣ ನಿಂತಿಲ್ಲ. ಮಣ್ಣಿನ ಪಾತ್ರೆಯ ಪ್ರತ್ಯೇಕತೆಗಳ ಅರಿವು ಮೂಡಿಸುವುದು ಸ್ವಾಗತಾರ್ಹ. ಆದರೆ ಮಡಕೆ ಉದ್ಯಮಕ್ಕೆ ಈ ನಿಟ್ಟಿನಲ್ಲಿ ನಿರ್ದಿಷ್ಟವಾದ ಮಿತಿ ಇದೆ.

ಮಣ್ಣಿನ ಪಾತ್ರೆ ಉದ್ಯಮವನ್ನು ಆಧುನಿಕ ನಾಗರಿಕತೆಗನುಗುಣವಾಗಿ ವಾಣಿಜ್ಯ ರೀತಿಯಲ್ಲಿ ಮುಂದುವರಿಸುವ ಅವಕಾಶಗಳಲ್ಲಿ ನಗರಗಳಲ್ಲಿರುವ ಶ್ರೀಮಂತ ಕುಳಗಳು, ಬೃಹತ್ ಕಂಪೆನಿಗಳ ಕಛೇರಿಗಳು ಮಣ್ಣಿನ ಕಲಾಕೃತಿಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಪಾತ್ರೆಗಳಲ್ಲಿ ನವೀನತೆಯನ್ನು ತೋರಿಸುವುದು, ಅಂತಹದ ರೂಪುಗಳನ್ನು ಪ್ರದೇಶದ ಕಟ್ಟಡದ ಕೊಠಡಿಯ ಅಂದ ಚೆಂದಕ್ಕೆ ಹೂ-ಬಳ್ಳಿ ಬೆಳಸಲು ಬಳಸಲ್ಪಡುತ್ತದೆ.

ಮಾರುಕಟ್ಟೆಯ ಬೇಡಿಕೆಯನ್ನು ಕಂಡು ಕೊಳ್ಳುವ ಮತ್ತು ಆ ನಿಟ್ಟಿನ ಮಾಹಿತಿ ಪಡೆದ ಈ ಉದ್ಯಮವನ್ನು ನಮ್ಮ ಪಂಚಾಯತ್‌ನಲ್ಲಿ ಅಭಿವೃದ್ಧಿಪಡಿಸಬಹುದು. ಈ ರೀತಿಯ ಮಾರುಕಟ್ಟೆಯಲ್ಲಿ ಲಾಭಾಂಶ ಹೆಚ್ಚಿರುತ್ತದೆ.

ಕಾರ್ಮಿಕ ವರ್ಗ:-

ಪಂಚಾಯತ್‌ನಲ್ಲಿ ಉಪಯೋಗಿಸಲ್ಪಡದ ಮಾನವ ಸಂಪನ್ಮೂಲ ಸಾಕಷ್ಟಿದೆ. ನುರಿತ ಕಾರ್ಮಿಕರು ಕುಶಲ ಕರ್ಮಿಗಳು ತರಬೇತು ಪಡೆಯದ ಕಾರ್ಮಿಕರು, ಶಿಕ್ಷಿತ- ಕಾರ್ಮಿಕರೂ ಇದರಲ್ಲಿ ಸೇರಿದ್ದಾರೆ. ಕಾಲಕ್ರಮದ ಕೃಷಿ, ಆಧಾರಿತ ಕೆಲಸಗಳನ್ನ ಹೊರತು ಪಡಿಸಿದರೆ ಹೆಚ್ಚಿನ ಕೈಗಳಿಗೆ ಕೆಲಸವಿಲ್ಲ. ಮಹಿಳಾ ಕೈಗಳಿಗೆ ಈಗಿನ ತೋಟಗಾರಿಕ ಕೃಷಿಯಲ್ಲಿ ಕೆಲಸದ ಅವಕಾಶ ಕಡಿಮೆಯಾಗಿದೆ. ಆದುದರಿಂದ ಹೆಚ್ಚಿನ ಮಹಿಳೆಯರು ಖಾಯಂ ಮತ್ತು ಅರೆ ಕಾಲಿಕ ವಿಧಾನದಲ್ಲಿ ಬೀಡಿ ಸುತ್ತುವ ಕಾಯಕದಲ್ಲಿ ತೊಡಗಿದ್ದಾರೆ. ಒಂದು ಅಂದಾಜಿನ ಪ್ರಕಾರ ಹತ್ತು ಶೇಕಡಾ ಮಹಿಳೆಯರು ಅಂದರೆ ಸುಮಾರು 4000 ಮಂದಿ ಅರೆಕಾಲಿಕ ಬೀಡಿ ಸುತ್ತುವ ಕಾಯಕದಲ್ಲಿ ತೊಡಗಿದ್ದಾರೆ.

ಮಹಿಳೆಯ ಇತರ ಉದ್ಯೋಗ ನೀಡುವ ಸಂಪಾದನೆ ತರಬಲ್ಲ ಕೈಗಾರಿಕೆಗಳ ಅಸ್ತಿತ್ವ ಇಲ್ಲದಿರುವ ಕಾರಣ ಅನಿವಾರ್ಯವಾಗಿ ಬೀಡಿ ಉದ್ಯಮವನ್ನು ಅವಲಂಬಿಸಿದ್ದಾರೆ. ಬೀಡಿ ಉದ್ಯಮ ತನ್ನದೇ ಆದ ಗುಣ ದೋಷಗಳನ್ನು ಹೊಂದಿರುವುದರಿಂದ ಗಣನೀಯ ಸಂಖ್ಯೆಯ ಮಹಿಳಾ ಕಾರ್ಮಿಕ ವರ್ಗ ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯಲು ಸದಾ ಸಿದ್ಧವಾಗಿದೆ.

ವ್ಯರ್ಥವಾಗಿ ಹೋಗುತ್ತಿರುವ ಯುವ ಪುರುಷ ಸಂಪನ್ಮೂಲವನ್ನು ಸರಿಯಾಗಿ ಬಳಸುವ ಕೈಗಾರಿಕೆಗಳು ಅವಶ್ಯಕವಾಗಿದೆ. ನಿರುದ್ಯೋಗಿಗಳ ಸಂಖ್ಯೆ ತಗ್ಗಿದಂತೆ ಪಂಚಾಯತಿನ ಆರ್ಥಿಕ ಮಟ್ಟ, ಜನರ ಜೀವನ ಸ್ಥಿತಿ ಉತ್ತಮಗೊಳ್ಳುತ್ತದೆ. ಅದಕ್ಕನುಗುಣವಾಗಿ ಪರಿಸರದಲ್ಲಿ ಶಾಂತಿ ನೆಲಸಿ ಅಹಿತಕರ ಘಟನೆಗಳು ಕಡಿಮೆಯಾಗುವುದು.

ಕಾರ್ಮಿಕರ ವೇತನ ಶ್ರೇಣಿ

ಕ್ರಮ ಸಂಖ್ಯೆ	ವಿಭಾಗ	ವೇತನ	
		ಗಂಡಸರು	ಹೆಂಗಸರು.
1.	ಕೃಷಿ ಕೂಲಿ	35-70	30
2.	ಬೀಡಿ	50	50
3.	ಮರದ ಕೆಲಸ	80	-
4.	ಕೆಂಪು ಕಲ್ಲು ಕೆಲಸ	100	-
5.	ಚಾಪೆ ಹೆಣೆಯುವುದು	75	75
6.	ಕೈಗಾರಿಕಾ ಉದ್ಯೋಗ	45	25
7.	ಕೈ ಮಗ್ಗ	30	25
8.	ಮುಟ್ಟಪಾಲೆ ಕಟ್ಟುವುದು	60	60

ಹಿಂದುಳಿಯಲು ಕಾರಣ

ನಮ್ಮ ಪಂಚಾಯತ್ ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿಯಲು ಹಲವು ಕಾರಣಗಳನ್ನು ಪಟ್ಟಿ ಮಾಡಬಹುದು.

1. ಆಸಕ್ತಿಯ ಕೊರತೆ
2. ಮೂಲ ಭೂತ ಸೌಲಭ್ಯಗಳ ಕೊರತೆ
3. ಮಾಹಿತಿ ಕೊರತೆ
4. ಬಂಡವಾಳದ ಕೊರತೆ
5. ಸರಕಾರಿ ಕೆಂಪು ಪಟ್ಟಿಯ ಕಿರುಕುಳ
6. ಮಾರುಕಟ್ಟೆ ಮಾಹಿತಿ/ವ್ಯವಸ್ಥೆಗಳ ಅಭಾವ
7. ಸರಕಾರಿ ಮತ್ತು ಹಣಕಾಸು ಸಂಸ್ಥೆಗಳ ಸಹಕಾರದ ಕೊರತೆ
8. ಅಗತ್ಯ ತರಬೇತಿ ಕೊರತೆ
9. ಕೈಗಾರಿಕಾ ಪ್ರೇರಣಾ ಕಾರ್ಯ ಕ್ರಮಗಳ ಕೊರತೆ
10. ಜನರ ಮಾನಸಿಕ ಸ್ಥಿತಿ - ಶ್ರಮ ತೆಗೆದುಕೊಳ್ಳುವ ಮನೋಭಾವವಿಲ್ಲದಿರುವುದು.
11. ತೀವ್ರ ವಿದ್ಯುತ್ ಕ್ಷಾಮ
12. ಸಾಮಾನ್ಯ ಪ್ರೋತ್ಸಾಹದ ಕೊರತೆ.

ಸಮಸ್ಯೆಗಳಿಗೆ ಪರಿಹಾರಗಳು

ಪಂಚಾಯತ್ ಕೈಗಾರಿಕಾವಾಗಿ ಹಿಂದುಳಿಯಲು ಕಾರಣವಾದ ಸಮಸ್ಯೆಗಳಿಗೆ ಕೆಲವು ಪರಿಹಾರೋಪಾಯಗಳನ್ನು ಪಟ್ಟಿ ಮಾಡಲಾಗುತ್ತದೆ. ಪರಿಹಾರ ನೆರವೇರುವಂತಾಗಲು ಸ್ಥಳೀಯ ಆಡಳಿತ ಜನ ಪ್ರತಿನಿಧಿಗಳು, ಉದ್ಯಮಿಗಳು, ಹಣಕಾಸು ಸಂಸ್ಥೆಗಳು, ಸೇವಾ ಸಂಘಟನೆಗಳು, ತಂತ್ರಜ್ಞರು ಮತ್ತು ಸರಕಾರದ ಸಂಭಂದ ಪಟ್ಟ ಇಲಾಖೆಗಳ ಸಹಕಾರ ಬೇಕು.

1. ಉದ್ಯಮ ಪ್ರೇರಣಾ ಕಾರ್ಯಕ್ರಮ. ಹಲವು ಸ್ಥಳಗಳಲ್ಲಿ ಸೆಮಿನಾರ್ ನಡೆಸುವುದು.

2. ಉದ್ಯಮ ಸಾಧ್ಯತೆಗಳ ಬಗ್ಗೆ ಅವಲೋಕನಾ ಸಭೆ:- ಸಾಧ್ಯವಾದರೆ ಆಳವಾದ ಅಧ್ಯಯನ.

3. ಇಂತಹ ಕಾರ್ಯಕ್ರಮಗಳಿಗೆ ವಿದ್ಯಾವಂತ ಉತ್ಸಾಹಿ ಯುವಕರು, ಮೂಲಭೂತ ಸೌಕರ್ಯ ಹೊಂದಿರುವವರು, ಉದ್ಯಮಿಗಳು, ವ್ಯಾಪಾರಿಗಳು, ಕಾಲೇಜು ವಿದ್ಯಾರ್ಥಿಗಳು, ಯುವ ಸಂಘಟನೆಗಳು ಭಾಗವಹಿಸುವಂತೆ ಸಾಕಷ್ಟು ಪ್ರಚಾರ ನೀಡುವುದು.

4. ತಾಂತ್ರಿಕ ಆಡಳಿತಾತ್ಮಕ ಮಾಹಿತಿ ನೀಡುವುದು.

5. ಪ್ರಾಜೆಕ್ಟ್ ವರದಿ ತಯಾರಿಗೆ ಸಹಾಯ.

6. ಮಾರುಕಟ್ಟೆ ಅಧ್ಯಯನಕ್ಕೆ ಸಹಕಾರ

7. ಹಣಕಾಸು ನೆರವಿಗೆ ಸಹಕಾರ

8. ಲೈಸನ್ಸ್ ರಾಜ್‌ನ ಸರಕಾರಿ ಬ್ಯುರೆಕ್ರೆಸಿಯ ಕಿರುಕುಳವನ್ನು ನೀಡದಿರುವುದು- ನಿಯಮಗಳನ್ನು ಸರಳ ಗೊಳಿಸುವುದು.

9. ತರಬೇತಿ ನೀಡಲು ವ್ಯವಸ್ಥೆ.

10. ಕೈಗಾರಿಕಾ ಪ್ರವಾಸಕ್ಕೆ ವ್ಯವಸ್ಥೆ.

11. ವಿವಿಧ ಹಣಕಾಸು ನೆರವಿನ ಬಗ್ಗೆ ಮಾಹಿತಿ.

ಯಾವ ರೀತಿಯ ಕೈಗಾರಿಕೆ ?

ಕಿರು ಕೈಗಾರಿಕೆಗಳು ಮಾತ್ರ ಪಂಚಾಯತ್‌ಗೆ ಸ್ವಾಗತಾರ್ಹ ಬಹು ರಾಷ್ಟ್ರೀಯ ಅಥವಾ ಹಿರಿಯ ಕೈಗಾರಿಕಾ ವರ್ತಿಗಳ ಬೃಹತ್ ಉದ್ದಿಮೆಗಳು ಇಲ್ಲಿಗೆ ಬೇಡವೇ ಬೇಡ. ಮಾತ್ರವಲ್ಲದೆ ಕೈಗಾರಿಕೆಗಳು ಪರಿಸರಕ್ಕೆ ಸಹಕಾರಿಯಾಗಿರಬೇಕು ಮತ್ತು ಪರಿಸರಕ್ಕೆ ಮಾಲಿನ್ಯಕಾರಕವಾಗಿರಬಾರದು.

ಪಂಚಾಯತ್‌ನ ಮಂದಿಗೆ ಉದ್ಯೋಗ ನೀಡುವುದಿದ್ದರೆ, ಹೊರನಾಡಿನ ಉದ್ಯಮಿಗಳಿಗೆ ಅವಕಾಶ ನಡಬಹುದು. ಆದರೆ ಪಂಚಾಯತ್‌ನ ಮಂದಿ ಸ್ಥಾಪಿಸಿದರೆ ಉತ್ತಮ.

ಸ್ಥಾವರ ಕೈಗಾರಿಕೆಗಳಲ್ಲದೆ ಹೊರ ಉತ್ಪಾದನಾ ಸಂಗ್ರಹ ಕೈಗಾರಿಕೆಗಳನ್ನು ಸ್ಥಾಪಿಸಲು ಪಂಚಾಯತ್‌ನಲ್ಲಿ ಹೆಚ್ಚಿನ ಅವಕಾಶಗಳಿವೆ. ಕಚ್ಚಾ ವಸ್ತುಗಳನ್ನು ಮನೆಗೆ ಕೊಂಡುಹೋಗಿ ಉತ್ಪಾದಿಸಿ ಒಂದು ಕೇಂದ್ರದಲ್ಲಿ ಸಂಗ್ರಹಿಸುವುದು ಉದಾಹರಣೆಗೆ ಬೀಡಿ ಸುತ್ತುವುದು, ಪ್ಯಾಕಿಂಗ್, ನೆಯ್ಗೆ, ಬೊಂಬೆ ತಯಾರಿ, ಬುಟ್ಟಿತಯಾರಿ ಹಪ್ಪಳ ಇತ್ಯಾದಿ.

ಪರಸ್ಪರ ಅವಲಂಬಿತ ಉದ್ದಿಮೆಗಳನ್ನು ಒಂದೆಡೆಯಲ್ಲಿ ಪರಾವಲಂಭಿಯಲ್ಲದೆ ಉದ್ದಿಮೆಗಳನ್ನು ಕಚ್ಚಾ ವಸ್ತು ಕಾರ್ಮಿಕರ ಸೌಲಭ್ಯಗಳುಸಾರ ಸ್ಥಾಪಿಸಬೇಕು.

ಕೈಗಾರಿಕಾ ಸ್ಥಾಪನೆ:- ಒಡೆತನದ ಸಂಸ್ಥೆಗಳು ಹೀಗಿರಬಹುದು

1. ಸಹಕಾರಿ ಸಂಘಟನೆ

2. ಸಾರ್ವಜನಿಕ ಕಂಪೆನಿ

3. ಪಾರ್ಟನರ್ ಶಿಪ್ ಫರ್ಮ್

4. ಹಿಂದೂ ಅವ್ಯಕ್ತ ಕುಟುಂಬ

5. ಸ್ವ -ಉದ್ಯೋಗ/ಏಕ ವ್ಯಕ್ತಿ ಸಂಸ್ಥೆ.

6. ಸ್ವ-ಉದ್ಯೋಗ ಅಥವಾ ಏಕ ವ್ಯಕ್ತಿ ಸಂಸ್ಥೆಗಳ ಸಮೂಹ.

ಸಹಕಾರಿ ಸಂಘಟನೆ ನಮ್ಮ ಪಂಚಾಯತ್‌ನಲ್ಲಿ ಇದುವರೆಗೆ ಯಶಸ್ವಿಯಾಗಿದ್ದು ಕೆಲವು ತನ್ನದೇ ಆದ ಲೋಪ ದೋಷಗಳನ್ನು ದೂರೀಕರಿಸಲು ಸಾಧ್ಯವಾದರೆ ಸಹಕಾರಿ ಸಂಘಟನೆಯಿಂದ ಇನ್ನೂ ಕೂಡ ಕೈಗಾರಿಕೆ ಸ್ಥಾಪನೆ ಸಾಧ್ಯ.

ವಿದ್ಯಾವಂತ ಯುವಕರು ಮತ್ತು ಸಿರಿವಂತರು ಸೇರಿ ಪಾಲುಗಾರಿಕೆ ಸಂಸ್ಥೆ ಸ್ಥಾಪಿಸಬಹುದು. ಸಣ್ಣ ಪ್ರಮಾಣದ ಸಾರ್ವಜನಿಕ ಸಂಸ್ಥೆ ಸ್ಥಾಪಿಸಿದರೆ ಬಂಡವಾಳ ಸಂಗ್ರಹ ಸುಲಭ ಸಾಧ್ಯವಾಗುತ್ತದೆ. ಇವೆರಡು ಸಂಸ್ಥೆಗಳ ಆಡಳಿತ ಚೆನ್ನಾಗಿರುತ್ತದೆ.

ಪೂರಕ ಸೌಕರ್ಯಗಳು:-

ಪಂಚಾಯತ್‌ನಲ್ಲಿ ಕೈಗಾರಿಕಾ ಪ್ರಗತಿಗಾಗಿ ಕೆಲವು ಪೂರಕ ಸೌಲಭ್ಯ ಹೊಂದುವುದು ಅಗತ್ಯ 1. ಕೈಗಾರಿಕಾ ಪ್ರೇರಣೆ, ಕೈಗಾರಿಕೆಗಳ ಪ್ರಗತಿ ಪರೀಕ್ಷಣೆ ಅಗತ್ಯ. ಸಹಾಯ ಇತ್ಯಾದಿ ಮುಖ್ಯ ಕಾರ್ಯ ಇದರ ಉದ್ದೇಶ.

2. ಉದ್ಯೋಗ ಎಕ್ಸ್‌ಚೆಂಜ್:- ಪಂಚಾಯತಿನಲ್ಲಿ ಒಂದು ಉದ್ಯೋಗ ನೊಂದಾವಣೆ ವ್ಯವಸ್ಥೆ. ಇದರಿಂದ ಪಂಚಾಯತ್ತಿನ ಮಾನವ ಸಂಪನ್ಮೂಲದ ಮಾಹಿತಿ.

3. ಸಾರ್ವಜನಿಕ ವ್ಯಾಪಾರ ಮಳಿಗೆ ರೂಪೀಕರಣ.

4. ಶಾಲೆ, ಸಂಘಟನೆಗಳ ಮೂಲಕ ಪ್ರೇರಣಾ ಕಾರ್ಯ.

5. ಉನ್ನತ ತರಬೇತಿಗೆ ವ್ಯವಸ್ಥೆ.

ಸಮಾಪ್ತಿ:-

ಪಂಚಾಯತ್‌ನಲ್ಲಿ ಕೈಗಾರಿಕೆಗಳ ಸ್ಥಾಪನೆ ವಿಫುಲ ಅವಕಾಶಗಳು ಮತ್ತು ಉತ್ಸಾಹಿ ಉದ್ಯಮಿಗಳ ಆಸಕ್ತಿಗಳ ಹೊರತಾಗಿಯೂ ಹೊಸ ಉದ್ದಿಮೆ ಸ್ಥಾಪನೆಗೆ ತೀರ್ವ ವಿದ್ಯುತ್ ಕ್ಷಾಮ. ಸರಕಾರಿ ವ್ಯವಸ್ಥೆಯ ಅಸಡ್ಡೆ ಕೆಂಪು ಪಟ್ಟಿ ತಡೆಯಾಗಬಹುದು. ಆದರೆ ಈ ಪಂಚ ವಾರ್ಷಿಕ ಯೋಜನೆಯಲ್ಲಿ 10 ಕೋಟಿ ಹೂಡಿಕೆ ನಿರೀಕ್ಷಿಸಲಾಗಿದೆ.

ನಮ್ಮ ಪಂಚಾಯತ್‌ನ ಪರಿಧಿಯಲ್ಲಿ ವಿವಿಧಮಯಗಳಲ್ಲಿ ದುಡಿಯುವ ಜನರ ಅಂಕಿ ಅಂಶ.

ಕ್ರಮ ಸಂಖ್ಯೆ	ವಿಭಾಗ	ಗಂಡಸರು	ಮಹಿಳೆಯರು	ಒಟ್ಟು	ಶೇಕಡವಾರು.
1.	ಕೃಷಿ ಕೂಲಿ ಕಾರ್ಮಿಕರು	8,000	4,035	12,035	49.8%
2.	ಸರಕಾರಿ/ಅರೆಸರಕಾರಿ ಉದ್ಯೋಗ	475	250	725	3%
3.	ಸಹಕಾರಿ ರಂಗ	20	250	270	1.2%
4.	ಕೈಗಾರಿಕೆ	182	60	242	1.%
5.	ವ್ಯಾಪಾರ	1,660	32	1,692	7%
6.	ಹೊರನಾಡಿನಲ್ಲಿ	1,300	149	1,449	6%
7.	ವಾಹನ	483	-	483	2%
8.	ನಿರುದ್ಯೋಗ	4,750	2,500	7,250	30%
9.	ಇತರ	108	85	193	0.8%
ಒಟ್ಟು	**9**	**16,978**	**7,361**	**24,339**	

ಪಂಚಾಯತ್‌ನಲ್ಲಿ ಈಗ ಇರುವ ಉದ್ದಿಮೆಗಳು ಮತ್ತು ಅದರಲ್ಲಿ ಕೆಲಸ ಮಾಡುವವರ ಸಾಧಾರಣ ಅಂಕೆ ಸಂಖ್ಯೆ.

ಕ್ರಮ ಸಂಖ್ಯೆ	ವಿಭಾಗ	ಗಂಡಸರು	ಮಹಿಳೆಯರು	ಒಟ್ಟು
1.	ಕಾರ್ಖಾನೆ	30	3	33
2.	ಸಿದ್ಧ- ಉಡುಪು	258	102	360
3.	ಮರದ ಪರ್ನಿಚರ್	10	-	10
	ಕೈಗಾರಿಕೆ	-	-	-
4.	ಇಂಜಿನಿಯರಿಂಗ್	25	-	25
5.	ಮೆಕಾನಿಕ್	25	1	26
6.	ಟೈಲರಿಂಗ್	250	100	350
7.	ಸಿದ್ಧ ಆಹಾರ	23	9	55

ಕಾರ್ಮಿಕರ ವೇತನ ಶ್ರೇಣಿ

ಕ್ರಮ ಸಂಖ್ಯೆ	ವಿಭಾಗ	ವೇತನ ಶ್ರೇಣಿ	
		ಗಂಡಸರು	ಹೆಂಗಸರು
1.	ಕೈ ಮಗ್ಗ	30.00	25.00
2.	ಬೀಡಿ	34.00	30.00
3.	ಮಡಿಕೆ	35.00	30.00
4.	ಆರ್ಯುವೇದ ಮದ್ದು	60.00	-
5.	ಕೆಂಪು ಕಲ್ಲು ಕಡಿಯುವವರು	100.00	-
6.	ಚಾಪೆ	45.	45.
7.	ಕೂಲಿ	30-75	25-30
8.	ಬುಟ್ಟಿ	10.00	8.00

ನಮ್ಮ ಪಂಚಾಯತ್‌ನಲ್ಲಿ ಕೃಷಿಯನ್ನು ಆದರಿಸಿ ನಡೆಸಬಹುದಾದ ಕೈಗಾರಿಕೆಗಳು:-

ಕ್ರಮ ಸಂಖ್ಯೆ	ಕಚ್ಚಾವಸ್ತುಗಳು	ಬಳಸಬಹುದಾದ ವಿಧಾನ
1*	ಅಡಿಕೆ	ಹಾಳೆಯಿಂದ ಉಪಕರಣಗಳ ತಯಾರಿ ಅಡಿಕೆಯಿಂದ ಗುಟಕಾ ಸಿಹಿ ಸುಪಾರಿ
2*	ತೆಂಗು	ಕಾಯಿಯಿಂದ ಆಹಾರ ಪದಾರ್ಥಗಳು ಗೆರಟೆಯಿಂದ ಕರಕುಶಲ ವಸ್ತುಗಳು, ಪಾತ್ರೆಗಳು, ತೆಂಗಿನ ನಾರಿನಿಂದ ಹುರಿ ಹಗ್ಗ ಕಾಲೂರಸುವ ಚಾಪೆ ಬ್ರೆತ್, ಬೆಂಡ್‌ಗೆ ಬೇಕಾದ ಮಿದು ವಸ್ತು, ಜೈವಿಕ ಗೊಬ್ಬರ.
3*	ಗೇರು ಬೀಜ	ಆಹಾರ ಸಾಮಗ್ರಿ, ಗೇರು ಬೀಜದ ಎಣ್ಣೆ, Cashew Pani,
4*	ಬಾಳೆ	ಚಿಪ್ಸ್, ಜಾಮ್, ಬೇಕರಿ ವಸ್ತುಗಳ ತಯಾರಿ
5*	ರಬ್ಬರ್	ಪ್ಲಾಸ್ಟಿಕ್ ಸಾಮಗ್ರಿಗಳು, ಪೈಪುಗಳು, ಟಯರುಗಳ ತಯಾರಿ ಕಾರ್ಖಾನೆಗಳನ್ನು ತೆರೆಯಬಹುದು.
6*	ಕೊಕ್ಕೋ	ಚಾಕಲೇಟ್ ತಯಾರಿ
7*	ಕಾಫಿ ಬೆಳೆ	ಕಾಫಿ ಹುಡಿ ಕಾರ್ಖಾನೆ

ಈ ಕೆಳಗಿನವುಗಳು ನಮ್ಮ ಪಂಚಾಯತ್‌ನ ಕಾಡುಗಳಲ್ಲಿ ದೊರೆಯುವ ಕಾಡುತ್ಪನ್ನಗಳು. ಸಾಧಾರಣವಾಗಿ ಅವುಗಳನ್ನು ಕೈಗಾರಿಕಾ ರಂಗದಲ್ಲಿ ತೊಡಗಿಸಬಹುದು.

ಕ್ರಮ ಸಂಖ್ಯೆ ಕಾಡುತ್ಪನ್ನಗಳು ಕೈಗಾರಿಕೆಗಳಲ್ಲಿ ಬಳಸಬಹುದಾದ ರೀತಿ

1. ಔಷಧೀಯ ಸಸ್ಯಗಳು ಮರಗಳಿಂದ ದೊರಕುವ ಕಾಯಿಗಳು, ಸಸ್ಯೆಗಳು. ಬೇರುಗಳು, ತೊಗಟೆಗಳನ್ನು ಸಂಗ್ರಹಿಸಿ ಅದರಲ್ಲಿ ಆರ್ಯುವೇದಿಕ ಔಷಧಿಗಳನ್ನು ಉತ್ಪಾದಿಸುವುದು.
2. ಮಾವು ಉಪ್ಪಿನ ಕಾಯಿ, ಹಣ್ಣಿನ ರಸ ಇತರ ಆಹಾರ ಪದಾರ್ಥಗಳ ತಯಾರಿ
3. ಸೀಗೆ, ನೊರೆಕಾಯಿ, ಸಬೂನು ತಯಾರಿ, ವಸ್ತುಗಳನ್ನು ಅದರಲ್ಲೆ ತೊಳೆಯುವುದು ಸಿಗೆಯಿಂದ ತಲೆ ಮೈ ಕೈಗಳನ್ನು ತೊಳೆಯಬಹುದು.
4. ನೆಲ್ಲಿ ಕಾಯಿ ಉಪ್ಪಿನ ಕಾಯಿ, ಆರ್ಯುವೇದಿಕ ಔಷಧಿಗಳನ್ನು ತಯಾರಿ.

   ಪುನಾರ್‌ಪುಳಿ ರಸದಿಂದ ಸಾಂಬಾರು ಪದಾರ್ಥಗಳ ತಯಾರಿ ಸಿಪ್ಪಿಯಿಂದ ರಸ ತಯಾರಿ, ಬೀಜದಿಂದ ಎಣ್ಣೆ ತಯಾರಿ.

   ಇತರ ಕಾಡು ಉತ್ಪನ್ನಗಳು ನಮ್ಮ ಪಂಚಾಯತ್‌ನಲ್ಲಿ ದೊರಕುವುದರಿಂದ ಇದರ ಬೇಡಿಕೆ ಕಡಿಮೆ, ಮತ್ತು ಇದಕ್ಕೆ ಯೋಗ್ಯ ಮಾರುಕಟ್ಟೆ ಇಲ್ಲದೆ ಇರುವುದರಿಂದ ಅದು ನಷ್ಟವಾಗುತ್ತವೆ. ಅದಕ್ಕಾಗಿ ಅವುಗಳಿಗೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು ಎಂದು ಗ್ರಾಮ ಸಭೆಯಲ್ಲಿ ಬಂದ ಪರದಿಗಳು ತಿಳಿಸುತ್ತದೆ.

ಸಾರಿಗೆ ಮತ್ತು ಚೈತನ್ಯ

ಒಂದು ಪ್ರದೇಶದ ಅಭಿವೃದ್ಧಿಯನ್ನು ಆ ಪ್ರದೇಶದ ಸಾರಿಗೆ ಸೌಕರ್ಯಗಳ ಮಾಧ್ಯಮದಿಂದ ಅಳೆಯ ಬಹುದು. ಮಾರ್ಗಗಳು ಕೈಗಾರಿಕಾಭಿವೃದ್ಧಿಯ ಪ್ರಧಾನ ಘಟಕಗಳಲ್ಲೊಂದಾಗಿದೆ. ಮಾತ್ರವಲ್ಲ ಸಾರಿಗೆ ಸೌಕರ್ಯಗಳು ಆ ಪ್ರದೇಶದ ಪುರೋಗತಿಯ ಸಂಕೇತಗಳಾಗಿವೆ. 21ನೇ ಶತಮಾನಕ್ಕೆ ಕಾಲಿಡುವ ಈ ಪರ್ವಕಾಲದಲ್ಲಿ ನಮ್ಮ ಹಾದಿ ಬೀದಿಗಳು ಚೆನ್ನಾಗಿದ್ದು, ಅಗಲವಾಗಿದ್ದು, ಸ್ವಚ್ಛವಾಗಿದ್ದು ಜನ ಸಂಚಾರ ಹಾಗೂ ವಾಹನ ಓಡಾಟಕ್ಕೆ ಸುಗಮವಾಗಿರಬೇಕು. ಆದರೆ ನಮ್ಮ ಮಾರ್ಗಗಳು. ಈ ವಿಚಾರದಲ್ಲಿ ಶೋಚನೀಯ ಪರಿಸ್ಥಿತಿಯಲ್ಲಿವೆ. ಆದುದರಿಂದ ಅವುಗಳ ಅಭಿವೃದ್ಧಿಗೆ ಬೇಕಾದ ಸೂಕ್ತ ಸಹಕಾರಿಯನ್ನು ಮುಂದಾಗಿ ನಿಯೋಜಿಸಿ, ಕಾರ್ಯಪ್ರವೃತ್ತವಾಗುವ ಸಂದರ್ಭ ಒದಗಿ ಬಂದಿದೆ.

ಎಣ್ಮಕಜೆ ಪಂಚಾಯತಿನ ಬಗ್ಗೆ ಪ್ರಸ್ತಾಪಿಸುವುದಾದರೆ, ಸುಲಭವಾಗಿ ಸಾರಿಗೆ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಇಲ್ಲಿನ ಭೂಪ್ರಕೃತಿ ಖಂಡಿತ ಸಹಕಾರಿಯಾಗಿಲ್ಲ. ಪಂಚಾಯತಿನ ಹೆಚ್ಚಿನ ಭಾಗಗಳೂ ಗುಡ್ಡಗಾಡು ಪ್ರದೇಶಗಳಿಂದಲೇ ಕೂಡಿಕೊಂಡಿವೆ. ಜನವಸತಿ ಎಲ್ಲಾ ಪ್ರದೇಶಗಳಲ್ಲೂ ವ್ಯಾಪಿಸಿಕೊಂಡಿರುವುದರಿಂದ ಅಲ್ಲೆಲ್ಲಾ ರಸ್ತೆ, ಕಾಲುದಾರಿ ಎಲ್ಲಾ ಅನಿವಾರ್ಯವೂ ಹೌದು. ಆದರೆ ಸುಗಮಗೊಳಿಸುವುದಕ್ಕೆ ಅವು ಸುಲಭ ಸಾಧ್ಯವಲ್ಲ. ಹಾಗೆಂದು ಅಸಾಧ್ಯವೂ ಅಲ್ಲ. ಶ್ರಮ ಅಧಿಕ ಬೇಕಾದೀತು ಅಷ್ಟೆ.

ಸಾರಿಗೆ ಕಿರು ಚರಿತ್ರೆ:-

ಶತಮಾನ ಪೂರ್ವದ ಸಾರಿಗೆ ವ್ಯವಸ್ಥೆಯ ಬಗ್ಗೆ ಸಿಂಹಾವಲೋಕನ ಗೈದಾಗ ಜನ ಜವನ ಮುಖ್ಯವಾಗಿ ಕಾಲ್ನಡಿಗೆಯಿಂದಲೇ ಸಾಗುತ್ತಿತ್ತು ಎಂದು ತಿಳಿದು ಬರುತ್ತದೆ ಆದರೆ ಅಲ್ಲಲ್ಲಿ ಬೆರಳೆಣಿಕೆಯುವಷ್ಟು ಎತ್ತಿನ ಗಾಡಿಗಳು ಬಳಕೆಯಲ್ಲಿದ್ದುವು. ದೂರದ ಮಂಗಳೂರಿನಲ್ಲಿ ಮಾತ್ರ ಮುಖ್ಯ ಮಾರು ಕಟ್ಟೆಯ ವ್ಯವಸ್ಥೆಯಿದ್ದು ಇಲ್ಲಿನ ಕೃಷಿ ಉತ್ಪನ್ನಗಳನ್ನು ವಿಕ್ರಯಿಸುವ ಕೇಂದ್ರ ಬಿಂದು ಆಗಿತ್ತು. ಇಲ್ಲಿನ ಗಾಡಿ ಮಾಲಿಕರು ಕೃಷಿ ಉತ್ಪನ್ನಗಳನ್ನು ಎತ್ತಿನ ಗಾಡಿಗಳ ಮೂಲಕ ಪಾಣೆ ಮಂಗಳೂರಿನ ತನಕ 40ರಿಂದ 50 ಗಾಡಿಗಳಲ್ಲಿ ಜೊತೆಯಾಗಿ ಕೊಂಡೊಯ್ದು ಅಲ್ಲಿಂದ ದೋಣಿಗಳ ಸಹಾಯದಿಂದ ಮಾರುಕಟ್ಟೆಗೆ ಒಯ್ಯುತ್ತಿದ್ದರು. ಬರುವಾಗ ಅದೇ ಗಾಡಿಗಳಲ್ಲಿ ಮೂಟೆಗಳನ್ನು ತರುತ್ತಿದ್ದರೆಂದು ಸೂಕ್ಷ್ಮ ಅಧ್ಯಯನದಿಂದ ತಿಳಿದು ಬರುತ್ತದೆ. ಅದರ ಕುರುಹಾಗಿ ಸಮತಲ ಪ್ರದೇಶಗಳಲ್ಲಿರುವ ಹಾಸು ಬಂಡೆಕಲ್ಲುಗಳ ಮೇಲೆ ಇಂದೂ ಕಣಿವೆಯಾ ಕೃತಿಯ ಚಕ್ರಹೋದ ಗುರುತುಗಳನ್ನು ಕಾಣಬಹುದು.

ತದನಂತರ ಬ್ರಿಟಿಷರು ತಮ್ಮ ಸೈನ್ಯವನ್ನು ಸಾಗಿಸುವುದಕ್ಕೋಸ್ಕರ ಮುಖ್ಯ ರಸ್ತೆಗಳನ್ನು ನಿರ್ಮಿಸಿ ಸಾರಿಗೆ ಅಭಿವೃದ್ಧಿಗೆ ನಾಂದಿ ಹಾಡಿದರು. ಅಂದಿನ ಸುಣ್ಣ, ಬೆಲ್ಲಗಳ ಮಿಶ್ರಣ ಉಪಯೋಗಿಸಿ, ಕಟ್ಟಲ್ಪಟ್ಟ ಕಗ್ಗಲ್ಲಿನ ಸೇತುವೆ ಕಂಬಗಳು ಇಂದಿಗೂ ಸುಸ್ಥಿತಿಯಲ್ಲೂ, ಸುದೃಢವಾಗಿಯೂ ಇದೆ.

ಉದಾಹರಣೆ:- ಪಳ್ಳತ್ತಡ್ಕ, ಅಡ್ಕಸ್ಥಳ ಸೇತುವೆಗಳು.

ಆರಂಭದಲ್ಲಿ ಕಲ್ಲಿದ್ದಲಿಂದ ಓಡುವಂಥ ಬಸ್ಸುಗಳೇ ಚಾಲ್ತಿಯಲ್ಲಿದ್ದುವು. ಆಸನ ವ್ಯವಸ್ಥೆಯಿಲ್ಲದ ವಾಹನಗಳು, ಸಾಧಾರಣ ಎತ್ತಿನಗಾಡಿಗಿಂತ ಸ್ವಲ್ಪ ಹೆಚ್ಚು ವೇಗದಿಂದ ಹೋಗುತ್ತಿದ್ದವು. ಆಶ್ಚರ್ಯವೆಂದರೆ ಆರಂಭಿಕ ಬಸ್ಸುಗಳು ರಸ್ತೆಗೆ ಇಳಿದಾಗ ಜನರು ಹೆದರಿ ಓಡಿ ಹೋಗುತ್ತಿದ್ದರು. ಸಂಕಷ್ಟಕ್ಕೊಳಗಾದ ಬಸ್ ಮಾಲಿಕರು ಮನೆ ಮನೆಗೆ ಹೋಗಿ ಬಸ್ಸಿನ ಬಗ್ಗೆ ವಿಷಯ ತಿಳಿಯಪಡಿಸಬೇಕಾದ ಪ್ರಮೇಯ ಬಂದಿತ್ತು.

ಕಾಲಾಂತರದಲ್ಲಿ ನಮ್ಮ ಊರಿಗೆ ಎರಡು ಬಸ್ಸುಗಳು ಮಾತ್ರ ಸಂಚಾರವನ್ನು ಆರಂಭಿಸಿದವು. ಆಗಿನ ಸಾರಿಗೆ ವ್ಯವಸ್ಥೆಯ ನಿಯಮಗಳು ಬಹಳ ಕಟ್ಟುನಿಟ್ಟಿನಿಂದ ಪಾಲಿಸಲ್ಪಡುತ್ತಿದ್ದುವು.

ಉದಾಹರಣೆ:- ಬಸ್ಸಿನ ಆಸನಗಳ ಸಾಮಥ್ಯಕ್ಕಿಂತ ಹೆಚ್ಚಿನ ಜನರನ್ನು ಕೊಂಡೊಯ್ಯುತ್ತಿರಲಿಲ್ಲ ಅನಿವಾರ್ಯತೆ ಬಂದರೆ ತಮ್ಮ ಪರಿಚಯದ ಜನ ಬಸ್ಸಿನಲ್ಲಿದ್ದಾರೋ ಎಂಬುದನ್ನು ಕಂಡು ಅವರನ್ನು ಇಳಿಸಿ ನಾವು ಕೂರಬೇಕಿತ್ತು. ಶೆಣೈ ಬಸ್ ಮತ್ತು ಮಹಾ ಲಕ್ಷ್ಮೀ ಬಸ್ಸುಗಳು ಈ ಪ್ರದೇಶದಲ್ಲಿ ಪ್ರಪ್ರಥಮವಾಗಿ ಬಂದ ಡೀಸೆಲ್ ಬಸ್ಸುಗಳು.

ಸಾಮಾಗ್ರಿ ಸರಂ ಜಾಮುಗಳನ್ನು ಈ ಪ್ರದೇಶಗಳಿಗೆ ಪ್ರಾರಂಭಿಕವಾಗಿ ಗಾಡಿಗಳ ಮೂಲಕ ಅನಂತರ ಅವರದ್ದೇ ಆದ ಲಾರಿಗಳ ಮೂಲಕ ಅಂಗಡಿಗಳಿಗೆ ಮತ್ತು ಮನೆಗಳಿಗೆ ನೇರವಾಗಿ ತಲುಪಿಸುವ ವ್ಯವಸ್ಥೆಯನ್ನು ಪಾಣೆ ಮಂಗಳರು ಪೇಟೆಯಲ್ಲಿರುವ ಬೃಹತ್ ವ್ಯಾಪಾರೋದ್ಯಮ ಶ್ರೀ ಕೇಶವ ಕುದ್ವ ಮತ್ತು ಕಂಪೆನಿಯವರು ನಿರ್ವಹಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಈ ಪ್ರದೇಶದ ವ್ಯಾಪಾರ ವಹಿವಾಟುಗಳು ಬಜಕೂಡ್ಲು ಮತ್ತು ಕೂರಿಪ್ಪುಡೆಯಲ್ಲಿದ್ದುವು. ಆ ಕಾಲದ ರೇಶನ್ ಅಂಗಡಿಗಳೂ ಅಲ್ಲಿದ್ದುವು. ಪೆರ್ಲದ ಅಂಚೆಕಛೇರಿ ಕೂರಿಪ್ಪುಡೆಯಲ್ಲಿತ್ತು. ಕಿಣಿಯರ ಹೋಟೇಲು ಇಲ್ಲಿಯ ವೈಶಿಷ್ಟ್ಯ.

ಉಪ್ಪಳ ಬಾಬಬ್ಯಾರಿಯವರು ಬಜಕೂಡ್ಲಿಗೆ ಬಂದು ವ್ಯಾಪಾರ ತೊಡಗಿದರು. ಅವರ ಮಗ ಶ್ರೀ ಅಹಮ್ಮದ್ ಕುಂಞ ಬ್ಯಾರಿ ಮತ್ತು ಮೊಮ್ಮಕ್ಕಳಲ್ಲಿ ಹಿರಿಯರಾದ ಮಮ್ಮುಂಞ ಬ್ಯಾರಿಯವರು ಮತ್ತು ಸೋದರರ ವ್ಯಾಪಾರ ಪ್ರಸಿದ್ಧವಾಗಿತ್ತು.

ಕಾಲಕ್ರಮೇಣ ಸಾರಿಗೆ ವ್ಯವಸ್ಥೆ ಸುಧಾರಿಸುತ್ತಾ ವಾಹನ ಉತ್ಪಾದನೆ ವಿವಿಧ ವಿನ್ಯಾಸಗಳಲ್ಲಿ ಬರತೊಡಗಿ ಸಂಚಾರಕ್ಕಾಗಿ ಜನರಿಗೆ ಹೆಚ್ಚಿನ ಅನುಕೂಲಗಳು ಲಭ್ಯವಾಗತೊಡಗಿತು. ಆದರೂ ಗ್ರಾಮೀಣ ಮಟ್ಟದಲ್ಲಿ ಇತ್ತೀಚೆಗಷ್ಟೇ ಪ್ರಗತಿ ಸಾಧಿಸಲ್ಪಡುತ್ತದೆ.

ಎಣ್ಮಕಜೆ ಗ್ರಾಮ ಪಂಚಾಯತಿನ ಒಟ್ಟು ವಿಸ್ತೀರ್ಣ 78.23 sq. km. ಇದು ನಾಲ್ಕು ಗ್ರಾಮಗಳಾಗಿ ವಿಂಗಡಿಸಲ್ಪಟ್ಟಿದೆ. ಅವುಗಳೆಂದರೆ,

1. ಎಣ್ಮಕಜೆ
2. ಮೈರೆ
3. ಪಡ್ರೆ
4. ಕಾಟುಕುಕ್ಕೆ

ಗ್ರಾಮದ ರಸ್ತೆಗಳ ಕುರಿತಾದ ವಿವರ [1995-96ರ ಪ್ರಕಾರ]

ಕಚ್ಚಾ ರಸ್ತೆ	ಪಕ್ಕಾ ರಸ್ತೆ	ಮೆಟಲ್ ರಸ್ತೆ	ಪಂಚಾಯತ್ ರಸ್ತೆ	P.W.D. ರಸ್ತೆ	N.H. ರಸ್ತೆ	ಒಟ್ಟು
14.746 km.	119.578 km.	38 km.	117.324 km.	38 km.	-	210.32 km.

ಅಲ್ಲದೆ ಹಲವಾರು ಕಿಲೋ ಮೀಟರ್‌ಗಳಷ್ಟು ಉದ್ದದ ಇತರ ರಸ್ತೆಗಳು ಇದೆ ಊರಿನವರು ಕೆಲವೆಡೆ ಶ್ರಮ ದಾನದಿಂದ ಹೊಸ ರಸ್ತೆ ನಿರ್ಮಿಸಿದ ದಾಖಲೆ ಈ ಗ್ರಾಮದಲ್ಲಿದೆ. ಉದಾಹರಣೆ:- ಪೆರ್ಲ- ಗುಂಡ್ಯಡ್ಕ ಬದಿಯಿಂದ ಅಪ್ಪಯಮೂಲೆ ಎಂಬಲ್ಲಿ ವರೇಗೆ ಸಾಮಾನ್ಯ 800 ಮೀಟರ್ ಉದ್ದದ ಪಂಚಾಯತ್ ರಸ್ತೆ ಮೊದಲೇ ಇತ್ತು. ಅಲ್ಲಿಂದ ಮುಂದೆ ಸ್ವರ್ಗದ ವರೇಗೆ ಕಾಲ್ದಾರಿ ಮಾತ್ರವಿದ್ದು ಮನೆಗಳಿಗೆ ಸಾಮಾನುಗಳನ್ನು ಹೊತ್ತುಕೊಂಡೇ ಹೋಗಬೇಕಾದ ಕಷ್ಟಕರ ಪರಿಸ್ಥಿತಿ ಒದಗಿತ್ತು. ಗುಡ್ಡಗಾಡು ಪ್ರದೇಶಗಳಿಂದ ತುಂಬಿರುವ ಪರ್ತಾಜೆ ಬದಿ-ಕನ್ಯಾರ ಮೂಲೆ ಇತ್ಯಾದಿ ಸ್ಥಳಗಳಿಗೆ ಹೋಗುವುದಕ್ಕೆ ರಸ್ತೆಯ ವ್ಯವಸ್ಥೆಬೇಕೆಂದು ಮನಗಂಡ ಸ್ಥಳೀಯ ಸಾರ್ವಜನಿಕರು ಅಪ್ಪಯ ಮೂಲೆವರೆಗಿರುವ ಈ ಪಂಚಾಯತ್ ರಸ್ತೆಯನ್ನು ಯಾವುದೇ ಪ್ರತಿಫಲ ಅಪೇಕ್ಷಿಸದೆ ಶ್ರಮದಾನದಿಂದಲೇ ಪರ್ತಾಜೆ- ಕನ್ಯಾರ ಮೂಲೆ ದಾರಿಯಾಗಿ ಸ್ವರ್ಗಕ್ಕೆ ತಲಪಿಸುವಲ್ಲಿ ಯಶಸ್ವಿಯಾದರು. ಕಡಿದಾದ ಈ ಗುಡ್ಡ ಪ್ರದೇಶಗಳಲ್ಲಿ ರಸ್ತೆಯನ್ನು ನಿರ್ಮಿಸುವುದಕ್ಕೆ ಆರ್ಥಿಕ ಲೆಕ್ಕಾಚಾರ ಹಿಡಿಯುವುದಾದರೆ 10 ಲಕ್ಷಕ್ಕೂ ಮಿಕ್ಕಿದ ಹಣ ವ್ಯಯವಾದೀತು. ಇದನ್ನು ಪ್ರತಿಫಲಾಪೇಕ್ಷಿಸದೆ ನಿರ್ವಹಿಸಿದ ಸ್ಥಳೀಯ ಸಾರ್ವಜನಿಕರು ನಿಜವಾಗಿಯೂ ಪ್ರಶಂಸಾರ್ಹರು. ಪೆರ್ಲ-ಕನ್ನಟಿಕಾನ ದಾರಿಯಾಗಿ ಸ್ವರ್ಗಕ್ಕೆ 6 km. ಇದ್ದರೆ ಈ ಹೊಸ ರಸ್ತೆಯಲ್ಲಿ ಸ್ವರ್ಗ ತಲುಪಲು ಕೇವಲ 5 km. ಅಲ್ಲದೆ ಸ್ವರ್ಗದಿಂದ ಪೆರಿಕ್ಕಾನ ಎಂಬಲ್ಲಿ ವರೇಗೆ ಸಾಧಾರಣ 2 km. ಉದ್ದದ ರಸ್ತೆಯನ್ನು ಸ್ಥಳೀಯರೇ ಶ್ರಮದಾನದಿಂದ ನಿರ್ಮಿಸಿರುತ್ತಾರೆ.

1996ರ ರಾಜ್ಯೋತ್ಸವದ ಅಂಗವಾಗಿ ನಿರ್ವಹಿಸಲ್ಪಟ್ಟ ಪುನರರ್ಪಣ ಕಾರ್ಯಕ್ರಮದಲ್ಲಿ ಪಂಚಾಯತ್ ಮಟ್ಟದಲ್ಲಿ ಪೌರರು ಅತ್ಯುತ್ಸಾಹದಿಂದ ಪಾಲ್ಗೊಂಡಿರುವುದು ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಆರಂಭಗೊಂಡ ಕೆಲಸಗಳ ವಿವರ ಹೀಗಿದೆ.

ವಾರ್ಡ್ ನಂ.	**ಸ್ಥಳಗಳ ಹೆಸರು.**
I	ಕೊಂಬರ ಬೆಟ್ಟುನಿಂದ ಬಾಬಲಿಮೂಲೆ ವರೇಗೆ ರಸ್ತೆ
II	ಪರ್ತಾಜೆಯಿಂದ ಕನ್ಯಾರ ಮೂಲೆವರೆಗಿನ ರಸ್ತೆ (ಸೂರ್ಡೇಲು)
III	ಪೆಲ್ತಾಜೆಯಿಂದ ಅಂಬಟೆಮೂಟೆವರೆಗಿನ ರಸ್ತೆ
V	ಪರ್ತಾಜೆಯಿಂದ ಪೆರಿಕ್ಕಾನ ವರೆಗಿನ ರಸ್ತೆ
VII	ಮಣೆಯಂಪಾರೆಯಿಂದ ಚಿತ್ರಾಜ್ ವರೆಗಿನ ರಸ್ತೆ.
XI	ಸರ್ಪಂಗಳದಿಂದ ಪರಪ್ಪಕರಿಯ ವರೆಗಿನ ರಸ್ತೆ

ಪಂಚಾಯತ್ ವತಿಯಿಂದ 1995 - 96ರಲ್ಲಿ ಸಾರಿಗೆ ವ್ಯವಸ್ಥೆಗೆ ಸಂಬಂಧಿಸಿದಂತೆ ಕಾಮಗಾರಿ ಕೆಲಸಗಳ ವಿವರಗಳು ಈ ಕೆಳಗಿನಂತಿವೆ:-

ಕೆಲಸದ ಸ್ವಭಾವ	ಎಸ್ಟಿಮೇಟ್ ಮೊತ್ತ	ಯಥಾರ್ಥ ಖರ್ಚು		
		ಗ್ರಾಂಟ್	ಪಂಚಾಯತ್ ಫಂಡ್	ಒಟ್ಟು
	Rs.	Rs.	Rs.	Rs.
ರಸ್ತೆ	1,53,027 = 00	52,521=00	49,497=00	1,02,018=00
ಕಾಲುಸಂಕ	Rs.	Rs.	Rs.	Rs.
	65,000=00	-	51,182=00	51,182=00
ಇತರ	Rs.	Rs.	Rs.	Rs.
	25,000=00	-	22,881=00	22,881=00
ಒಟ್ಟು	Rs.	Rs.	Rs.	Rs.
	2,43,027=00	52,521=00	1,76,081=00	1,76,081=00

ಪಂಚಾಯತ್ ರಾಜ್ ಕಾಯ್ದೆಯನ್ವಯ 1995 - 96ರಲ್ಲಿ P.W.D. ಇಲಾಖೆಯಿಂದ ದೊರಕಿದೆ ಹಣಕಾಸು ವಿವರ:-

P.W.D.	Rs. 4,30,750=00

ಇದಲ್ಲದೇ ಅಪ್ಪಯ ಮೂಲೆ ಎಂಬಲ್ಲಿ ಮೊದಲಿದ್ದ ಕಾಲು ಸಂಕವನ್ನು ಮುರಿದು ವಾಹನ ಸಂಚಾರ ಯೋಗ್ಯವಾದ ಸೇತುವೆಯನ್ನು ನಿರ್ಮಿಸಲಾಗಿದೆ. ಇದೇ ಮಾದರಿಯ ಸೇತುವೆ ಕೂಟೀಲು ಎಂಬಲ್ಲಿಯೂ ನಿರ್ಮಿಸಲ್ಪಟ್ಟಿದೆ.

ಸಮಸ್ಯೆಗಳು:-

1. ಗುಡ್ಡಗಾಡು ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಸಂಪೂರ್ಣವಾಗಿ ಇನ್ನೂ ತಲುಪಿಲ್ಲ.
2. ಕೆಲವು ಕಡೆ ಮಾರ್ಗಗಳಿದ್ದರೂ, ಮಳೆ ಗಾಲದಲ್ಲಿ ಮುಚ್ಚಲ್ಪಟ್ಟು ನಿಷ್ಪ್ರಯೋಜಕವಾಗುತ್ತಿದೆ.
3. ರಸ್ತೆಗಳು ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಏರ್ಪಟ್ಟಿದ್ದರೂ ಅವು ಅಗಲಕಿರಿದಾಗಿ ಮತ್ತು ಏರು ಸ್ವಭಾವದವುಗಳಾಗಿದ್ದು ಕೇವಲ ಲಘು ವಾಹನಗಳ ಸಂಚಾರಕ್ಕೆ ಸೀಮಿತವಾಗಿವೆ.
4. ಅವ್ಯವಸ್ಥಿತ ರಸ್ತೆ ಚರಂಡಿಗಳು,
5. ಸೂಕ್ತ ಪ್ರದೇಶಗಳಲ್ಲಿ ಮುಖ್ಯವಾಗಿ ಶಾಲಾಪರಿಸರದಲ್ಲಿ ವೇಗ ತಡೆಗಳನ್ನು ನಿರ್ಮಿಸದೆ ಅಪಘಾತಗಳ ಸಂಭವವಾಗುತ್ತದೆ.
6. Hair - Pin ತಿರುವಿನಂತಹ ರಸ್ತೆಗಳಿಂದಾಗಿ ವಾಹನ ಸಂಚಾರಕ್ಕೆ ಅಡಚಣೆ.
7. ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸು ತಂಗುದಾಣಗಳ ಕೊರತೆ
8. ಕಳಪೆಮಟ್ಟದ ಡಾಮರೀಕರಣ.
9. ರಸ್ತೆಗಳಿಗೂ ಬದಿಯ ಕಟ್ಟಡಗಳಿಗೂ ಇರುವ ಕಡಿಮೆ ಅಂತರದಿಂದಾಗಿ ಅಪಘಾತಕ್ಕೆ ಆಹ್ವಾನ.
10. ರಸ್ತೆ ಬಗೆಗಿನ ಸೂಚನಾ ಫಲಕಗಳ ಕೊರತೆ.
11. ರಸ್ತೆಗಳ ಇಕ್ಕೆಲಗಳಲ್ಲಿ ಕಾಲ್ವಾರಿಗಳ ಕೊರತೆ.

ಮೇಲೆ ತಿಳಿಸಿರುವ ಎಲ್ಲಾ ಸಮಸ್ಯೆಗಳೂ ಪಂಚಾಯತಿನ ಪ್ರತೀ ವಾರ್ಡಿನಲ್ಲಿಯೂ ಕಂಡು ಬರುವವುಗಳಾಗಿವೆ. ಇವುಗಳನ್ನು ಸುಧಾರಿಸಲು ಕೆಲವು ಸಾಧ್ಯತೆಗಳನ್ನು ಕೆಳಗೆ ನಮೂದಿಸಲಾಗಿದೆ.

ಸಾಧ್ಯತೆಗಳು:-

ಅಗಲ ಕಿರಿದಾದ ರಸ್ತೆಗಳನ್ನು ಅಗಲ ಗೊಳಿಸುವುದು, ತಿರುವುಗಳ ಸರಿಪಡಿಸುವಿಕೆ, ಫುಟ್‌ಪಾತ್‌ಗಳ ನವೀಕರಣ, ಹೊಸ ರಸ್ತೆಗಳ ರಚನೆ, ಸೇತುವೆ, ಕಾಲ್ಸಂಕ ರಚನೆ, ವೇಗ ತಡೆ, ಸೂಚನಾಫಲಕ ಇತ್ಯಾದಿಗಳ ಅಳವಡಿಕೆ, ಏರು ಪ್ರದೇಶಗಳ ರಸ್ತೆಗಳನ್ನು ಸಾಕಷ್ಟು ಮಟ್ಟಿಗೆ ಕಾಮಗಾರಿ ಮೂಲಕ ಸರಿಪಡಿಸಿ ಡಾಮರೀಕರಣ, ಕಳಪೆ ಕಾಮಗಾರಿ ನಡೆಸುವ ಇಂಜಿನಿಯರ್ ಮತ್ತು Contractorಗಳ ಮೇಲೆ ನಿಗಾ ಇಟ್ಟು ಕಾನೂನು ಕ್ರಮ ಕೈಗೊಳ್ಳುವಿಕೆ, ರಸ್ತೆಗಳ ಅತೀ ಸಮೀಪವಿರುವ ಕಟ್ಟಡಗಳ ನಿರ್ಮೂಲನೆ, ಸೂಕ್ತ ಪ್ರದೇಶಗಳಲ್ಲಿ ಬಸ್ಸು ತಂಗುದಾಣಗಳ ನಿರ್ಮಾಣ ಇತ್ಯಾದಿ ಇತ್ಯಾದಿಗಳನ್ನು ಕೂಡಲೇ ನೆರವೇರಿಸಬೇಕು.

ಅತ್ಯಾವಶ್ಯಕವಾದ ಇತರ ಕಾಮಗಾರಿಗಳು:-

ಹೊಸ ರಸ್ತೆಗಳು:-

1. ಅಡ್ಕ ಸ್ಥಳದಿಂದ - ಪಾಂಡಿಗಯಕ್ಕಾಗಿ ಮೂಡಂಬೈಲು.

2. ನೇರೊಳಿನಿಂದ - ನೇರೊಳು ಗಡಿ ತನಕ.

3.ಬೇಂಗ ಪದವು - ಪೂವನಡ್ಕ - ಧೂಮವತಿ ಸ್ಥಾನ.

4. ಬೇಂಗ ಪದವು -ಸೇರಾಜೆ.

5. ಪೆಲ್ತಾಜೆಯಿಂದ ಕೊಲ್ಲಪದವಿನ ತನಕ.

6. ಕೆಜಕ್ಕಾರು : ಮ್ಯಾಲೆಂಗಿಯಿಂದಾಗಿ, ಕುದುಕೋಳಿ.

7. ಮಿತ್ತೂರು - ಪರ್ತಾಜೆಯಿಂದಾಗಿ ಪೆರ್ಲಕ್ಕೆ.

8. ಪಿಲಿಂಗಲ್ಲು - ನೀರ್ಚಾಲು, ಮಿತ್ತೂರಿಗಾಗಿ, ಪೆರ್ಲಕ್ಕೆ.

9. ಕುಕ್ಕಾಜೆ ಕಾಲಿನಿಯಿಂದ - ಬೈಲಮೂಲೆ, ದೊಂಪತ್ತಡ್ಕ - ಏತಡ್ಕಕ್ಕೆ.

10. ಬಾಡೂರು - ಪಳ್ಳದಿಂದಾಗಿ - ದೋಣಿ ಕಡವಿನವರೆಗೆ.

11. ಚೇರ್ಕಬ್ - ಪುತ್ರಕಳ.

12. ಬಳಕಿನಡ್ಕದಿಂದ - ಕಾರೆ ಕೊರಗ ಕಾಲಿನಿ

13. ಚೇವದಿಂದ - ಓಣಿ ಬಾಗಿಲು - ಪಾಯತ್ತಡ್ಕದ ವರೇಗೆ

14. ಮುಂಡುಕೂಡೇಲು - ಕಜಂಪಾಡಿ.

15. ಪೆರ್ಲತ್ತಡ್ಕ - ಅರೆಕ್ಕಾಡಿಗಾಗಿ - ಕುರಿಯತ್ತಡ್ಕ.

16. ಕೊಲ್ಯ - ಕುರಿಯ ತ್ತಡ್ಕ.

17. ಚಾಕಟೆ - ಬಳ್ಳ - ಕಟೀಲ್ತಡ್ಕ.

18. ಖಂಡೇರಿ - ಕೊಂದಲ್ಕಾನ.

19. ದಾರೆಕೋಡಿ -ನಾಟೆಕಲ್ಲಿಗಾಗಿ - ಖಂಡಿಗೆಗೆ.

20. ಪಾದೆಕಲ್ಲು -ದಾರೆಕೋಡಿ -ಪೆಲ್ತಾಜೆ.

21. ಪಳ್ಳ- ಶೇಡಿಮೂಲೆ.

22. ಎಳ್ಳು ಕುಮೇರಿಯಿಂದ - ಪರ್ವತ ಗುಡ್ಡೆಯ ವರೇಗೆ.

23. ಅರಿಪ್ಪಾದೆಯಿಂದ - ನೂಜಿಲದವರೆಗೆ.

24. ಪಾಂಡಿಗಯದಿಂದ - ಕಟೀಲಿನ ವರೆಗೆ

25. ಅಡ್ಕ ಸ್ಥಳದಿಂದ - ಪೈಸಾರಿ - ಕಿಟ್ಟಿ ಕುಮೇರಿ ನಲ್ಕದ ವರೆಗೆ.

26. ಬಜಕೂಡ್ಲು - ನಡುಬೈಲು.

27. ಗೋಳಿಕಟ್ಟೆ - ಎಡಮಲೆ -ಬದಿಯಾರು.

28. ಪಡ್ಪು -ಕೊಡೆಂಕಿರಿ.

29. ಸ್ವರ್ಗ - ಜಟಾಧಾರಿ ದೈವಸ್ಥಾನ - ದುಗ್ಗಜ್ಜ ಮೂಲೆ

30. ಮೊಳಕ್ಕಾಲು - ಪಂಬತ್ತಡ್ಕ.

31. ಮಂಜಕೊಟ್ಟಿಗೆ - ದೋಣಿಕಡವು.

2. ಡಾಮರೀಕರಣ ಅಗತ್ಯವಿದ್ದ ರಸ್ತೆಗಳು:-

1. ಅಡ್ಯನಡ್ಕ - ಕೂರ್ಲಿಗಯ -ಬಾಕಿಲ ಪದವು -ಎರುಗಲ್ಲು -ಪಿಲಿಗುಡ್ಡೆ.

2. ಅಡ್ಕಸ್ಥಳ - ಪಾಂಡಿಗಯ

3. ಅಡ್ಯನಡ್ಕ - ಸಾಯ.

4. ನೆಗಳಗುಳಿ - ಕೊಂಬರಬೆಟ್ಟು.

5. ಗೋಳಿತ್ತಡ್ಕ - ದೇವಲೋಕ -ಕೊಂಕಣಿ ಶಾಲೆ - ವರ್ಮುಡಿ.

6. ಗುಂಡಿಯಡ್ಕ -ಕೆಜಕಾರು.

7. ಗುಂಡಿಯಡ್ಕ - ಪರ್ತಾಜೆ.

8. ಪಾಪಿತಡ್ಕ - ನೇರೊಳು.

9. ಎಣ್ಮಕಜೆ S.C.S.T. - ಕಾಲನಿ - ಕುರಡ್ಕ-ಸೋಮಾಜೆ - ಸೇರಾಜೆ.

10. ಉಕ್ಕಿನಡ್ಕ - ಸರ್ಪಂಗಳ.

11. ಮಣಿಯಂಪಾರೆ - ಅರೆಮಂಗಿಲ.

12. ಬೆದ್ರಂಪಳ್ಳ - ಬಜಕೂಡ್ಲು - ಪಳ್ಳಕ್ಕಾನ.

13. ಪೆರ್ಲತ್ತಡ್ಕ - ಪಾದೇಕರಿಯ - ಗುಂಡಿಯಡ್ಕ

14. ಕುತ್ತಡ್ಕ - ಮೂಡಾಯಿಬೈಲು

15. ಗೋಳಿಕಟ್ಟೆ - ಪಂಬತ್ತಡ್ಕ.

16. ಮೊಳಕ್ಕಾಲು - ಪಂಬತ್ತಡ್ಕ- ವಾಣೀನಗರ.

17. ಗಾಳಿಗೋಪುರದಿಂದ -ಜಟಾಧಾರಿ ದೈವಸ್ಥಾನಕ್ಕೆ.

18. ಕನ್ಯಾರ ಮೂಲೆ - ಪರ್ತಾಜೆ - ಬದಿದೈವಸ್ಥಾನ.

19. ಪರ್ತಾಜೆ - ಪೆರಿಕ್ಕಾನ - ಸ್ವರ್ಗ.

20. ಪೆರಿಯಲ್ತಡ್ಕ - ಪೊಯ್ಯೆ.

21. ಅಪ್ಪಯಮೂಲೆ -ಪರ್ತಾಜೆ - ಕನ್ಯಾರ ಮೂಲೆ

22. ಕುಂಡಾಪು -ಕೊಚ್ಚಿ

23. ಕೋಟೆ -ಸರ್ಪಮೂಲೆ- ಮುಂಡುಕೂಡೇಲು

24. ಕೋಲು ಪುಣೆ - ಕಜಂಪಾಡಿ -ಚೇರ್ಕಬೆ.

25. ವಾಣೀನಗರ - ಕೊಲ್ಲಮಜಲು

26. ವಾಣೀನಗರ -ಇಳಂತೋಡಿ - ಜವಣಿಗುಡ್ಡೆ.

27. ಕನ್ನಟಿ ಕಾನ - ಕುದ್ವ - ಶೆಟ್ಟಿಬೈಲು.

28. ಸ್ವರ್ಗ - ಪಡ್ಪೆಯಿಪಾಡಿ.

29. ಸ್ವರ್ಗ - ಕನ್ಯಾರ ಮೂಲೆ.

30. ಬಳತ್ತಕಲ್ಲು - ಕುಕ್ಕಿಲ - ಕೆ.ಕೆ. ಕಾಡು.

31. ಎಳ್ಳಕುಮೇರಿ -ಉರ್ಮಿ.

32. ಪಟ್ಲದಳ - ಕೊಳಕೆ ಬಳ್ಳಿ

33. ಬಾಡೂರು - ಪರ್ಪಳ್ಳ - ಕರೋಡಿ.

34. ಓಣಿ ಬಾಗಿಲು -ಗಾರೆ - ಮುಂಡಿತ್ತಡ್ಕ - ಪೊಯಕ್ಕರೆ.

35. ಮಣಿಯಂಪಾರೆ - ಶೇರಾಮೇ - S.C. ರೋಡ್ - ಕುದುರೆಡ್ಕ.

36. ಬನ್ಪುತಡ್ಕ - ಬಂಗ್ಲೆ.

37. ಬನ್ಪುತಡ್ಕ -ಪರಪ್ಪೆ.

38. ಉಪ್ಪೊಳಿಗೆ -ಉರ್ಮಿ.

39. ಕುಕ್ಕಿಲ - ಗೋಳಿತ್ತಡ್ಕ - ಶೇಣಿ.

40. ತಿಂಗಳ ಪದವು -ಮರ್ಮುಡಿ.

41. ಪೆರ್ಲತ್ಕಡ್ಕ -ಅರೆಕ್ಕಾಡಿ.

42. ಕುರಿಯತ್ತಡ್ಕ -ಚಾಕಟೆ.

43. ಬಳ್ಳ - ಕಟೀಲ್ತಡ್ಕ.

44. ಖಂಡೇರಿ - ಕೊಂದಲ್ಕಾನ

45. ಅರೆಕ್ಕಾಡಿ -ಕುರಿಯತ್ತಡ್ಕ

46. ಅಡ್ಕಸ್ಥಳ - ಒಡ್ಯ.

47. ಒಡ್ಯ - ಗುಡ್ಡೆ.

48. ಚಾಕಟೆ - ಬಲ್ಲ.

49. ವಾಟೆ- ಖಂಡೇರಿ.

50. ಮುಂಗ್ಲಿಕಾನ -ಕುರಿಯತ್ತಡ್ಕ.

51. ಹೂ ಹಾಕುವ ಕಲ್ಲು - ಖಂಡಿಗೆ.

52. ವರ್ಮುಡಿ - ಖಂಡಿಗೆ S.C. ಕಾಲನಿ

53. ಬೇಂಗಪದವು -ಖಂಡಿಗೆ

54. ಕುರಿಯಡ್ಕ - ಸೋಮಾಜೆ.

55. ಬಜಕೂಡ್ಲು - ನಡುಬೈಲು.

56. ಪಲ್ಲಕಾನ - ಬಜಕೂಡ್ಲು - ಬೇಂಗಪದವು.

57. ಮುಂಡಿತ್ತಡ್ಕ - ಮೈರೆ

58. ಬಣ್ಪುತ್ತಡ್ಕ - ಏಳ್ಕಾನ.

59. ಪಳ್ಳ -ನೂಜಿಲ.

60. ಕೊಡ್ಯಾಲ ಮೂಲೆ - ನಾಗಬನ

61. ಕುಂದಡ್ಕ - ಪೊಸಡ್ಕ

62. R.S.S. Ground - ಪಳ್ಳಕ್ಕಾನ.

63. ಗೋಳಿತ್ತಡ್ಕ - ಮೈಲೆಂಗಿ, ಪಾದೆಕರಿಯ.

64. ಏಳ್ಕಾನ - ಗುಣಾಜೆ.

3. ಸೇತುವೆ ಮತ್ತು ಕಾಲುಸಂಕಗಳು:

1. ಮುಳಿಯಾಲದಲ್ಲಿ ಕಾಲುಸಂಕ.

2. ನಲ್ಕ - ಪಿಲಿಗುಡ್ಡೆ ಮಾರ್ಗಕ್ಕೆ ಬಾಕಿಲ ಪದವಿನಲ್ಲಿ ಸೇತುವೆ.

3. ನೇರೊಳು - ಗಡಿಯಲ್ಲಿ ತೂಗು ಸೇತುವೆ.

4.ಗುಂಡಿಯಡ್ಕ ಪರ್ತಾಜೆ ಮಾರ್ಗಕ್ಕೆ ಮೋರಿ ಸಂಕ.

5. ಉಕ್ಕಿನಡ್ಕ - ಬೆದ್ರಂಪಳ್ಳ ಮಾರ್ಗಕ್ಕೆ ಕಾನ ಎಂಬಲ್ಲಿ ಕಾಲುಸಂಕ.

6. ಅರೆಮಂಗಿಲ ತೋಡಿಗೆ ಕಾಲು ಸಂಕ.

7. ಪೆರ್ಲತ್ತಡ್ಕ -ಗುಂಡಿಯಡ್ಕ ಮಾರ್ಗಕ್ಕೆ ಪಾದೆಕರಿಯ ಎಂಬಲ್ಲಿ ಅಣೆಕಟ್ಟು ಮತ್ತು ಸೇತುವೆ (Dam Cum Bridge)

8. ಬಜಕುರೆ- ಮಿತ್ತೂರು ಮಾರ್ಗಕ್ಕೆ ಗುತ್ತು ಎಂಬಲ್ಲಿ ಅಣೆಕಟ್ಟು ಮತ್ತು ಸೇತುವೆ (Dam Cum Bridge)

9. ಪೂಕರೆಯಲ್ಲಿ ತೋಡಿಗೆ ಕಾಲು ಸಂಕ.

10. ದೇವಸ್ಥಾನದಿಂದ ಕುದುಕೋಳಿಗೆ ಹೋಗುವ ಕಾಲುದಾರಿಗೆ ಕೂವೆಯಲ್ಲಿ ಕಾಲು ಸಂಕ.

11. ವಾಣಿ ನಗರ - ಕುತ್ತಾಜೆ - ದೊಂಪತ್ತಡ್ಕ ಮಾರ್ಗ ಕುತ್ತಾಜೆ ಎಂಬಲ್ಲಿ ಸೇತುವೆ.

12. ವಾಣಿನಗರದಿಂದ ಬೆಳೇರಿಗೆ ಹೋಗುವ ಕಾಲು ದಾರಿಗೆ ಮುದಲೆಗುಂಡಿಯಲ್ಲಿ ಕಾಲು ಸಂಕ.

13. ಕುಂಡಾಪು ಕೊಚ್ಚಿ - ಸಾಲೆತ್ತಡ್ಕ ಮಾರ್ಗಕ್ಕೆ ಸಾಂತ್ಯಾಡಿ ಎಂಬಲ್ಲಿ ಕಾಲು ಸಂಕ.

14. ವಾಣೀ ನಗರ - ಇಳಂತೋಡಿ -ಜವಣಿಗುಡ್ಡೆ ರಸ್ತೆಗೆ ಇಳಂತೋಡಿಯಲ್ಲಿ ಸೇತುವೆ.

15. ಓಣಿಬಾಗಿಲು ಮುಂಡಿತ್ತಡ್ಕ ರಸ್ತೆಯ ಮಧ್ಯದಲ್ಲಿ ಸೇತುವೆ.

16. ಉರ್ಮಿಯಲ್ಲಿ ತೋಡಿಗೆ ಸಂಕ ನಿರ್ಮಾಣ.

17. ಕೊಳಕೆಬಲ್ಲಿ - ಬನ್ಪುತ್ತಡ್ಕಕ್ಕೆ ಹೋಗುವ ಮಾರ್ಗಕ್ಕೆ ಬಳತಕಲ್ಲು ಎಂಬಲ್ಲಿ ಸೇತುವೆ.

18. ಮುಂಡಿತ್ತಡ್ಕದಿಂದ ಅರಿಪ್ಪಾದೆ ಹೋಗುವ ದಾರಿಯಲ್ಲಿ ಅರಿಪ್ಪಾದೆಯೆಂಬಲ್ಲಿ ಕಾಲು ಸಂಕ.

19. ಪೆರ್ಲತ್ತಡ್ಕ -ಅರೆಕ್ಕಾಡಿ ಮಾರ್ಗದಲ್ಲಿ ಎರಡು ಕಡೆಯಲ್ಲಿ ಕಾಲು ಸಂಕ.

20. ಖಂಡೇರಿಯಲ್ಲಿ ಒಂದು ಮೋರಿ ಸಂಕ.

21. ಅರೆಕ್ಕಾಡಿ - ಕುರಿಯತ್ತಡ್ಕದಲ್ಲಿ Dam cum Bridge.

22. ಖಂಡೇರಿ ತೋಡಿಗೆ ಒಂದು ಕಾಲು ಸಂಕ.

23. ಬಜಕೂಡ್ಲಿನಲ್ಲಿ ಒಂದು ಕಾಲು ಸಂಕ.

24. ಏಳ್ಕಾನದಿಂದ ಗುಣಾಜೆಯಾಗಿ ಹೋಗುವ ದಾರಿಗೆ ಗುಣಾಜೆಯಲ್ಲಿ ಒಂದು ಕಾಲು ಸಂಕ.

25. ಪಿಲಿಗುಡ್ಡೆಯಿಂದ ಖಂಡಿಗೆಗೆ ಹೋಗುವ ಕಾಲು ದಾರಿಗೆ ಮರ್ಮುಡಿಯಲ್ಲಿ ಕಾಲು ಸಂಕ.

26. ನಡುಬೈಲು ಬಾಜಿನಡಿಯಲ್ಲಿ ಒಂದು ಕಾಲು ಸಂಕ.

27. ಮುಂಡಿತ್ತಡ್ಕದಿಂದ ಬಾಡೂರುಪದವಿಗೆ ಹೋಗುವ ದಾರಿಯಲ್ಲಿ ದೋಣಿ ಕಡವು ಎಂಬಲ್ಲಿ ಒಂದು ತೂಗು ಸೇತುವೆ. ಮತ್ತು ಏಳ್ಕಾನ ಹೊಳೆಗೆ ತೂಗು ಸೇತುವೆ ಮತ್ತು ಸಂಕ.

28. ಕೈಕಂಬದಿಂದ ಕುದ್ವಕ್ಕೆ ಹೋಗುವ ರಸ್ತೆಗೆ ಸಂಕ.

29. ಕುದ್ವದಿಂದ ಸರ್ಪಂಗಳಕ್ಕೆ ಹೋಗುವ ತೋಡಿಗೆ ಅಮೆಕ್ಕಳದಲ್ಲಿ ಒಂದು ಕಾಲು ಸಂಕ.

30. ಪರ್ಪಕರಿಯದಲ್ಲಿ ತೋಡಿಗೆ ಒಂದು ಕಾಲು ಸಂಕ.

31. ಬೆದ್ರಂಪಳ್ಳದಿಂದ ಬಳ್ತಕಲ್ಲು - ಕುರೋವುಕಲ್ಲಿಗೆ ಹೋಗುವ ಮಾರ್ಗದಲ್ಲಿ ಒಳತಕಲ್ಲಿನಲ್ಲಿ ಎರಡು, ಬಂಗ್ಲೆ ಎಂಬಲ್ಲಿ ಎರಡು ಮೋರಿ ಸಂಕ.

32. ಬದಿಯಾರಿನಲ್ಲಿ ಒಂದು ಕಾಲು ಸಂಕ.

33. ಜಟಾಧಾರಿ ಮಾರ್ಗಕ್ಕೆ ಸೇತುವೆ.

34. ಸ್ವರ್ಗ - ಪೆರಿಕ್ಕಾನ ಮಾರ್ಗಕ್ಕೆ ಸ್ವರ್ಗದಲ್ಲಿ ಸೇತುವೆ.

35. ಮೊಳಕ್ಕಾಲು - ಮಾರ್ಗಕ್ಕೆ ಸೇತುವೆ.

36. ಪೊಯ್ಯೆ ಎಂಬಲ್ಲಿ ಮಾರ್ಗಕ್ಕೆ ಸೇತುವೆ.

37. ಪೊಯ್ಯೆ (ಸಾಕಿಜಲ) ಯಲ್ಲಿ ಒಂದು ಕಾಲು ಸಂಕ.

38. ಎಡಮಲೆ ಬದಿಯಲ್ಲಿ ಕಾಲು ಸಂಕ.

39. ಕೊಲ್ಲ ಮಜಲು, ಸಾಲೆತ್ತಡ್ಕ, ಕೊಚ್ಚಿ ಕಾಲುದಾರಿಗೆ ಸಾಲೆತ್ತಡ್ಕ, ಎಂಬಲ್ಲಿ ಎರಡು ಕಾಲು ಸಂಕ.

4. ಹೊಸ ಕಾಲುದಾರಿ ನಿರ್ಮಾಣ ಮತ್ತು ಇದ್ದ ದಾರಿಗಳ ದುರಸ್ತಿ:-

1. ಚವರ್ಕಾಡು ಮಂಜಿನಡ್ಕದವರೆಗೆ ತೋಡಿಗೆ ಸೈಡುಕಟ್ಟಿ ಕಾಲುದಾರಿ ನಿರ್ಮಾಣ.

2. ಮುದಲೆಗುಂಡಿ - ಮುಂಡೋಳಿಮೂಲೆ- ಖೆಳೇರಿಗೆ ಕಾಲುದಾರಿ ರಚನೆ.

3. ದಾಸ್ರಿಕ್ಕು -ಬಂಕಾನ ರಸ್ತೆಯಿಂದ ಬೇಂಗಪದವಿಗೆ ಕಾಲು ದಾರಿ.

4. ಕುತ್ತಾಜೆ - ಇಳಂತೋಡಿ - ಗಿರಿಪುರಕ್ಕೆ ಕಾಲುದಾರಿ ರಚನೆ.

5. ನೆಲ್ಲಿಕುಂಜೆ ಸರ್ಪಮೂಲೆ ದಾರಿಯ ದುರಸ್ತಿ.

6. ಕುದುಕೋಳಿಯಿಂದ ದೇವಸ್ಥಾನಕ್ಕೆ ಹೋಗುವ ಕಾಲುದಾರಿಯ ದುರಸ್ತಿ.

7. ಅಡ್ಕಸ್ಥಳದಿಂದ ಪಾಂಡಿಗಯಕ್ಕೆ ಕಾಲುದಾರಿ ರಚನೆ.

8. ಅಡ್ಯನಡ್ಕದಿಂದ ಸಾಯಕ್ಕೆ ಕಾಲುದಾರಿ ದುರಸ್ತಿ.

9. ಪಂಬತ್ತಡ್ಕ - ಏತಡ್ಕಕ್ಕೆ ಹೋಗುವ ಕಾಲುದಾರಿ ರಚನೆ.

10. ಪೊಯ್ಯೆ -ವಾಣಿನಗರ ಕಾಲುದಾರಿ ದುರಸ್ತಿ.

11. ಎಡಮಲೆ - ಜಟಧಾರಿ ದೇವಸ್ಥಾನ - ಪಡ್ರೆಬದಿ - ಕನ್ನಟಿಕಾನಕ್ಕೆ ಹೋಗುವ ಕಾಲುದಾರಿಯ ದುರಸ್ತಿ.

12. ಬಜಕೂಡ್ಲು -ಖಂಡಿಗೆ ಕಾಲುದಾರಿ ದುರಸ್ತಿ.

13. ಶೇಣಿ -ಕೊಡಿಪ್ಪಾಡಿ - ಬಳಲ್ಪಿತ್ತಡ್ಕಕ್ಕೆ ಹೋಗುವ ಕಾಲು ದಾರಿ ದುರಸ್ತಿ.

14. ಕೊಂಬರಬೆಟ್ಟಿನಿಂದ ಸಾಯಕ್ಕೆ ಹೋಗುವ ಕಾಲುದಾರಿ ದುರಸ್ತಿ.

15. ಕುರೆಡ್ಕ- ಖಂಡಿಗೆ ಕಾಲುದಾರಿ ದುರಸ್ತಿ.

16. ಖಂಡಿಗೆ - ವರ್ಮಡಿ- ಪಿಲಿಗುಡ್ಡೆ - ಕಾಲುದಾರಿ ದುರಸ್ತಿ.

17. ಬಜಕೂಡ್ಲು ದೇವಸ್ಥಾನದಿಂದ ತಿಂಗಳ ಪದವಿಗೆ ಸಂಪರ್ಕ ಕಲ್ಪಿಸಲು ಹೊಸ ಕಾಲು ದಾರಿ ರಚನೆ.

18. ಓಣಿಬಾಗಿಲು - ಪೊಯ್ಯೆಕೆರೆ - ಬೊಳ್ಳಿನಡ್ಕ - ಮರಾಠಿಗುರಿ - ದರ್ಬೆಡ್ಕ ಮಣಿಯಂಪಾರೆ ಕಾಲುದಾರಿ ರಿಪೇರಿ.

19. ಪಟ್ಟದಲ, ಬಲ್ತಕಲ್ಲು, ಕೋಡಂದೂರು, ಮಲ್ಪುತ್ತಡ್ಕ ಶೇಣಿ - ತೋಟದ ಮನೆ. ಈ ಸ್ಥಳಗಳಲ್ಲಿಯ ಕಾಲುದಾರಿ ದುರಸ್ಥಿ.

20. ಸಾಂತ ಪದವಿನಿಂದ ಮುಳಿಯೊಲಿನವರೇಗೆ ಕಾಲುದಾರಿ ದುರಸ್ತಿ.

21. ಸೈಪಂಗಲ್ಲು P.W.D. ಮಾರ್ಗ ಬದಿ ದೈವಸ್ಥಾನಕ್ಕೆ ಇರುವ ಕಾಲುದಾರಿ ದುರಸ್ತಿ.

22. ಕನ್ನಟಿಕಾನದಿಂದ ಅಪ್ಪಯ ಮೂಲೆಗೆ ಹೋಗುವ ಕಾಲುದಾರಿ ದುರಸ್ತಿ.

23. ಬಜಕೂಡ್ಲು ಬೆದ್ರಂಪಳ್ಳ ಕಾಲುದಾರಿ ದುರಸ್ತಿ.

24. ಬಜಕೂಡ್ಲೂ ಶ್ರೀ ದುರ್ಗಾಪರಮೇಶ್ವರಿ ಭಜನಾ ಮಂದಿರದ ಸಮಿಪದಿಂದ ನಡು ಬೈಲಿನ ವರೆಗೆ ಕಾಲುದಾರಿ ದುರಸ್ತಿ.

ಬಜಕೂಡ್ಲು ಮಿನಿಸ್ಟೇಡಿಯಂನಿಂದ ರೇಶನ್ ಅಂಗಡಿಯವರೆಗೆ ಹೊಸ ಕಾಲುದಾರಿ ರಚನೆ.

25. ಮಣಿಯಂ ಪಾರೆ - ಉರ್ಮಿ - ಕೋಡ್ಯಾಲಮೂಲೆ - ಏಳ್ಯಾನ - ಮೊದಲಾದ ಕಾಲುದಾರಿಗಳನ್ನು ಸರಿಪಡಿಸುವುದು.

26. ಸೂರ್ದೇಲು, ನೀರ್ಚಾಲು, ಪಿಲಿಂಗಲ್ಲು ಕಾಲು ದಾರಿಯ ದುರಸ್ತಿ.

ಈ ಮೇಲಿನ ಮಾರ್ಗಗಳನ್ನು ಪಂಚಾಯತ್ ಮಾರ್ಗವನ್ನಾಗಿ ಪರಿವರ್ತಿಸಿ 8 ಮಿಟರ್ ಅಗಲ ಮಾಡಿ 6 ಮಿಟರ್ ಮಾರ್ಗವೂ ಇಕ್ಕೆಡೆಗಳಲ್ಲಿ ಒಂದೊಂದು ಮೀಟರ್ ನೀರಿನ ಚರಂಡಿಯ ವ್ಯವಸ್ಥೆ ಮಾಡಿ ಡಾಮರೀಕರಣಗೊಳಿಸಿದರೆ ಸಂಚಾರ ವ್ಯವಸ್ಥೆ ಸುಗಮ.

ಇಷ್ಟು ಮಾತ್ರವಲ್ಲದೆ ಪಂಚಾಯತಿಗೊಂದು Four Wheel Jeep ವ್ಯವಸ್ಥೆ ಆಗಲೇ ಬೇಕು. ಗುಡ್ಡ ಗಾಡು ಪ್ರದೇಶವಾದುದರಿಂದ Four wheel jeep ವಾಹನ ವ್ಯವಸ್ಥೆಯಿಂದ Field Work ಮಾಡಿ ಕಾಮಗಾರಿಗಳ ಅವಲೋಕನಕ್ಕೆ ಸಹಾಯಕವಾಗುವುದು, ಮಾತ್ರವಲ್ಲದೆ ಹೆಚ್ಚಿನ ಕಾಮಗಾರಿ ಸಾಧ್ಯ.

ಚೈತನ್ಯ

ಚೈತನ್ಯವೆಂದಾಕ್ಷಣ ನಮ್ಮ ಸುತ್ತುಮುತ್ತಲಿನ ಚೈತನ್ಯದ ಮೂಲಗಳೇ ಗೋಚರಿಸುತ್ತವೆ. ಉದಾಹರಣೆಗೆ:- ಹಿಂದಿನ ಕಾಲದಲ್ಲಿ ಕಲ್ಲಿದ್ದಲು ಮತ್ತು ಕಟ್ಟಿಗೆಯೇ ಚೈತನ್ಯದ ಮೂಲವಾಗಿದ್ದುವು. ಬುದ್ಧಿಜೀವಿಯಾದ ಮಾನವನು ಜೀವನ ಪಥದಲ್ಲಿ ವಿಕಾಸ ಹೊಂದುತ್ತಲೇ ಚೈತನ್ಯದ ಅವಶ್ಯಕತೆ ಹೆಚ್ಚಾಗ ತೊಡಗಿತು. ತನ್ನ ಹೆಚ್ಚಿನ ಕಾರ್ಯಗಳನ್ನು ನಡೆಸಿಕೊಳ್ಳುವುದಕ್ಕೆ ಮನುಷ್ಯ ಕಂಡುಕೊಂಡ ಮುಖ್ಯ ಚೈತನ್ಯ ವಿದ್ಯುತ್.

ಎಣ್ಮಕಜೆ ಪಂಚಾಯತ್ ಮಟ್ಟದಲ್ಲಿ ನೋಡಿದಾಗ ಇಲ್ಲಿನ ಅವಶ್ಯಕತೆಗಳಿಗೆ ಅನುಗುಣವಾಗಿ ಬೇಕಾಗುವಷ್ಟು ವಿದ್ಯುತ್ ದೊರೆಯುತ್ತಿಲ್ಲ. ಕೃಷಿ ಭೂಮಿಯಿಂದಲೇ ಕೂಡಿರುವ ಈ ಪಂಚಾಯತಿಗೆ ಬೇಕಾಗುವ ಚೈತನ್ಯದಲ್ಲಿ ಬಹುಭಾಗವೂ ಮೋಟಾರ್ ಪಂಪ್‌ಸೆಟ್‌ಗಳಿಗೆ ಬೇಕಾಗುವುದು. ಇದರ ಕೊರತೆಯೇ ಇಂದು ಮುಖ್ಯವಾಗಿ ಕಾಡುತ್ತಿದೆ. ಅಲ್ಲದೆ ವೋಲ್ಟೇಜ್ ಸಮಸ್ಯೇ ಸಂಪೂರ್ಣ ವಿದ್ಯುತ್ ನಿಲುಗಡೆ ಇತ್ಯಾದಿಗಳು.

ಎಣ್ಮಕಜೆ ಪಂಚಾಯತಿಗೆ ವಿದ್ಯುತ್ತಿಗೆ ಸಂಬಂಧಪಟ್ಟ ವಿವರಗಳು

1.	ಈಗಿರುವ ಫಲಾನುಭವಿಗಳು:	a) ಗೃಹ - 1248 b) ವ್ಯಾಪಾರ - 210 c) ಕೈಗಾರಿಕೆ - 22 d) ಕೃಷಿ - 838
2.	ಸಂಪರ್ಕ ನೀಡಲು ಬಾಕಿ ಇರುವ ಅರ್ಜಿದಾರರ ಸಂಖ್ಯೆ	a) Ordinary 450 b) OTP 50 c) OYEC 25
	ಕೊನೆಗೆ ನೀಡಿದ ಸಂಪರ್ಕದ ಅರ್ಜಿ ದಿನಾಂಕ	19.11.1996
3.	ಬೀದಿ ದೀಪಗಳ ಸಂಖ್ಯೆ :	a) ಬಲ್ಬು - 25w, 40w, 60w, 100w - 50 b) ಟ್ಯೂಬ್‌ಗಳು - 3 c) ಮರ್ಕುರಿವೇಪರ್ - d) ಸೋಡಿಯಂ ವೇಪರ್ - 3
4.	ವಿದ್ಯುತ್ ಸಂಪರ್ಕ ನೀಡಲಾದ ಹರಿಜನ ಕಾಲನಿಗಳು	Saya, Balemode, Kajanpady, Kuttaje, Kodenkery.
5.	ಈ ವರ್ಷ ನೀಡಲಾದ ವಿದ್ಯುತ್ ಸಂಪರ್ಕ	Ordinary - 11 O.T.P - 9 OYFC - 100
6.	ಬೀದಿ ದೀಪಕ್ಕಾಗಿ ಪ್ರತಿ ತಿಂಗಳು ತರಬೇಕಾದ ಹಣದ ಮೊತ್ತ	Rs. 1,186=00
7.	ಪಂಚಾಯತ್ ಪರಿಧಿಯಲ್ಲಿ ವಿದ್ಯುತ್ ವಿತರಿಸುವ ಎ.ಟಿ. ಟ್ರಾನ್ಸ್‌ಫೋರ್ಮರ್‌ಗಳು	1. Saya 2. Adkasthala I 3. Adkasthala II 4. Katukukke I 5. Katukukke II 6. Katukukke III 7. Santhapad vu. 8. Nalka 9. Varmudy 10. Perla I 11. Perla II

12. Kota
13. Swarga.
14. Vaninagar
15. Kurudapadave.
16. Ukkinadka
17. Bedrampalla
18. Sarpangala
19. Yelkana.

ಎಣ್ಮಕಜೆ ಗ್ರಾಮ ಪಂಚಾಯತ್ ಹರಿಜನ ಕಾಲನಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾದ ಕುರಿತು ಮಾಹಿತಿಗಳು.

ವಾರ್ಡ್ ನಂಬ್ರ	ಹರಿಜನ ಕಾಲನಿಯ ಹೆಸರು	ವಿದ್ಯುತ್ ಸಂಪರ್ಕ ದೊರೆತ ಕುಟುಂಬಗಳ ಸಂಖ್ಯೆ	ಉಚಿತ ಸ್ಥಾಬಿನಲ್ಲಿ ನೀಡಲಾದ ವಿದ್ಯುತ್ ಸಂಪರ್ಕಗಳು (ಸಂಖ್ಯೆ)	ಹಣತೆತ್ತು ವಿದ್ಯುತ್ ಸಂಪರ್ಕ ಪಡೆದ ಕುಟುಂಬಗಳ ಸಂಖ್ಯೆ.
1	2	3	4	5
I	Saya	20 Nos	10	10
VI	Kajampady	15 Nos	15	-
VIII	Balemoole	40	40	-
V	Kodenkiri	15	-	15
VI	Kutthaje	10	10	-

ಸಾಧ್ಯತೆಗಳು:-

1. ಪ್ರತೀ ಶಾಲೆಗಳಿಗೆ ವಿದ್ಯುತ್ ಸೌಲಭ್ಯ
2. ಪಂಚಾಯತ್ ಮಟ್ಟದಲ್ಲಿ ಸೋಲಾರ್ ಸ್ಥಾವರ ಸ್ಥಾಪನೆ.
3. ವಿದ್ಯುತ್ ಬಿಲ್ಲುಗಳನ್ನು ಮತ್ತು ದೂರುಗಳನ್ನು ಪಂಚಾಯತ್‌ಗಳಲ್ಲೇ ತೆಗೆದುಕೊಳ್ಳುವ ವ್ಯವಸ್ಥೆ.
4. S.C ಮತ್ತು S.T. ಎಲ್ಲಾ ಕಾಲೊನಿಗಳಿಗೆ ಶೀಘ್ರ ವಿದ್ಯುತ್ ವ್ಯವಸ್ಥೆ.
5. ಮಾಯಿಲಕೋಟೆ, ಪುತ್ರಕಳ ಇತ್ಯಾದಿ ಎತ್ತರ ಪ್ರದೇಶಗಳಲ್ಲಿ ಗಾಳಿಯಂತ್ರಗಳಿಂದ ವಿದ್ಯುತ್ ಉತ್ಪಾದಿಸಿ ವಿದ್ಯುತ್ ಕೊರತೆ ನೀಗಿಸಬಹುದು.
6. 5 ವರ್ಷಗಳಲ್ಲಿ ಇಡೀ ಪಂಚಾಯತಿಗೆ ವಿದ್ಯುತ್ತೀಕರಣ.
7. ವಿದ್ಯುತ್ ಸೌಕರ್ಯ ಒದಗಿಸುವಲ್ಲಿ ಖಾಸಗಿಯವರಿಂದ ಬರುವ ವೈಯಕ್ತಿಕ ಅಡೆತಡೆಗಳನ್ನು ನಿವಾರಿಸಲು ಸರಕಾರದ ನೇರ ಹಸ್ತಕ್ಷೇಪ.
8. ಬಯೋಗೇಸ್, Solar ಮುಂತಾದ ಚೈತನ್ಯ ಉತ್ಪಾದನಾ ಯಂತ್ರವನ್ನು ಜನರಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಸಿಗುವಂತೆ ಮಾಡುವುದು.
9. ಸೌರವಿದ್ಯುತ್ತನ್ನು ಪಂಚಾಯತ್ ಮುಖಾಂತರ ನೀಡುವ ವ್ಯವಸ್ಥೆ.
10. ಅಡುಗೆ ಅನಿಲ Agency, ಅಸ್ಪಬಲೆ, ಮುಂತಾದುವುಗಳಿಗೆ ಪಂಚಾಯತ್ ಮಟ್ಟದಲ್ಲಿ agency ಮಂಜೂರು.
11. Mini Hydro Projectನ್ನು ವಿಸ್ತರಿಸುವುದು.

ಉಪಸಂಹಾರ:

ವಿವಿಧ ರೀತಿಯ ಚೈತನ್ಯ ಮೂಲಗಳನ್ನು ಶೋಧಿಸಿ ಪ್ರಾದೇಶಿಕವಾಗಿ ಸುಪ್ತವಾಗಿಯೂ, ಗುಪ್ತವಾಗಿಯೂ ಇರುವ ಚೈತನ್ಯದ ಮೂಲಗಳನ್ನು ಸಮುಪಯೋಗಪಡಿಸಿಕೊಂಡು ಸತ್ಕಾರ್ಯಗಳಿಗೆ ಸೂಕ್ತರೀತಿಯಲ್ಲಿ ಬಳಸುವುದರ ಮೂಲಕ ಚೈತನ್ಯದ ಕೊರತೆಯನ್ನು ನೀಗಿ ಸ್ವಾವಲಂಬೀ ಮತ್ತು ಸ್ವಾಭಿಮಾನೀ ಗಾಂಧೀಜಿಯವರ ಕನಸು ನನಸಾಗುವುದು ನಿಶ್ಚಿತ. ಇದಲ್ಲವಾದರೆ ಸುಪ್ತವಾಗಿರುವ ಚೈತನ್ಯಗಳು ಅಲ್ಲೇ ನಶಿಸಿ ಪ್ರಕೃತಿ ವಿಕೃತಿಗೊಳ್ಳುವುದು. ಸಹಜ ಚೈತನ್ಯದಾಗರಗಳನ್ನು ಸದುಪಯೋಗಪಡಿಸಿಕೊಂಡು ಶಕ್ತಿಯ ಕ್ರೋಢೀಕರಣ ನಡೆದಾಗಲೇ ಪ್ರಜಾಸತ್ತೆ, ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರುವುದಕ್ಕೆ ಸಾಧ್ಯ.

ವಸತಿ ಮತ್ತು ಸಾಮಾಜಿಕ ಕ್ಷೇಮ

ವಸತಿಯ ಬಗ್ಗೆ ಸಂಪೂರ್ಣ ಚರಿತ್ರೆ ಖಂಡಿತವಾಗಿಯೂ ದುರ್ಲಭ. ಯಾಕೆಂದರೆ ಪ್ರಾಪಂಚಿಕವಾದ ಇತಿಹಾಸ ಕಣ್ಣು ಬಿಡುವುದಕ್ಕೆ ಮುಂಚೆನೇ ವಸತಿ ಅನ್ನೋದು ಹುಟ್ಟಿರುತ್ತದೆ. ವಸತಿ ಅಂದ್ರೆ ಕೇವಲ ಮನೆ, ಕಟ್ಟಡ ಎಂದು ವ್ಯಾಖ್ಯಾನಿಸಲ್ಪಡದೇ ಜನವಸತಿ ಅನ್ನುವ ಅರ್ಥ ಕೊಡುತ್ತದೆ.

78.23 ಚ. ಕಿ. ಮಿ ವಿಸ್ತೀರ್ಣಕ್ಕೆ ವ್ಯಾಪಿಸಿರುವ ಎಣ್ಮಕಜೆ ಪಂಚಾಯತ್‌ನಲ್ಲಿ 24,166ಕ್ಕೂ ಅಧಿಕ ಜನಸಂಖ್ಯೆ ಇದೆ. ಜನಸಂಖ್ಯಾ ಮಾನದಂಡವನ್ನೇ ಇಟ್ಟು ಅಳೆದಾಗ ಇಲ್ಲಿನ ವಸತಿ ಸೌಕರ್ಯ ಕಡಿಮೆಯಾಯಿತೆಂದೇ ತೋರುತ್ತದೆ.

ಒಟ್ಟು ಜನಸಂಖ್ಯೆ - 24,166
ಗಂಡು - 12,305
ಹೆಣ್ಣು - 11,861
ಒಟ್ಟು ಮನೆಗಳ ಸಂಖ್ಯೆ - 6,316
SC - 400
ST - 1,400
ಇತರ - 4,516

ಈ ಪಂಚಾಯತ್‌ನಲ್ಲಿ 6,316ಕ್ಕೂ ಅಧಿಕ ಮನೆಗಳಿದ್ದರೂ ಎಲ್ಲವೂ ಸುಸ್ಥಿತಿಯಲ್ಲಿ ಇವೆಯೆಂದು ಖಂಡಿತಾ ಭಾವಿಸಬಾರದು. ಇವುಗಳಲ್ಲಿ ಸೋಗೆ ಮಾಡಿನ ಮನೆಗಳು, ಮುಳಿ ಹಾಸಿದ ಮನೆಗಳು, ಅಲ್ಲದೆ ಕೇವಲ ಮನೆ ನಂಬ್ರ ಹಾಕಲ್ಪಟ್ಟ ಮಾತ್ರಕ್ಕೆ, ಮನೆ ಎಂದು ಕರೆಯಲ್ಪಡುವ ನಾಲ್ಕು ಕಂಬಗಳ ಮೇಲೆ ನಿಂತಿರುವ ಮುರುಕು ಜೋಪಡಿಗಳೂ ಇವೆ. ಬೆಟ್ಟ ಗುಡ್ಡಗಳಿಂದಲೇ ಆವೃತವಾಗಿರುವ ಈ ಪ್ರದೇಶದಲ್ಲಿ ಆರೆಂಟು ದಶಕಗಳ ಹಿಂದೆ ಜನವಸತಿ ಬೆಟ್ಟಗಳ ಬುಡ ಪ್ರದೇಶಗಳಲ್ಲಿ, ಬಯಲು ಸೀಮೆಗಳಲ್ಲಿ ಮಾತ್ರವಿದ್ದು ಉಳಿದ ಎತ್ತರದ ಪ್ರದೇಶಗಳು ಕಾಡಿನಿಂದ ತುಂಬಿಕೊಂಡು ನಿರ್ಜನವಾಗಿತ್ತು. ಕಾಲಕ್ರಮೇಣ ಜನಸಂಖ್ಯೆ ಅಧಿಕವಾದಂತೆ ಮನೆಗಳು ಗುಡ್ಡಗಳನ್ನೂ ಆಕ್ರಮಿಸತೊಡಗಿದವು. ಆದರೆ ಗುಡ್ಡ ಪ್ರದೇಶದ ಮನೆಗಳು ಎಲ್ಲಾ ರೀತಿಯಲ್ಲಿ ಸುಸ್ಥಿತಿಯಲ್ಲಿವೆಯೆಂದು ಹೇಳಲು ಸಾಧ್ಯ. ಯಾಕೆಂದರೆ ಮನೆಯ ನಿರ್ಮಾಣ ಸಾಮಾಗ್ರಿಗಳನ್ನು ಎತ್ತರದ ಪ್ರದೇಶಗಳಿಗೆ ಸಾಗಿಸುವುದೇ ಸಮಸ್ಯೆ. ಆರ್ಥಿಕವಾದ ಮುಗ್ಗಟ್ಟು ಕೂಡಾ ದೊಡ್ಡ ಸಮಸ್ಯೆಯೇ ಆಗಿದೆ.

ಕಟ್ಟಡ ನಿರ್ಮಾಣ ಕ್ರಮ.

ಮುಖ್ಯವಾಗಿ ಮಣ್ಣನ್ನೇ ಉಪಯೋಗಿಸಲ್ಪಟ್ಟ ಗೋಡೆಗಳಿಂದಲೇ ಕಟ್ಟಲ್ಪಟ್ಟ ಮನೆಗಳನ್ನು ನಾವಿಲ್ಲಿ ಕಾಣಬಹುದು. ಸಾಮಾನ್ಯ 8 ಇಂಚಿನಿಂದ 12 ಇಂಚುಗಳ ವರೆಗೆ ದಪ್ಪವನ್ನು ಹೊಂದಿರುವ ಗೋಡೆಗಳನ್ನು ಕಟ್ಟಡದ ಯೋಜನೆಯನ್ವಯ 20 ಅಡಿಗಳಿಗೂ ಎತ್ತರಕ್ಕೆ ಏರಿಸಬಹುದು. ಶತಮಾನ ಪೂರ್ವದಲ್ಲಿ ನಿರ್ಮಾಣಗೊಂಡು ಈಗಲೂ ಸುಸ್ಥಿತಿಯಲ್ಲಿರುವ ಎತ್ತರದ ಗೋಡೆಗಳನ್ನು ಹೊಂದಿದ ಮಾಳಿಗೆ ಮನೆಗಳೂ ಈ ಪಂಚಾಯತ್‌ನಲ್ಲಿ ಹಲವಾರು ಇವೆ. ಗಾಳಿ ಮಳೆಗಳನ್ನೂ ತಡೆದುಕೊಳ್ಳುವ, ಹರಿತ ಪಿಕ್ಕಾಸಿನ ಏಟಿಗೂ ಬಗ್ಗದ ಧೃಢ ವತ್ತಾದ ಗೋಡೆಗಳನ್ನು ಮಣ್ಣಿನಿಂದಲೇ ನಿರ್ಮಿಸುವ ಕಲೆಗಾರರು ಈ ಪಂಚಾಯತಿನಲ್ಲಿ ಹಲವಾರು ಮಂದಿ ಇದ್ದಾರೆ.

ಬರಬರುತ್ತಾ ಜನರು ನಿರ್ಮಾಣದಲ್ಲಿ ಆಧುನಿಕತೆಯತ್ತ ವಾಲುತ್ತಿರುವುದು ಪುರೋಗತಿಯ ಸಂಸ್ಕೃತಿಯ ಸಂಕೇತ. ಈಗ ಕೆಂಪುಕಲ್ಲುಗಳನ್ನು ಉಪಯೋಗಿಸಿಕೊಂಡು ಗೋಡೆ ನಿರ್ಮಿಸಿ ಹಂಚಿನ ಮಾಡಿನಿಂದಾವೃತ ಮನೆಗಳನ್ನು ನಾವಿಂದು ಕಾಣಬಹುದು.

ಜವಾಹರ್ ರೋಜ್‌ಗಾರ್ ಯೋಜನೆಯನ್ವಯ ಆರ್ಥಿಕವಾಗಿ ಹಿಂದುಳಿದ SC/ST ವರ್ಗದವರಿಗೆ ಮನೆ ನಿರ್ಮಾಣದಲ್ಲಿ ಸಹಾಯ ಹಸ್ತ

ದೊರಕಿ ಹಲವಾರು ಮಂದಿ ಸುಸ್ಥಿತಿಯ ಮನೆ ಕಟ್ಟಿಕೊಂಡು ವಾಸಿಸುತ್ತಿರುವುದು ಸಂತೋಷದ ವಿಷಯ. ಪಂಚಾಯತ್ ಸಹಾಯ ಹಸ್ತಕ್ಕೊಳಪಟ್ಟು, ನಿರ್ಮಾಣಗೊಂಡ ಮನೆಗಳ ಲೆಕ್ಕಾಚಾರ ಈ ಕೆಳಗಿನಂತಿದೆ.

J.R.Y - 62 [1990-95]
Untied = 3 [93-94]
Total - 85

ಅಲ್ಲದೆ ಇತರ ಸರಕಾರೀ `ಸ್ಕೀಂ'ಗಳಿಗೆ ಒಳಪಟ್ಟು ಇತ್ತೀಚೆಗೆ ಮೇಲ್ಕಾಣಿಸಿದ ಸ್ಕೀಂಗೆ ಒಳಪಟ್ಟು ನೂರಾರು ಮನೆಗಳು ಇಲ್ಲಿವೆ.

ಸಮಸ್ಯೆಗಳು:- ಇನ್ನೂ ತುಂಬಾ ಮನೆಗಳು ವಾಸಕ್ಕೆ ಅಯೋಗ್ಯವಾದ ರೀತಿಯಲ್ಲಿಯೇ ಇವೆ.

1. ಆರ್ಥಿಕವಾಗಿ ಹಿಂದುಳಿದ SC/ST/OBCಗಳಲ್ಲದೆ ಇತರ ವರ್ಗದವರೂ ತುಂಬಾ ಇದ್ದಾರೆ.
2. ಮನೆ ನಿರ್ಮಾಣಕ್ಕೆಂದು ದೊರೆಯುವ ಸರಕಾರೀ ಸ್ಕೀಂನ ಧನ ಸಾಲದು.
3. ಪಂಚಾಯತ್‌ಗೆ ಒಳಪಟ್ಟಿರುವ ಎಲ್ಲಾ ಕಟ್ಟಡಗಳಿಗೂ ಇಂದು ಅರ್ಹತಾನುಸಾರವಾಗಿ ತೆರಿಗೆ ವಿಧಿಸಿಲ್ಲ.
4. ಸುಳ್ಳು ಪ್ರಮಾಣ ಪತ್ರಗಳ ಮೂಲಕ ಪಂಚಾಯತ್‌ನಿಂದ ವಿಧಿಸಲ್ಪಡುವ ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿರುವ ಜನರು.
5. ಕಳಪೆ ಕಾಮಗಾರಿಯ ಸರಕಾರೀ ಕಟ್ಟಡಗಳು.

ಸಾಧ್ಯತೆಗಳು:- ಪಂಚಾಯತ್ ಮಟ್ಟದಲ್ಲಿ ಅವಲೋಕಿಸಿದಾಗ ಇನ್ನೂ ಅಧಿಕ ಸಂಖ್ಯೆಯ ಮನೆಗಳು ವಾಸಕ್ಕೆ ಯೋಗ್ಯವಾಗಿಲ್ಲ. ಮುಖ್ಯವಾಗಿ `ಪರ್ಸಾಸ್ತು ಸ್ಕೀಂ' ಪ್ರಕಾರ ಸ್ಥಳಪಡೆದುಕೊಂಡು ಗುಡ್ಡಗಳ ತುದಿಗಳಲ್ಲಿ ವಾಸಿಸುತ್ತಿರುವ ಮನೆಗಳಿಗೆ ಇನ್ನೂ ಯಾವುದೇ ಅಭಿವೃದ್ಧಿ ಕಾರ್ಯಗಳು ತಲುಪಿಲ್ಲ. ಶತಮಾನ ಪೂರ್ವದಲ್ಲಿ ಇಲ್ಲಿದ್ದ ಧಣಿ- ಒಕ್ಕಲು ಪದ್ಧತಿ ಇನ್ನೂ ಇಲ್ಲಿ ಸಂಪೂರ್ಣವಾಗಿ ನಶಿಸಿಹೋಗಿಲ್ಲ. ಒಕ್ಕಲಾಗಿರುವ ಕೆಲವಾರು ಕುಟುಂಬಗಳು ಇಂದೂ ಕೂಡಾ ಯಾವುದೇ ರೀತಿಯ ಸ್ವಂತ ಸ್ಥಳವನ್ನೂ ಹೊಂದದೆ ನಾಗರಿಕತೆಯಿಂದ ಬಲುದೂರವಿದ್ದು ಅಭಿವೃದ್ಧಿಯ ಮುಖ್ಯವಾಹಿನಿಯಿಂದ ಹೊರತಾಗಿಯೇ ಇವೆ. ಸ್ವಂತ ಸ್ಥಳ ಹೊಂದಿರದ ಕಾರಣ ಈ ಕುಟುಂಬಗಳು ಅಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಯಾವುದೇ ಅರ್ಹತೆಯನ್ನೂ `ಪ್ರಮಾಣ ಪತ್ರ ಮೂಲಕ' ಹೊಂದಿರುವುದಿಲ್ಲ.

ಜವಾಹರ್ ರೋಜ್‌ಗಾರ್ ಯೋಜನಾ ಮನೆಗಳು ಇಂದು ಮುಖ್ಯವಾಗಿ SC/ST ವಿಭಾಗಗಳಿಗೆ ಮಾತ್ರ ದೊರಕುತ್ತವೆ. ಆದರೆ ಆರ್ಥಿಕವಾಗಿ ಬಡತನದ ರೇಖೆಗಿಂತ ಕೆಳಗಿರುವ ಇತರ ಅನೇಕ ಕುಟುಂಬಗಳು ಇಲ್ಲಿ ಶೋಚನೀಯ ಸ್ಥಿತಿಯಲ್ಲಿವೆ. J.R.Y. ಮನೆ ನಿರ್ಮಾಣ ಸ್ಕೀಂಗೆ ಸೇರಿಸಲ್ಪಡುವಾಗ ಜಾತಿ- ವರ್ಗಗಳನ್ನು ನೋಡದೆ, ಆರ್ಥಿಕ ಪರಿಸ್ಥಿತಿಯನ್ನು ನೋಡಬೇಕು. ಈ ಸಂದರ್ಭಗಳಲ್ಲಿ ಸುಳ್ಳು ಆದಾಯ ಸರ್ಟಿಫಿಕೇಟುಗಳನ್ನು ತೋರಿಸಿದಲ್ಲಿ ಅಂತಹವರ ಮೇಲೆ ಮತ್ತು ಅದಕ್ಕೆ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು.

1. ಇಂದು ಸರಕಾರದಿಂದ ಕೊಡಲ್ಪಡುವ ಗೃಹ ನಿರ್ಮಾಣ ಧನ ಎಲ್ಲಿಗೂ ಸಾಲದೆಂಬಂತಿದೆ. ವರ್ತಮಾನದಲ್ಲಿ ವಸ್ತು - ಸಾಮಗ್ರಿಗಳ ಬೆಲೆ ತುಂಬಾ ದುಬಾರಿಯಾಗಿರುವುದರಿಂದ ಧನ ಸಹಾಯದ ಏರಿಕೆ ಅನಿವಾರ್ಯ.
2. ಹಂಚು ಹಾಸಿದ ಮತ್ತು ಕಾಂಕ್ರೀಟಿನ ಎಲ್ಲಾ ಕಟ್ಟಡಗಳೂ ಇಂದು ಪಂಚಾಯತ್ ತೆರಿಗೆಗೆ ಒಳಪಟ್ಟಿಲ್ಲಿ ಪಂಚಾಯತಿನ ಆರ್ಥಿಕ ಆದಾಯ ಕುಸಿಯುತ್ತಿದೆ. ಅದಕ್ಕಾಗಿ ಸಂಪೂರ್ಣ ಸರ್ವೆ ನಡೆಸಿ ಸೂಕ್ತ ತೆರಿಗೆ ವಿಧಿಸಲೇ ಬೇಕು.
3. ಕಳಪೆ ಕಾಮಗಾರಿಗಳಿಂದಾಗಿ ಸೋರುವ ಕೊಠಡಿಗಳ ಸರಕಾರಿ ಕಛೇರಿಗಳನ್ನು ನಾವಿಂದು ನೋಡುತ್ತಿದ್ದೇವೆ. ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.
4. ಒಕ್ಕಲು ಪದ್ಧತಿಗೆ ಒಳಪಟ್ಟವರಿಗೂ ಮತ್ತು ಸ್ವಂತ ಸ್ಥಳ ಹೊಂದದವರಿಗೂ ಅಭಿವೃದ್ಧಿಯ ಕಾರ್ಯಗಳು ತಲುಪುವುದಕ್ಕಾಗಿ ಪರ್ಯಾಯ ಕ್ರಮಗಳನ್ನು ಕೈ ಗೊಳ್ಳಬೇಕು.

ಉಪಸಂಹಾರ:-

ಅಧಿಕಾರದ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ `ವಸತಿ' ಎಂಬುದು ಖಂಡಿತವಾಗಿಯೂ ಒಂದು ಪ್ರಧಾನ ಅಂಗ. `ವಸತಿ' ಅಭಿವೃದ್ಧಿಯ ತುತ್ತ ತುದಿಯನ್ನೂ ತಲುಪಿದಾಗ ಮಾತ್ರ ಗ್ರಾಮಾಭಿವೃದ್ಧಿ ಅನ್ನುವುದು ಸಂಪೂರ್ಣ ಸರಿಯೂ ಅಲ್ಲ. ವಸತಿ ಅನ್ನುವುದು ಜನಜೀವನಕ್ಕೆ ಅನಿವಾರ್ಯವೂ

ಹೌದು. ಹಾಗೆಂದು ಅದೇ ಸರ್ವಸ್ವವೂ ಅಲ್ಲ, ಸರ್ವವ್ಯಾಪಿಯೂ ಅಲ್ಲ.

ವ್ಯಾಪ್ತಿಗೆ ಹೊಂದಿಕೊಂಡು ಪ್ರಾಪ್ತಿ ಎನ್ನುವ ಮಾನದಂಡದ ಆಧಾರದಲ್ಲಿ ಮಹಲುಗಳನ್ನು ನಿರ್ಮಿಸಿದಾಗ ಅಭಿವೃದ್ಧಿ ಅವಿರ್ವಚನೀಯ ಆಗಲೇಬೇಕೆಂದು ಪ್ರಜಾಸತ್ತೆಗೆ ಸಾಧನೀಯ.

ಸಾಮಾಜಿಕ ಕ್ಷೇಮ

ಸಾಮಾಜಿಕ ಕ್ಷೇಮವೆಂದರೆ ಆರ್ಥಿಕ ಮಟ್ಟದಲ್ಲಿ ತೀರಾ ಹಿಂದುಳಿದವರ ಮತ್ತು ಸಂಘಟನೆ ಇರುವ ಹಾಗೂ ಸಂಘಟನೆ ಇಲ್ಲದ ಕಾರ್ಮಿಕರ ಮತ್ತು ಇತರರ ಸರ್ವತೋಮುಖ ಅಭಿವೃದ್ಧಿ.

ಸಾಧಾರಣ ರೀತಿಯಲ್ಲಿ ಹೇಳುವುದಾದರೆ ಇದನ್ನು ಬಡತನದ ನಿರ್ಮೂಲನ ಯಜ್ಞ ಎಂದು ಹೇಳಬಹುದು. ಕೇಂದ್ರ ಸರಕಾರ ಇದಕ್ಕಾಗಿ ಹಲವು ರೀತಿಗಳಲ್ಲಿ ಇರುವ ಕಾರ್ಮಿಕ ಸಂಘಟನೆಗಳನ್ನೂ ಅವರಿಗೆ ಕ್ಷೇಮ ನಿಧಿ, ಪರಿಹಾರ ನಿಧಿ, ಇನ್ನಿತರ ಸೌಲಭ್ಯಗಳ ಮೂಲಕ ಬಡತನವನ್ನು ಹೋಗಲಾಡಿಸಲು ಪ್ರಯತ್ನಿಸುತ್ತದೆ. ಇದಲ್ಲದೇ ಪರಿಶಿಷ್ಟ ಪಂಗಡದ ನಿಗಮಗಳು ಇದರ ಸಂಪೂರ್ಣ ಅಭಿವೃದ್ಧಿಗೆ ಬದ್ಧ ಕಂಕಣವಾಗಿರುತ್ತದೆ. ಮಾತ್ರವಲ್ಲದೆ ಮಹಿಳಾ ಕಲ್ಯಾಣಕ್ಕಾಗಿ ವಿವಿಧ ರೀತಿಯ ಯೋಜನೆಗಳನ್ನು ಜಾರಿಗೆ ತಂದಿದೆ.

ಜನರು ತೀರಾ ಹಿಂದುಳಿದವರಾಗಿರಲು ಕಾರಣಗಳು ಹಲವಾರು ಇವೆ.

1. ವಿದ್ಯಾಭ್ಯಾಸದ ಕೊರತೆ
2. ಮೇಲ್‌ವರ್ಗದವರ ತುಳಿತ, ಅಜ್ಞಾನ.
3. ಇವರು ಉದ್ಯೋಗದಲ್ಲಿ ಹಿಂದುಳಿಯಲು ಕಾರಣ ಇವರಿಗೆ ಸರಿಯಾದ ಸಮಯಕ್ಕೆ ವಿವರಗಳು ಸಿಕ್ಕದ ಕಾರಣ.
4. ಸರಿಯಾದ ಮಾರ್ಗದರ್ಶನವಿಲ್ಲದೆ ಮತ್ತು ಅರ್ಹತೆ ಪ್ರಾಶಸ್ತ್ಯವಿಲ್ಲದ ಕಾರಣ.

ಸಾಧಾರಣ ಊರಿನಲ್ಲಿ ಎಲ್ಲಾ ವರ್ಗದ ಪಂಗಡದ ಮತ್ತು ಬೇರೆ ಬೇರೆ ಕೆಲಸಗಾರರು ಇದ್ದರೂ ಇವರಲ್ಲಿ ಸಂಘಟನೆಗಳು ಇಲ್ಲ. ಇವರಿಗೆ ಕ್ಷೇಮ ನಿಧಿಗಳು ಇಲ್ಲ. ಸರಕಾರ ಮಂಜೂರು ಮಾಡುವ ಯಾವುದೇ ಸೌಲಭ್ಯಗಳು ಇವರ ಹತ್ತರ ಮುಟ್ಟುವುದಿಲ್ಲ. ಕಾರಣ ಇದರ ಎಡೆಯಲ್ಲೆ ಹಲವಾರು ಮಧ್ಯವರ್ತಿಗಳು ಕಾದಿರುತ್ತದೆ. ಕೂಲಿಗಾರರಿಗೆ ಸರಕಾರ ನಿಗದಿ ಪಡಿಸಿದಂತಹ ವೇತನಗಳು, ಇತರ ಸೌಲಭ್ಯಗಳು ಸರಿಯಾಗಿ ದೊರಕುವುದಿಲ್ಲ.

SC/ST ವರ್ಗದವರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹೊಂದಿದ್ದರೂ ಕೂಡಾ ಕಾರ್ಯಕ್ರಮದ ವಿವರಗಳು ಕಾಗದದಲ್ಲಿಯೇ ಉಳಿಯುತ್ತದೆ. ಹೊರತು ಕಾರ್ಯರೂಪಕ್ಕೆ ಬರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಈ ಪಂಚಾಯತಿನಲ್ಲಿ ಪ್ರಾದೇಶಿಕ ಭಾಷೆ ತಿಳಿಯದ ಅಧಿಕಾರಿ ವರ್ಗದವರು ಮತ್ತು ಸಿಬ್ಬಂದಿಗಳು.

ಸಾಮಾಜಿಕ ಕ್ಷೇಮದಲ್ಲಿ ಮುಖ್ಯವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಪ್ರಧಾನ ಪಾತ್ರ.

ಎಣ್ಮಕಜೆ ಪಂಚಾಯತಿನಲ್ಲಿ IRDP ಸರ್ವೆ ಪ್ರಕಾರ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ.

ವಾರ್ಡ್ ನಂ.	ಸರ್ವೆ ಪ್ರಕಾರ ಒಟ್ಟು ಕುಟುಂಬ	SC/ST	ಆರ್ಥಿಕ ಸಹಾಯ ದೊರಕಿದ ಕುಟುಂಬಗಳು	SC/ST	ಬಡತನ ಬಡತನ ರೇಖೆದಾಟಿ ಬಂದ ಕುಟುಂಬ	ರೇಖೆಗಿಂತ ಕೆಳಗಿರುವ ಕುಟುಂಬಗಳು
1	229	130	18	13	5	224
2	166	78	12	9	1	165
3	203	86	16	9	5	198
4	162	56	6	3	1	161
5	145	86	-	-	-	-
6	143	76	-	-	-	-
7	108	38	33	21	2	106
8	187	103	9	5	2	185
9	121	85	24	18	6	165
10	105	55	3	3	-	105
11	6	-	-	-	-	6

ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುದು ಏನೆಂದರೆ ಸರಕಾರವು ಬಡವರಿಗಾಗಿ ಜ್ಯಾರಿ ಮಾಡುವ ಹತ್ತು ಹಲವು ಯೋಜನೆಗಳು ಅವರನ್ನು ತಲುಪುವುದಿಲ್ಲ. ಒಂದು ವೇಳೆ ತಲುಪಿದರೂ ಕೂಡಾ ಪೂಣ ಮೊತ್ತ ಇದರ ಕೈಗೆ ಸಿಗುವುದಿಲ್ಲ.

ದ್ವಿತೀಯ ಮಾಹಿತಿ ಸಂಗ್ರಹದಿಂದ V.E.O. ಅವರಿಂದ ಸಿಕ್ಕಿದ ವಿವರಗಳು.

ವಸತಿ ನಿರ್ಮಾಣದ ಕುರಿತು ವಿವರಗಳು

ಪಾರ್ಟ ನಂ.	ಮನೆ ಅಗತ್ಯವಿರುವ ಕುಟುಂಬಗಳ ಸಂಖ್ಯೆ	ವಿವಿಧ ಯೋಜನೆಗಳಲ್ಲಿ ಮಂಜೂರಾದ ಮನೆಗಳು	ಪೂರ್ಣಗೊಳಿಸಲಾದ ಮನೆಗಳು	ಪೂರ್ತಿಗೊಳಿಸಲಾದ ಬಾಕಿ ಇರುವ ಮನೆಗಳು.	ಮಂಜೂರು ಮಾಡಬೇಕಾದ ಮನೆಗಳು.
1	97	16	15	1	81
2	63	18	18	-	45
3	62	14	13	1	48
4	60	9	8	1	51
5	43	10	10	-	33
6	48	15	3	12	33
7	42	13	10	3	29
8	78	16	16	-	62
9	64	18	15	3	46
10	40	8	5	3	32
11	6	-	-	-	6

ಅಂಗನ ವಾಡಿಗಳು

ಸಮಾಜ ಕಲ್ಯಾಣ ಇಲಾಖೆಯ ಆಶ್ರಯ ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲಿ ಅಂಗನ ವಾಡಿಗಳು ಒಂದಾಗಿವೆ. ಪಂಚಾಯತ್‌ನ XI ಪಾರ್ಟುಗಳಿವೆ. ಒಟ್ಟು 19 ಅಂಗನ ವಾಡಿಗಳು ಮಂಜೂರಾಗಿದ್ದರೂ ಈಗ 4 ಅಂಗನವಾಡಿಗಳು ಮಾತ್ರವೇ ಕಾರ್ಯ ನಿರ್ವಹಿಸುತ್ತದೆ. ನಮ್ಮ ಮಂಜೇಶ್ವರ ಬ್ಲೋಕ್‌ನಲ್ಲಿ ಎರಡು ವರ್ಷಗಳ ಹಿಂದೆಯಷ್ಟೇ ಅಂಗನವಾಡಿಗಳ ಮಂಜೂರಾತಿ ದೊರಕಿದೆ. ಸರಕಾರದ ನಿರ್ಲಕ್ಷ್ಯದಿಂದ ಮೊದಲು ಬಾಲ ವಾಡಿಗಳಾಗಿ ಪ್ರವರ್ತಿಸಿದ 23 ಸಂಸ್ಥೆಗಳು ಮಾತ್ರವೇ ಈಗ ಅಂಗನವಾಡಿಗಳಾಗಿ ಕಾರ್ಯ ನಿರ್ವಹಿಸುತ್ತದೆ. ಇದು ಸರಕಾರದ ನಿರ್ಲಕ್ಷ್ಯಕ್ಕೆ ಮತ್ತೊಂದು ಉದಾಹರಣೆ. 1000 ಜನರಿಗೆ ಒಂದು ಅಂಗನವಾಡಿ ಎಂದು I.C.D.S. ಇದರ ಉದ್ದೇಶವಾದರೂ ಇದು ಸಫಲವಾಗಿಲ್ಲ. ಈಗಿರುವ ಅಂಗನ ವಾಡಿಗಳಲ್ಲಿ ಬೇಕಾದ ಆವಶ್ಯಕ ವಸ್ತುಗಳ ಅಭಾವ ಮತ್ತು ಒಳ್ಳೆಯ ಗುಣ ಮಟ್ಟದ ಪೋಷಕ ಆಹಾರ ಪೂರೈಕೆಯ ಕೊರತೆ, ಅಂಗನವಾಡಿ ಪ್ರವರ್ತಕರಿಗೆ ಸರಿಯಾದ ವೇತನ ಸೌಲಭ್ಯ ಇಲ್ಲದಿರುವುದರ ಕಾರಣ ಅಂಗನವಾಡಿಗಳ ಸರಿಯಾದ ಪ್ರವರ್ತನಗಳಿಗೆ ತಡೆಯಾಗಿದೆ. ಇದು ಹೆಚ್ಚಾಗಿ ಭಾದಿಸುವುದು ಮಕ್ಕಳನ್ನು ಮತ್ತು ಮಾತೆಯರನ್ನು. ಅಂಗನವಾಡಿ ಪ್ರವರ್ತಕರ ಸ್ಥಿತಿಯು ಶೋಚನೀಯ. ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಉದ್ಯೋಗಸ್ಥರು ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 3.30ರ ವರೆಗೆ ಕೆಲಸ ಮಾಡಬೇಕು. ಅಲ್ಲದೆ ಆರೋಗ್ಯ ಇಲಾಖೆಯವರೊಂದಿಗೆ ಕೂಡ ಸಹಕರಿಸಬೇಕು. ಅಲ್ಲದೆ 3.30ರ ನಂತರ ಮನೆ ಸಂದರ್ಶನಗಳನ್ನು ನಡೆಸಬೇಕಾಗಿದೆ. ಇಷ್ಟೆಲ್ಲಾ ಕಷ್ಟಗಳನ್ನು ಸಹಿಸಿ ಊರಿನ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಪ್ರವರ್ತಕರಿಗೆ ಸಿಗುವ ವೇತನ ಅತ್ಯಲ್ಪ ಕೆಲಸಕ್ಕೆ ಸರಿಯಾದ ವೇತನವನ್ನು ನೀಡಬೇಕು.

ಅಂಗನವಾಡಿಗಳ ವಿವರಗಳು

ವಾರ್ಡ್ ನಂಬ್ರ	ಅಂಗನವಾಡಿಗಳ ನಂಬ್ರ	1 ವರುಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳು	3-5 ವರ್ಷ ಪ್ರಾಯದ ಮಕ್ಕಳು	ಒಟ್ಟು ಗರ್ಭಿಣಿಯರು	Nursing Mothers	ಸ್ವಂತ ಕಟ್ಟಡ	ಆಟದ ಸಾಮಾಗ್ರಿಗಳು ಇವೆಯೋ	ಸ್ವಂತ ಸ್ಥಳ ಇದೆಯೋ	ಇತರ ಸೌಲಭ್ಯಗಳು	ನೀರಿನ ಸೌಲಭ್ಯಗಳು
1	-	-	-	-	-	-	-	-	-	-
2	-	-	-	-	-	-	-	-	-	-
3	-	-	-	-	-	-	-	-	-	-
4	33	24	35	10	7	Yes	No	Yes	No	ನಳ್ಳಿ ನೀರು
5	31	27	40	62	9	Yes	No	Yes	No	No
6	-	-	-	-	-	-	-	-	-	-
7	-	-	-	-	-	-	-	-	-	-
8	-	-	-	-	-	-	-	-	-	-
9	32	15	47	54	8	7	Yes	No	Yes	No
10	-	-	-	-	-	-	-	-	-	-
11	30	17	84	67	9	Yes	No	Yes	No	No

ನಿರ್ದೇಶನಗಳು

1. ಸರಕಾರದಿಂದ ಮಂಜೂರಾದ ಅಂಗನವಾಡಿಗಳನ್ನು ಕೂಡಲೇ ಪ್ರಾರಂಭಿಸಬೇಕು.

2. ಉತ್ತಮ ಗುಣ ಮಟ್ಟದ ಪೋಷಕ ಆಹಾರಗಳ ವಿತರಣೆಯಾಗಬೇಕು.

3. ಅಂಗನವಾಡಿ Pre- School ಮಕ್ಕಳಿಗೆ ಬೇಕಾದ ಆಟದ ಸಮಾಗ್ರಿಗಳು ಮತ್ತಿತರ ವಸ್ತುಗಳ ಪೂರೈಕೆ.

4. ಅಂಗನವಾಡಿ ಕಾರ್ಯ ಕರ್ತೆಯರನ್ನು ಮತ್ತು ಸಹಾಯಕಿಯರನ್ನು ಸರಕಾರಿ ನೌಕರರಾಗಿ ಪರಿಗಣಿಸಬೇಕು.

5. ಅಂಗನವಾಡಿ ಕಾರ್ಯಕರ್ತೆಯರಿಗೆ ಆಗಾಗ ಬೋಧನಾ ಶಿಬಿರಗಳನ್ನು ನಡೆಸಬೇಕು.

ಸ್ವ- ಉದ್ಯೋಗ ತರಬೇತಿ ಕಾರ್ಯಕ್ರಮಗಳು

I.R.D.P. ಈ ಯೋಜನೆಯ ಅನ್ವಯ 18ರಿಂದ 35 ವರುಷದ ಯುವಕ ಯುವತಿಯರಿಗೆ ಸ್ವಂತ ಉದ್ಯೋಗ ನಡೆಸಲು ಬೇಕಾದ ತರಬೇತಿಗಳನ್ನು ಕೊಡುತ್ತಿದೆ. ಇವುಗಳಲ್ಲಿ ಮುಖ್ಯವಾದವುಗಳು.

ಪ್ರಿಂಟಿಂಗ್, ಫಿಟ್ಟರ್, ಮತ್ತು I.T.I. ತರಬೇತಿಗಳಿಗೆ ವೇತನಗಳನ್ನು ನೀಡಿ ತರಬೇತಿಗಳಿಗೆ ಕಳುಹಿಸುತ್ತದೆ. ಮಾತ್ರವಲ್ಲದೆ, ತರಬೇತಿ ಪೂರ್ತಿಗೊಳಿಸಿದ ನಂತರ ಇವರಿಗೆ ಸ್ವಂತ ಉದ್ಯೋಗಗಳನ್ನು ಪ್ರಾರಂಭಿಸಲು ಬೇಕಾದ ಧನ ಸಹಾಯವನ್ನು ಮತ್ತು ಆವಶ್ಯಕ ವಸ್ತುಗಳನ್ನು ಒದಗಿಸಿ ಕೊಡುತ್ತದೆ.

1995ರಲ್ಲಿ ಟೈಸಂ ಯೋಜನೆಯಂತೆ ವಿವಿಧ ಉದ್ಯೋಗ ತರಬೇತಿ ಪಡೆದವರ ವಿವರ.

ವಾರ್ಡ್ ನಂಬ್ರ	ತರಬೇತಿ ಲಭಿಸಿದ ವಿಷಯದ ಹೆಸರು	ತರಬೇತಿ ಲಭಿಸಿದವರ ಸಂಖ್ಯೆ	ಸ್ವ.ಉದ್ಯೋಗ ಆರಂಭಿಸಿದವರ ಸಂಖ್ಯೆ	ಇತರ ಉದ್ಯೋಗಗಳನ್ನು ಅವಲಂಭಿಸಿದವರು	ಬಾಕಿ ಇರುವವರು
1	-	-	-	-	-
2	-	-	-	-	-
3					
4	ಕಂಪ್ಯೂಟರ್ ಪ್ರೋಗ್ರಾಂ	2	ಒಬ್ಬರು ಹೋಗುತ್ತಿದ್ದಾರೆ		2
5	-	-	-	-	-
6	-	-	-	-	-
7	ಪ್ರಿಂಟಿಂಗ್	1		1	
8	-	-	-	-	-
9	-	-	-	-	-
10	-	-	-	-	-
11	-	-	-	-	-

ಈ ಯೋಜನೆಯ ಅನ್ವಯ ಗ್ರಾಮೀಣ ಕರ ಕುಶಲ ಕರ್ಮಿಗಳಿಗೆ ಆಧುನಿಕ ಸಲಕರಣೆಗಳನ್ನು ವಿತರಿಸುವ ಯೋಜನೆ.

ವಾರ್ಡ್ ನಂಬ್ರ	I.R.D.P. ಸರ್ವೆ ಪ್ರಕಾರ ಗ್ರಾಮೀಣ ಕರಕುಶಲ ಕರ್ಮಿಗಳ ಸಂಖ್ಯೆ	ಸಹಾಯ ಲಭಿಸಿದವರ ಸಂಖ್ಯೆ	ಸಹಾಯಕ್ಕೆ ಇನ್ನೂ ಅರ್ಹರಾದವರ ಸಂಖ್ಯೆ	ಟಿಪ್ಪಣಿ
1	8	3	5	-
2	7	2	5	-
3	7	2	7	-
4	6	4	2	-
5	5	2	3	-
6	10	6	4	-
7	4	3	1	-
8	12	2	10	-
9	6	2	4	-
10	4	2	2	-
11	-	-	-	-

ಬಡತನ ರೇಖೆಯ ಕೆಳಗಿರುವ ಜನರಿಗೆ ಶೌಚಾಲಯ ನಿರ್ಮಿಸಲು ಧನ ಸಹಾಯ ಕೊಡುವ ಪದ್ಧತಿ C.R.S.P. ಈ ಯೋಜನೆಯ ಮೂಲಕ ಇದುವರೆಗೆ ಜನರಿಗೆ ಯಾವುದೇ ಸೌಲಭ್ಯಗಳು ಸಿಕ್ಕಿಲ್ಲ.

ವಿಲೇಜು ಆಫೀಸುಗಳಿಂದ ಸಿಗುವ ಇತರ ಸಮಾಜಿಕ ಕ್ಷೇಮ ಪದ್ಧತಿ.

ಸಾಮಾಜಿಕ ಕ್ಷೇಮ ಪದ್ದತಿ ಈ ರಂಗದಲ್ಲಿ ಕಂದಾಯ ಇಲಾಖೆಯು ಗಮನಾರ್ಹವಾಗಿ ಕೆಲಸ ಮಾಡುತ್ತಿವೆ. ಅವುಗಳಲ್ಲಿ ವಿಧಾವಾ ವೇತನ, ವೃದ್ಧಾಪ್ಯ ವೇತನ ಬಡಹೆಣ್ಣು ಮಕ್ಕಳ ವಿವಾಹಗಳಿಗೆ ಧನ ಸಹಾಯ ಇವುಗಳನ್ನು ಮಾಡುತ್ತಿದೆ. ಹೆಚ್ಚಿನ ಜನರಿಗೂ ಇದರ ಪ್ರಯೋಜನಗಳು ಸಿಗುತ್ತಿದ್ದರೂ ಕೂಡ ಇನ್ನು ಅಧಿಕ ಜನರು ಈ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಗ್ರಾಮ ಸಭೆಗಳಿಂದ ಬಂದ ವಿವರಗಳು.

ಪಂಚಾಯತ್‌ನ ಎಲ್ಲಾ XI ವಾರ್ಡುಗಳಿಂದಲೂ ಈ ಕೆಳಗಿನಂತೆ ವರದಿಯಾಗಿದೆ. ಎಲ್ಲಾ ವಾರ್ಡುಗಳಲ್ಲಿಯೂ ಅರ್ಹರಿಗೆ ವಿಧವಾ ವೇತನಾ, ವೃದ್ಧಾಪ್ಯ ವೇತನ, ಬಡ ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯ ಮತ್ತು ಅಂಗ ವಿಕಲ ವೇತನ ಇವುಗಳನ್ನು ಸರಿಯಾಗಿ ವಿತರಣೆ ನಡೆಸಬೇಕು. ಪಂಚಾಯತ್‌ನಲ್ಲಿ ಇದೀಗ 114 ವಿಧವಾ ವೇತನ - 31 ವೃದ್ಧಾಪ್ಯ ವೇತನ ಮತ್ತು 2 ಜನ ಬಡ ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯ ಸಿಕ್ಕಿದೆ. ಸಾಮಾಜಿಕ ಕ್ಷೇಮ ಇಲಾಖೆ ಅಂಗ ವಿಕಲರ ಸರ್ವೆ ನಡೆಸಿ ಅಂಕಿ ಅಂಶಗಳನ್ನು ಸಂಗ್ರಹಿಸಿದರೂ ಕೂಡ ಈಗ ಇದು ಯಾವುದೇ ರೀತಿಯ ಕೆಲಸಗಳಲ್ಲಿ ತೊಡಗಿಲ್ಲ. ಆದುದರಿಂದ ಸರಕಾರವು ಇದರತ್ತ ಗಮನ ಹರಿಸಿ ಕೂಡಲೇ ಅಂಗ ವಿಕಲರಿಗೆ ಬೇಕಾಗುವ ಎಲ್ಲಾ ಸಹಾಯ ಸಹಕಾರಗಳನ್ನು ನೀಡಬೇಕಾಗಿ ಗ್ರಾಮ ಸಭೆಗಳಿಂದ ವರದಿಯಾಗಿದೆ.

ಕೃಷಿ ಕಾರ್ಮಿಕ ವೇತನ ಮತ್ತು ನಿರುದ್ಯೋಗ ಭತ್ತೆ ಇವುಗಳನ್ನು ಪಂಚಯತ್ ಮಟ್ಟದಲ್ಲಿ ವಿತರಿಸಬೇಕು. ಯಾಕೆಂದರೆ ಜನರು ತಮ್ಮ ಪಂಚಾಯತ್‌ಗಳನ್ನು ಅವಲಂಬಿಸಿ ಕೊಂಡಿರುವುದರಿಂದ ಈ ಸೌಲಭ್ಯಗಳ ವಿತರಣೆಯನ್ನು ಪಂಚಾಯತ್‌ನಲ್ಲೇ ಮಾಡಬೇಕು.

ಕ್ಷೇಮ ನಿಧಿ

ಎಲ್ಲಾ ವರ್ಗದ ಕಾರ್ಮಿಕರಿಗೂ ಕ್ಷೇಮ ನಿಧಿಯ ಕುರಿತು ವಿವರಿಸಿ ಹೇಳಬೇಕು. ಕಾರ್ಮಿಕರ ಸಂಘ ಟನೆಗಳನ್ನು ಮಾಡಿ ಅವುಗಳ ಮೂಲಕ ಕ್ಷೇಮ ನಿಧಿಯನ್ನು ಸಂಗ್ರಹಿಸಬೇಕು.

ಕೃಷಿ ಕಾರ್ಮಿಕರ ಕ್ಷೇಮ ನಿಧಿ.

ಕೃಷಿಯೇ ಪ್ರದಾನವಾಗಿರುವ ಈ ಎಣ್ಮಕಜೆ ಪಂಚಾಯತ್‌ನ 75% ಜನರು ಕೃಷಿಕರಾಗಿದ್ದಾರೆ. ಆದರೂ ಕೂಡ ಇಲ್ಲಿ ಯಾವುದೇ ಸಂಘಟನೆಗಳಿಲ್ಲ. ಆದುದರಿಂದ ಇವರ ಸಂಘಟನೆಯನ್ನು ಮಾಡಿ ಕ್ಷೇಮ ನಿಧಿಯನ್ನು ಸಂಗ್ರಹಿಸಬೇಕು.

ಕೂಲಿ ಕಾರರ ಕ್ಷೇಮ ನಿಧಿ

ಕೃಷಿಯನ್ನು ಬಿಟ್ಟರೆ ಬಾಕಿ ಜನರು ಕೂಲಿಗಾರರಾಗಿದ್ದಾರೆ. ಇದರಲ್ಲಿ ಹಲವು ರೀತಿಯ ಕೂಲಿ ಕೆಲಸ ಮಾಡುವವರು ಇದ್ದಾರೆ. ಇವರು ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಎನಾದರೂ ಅಪಯಗಳು, ಅಪಘಾತಗಳು ಬರುವ ಸಂದರ್ಭಗಳಿವೆ. ಆದುದರಿಂದ ಈ ವಿಷಯವನ್ನು ಮನದಟ್ಟಾಗುವಂತೆ ತಿಳಿಸಿ ಕ್ಷೇಮ ನಿಧಿಯಲ್ಲಿ ಪಾಲುಗೊಳ್ಳುವಂತೆ ಮಾಡಬೇಕು.

ಮೇಲೆ ಹೇಳಿದ ವರ್ಗದ ಕೂಲಿ ಕಾರರಲ್ಲದೆ ಮರ ಕೆಲಸದವರು ಚಿನ್ನದ ಕೆಲಸದವರು ಅಲ್ಪ ಸಂಖ್ಯೆಯಲ್ಲಿದ್ದಾರೆ. ಇವರ ಸಂಘಟನೆಗಳನ್ನು ಮಾಡಿ ಇವರಿಂದಲೂ ಕ್ಷೇಮ ನಿಧಿಯನ್ನು ಸಂಗ್ರಹಿಸಬೇಕು.

ಸುಲಭ ಬೆಲೆಯಲ್ಲಿ ಆಹಾರ ಸಾಧನಗಳ ವಿತರಣೆ

ಜನರಿಗೆ ಸಲಭ ಬೆಲೆಯಲ್ಲಿ ಆಹಾರ ಸಾಧನಗಳನ್ನು ವಿತರಿಸುವ ಸಂಸ್ಥೆಗಳಲ್ಲಿ ರೇಶನ್ ಅಂಗಡಿಗಳು ಒಂದು ಎಣ್ಮಕಜೆ ಪಂಚಾಯತ್‌ನಲ್ಲಿ ಇದೀಗ 8 ರೇಶನ್ ಅಂಗಡಿಗಳು ಕಾರ್ಯ ವೆಸಗುತ್ತಿದೆ. ಇವುಗಳಲ್ಲಿ ಒಟ್ಟು 4,691 ಜನ ಕಾರ್ಡುದಾರರಿಗೆ ರೇಶನ್ ಸಾಮಾಗ್ರಿಗಳ ವಿತರಣೆಯಾಗುತ್ತಿದೆ.

ರೇಶನ್ ಅಂಗಡಿಗಳಲ್ಲದೆ ಮಾವೇಲಿ ಅಂಗಡಿಗಳು ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಆಹಾರ ಸಮಾಗ್ರಿಗಳ ವಿತರಣೆಯನ್ನು ಮಾಡುತ್ತದೆ. ಎಣ್ಮಕಜೆ ಪಂಚಾಯತ್‌ನ XIನೇ ವಾರ್ಡಿನ ಪೆರ್ಲದಲ್ಲಿ ಮಾತ್ರವೇ ಮಾವೇಲಿ ಅಂಗಡಿ ಇರುವುದು.

ಗ್ರಾಮ ಸಭೆಗಳಿಂದ ಬಂದ ವರದಿ

1. ಪ್ರತಿ ವಾರ್ಡಿನಲ್ಲಿ ಒಂದು ಅಥವಾ ಎರಡು ರೇಶನ್ ಅಂಗಡಿಗಳನ್ನು ತೆರೆಯಬೇಕು. ರೇಶನ್ ಅಂಗಡಿಗಳ ಪ್ರವರ್ತನ ಸಮಯ ಜನ ಸಮಾನ್ಯರಿಗೆ ಅನುಕೂಲವಾಗಿರಬೇಕು.

2. ಈಗಿರುವ ಆಹಾರ ಸಮಾಗ್ರಿಗಳಲ್ಲದೆ ಬಾಕಿ ಉಳಿದ ಅತ್ಯವಶ್ಯಕ ಸಾಧನಗಳನ್ನು ವಿತರಿಸಬೇಕು.

3. ಎಲ್ಲಾ ವಾರ್ಡುಗಳಲ್ಲಿ ಸಧ್ಯಾವಾದರೆ ಮಾವೇಲಿ ಅಂಗಡಿಗಳನ್ನು ತೆರೆಯಬೇಕು.

4. ವಿಶೇಷ ಹಬ್ಬಗಳ ಸಂದರ್ಭಗಳಲ್ಲಿ ಮಾವೇಲಿ ಸಂತೆ ಎಂಬ ಸಂಚಾರೀ ಘಟಕವನ್ನು ಪ್ರಾರಂಭಿಸಬೇಕು.

ಶೌಚಾಲಯಕ್ಕೆ ಸಂಬಂಧಿಸಿದ ವಿವರಗಳು

ವಾರ್ಡು ನಂ.	ವ್ಯಾನಿಟರಿ, ಶೌಚಾಲಯಗಳು ಇಲ್ಲದ ಮನೆಗಳ ಸಂಖ್ಯೆ	ವಿವಿಧ ಯೋಜನೆಗಳಿಂದ ಈ ತನಕ ಪೂರೈಸಲಾದ ಶೌಚಾಲಯಗಳ ಸಂಖ್ಯೆ	ಪೂರ್ಣವಾದ ಶೌಚಾಲಯಗಳ ಸಂಖ್ಯೆ	ಇನ್ನು ಶೌಚಾಲಯಗಳು ಅಗತ್ಯವಿರುವ ಕುಟುಂಬ ಗಳ ಸಂಖ್ಯೆ
1	223	11	11	212
2	160	22	22	138
3	198	42	38	156
4	157	2	2	155
5	140	-	-	-
6	138	12	11	126
7	98	3	3	95
8	192	6	6	176
9	165	23	23	142
10	99	-	-	-
11	6	-	-	-

ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಸರಕಾರ ಬಡತನ ರೇಖೆಯ ಕೆಳಗಿರುವ ಬಡಜನರ ಏಳಿಗೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಈ ಯೋಜನೆಗಳು ಬಡಜನರಿಗೆ ತಲುಪುದಿಲ್ಲವೆಂದು ನಗ್ನ ಸತ್ಯ.

ಗ್ರಾಮೀಣ ಮಹಿಳೆಯರ ಅಭಿವೃದ್ಧಿಗಾಗಿ ಸರಕಾರ ಹಲವು ರಂಗಗಳಲ್ಲಿ ಕಾರ್ಯವೆಸಗುತ್ತಿದೆ. ಮಹಿಳೆಯರಿಗಾಗಿ ಕಡಿಮೆ ಬಡ್ಡಿ ದರ ಸಾಲ ಪರಿಶಿಷ್ಟಜಾತಿ/ಪಂಗಡದವರಿಗೆ ಸಾಲ ವಿನಾಯಿತಿ ಮತ್ತು ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಮತ್ತು ಪ್ರಾರಂಭ ಮತ್ತು ಕರಕುಶಲ ಕೈಗಾರಿಕೆಗಳಿಗೆ ಧನ ಸಹಾಯ ಅವುಗಳ ಮಾರಾಟಕ್ಕೆ ಯೋಗ್ಯ ಮಾರುಕಟ್ಟೆಗಳನ್ನು ಒದಗಿಸಿ ಕೊಡುತ್ತದೆ. ಇದಕ್ಕೆ DWCRA ಎಂಬ ಒಂದು ಹೊಸ ಯೋಜನೆಯನ್ನೇ ಜ್ಯಾರಿಗೆ ತಂದಿದೆ. ಇದು ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಹತ್ತೋ ಅದಕ್ಕಿಂತ ಹೆಚ್ಚೋ ಮಹಿಳೆಯರು ಒಟ್ಟು ಸೇರಿ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಕರಕುಶಲ ವಸ್ತುಗಳ ತಯಾರಿ ಮತ್ತು ಅದರ ಮಾರಾಟ ಕೂಡಾ ಅವರೇ ಸ್ವತಃ ನಡೆಸುತ್ತಾರೆ. ಈ DWCRA ಯೋಜನೆಯಂತೆ 2 ಉದ್ಯೋಗ ಘಟಕಗಳು ಕಾರ್ಯ ನಿರ್ವಹಿಸುತ್ತದೆ.

1. ಅರುಣಾ DWCRA Unit ಬಜಕೂಡ್ಲು ಇದು IXನೇ ವಾರ್ಡಿನಲ್ಲಿ ಪ್ರಾರಂಭಿಸಲ್ಪಟ್ಟಿದೆ. ಇದರಲ್ಲಿ 10 ಮಂದಿ ಮಹಿಳಾ ಸದಸ್ಯರು ಕಾರ್ಯ ನಿರ್ವಸುತ್ತಾರೆ.

2. VIIನೇ ವಾರ್ಡಿನಲ್ಲಿ ನಿಶಾ DWCRA Unit ಕಾರ್ಯನಿರ್ವಹಿಸುತ್ತದೆ. ಇದರಲ್ಲಿ 12 ಮಂದಿ ಮಹಿಳಾ ಸದಸ್ಯರು ಕೆಲಸ ಮಾಡುತ್ತಿದ್ದಾರೆ.

3. ಇದಲ್ಲದೆ Vನೇ ವಾರ್ಡಿನಲ್ಲಿ ಇನ್ನೂ ಪ್ರಾರಂಭಿಸಲ್ಪಡದ DWCRA Unit ಮತ್ತು ಹಾಗೆಯೇ IVನೇ ವಾರ್ಡಿನಲ್ಲಿ ಪ್ರಾರಂಭಿಸಲ್ಪಡದ ಇನ್ನೊಂದು DWCRA Unit ಇದೆ.

ಇಂತಹ DWCRA Unitಗಳನ್ನು ಎಲ್ಲಾ ವಾರ್ಡುಗಳಲ್ಲಿಯೂ ತೆರೆಯಲು ಬೇಕಾದ ಸಹಾಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರೆ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಈ ನಿಟ್ಟಿನಲ್ಲಿ ಖಂಡಿತಾ ಸಾಧ್ಯ. ಇದಕ್ಕೆ ಬೇಕಾದ ಸಲಕರಣೆ ಮತ್ತು ಬೋಧನೆಗಳನ್ನು ಸಹಾಯ ಸೌಲಭ್ಯಗಳನ್ನು ಸರಕಾರ ಉದಾಸೀನ ತೋರಿಸದೆ ನೀಡಬೇಕು. ನೌಕರರನ್ನು ಕೆಲಸ ಮಾಡುವಂತೆ ಪ್ರೋತ್ಸಾಹಿಸಬೇಕು. ಹೀಗಾದರೆ ನಮ್ಮ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಖಂಡಿತಾ ಸಾಧ್ಯ.

ಮಹಿಳೆಯರ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಇನ್ನೊಂದು ಸಂಸ್ಥೆ FCDS ಇದರ ಮೂಲಕ ಅಂಗನವಾಡಿಗಳನ್ನು ತೆರೆದು ಆರು ವರ್ಷದ ಕೆಳಗಿನ ಮಕ್ಕಳ ಮತ್ತು ಗರ್ಭಿಣಿ ಮತ್ತು ಮೊಲೆಯುಣಿಸುವ ತಾಯಂದಿರ ಪೋಷಕ ಆಹಾರಗಳ ವಿತರಣೆ ಮತ್ತು ಮಕ್ಕಳ ರೋಗ ಪ್ರತಿರೋಧಕ ಚುಚ್ಚುಮದ್ದುಗಳು ಮತ್ತು 3-6 ವರ್ಷದ ಮಕ್ಕಳ ಅಸೌಪಚಾರಿಕ ವಿದ್ಯಾಭ್ಯಾಸ ಇವುಗಳ ಮೂಲಕ ಸೇವೆಸಲ್ಲಿಸುತ್ತವೆ. ಮಾತ್ರವಲ್ಲದೆ ಮಕ್ಕಳ ಮಾನಸಿಕ ಶಾರೀರಿಕ ಹಾಗೂ ಸಾಮೂಹಿಕ ಆರೋಗ್ಯವನ್ನು ಬೆಳೆಸುತ್ತದೆ. ಮಕ್ಕಳು ಭಾರತದ ಉತ್ತಮ ಪೌರರಾಗಲು ಅಂಗನವಾಡಿ ಪ್ರವರ್ತಕರು ಈ ನಿಟ್ಟಿನಲ್ಲಿ ಶ್ರಮವಹಿಸುತ್ತಿದ್ದಾರೆ.

ಸರಕಾರವು ಅಂಗನವಾಡಿಯ ಪ್ರವರ್ತನಗಳು ಉತ್ತಮ ಗುಣಮಟ್ಟದ ಪೋಷಕ ಆಹಾರಗಳ ವಿತರಣೆ ಮತ್ತು ಬೇಕಾದ ಇತರ ಸಹಾಯ ಸೌಲಭ್ಯಗಳು ಅಂಗನವಾಡಿ ಪ್ರವರ್ತಕರಿಗೆ ವೇತನ ಮತ್ತು ಇತರ ಸೌಲಭ್ಯಗಳನ್ನು ಒದಗಿಸಬೇಕು. ಪ್ರಾಥಮಿಕ ವಿದ್ಯಾಭ್ಯಾಸಕ್ಕಿರುವ ಪ್ರಾಶಸ್ತ್ಯವನ್ನು ಕೊಡಬೇಕು. ಹಾಗಾದರೆ ಇದರ ಉದ್ದೇಶ ಸಫಲವಾದೀತು.

ಇದೀಗ ಎಣ್ಮಕಜೆ ಪಂಚಾಯತಿನಲ್ಲಿ Vನೇ ವಾರ್ಡ್ IVನೇ ವಾರ್ಡಿನಲ್ಲಿ IX ವಾರ್ಡಿನಲ್ಲಿ ಮತ್ತು XIನೇ ವಾರ್ಡಿನಲ್ಲಿ ಅಂಗನವಾಡಿಗಳು ಕಾರ್ಯನಿರ್ವಹಿಸುತ್ತಿವೆ. Iನೇ ವಾರ್ಡಿನಲ್ಲಿ ಬಾಕಿಲಪದವು ಹಾಗೆಯೇ ಸರಕಾರದ ಅನುದಾನವಿಲ್ಲದ ಒಂದು ನರ್ಸರಿ ಶಾಲೆ ಇದೆ. ಹಾಗೆಯೇ ಪಂಚಾಯತ್‌ನಲ್ಲಿ ಉಳಿದ ವಾರ್ಡುಗಳಲ್ಲಿ ಅಂಗನವಾಡಿಗಳ ಅಗತ್ಯವಿದೆ. ಪ್ರಸ್ತುತ ಸರಕಾರದಿಂದ ಮಂಜೂರು ಮಾಡಿದ 19 ಅಂಗನ ವಾಡಿಗಳು ಇನ್ನೂ ಕಾರ್ಯರೂಪಕ್ಕೆ ಬರಲಿಲ್ಲ. ಆದುದರಿಂದ ಗ್ರಾಮಿಣ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕೂಡಲೇ ಇದನ್ನು ಪ್ರಾರಂಭಿಸಬೇಕು. ಮತ್ತು ಇದಕ್ಕೆ ಬೇಕಾದ ಎಲ್ಲಾ ಸಹಕಾರಗಳನ್ನು ನಮ್ಮ ಪಂಚಾಯತಿನ ಮೂಲಕ ಒದಗಿಸಬೇಕು.

ಭಾರತದ ಭಾವೀ ಪ್ರಜೆಗಳ ಎಲ್ಲಾ ರೀತಿಯ ಆರೋಗ್ಯ ಪ್ರದವಾದ ಬೆಳವಣಿಗೆ ಈ ಅಂಗನವಾಡಿ ಮಟ್ಟದಿಂದಲೇ ಸಾಧ್ಯ. ಆದುದರಿಂದ ಅಂಗನವಾಡಿಗಳ ಮಟ್ಟ ಉತ್ತಮ ಪಡಿಸುವುದು ಸರಕಾರ ಆದ್ಯ ಕರ್ತವ್ಯ.

ಉಪ ಸಂಹಾರ

ಮೇಲೆ ಹೇಳಿದ ಎಲ್ಲಾ ವಿವರಗಳು ನಮ್ಮ ಪಂಚಾಯತ್‌ನ ವಿವಿಧ ಇಲಾಖೆಗಳಿಂದ ಸಂಗ್ರಹಿಸಿದ ವರದಿಗಳ ಕ್ರೂಡಿಕರಣವಾಗಿದೆ. ಇದನ್ನು ನೋಡಿದರೆ ಸರಕಾರದ ಯಾವುದೇ ಸಹಾಯ ಸೌಲಭ್ಯಗಳು ಜನ ಸಮಾನ್ಯರ ಬಳಿ ತಲುಪುವುದು. ಎಷ್ಟೋ ನಿಧನವಾಗುತ್ತದೆ. ಎಷ್ಟೋ ವಿವರಗಳು ಜನ ಸಮಾನ್ಯರಿಗೆ ತಲುಪುವುದೇ ಇಲ್ಲ. ಆದುದರಿಂದ ಪಂಚಾಯತ್‌ನ ಎಲ್ಲಾ ಜನರ ಸಮಗ್ರ ಅಭಿವೃದ್ಧಿಗಾಗಿ ಸಮಾಜದ ಕ್ಷೇಮಕ್ಕಾಗಿ ಕ್ಷಿಪ್ರಗತಿಯ ಕಾರ್ಯಗಳು ನಡೆಯಬೇಕು. ಸಹಾಯ ತಲುಪುವಂತೆ ಮಾಡಬೇಕು. ಈ ಎಲ್ಲಾ ಕಾರ್ಯಗಳು 9ನೇ ಪಂಚವಾರ್ಷಿಕ ಯೋಜನೆಯ ಈ ಕಾಲ ಘಟ್ಟದಲ್ಲಿ ಶೀಘ್ರವಾಗಿ ಸಾಗಿ. ಗಾಂಧೀಜಿಯ ಕನಸು ನನಸಾಗಲಿ ರಾಮ ರಾಜ್ಯವಾಗಲಿ.

ಸಾಂಸ್ಕೃತಿಕ ರಂಗ

`ಸಂಸ್ಕೃತಿ' ಎಂಬ ಪದವು ಬಹಳಷ್ಟು ವಿಶಾಲವಾದ ಹಾಗೂ ವ್ಯಾಪಕವಾದ ಅರ್ಥದಿಂದ ಕೂಡಿದೆ. ಮಾನವನ ಧಾರ್ಮಿಕ ವಿಶ್ವಾಸಗಳು, ನೈತಿಕ ಮೌಲ್ಯಗಳು, ಪರಂಪರಾಗತವಾಗಿ ನಡೆದು ಬಂದ ಆಚಾರ ವಿಚಾರಗಳು ಹಾಗೂ ಸದ್ವಿದ್ಯೆ, ವಿನಯ, ವಿವೇಕ ಸತ್-ಚಿತ್-ಆನಂದವೇ `ಸಂಸ್ಕೃತಿ' ಎನ್ನಬಹುದು. ಸಾಹಿತ್ಯ, ಸಂಗೀತ, ಲಲಿತಕಲೆಗಳು ಸಂಸ್ಕೃತಿಯ ಪ್ರತೀಕಗಳಾಗಿವೆ. ಮಾನವನಿಗೆ ಹುಟ್ಟಿನಿಂದಲೇ ವ್ಯಕ್ತಿಗತವಾಗಿ ಬರುವ ಗುಣಗಳು ಆತನನ್ನು ಸರ್ವಗುಣ ಸಂಪನ್ನನಾಗಿ, ದೇಶಪ್ರೇಮಿಯಾಗಿ ಭೂತದಯಾ ಪರನಾಗಿ ಮಾಡಲು ಸಾಧ್ಯವಿದೆ. ಲೋಕವೇ ನನ್ನ ಮನೆ ಮಾನವ ಕುಲವೇ ನನ್ನ ಕುಟುಂಬ ಎಂಬ ಉದಾರ್ತ ಭಾವನೆ ಸಂಕುಚಿತ ವ್ಯಕ್ತಿಯಲ್ಲಿ ಒಡಮೂಡಲು ಸಾಧ್ಯವಿಲ್ಲ. ಮನಸ್ಸು ಮಾತು ಕೃತಿಗಳಲ್ಲಿ ಆದರ್ಶವಾಗಿದ್ದು ಮಾತು, ಬರಹ ನಡತೆಗಳು ಉತ್ತಮವಾಗಿರುವುದೇ `ಸಂಸ್ಕೃತಿ'ಯ ಲಕ್ಷಣವಾಗಿದೆ. ಒಂದು ಭೂ ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆಗೆ ಅಲ್ಲಿಯ ಪ್ರಕೃತಿ ಚೇತೋಹಾರಿಯಾಗಿದೆ. ಎಲ್ಲಿ ನೋಡಿದರೂ ಹಚ್ಚ ಹಸುರಿನ ತಾಣ. ಎತ್ತರದ ಗುಡ್ಡ ಬೆಟ್ಟಗಳು. ನದಿ ಬಯಲು ಪ್ರದೇಶ, ಸಸ್ಯ ಶ್ಯಾಮಲ ಹರಿದ್ವರ್ಣ. ಈ ನೀರು ಮಣ್ಣು- ಗಾಳಿಗಳು ಇಲ್ಲಿ ಎತ್ತೆತ್ತಲೂ ಫಲಭರಿತ. ಇಂತಹ ವಾತಾವರಣದಲ್ಲಿ ಮಾನವ ಹೃದಯ ಪರಿಪಕ್ವವಾಗುವುದರಲ್ಲಿ ಆಶ್ಚರ್ಯವೇನು? ಕೇರಳದ ಅತೀ ಉತ್ತರದ ಕರ್ನಾಟಕದ ಗಡಿಯಲ್ಲಿರುವ ಎಣ್ಮಕಜೆ ಗ್ರಾಮ ಪಂಚಾಯತ್ ವಿಶಾಲವಾದ ಪ್ರದೇಶಗಳಿಂದ ಒಳಗೊಂಡಿದೆ. ಇದು 78.23 ಚ. ಕಿ. ಮಿ ವಿಸ್ತಾರವಾಗಿದೆ. ಇಲ್ಲಿಯ ಪ್ರಕೃತಿ ಎಲ್ಲಾ ಮತದವರನ್ನು ಸ್ವಾಗತಿಸಿದೆ.

ಮುಸಲ್‌ಮಾನರು, ಕ್ರೈಸ್ತರು ಅನ್ಯೋನ್ಯ ಸಹೋದರ ಭಾವದಿಂದ ಜೀವಿಸುತ್ತಿದ್ದಾರೆ. ಅವರವರ ಭಾವಕ್ಕೆ ತಕ್ಕಂತೆ ಅವರು ಜೀವಿಸುವುದಕ್ಕೆ ಸರ್ವ ತಂತ್ರ ಸ್ವತಂತ್ರರು ಈ ಪ್ರದೇಶದ ಜನರು ಧಾರ್ಮಿಕ ಮನೋಭಾವದವರು, ಆಸ್ತಕರು, ಹೃದಯ ಶ್ರೀಮಂತರು. ದೇವಾಲಯಗಳು, ಭೂತಾಲಯಗಳು, ಮಸೀದಿಗಳು, ಚರ್ಚಿಗಳು ನಾಗಬನಗಳು, ಅಶ್ವಥಕಟ್ಟೆ, ಇವೆಲ್ಲಾ ಈ ಪ್ರದೇಶದ ಜನ ಮನದ ದೊಡ್ಡಸ್ತಿಕೆಯನ್ನು ಎತ್ತಿ ತೋರಿಸುತ್ತದೆ. ಸುಮಾರು 40ಕ್ಕೂ ಮಿಕ್ಕಿ ಆರಾಧನಾ ಕೇಂದ್ರಗಳನ್ನು ನಾವಿಲ್ಲಿ ಕಾಣಬಹುದು. ದೇವಾಲಯಗಳು ಎನ್ನುವ ಶೀರ್ಷಿಕೆಯಲ್ಲಿ ಪ್ರಧಾನವಾಗಿ 6 ವಿಭಾಗಗಳನ್ನು ಮಾಡಬಹುದಾಗಿದೆ.

1. ಸಾರ್ವಜನಿಕ ದೇವಾಲಯಗಳು.
2. ಕೌಟುಂಬಿಕ ದೇವಾಲಯಗಳು.
3. ಭಜನಾ ಮಂದಿರಗಳು.
4. ಸ್ಥಳ ಸಂಬಂಧವಾದ ಭೂತಾಲಯಗಳು
5. ಸಾರ್ವಜನಿಕ ಭೂತಾಲಯಗಳು. (ಹತ್ತು ಸಮಸ್ತರಿಗೆ ಸೇರಿದ್ದು)
6. ನಾಗಾರಾಧನೆ.

ಇಲ್ಲಿಯ ಪ್ರಾಚೀನ ದೇವಾಲಯಗಳಲ್ಲಿ ಬಜಕೂಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಕಾಟುಕುಕ್ಕೆಯ ಶ್ರೀ ಸುಬ್ರಮಣ್ಯೇಶ್ವರ ದೇವಸ್ಥಾನಗಳು ಪ್ರಾಚೀನ ದೇವಾಲಯಗಳಾಗಿವೆ. ಇವುಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ಸ್ಥಳ ಪುರಾಣಗಳಿವೆ. ಬಜಕೂಡ್ಲು ದೇವಾಲಯವು ಸುಪ್ರಸಿದ್ಧ ಕೂಡ್ಲು ಮನೆತನಕ್ಕೆ ಸೇರಿದುದು. ಆದರೂ ಅದು ಇಂದಿಗೂ ಸಾರ್ವಜನಿಕ ಭಕ್ತ ಕೋಟಿಯ ಆರಾಧನಾ ಕೇಂದ್ರವಾಗಿದೆ. ಕಾಟುಕುಕ್ಕೆ ದೇಗುಲ ನಾಲ್ಕು ಗ್ರಾಮಗಳಿಗೆ ಸೇರಿದುದಾಗಿದೆ. ದೇವಾಲಯದ ಆಡಳಿತೆ ದಕ್ಷರೀತಿಯಲ್ಲಿ ನಡೆದು, ಇದು ಭಕ್ತಜನ ಮಾನಸ ಕೇಂದ್ರವಾಗಿದೆ.

ಪಡ್ರೆ ಗ್ರಾಮದ `ಚೇರ್ಕಬೆ' ಎಂಬಲ್ಲಿ ಶ್ರೀ ಶಾಸ್ತಾರ ಸುಬ್ರಮಣ್ಯೇಶ್ವರ ದೇವಸ್ಥಾನವಿದೆ. ಸೈಪಂಗಲ್ಲು ಮನೆತನ (ಕುಟುಂಬ)ಕ್ಕೆ ಸೇರಿದ ಈ ದೇವಾಲಯವೂ ಕೂಡ ತುಂಬಾ ಕಾರಣಿಕವಾಗಿದೆ. ಪೂವನಡ್ಕದಲ್ಲಿ ರಕ್ತೇಶ್ವರಿ ದೇವಸ್ಥಾನ, ಪಡ್ರೆ ಶ್ರೀ ಜಟಾಧಾರಿ ದೈವಸ್ಥಾನ, ಸುಪ್ರಸಿದ್ಧವಾಗಿದೆ. ಹಾಗೆಯೇ ಮಿತ್ತೂರು, ಕುಂಟಿಕಾನ, ಸಾಯ, ಮುಳಿಯಾಲ, ಸಾಂತ್‌ಪದವುಗಳಲ್ಲಿ ಕೌಟುಂಬಿಕ ದೇವಾಲಯಗಳಿವೆ.

ಭಜನಾ ಮಂದಿರಗಳು ಜನರ ಶ್ರದ್ಧೆ ಮತ್ತು ನಂಬಿಕೆಯ ದೀಪಸ್ತಂಭಗಳಾಗಿವೆ. ಈ ಪಂಚಾಯತ್‌ನಲ್ಲಿ ಸುಮಾರು 15 ಭಜನಾ ಮಂದಿರಗಳಿವೆ.

ಎಣ್ಮಕಜೆ ಗ್ರಾಮ ಪಂಚಾಯತ್‌ಗೆ ಸೇರಿದ ಕಾಟುಕುಕ್ಕೆ ಗ್ರಾಮದ VIIIನೇ ವಾರ್ಡಿನ `ಮುಗೇರು' ಎಂಬಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವು ರಾಜಾಪುರ ಮತ್ತು ಬಾಲಾವಳಿಕ್ಕಾರ್ ಸಾರತ್ವತ ಸಮಾಜದ ದೇವಸ್ಥಾನವಾಗಿದ್ದು ವರ್ಷಂ ಪ್ರತಿ ಉತ್ಸವಾದಿ ಸಮಾರಂಭಗಳು ಜರಗುತ್ತವೆ.

ಹಿಂದುಗಳಲ್ಲಿ ಬೇರೆ ಬೇರೆ ಜಾತಿಯ ಸಮುದಾಯಗಳಿವೆ. ಉದಾ:- ಬಂಟರು, ಯಾದವರು, ಮರಾಠಿಯರು, ಕುಡಿಯರು, ಕೊರಗರು,

ಕುಲಾಲರು, ನಲಿಕೆಯವರು, ಮಾಯಿಲರು, ಗಾಣಿಗರು, ಮಡಿವಾಲರು, ಬೈರರು, ಸಮಗಾರರು, ಹರಿಜನ ವರ್ಗದ ಮುಗೇರರು, ಬಾಕುಡರು ಸೇರಿರುತ್ತಾರೆ. ಸವಿತಾ ಸಮುದಾಯ ಇವರಲ್ಲದೆ ಈ ಪಂಚಾಯತ್‌ನಲ್ಲಿ ಶಿವಳ್ಳಿ, ಕರ್ಹಾಡರು, ಹವ್ಯಕರು, ಚಿತ್‌ಪಾವನ, ಕೋಟ, ಸ್ಥಾನಿಕ, ರಾಜಾಪುರ್, ವಿಶ್ವಕರ್ಮ ಬಾಲಾವಲಿಕ್ಕಾರ್, ಗೌಡ ಸಾರಸ್ವತರು, ಕೊಂಕಣಸ್ಥರು, ಬ್ರಾಹ್ಮಣ ವರ್ಗದವರಾಗಿದ್ದಾರೆ. ಈ ಪೈಕಿಯಲ್ಲಿ ಕರ್ಹಾಡರು ಮರಾಠರು, ಕೊಂಕಣಸ್ಥರು, ರಾಜ್‌ಪುರ್ ಬಾಲಾವಲಿಕ್ಕಾರ್ ಎಂಬವರು ಮಹಾರಾಷ್ಟ್ರ ಗೋಮಾಂತಕ ಪ್ರದೇಶಗಳಾದ ಕರ್ಹಾಡ, ರಾಜಪುರ ಬಾಲಾವಲಿ ಎಂಬ ಸ್ಥಳಗಳಿಂದ ಪೂರ್ವದಲ್ಲಿ ವಲಸೆ ಬಂದವರಾಗಿರುತ್ತಾರೆ. ಹಾಗೆಯೇ ಹವ್ಯಕರು, ಕೋಟ, ಶಿವಳ್ಳಿ, ಸ್ಥಾನಿಕ ವರ್ಗದ ಬ್ರಾಹ್ಮಣರು ಹಳೆಯ ಮೈಸೂರು- ಈಗಿನ ಕರ್ನಾಟಕದಿಂದ ವಲಸೆ ಬಂದವರು. ಉಳಿದವರು ಈ ಪ್ರದೇಶದ ಮೂಲ ನಿವಾಸಿಗಳಾಗಿದ್ದು, ತುಳು ಭಾಷೆ ಹಾಗೂ ತೌಲವ ಸಂಸ್ಕೃತಿಯಿಂದೊಡಗೂಡಿದ್ದಾರೆ.

ಈ ಪಂಚಾಯತ್‌ನಲ್ಲಿರುವ ಮರಾಠಿ, ಕುಡಿಯ, ಕೊರಗ ಜಾತಿಯವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಮತ್ತು ಹರಿಜನ, ಮೇರ ಬೈರ, ನಲಿಕೆಯವರು, ಮಾಯಿಲರು ಪರಿಶಿಷ್ಟ ಜಾತಿಗೆ ಸೇರಿರುವರು. ಇದಲ್ಲದೆ ಈ ಪ್ರದೇಶದಲ್ಲಿ ಇಂಡಿಯನ್ ಮುಸ್ಲಿಮರು, ಇಂಡಿಯನ್ ಕ್ರೈಸ್ತರು ವಾಸವಾಗಿದ್ದಾರೆ.

ಈ ಪಂಚಾಯತ್‌ನಲ್ಲಿ ಸರಕಾರಿ ಭಾಷೆಯಾಗಿ ಕನ್ನಡ ಮಳೆಯಾಲವನ್ನು ಆಂಗೀಕರಿಸಲಾಗಿದೆ, ಮತ್ತು ಉಪಭಾಷೆಗಳಾದ ತುಳು, ಕೊಂಕಣಿ, ಮರಾಠಿ, ಕರ್ಹಾಡ ಇತ್ಯಾದಿ ಭಾಷೆಗಳನ್ನಾಡುವ ಜನರು ಆರ್ಥಿಕವಾಗಿ 80% ದಾರಿದ್ರ್ಯ ರೇಖೆಗಿಂತ ಕೆಳಸ್ತರದಲ್ಲಿದ್ದು, ಸರಕಾರದ ಉದ್ಯೋಗ, ವಿದ್ಯಾಭ್ಯಾಸ ಇತ್ಯಾದಿಗಳ ಮಿಸಲಾತಿಯಿಂದ ವಂಚಿತರಾಗಿ ನವೆಯುತ್ತಿದ್ದಾರೆ. ಆದುದರಿಂದ ಇವರೆಲ್ಲರೂ ಹಿಂದುಳಿದವರಂತೆ ಸಕಾಲ ಸವಲತ್ತುಗಳ ಸಿತ್ತು ಪ್ರೋತ್ಸಾಹಿಸುವುದು ಸರಕಾರ ಹಾಗೂ ಪಂಚಾಯತುಗಳ ಕರ್ತವ್ಯವಾಗಿದೆ.

ಈ ಪಂಚಾಯತ್‌ಗೆ ಸೇರಿದ ಕಾಟುಕುಕ್ಕೆ ದೇವಸ್ಥಾನದ ಮತ್ತು ಬೆದ್ರಂಪಳ್ಳ ಬನದ ಪರಿಸರದಲ್ಲಿ ನಡೆಯುವ ಕೋಳಿ ಅಂಕವು ಪುರಾತನ ಕಾಲದಿಂದಲೇ ನಡೆದು ಬರುತ್ತದೆ. ಇದು ಕಾಟುಕುಕ್ಕೆಯಲ್ಲಿ ಜಾತ್ರೆಯ ಅನಂತರವೂ ಬೆದ್ರಂಪಳ್ಳದಲ್ಲಿ, ವಿಟ್ಲ ಜಾತ್ರೆಯ ನಂತರವೂ ಜರಗುತ್ತದೆ.

ಈ ಪ್ರದೇಶದಲ್ಲಿ ಭೂತಾರಾಧನೆಯನ್ನು ಬೇರೆ ಬೇರೆ ಹೆಸರುಗಳಲ್ಲಿ ಆರಾಧಿಸುತ್ತಾರೆ. ಜಟಾಧಾರಿ, ಪಂಜುರ್ಲಿ, ಧೂಮಾವತೀ ಪಿಲಿ ಚಾಮುಂಡಿ `ಒಂಜಿ ಕುಂದೊಗು ನಾಲ್ವೊ ಭೂತೊಕುಳು' ರಕ್ತೇಶ್ವರಿ ಕರ್ಲುಟಿ, ಗುಳಿಗ, ಬೈರವ, ಅಣ್ಣಪ್ಪ, ಕೊರಗ ತನಿಯ, ನಾಗಬನಗಳು ಇರುತ್ತವೆ. ಇವುಗಳನ್ನು ಆಸ್ತಿಕ ಮಹಾಶಯರು ಆರಾಧಿಸುತ್ತಾರೆ.

ಈ ಪೈಕಿ ಕಾಟುಕುಕ್ಕೆ ದೇವಸ್ಥಾನ ಎಣ್ಮಕಜೆ ಪಡ್ರೆ, ಪೆರ್ಲ, ಪೂವನಡ್ಕ, ಸೇರಾಜೆ, ಪಂಚಿತ್ತಡ್ಕ ಬದಿ, ಕಜಂಪಾಡಿ, ಮಂಜಕೊಟ್ಟಿಗೆ, ಶ್ರೇಣಿ ಎಂಬ ಪ್ರದೇಶಗಳಲ್ಲಿ ದೈವ ಸ್ಥಾನವಿದ್ದು, ವರ್ಷಂಪ್ರತಿ ಪರಂಪರಾಗತವಾಗಿ ನಡೆಯುವ ನೇಮ, ಕೋಲ ತಂಬಿಲ, ಮಹಿಮೆಗಳನ್ನು ನಡೆಸುತ್ತಾರೆ. ಕಾಟುಕುಕ್ಕೆ ದೇವಸ್ಥಾನದ ಪಿಲಿ ಭೂತ, ಪೆರ್ಲ ಬೀಡಿನ ಪಂಜುರ್ಲಿ ಎಣ್ಮಕಜೆಯ ಪಿಲಿಭೂತ, ಶ್ರೇಣಿಯ ಧೂಮಾವತಿ, ಮಂಜಕೊಟ್ಟಿಗೆಯ ಧೂಮಾವತಿ ಹಾಗೂ ಭೀರ್ಣಾಳ್ವಗಳು ಬಜಕೂಡ್ಲು ಗುಳಿಗ್ಗ. ಪಡ್ರೆಯ ಶ್ರೀ ಜಟಾಧಾರಿ ದೈವಗಳು ಬಹಳಷ್ಟು ಕಾರಣಿಕವನ್ನು ಹೊಂದಿರುತ್ತವೆ. ಈ ದೈವವು ಸುಮಾರು 600 ವರ್ಷಗಳ ಹಿಂದೆ ಕಾಶೀ ವಿಶ್ವನಾಥನಾ ಸನ್ನಿಧಿಯಿಂದ ಕಾಲಭೈರವ ಹೆಸರಿನಿಂದ ಮೆರೆದು ಜಟಾಧಾರಿ ನಾಮಧಾರಿಯಾಗಿ ಪಡ್ರೆಗೆ ಬಂದು ಈ ಪ್ರದೇಶದ ಆಸ್ತಿಕ ಮಹಾ ಜನರ ಧಾರ್ಮಿಕ ಕ್ಷೇತ್ರವಾಗಿ ಮೆರೆದು, ವೈದಿಕ ಸಂಸ್ಕೃತಿಯ ಪ್ರೋತ್ಸಾಹದಿಂದ ದಾನಧರ್ಮಗಳ ಮಹಿಮೆಯಿಂದ ಜನರಿಗೆ ಸುಖ ಶಾಂತಿಯ ಧಾಮವಾಗಿದೆ. ನಂಬಿದವರಿಗೆ ಇಂಬನೀಯುವ ಮಾಯೆಯಿಂದ ಭಕ್ತ ಕೋಟಿಯನ್ನು ರಕ್ಷಿಸುವ ಈ ದೈವ ಬಹಳ ಪ್ರಖ್ಯಾತಿಯನ್ನು ಪಡೆದಿರುತ್ತದೆ. ಅಲ್ಲದೆ ಈ ದೈವದ ಮುಂದೆ ಕೊಲೆ, ಕಳವು, ಮೋಸ, ವಂಚನೆಗಳ ಕುರಿತು ಸತ್ಯ ಪ್ರಮಾಣ ಮಾಡಿದಲ್ಲಿ, ತಪ್ಪಿತಸ್ಥರಿಗೆ ಶಿಕ್ಷೆಯನ್ನು, ಭಕ್ತರಿಗೆ ರಕ್ಷೆಯನ್ನು ಕೊಡುತ್ತದೆ.

ಪಿಲಿಗಲ್ಲು, ಅಡ್ಕಸ್ತಳ, ಬೊಳುಬೈಲು, ಗುತ್ತು, ಕರೆಕಾಡಿ, ದಂಬೆಕಾನ ಮುಂತಾದ ಎಲ್ಲಾ ಪ್ರದೇಶಗಳಲ್ಲೂ ಆಯಾ ಪ್ರದೇಶಕ್ಕೆ ಹೊಂದಿಕೊಂಡು ಪ್ರತ್ಯೇಕ ಪ್ರತ್ಯೇಕ ದೈವಗಳಿವೆ. ನಂಬಿದವರಿಗೆ ಇಂಬನ್ನೀಯುವ ಈ ದೈವಗಳು ನಮ್ಮೆಲ್ಲರ ಆಶೆ ಆಕಾಂಕ್ಷೆಗಳನ್ನು ಬದುಕು ಭಾಗ್ಯಗಳನ್ನು ಈಯುವ ಭಾಗ್ಯದೇವತೆಗಳಾಗಿವೆ.

ಎಣ್ಮಕಜೆ ಗ್ರಾಮ ಪಂಚಾಯತ್‌ನಲ್ಲಿ ಅಡ್ಕಸ್ತಳ, ಅಡ್ಯನಡ್ಕ, ಕಾಟುಕುಕ್ಕೆ, ವರ್ತ್ಯ, ನಲ್ಕ, ಬಜಕೂಡ್ಲು, ಪೆರ್ಲ ಬೇಂಗ ಪದವು, ಉಕ್ಕಿನಡ್ಕ, ಕುಪ್ಪ, ಅಮೆಕ್ಕಲ, ಬೆದ್ರಂಪಳ್ಳ, ಮೈರೆ ಎಂಬ ಸ್ಥಳಗಳಲ್ಲಿ ಮುಸ್ಲಿಂ ಸಮುದಾಯದ ಮಸೀದಿಗಳು ಇರುತ್ತವೆ. ಇವುಗಳಲ್ಲಿ ಎಲ್ಲಾ ದಿನಗಳಲ್ಲೂ ಪ್ರಾರ್ಥನೆ ಹಾಗೂ ಸಮಯಕ್ಕೆ ಸರಿಯಾಗಿ ಧಾರ್ಮಿಕ ವಿಧಿಗಳು ಮತ್ತು ಹಬ್ಬವನ್ನು ಬಹಳ ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತದೆ. ಅಲ್ಲದೆ ಅಡ್ಕಸ್ತಳದ ``ದುರ್ಗಾ ಶರೀಫ್"ನಲ್ಲಿ 3 ವರ್ಷಕ್ಕೊಮ್ಮೆ ``ಉರೂಸ್ ನೇರ್ಚೆ" ನಡೆಯುತ್ತದೆ. ಮೇಲೆ ಹೇಳಿದ ಮಸೀದಿಗಳ ಪೈಕಿ ಮರ್ತ್ಯ ಮತ್ತು ಕುಪ್ಪದ ಮಸೀದಿಗಳು ನೂರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ.

ಕ್ರೈಸ್ತ ಸಮುದಾಯದ ಜನಮಾನಸವನ್ನು ಧಾರ್ಮಿಕರೆಡೆಗೆ ಕೊಂಡೊಯ್ಯುವ ಏಕ ಮಾತ್ರ ``ಸೈಂಟ್ ಲಾರೆನ್ಸ್ ಇಗರ್ಜಿ" ಮೈರೆ ಗ್ರಾಮದ ಶ್ರೇಣಿ

ಎಂಬಲ್ಲಿ ಇರುತ್ತದೆ. ಇಲ್ಲಿ ಆಗಾಗ ಧಾರ್ಮಿಕ ಸಮಾರಂಭಗಳು ಸಡಗರದಿಂದ ನೆರವೇರುತ್ತದೆ.

ಈ ಪಂಚಾಯತ್ ಕ್ಷೇತ್ರದಲ್ಲಿ ವಿಷು, ಚೌತಿ, ಅಷ್ಟಮಿ, ನವರಾತ್ರಿ, ದೀಪಾವಳಿ, ಷಷ್ಠಿ, ಶಿವರಾತ್ರಿ ಉತ್ಸವಗಳನ್ನು ಆಚರಿಸುತ್ತಾರೆ. ನಾಗರಪಂಚಮಿಯೂ ಒಂದು ವಿಶೇಷ ಉತ್ಸವ. ಈ ಪ್ರದೇಶದಲ್ಲಿ ಅಲ್ಲಲ್ಲಿ ನಾಗಾರಾಧನೆಯ ಬನಗಳೂ, ನಾಗಕಲ್ಲುಗಳೂ ಇವೆ. ಇವಕ್ಕೆ ಹಾಲು ಹಾಗೂ ತಂಬಿಲಗಳನ್ನು ಜನರು ವಿಧಿವತ್ತಾಗಿ ನಡೆಸುತ್ತಾರೆ. ಹಾಗೆಯೇ ವಿಶೇಷವಾಗಿ ದೀಪಾವಳಿಯಂದು ತುಳಸೀಪೂಜೆ, ಗೋಪೂಜೆ, ಬಲೀಂದ್ರ ಪೂಜೆ, ಧನ ಹಾಗೂ ಧಾನ್ಯ ಲಕ್ಷ್ಮೀ ಪೂಜೆಗಳು ಜರುಗುತ್ತವೆ.

ಕೇರಳದ ಓಣಂ ಹಬ್ಬವನ್ನೂ ಆಚರಿಸಲಾಗುತ್ತದೆ. ಆದರೆ ನವರಾತ್ರಿ, ಅಷ್ಟಮಿ, ಚೌತಿ, ವಿಷು, ಸಂಕ್ರಮಣಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಬಕ್ರೀದ್ ಎಂಬುದು ನಮ್ಮ ಮುಸ್ಲಿಂ ಬಾಂಧವರ ಮುಖ್ಯ ಹಬ್ಬ. `ರಂಜಾನ್' ಪ್ರಾಮುಖ್ಯ ವ್ರತವಾಗಿದೆ. ಈ ವ್ರತವನ್ನು ರಂಜಾನ್ ತಿಂಗಳ ಚಂದ್ರದರ್ಶನದ ಬಳಿಕ ಆಚರಿಸಲಾಗುತ್ತಿದೆ.

ಈ ಸಂದರ್ಭದಲ್ಲಿ `ಕುರಾನ್ ಪಾರಾಯಣ ದಾನಧರ್ಮಗಳು ನಡೆಯುತ್ತವೆ. ಪೈಗಂಬರ ಜನ್ಮದಿನಾಚರಣೆಯಾದ ``ಮಿಲಾದ್‌ನಬಿ"ಯನ್ನು ಆಚರಿಸುತ್ತಾರಲ್ಲದೆ. ಇತರ ಉರೂಸ್ ನೇರ್ಚೆಗಳನ್ನು ಆಚರಿಸುವರು ಅವರ ಮನೋರಂಜನಾ ಕಾರ್ಯಕ್ರಮಗಳು, ವಿವಾಹ ಸಮಾರಂಭದ ವರನ `ಬರಾತ್ ಯಾತ್ರೆ'ಯಲ್ಲಿ ಕೋಲ್ಕಳಿ. ಕೈ ಮುಟ್ಟಪ್ಪಾಟ್ಟು, ಧಪ್ ಮುಟ್ಟು, ಮೊದಲಾದ ಕಲಾ ಪ್ರದರ್ಶನಗಳು ಹಾಗೂ ಮಗುವಿನ ಜಾತಕ ಕರ್ಮಗಳಲ್ಲಿ ಮಗುವನ್ನು ತೊಟ್ಟಿಲಲ್ಲಿ ತೂಗುವ ``ಬೈತ್" ಜೋಗುಳವನ್ನು ಹಾಡುವ ಮನೋರಂಜನಾ ಕಾರ್ಯಕ್ರಮ ನಡೆಯುತ್ತವೆ.

ಕ್ರೈಸ್ತರು ವಿಜೃಂಭಣೆಯಿಂದ ಕ್ರಿಸ್‌ಮಸ್, ಈಸ್ಟರ್, ಗುಡ್‌ಫ್ರೈಡೇ, ಸಾಂತಮೇರಿಯಾ, ಮುಂತಾದುವುಗಳನ್ನು ಧಾರ್ಮಿಕ ಮನೋರಂಜನೆಗಳೊಂದಿಗೆ ಆಚರಿಸುತ್ತಾರೆ.

ಸಾಂಸ್ಕೃತಿಕ ಸಂಸ್ಥೆಗಳು

ಇಲ್ಲಿರುವ ಸುಪ್ತವಾದ ಪ್ರತಿಭೆಗಳನ್ನು ಗುರುತಿಸುವ ಮೊದಲ ಉದ್ದೇಶವನ್ನಿಟ್ಟುಕೊಂಡು ಕೆಲವೊಂದು ಸಾಂಸ್ಕೃತಿಕ ಸಂಸ್ಥೆಗಳು ತಲೆ ಎತ್ತಿವೆ. ಇವುಗಳಲ್ಲಿ ಕೆಲವು ಸದಾ ಕಾರ್ಯ ಪ್ರವರ್ತಾರಾಗಿದ್ದುಕೊಂಡರೆ ಇನ್ನು ಕೆಲವು ಜಡವಾಗಿದೆ.

ಕೆಲವೊಂದು ಸಂಸ್ಥೆಗಳು ಈ ಕೆಳಗಿನದ್ದಾಗಿವೆ.

1. ಗುರು ರಾಘವೇಂದ್ರ ಯುವಕ ಮಂಡಲ ಬಾಕಿಲಪದವು.
2. ಗುರುರಾಘವೇಂದ್ರ ಮಹಿಳಾಮಂಡಲ ಬಾಕಿಲಪದವು.
3. ವಿವೇಕಾನಂದ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಸ್ವರ್ಗ.
4. ಪೆರ್ಲ ಕೃಷ್ಣಭಟ್ ಸಾಂಸ್ಕೃತಿಕ ಪ್ರತಿಷ್ಠಾನ ವೇದಿಕೆ.
5. ವಾಯಿಸ್ ಆಫ್ ಪೆರ್ಲ.
6. ಫ್ರೆಂಡ್ಸ್ ಪೆರ್ಲ.
7. ಸುಬ್ರಹ್ಮಣ್ಯೇಶ್ವರ ಯುವಕ ಮಂಡಲ ಕಾಟುಕುಕ್ಕೆ.
8. ಮಹಾಲಿಂಗೇಶ್ವರ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಬಜಕೂಡ್ಲು.
9. ಸಂಗಮ ಕಲಾ ಸಂಘ ಪೆರ್ಲ.
10. ಸಂಘ ಚೇತನ ಯುವ ವೇದಿಕೆ ಪೆರ್ಲ.
11. ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಪೆರ್ಲ.
12. ನೆಸ್ರುತ್‌ಲ್ ಇಸ್ಲಾಂ ಧಪ್ ಕಮಿಟಿ ಪೆರ್ಲ.
13. ಗೆಳೆಯರ ಬಳಗ ಸರ್ಪಬಲೆ

14. ವಿದ್ಯಾರಣ್ಯ ವಿದ್ಯಾವರ್ಧಕ ಸಂಘ ಪೆರ್ಲ.

ಇವುಗಳಲ್ಲದೆ ಮಹಿಳಾ ಸಮಾಜಗಳು, ಸಮಾಜದ ಅಭ್ಯುದಯಕ್ಕಾಗಿ ಆಯಾಯ ಜಾತಿ ಸಂಘಗಳು, ಭಜನಾ ಸಂಘಗಳು ಯಕ್ಷಗಾನ ಕಲಾ ಸಂಘಗಳು ಧಾರ್ಮಿಕ ಸಂಘಗಳು ಅಸ್ತಿತ್ವದಲ್ಲಿದೆ.

ಗ್ರಂಥಾಲಯಗಳು:-

1. ಜನರ ಜ್ಞಾನದ ದಾಹವನ್ನು ಇಂಗಿಸುವುದಕ್ಕಾಗಿ ವಿಶೇಷ ವಿದ್ಯಾ ಮಾನಗಳ ಸಂಗ್ರಹಕ್ಕಾಗಿ ಮತ್ತು ದೇಶವಿದೇಶಗಳ ಆಗುಹೋಗುಗಳ ಅರಿವು ಮೂಡಿಸುವ ದೃಷ್ಟಿಯಲ್ಲಿ ಪಂಚಾಯತ್ ಮಟ್ಟದಲ್ಲಿ ಒಂದು ಗ್ರಂಥಾಲಯ ಮತ್ತು ಎರಡು ವಾಚನಾಲಯಗಳಿವೆ. ಪೆರ್ಲದ ಪಂಚಾಯತ್ ಪಠಾರದಲ್ಲಿ ಒಂದು ಗ್ರಂಥಾಲಯ ಮತ್ತು ಒಂದು ವಾಚನಾಲಯವಿದ್ದರೂ ಸಾಕಷ್ಟು ಪುಸ್ತಕಗಳ ಸರಬರಾಜು ಇಲ್ಲವೆಂದು ಜನರ ಮುಕ್ತ ಕಂಠದ ಕೂಗುಕೇಳಿ ಬರುತ್ತಿದೆ ಮತ್ತೊಂದು ವಾಚಾನಾಲಯ ಸ್ವರ್ಗದಲ್ಲಿದೆ.

ದೂರದರ್ಶನ

ದೂರದಲ್ಲಿ ಎಲ್ಲೋ ನಡೆಯುತ್ತಿರುವ ವಿವಿಧ ಕಾರ್ಯಕ್ರಮಗಳನ್ನು ಪ್ರತ್ಯಕ್ಷ ದರ್ಶಿಯಾಗಿ ನೋಡಿ, ದಿನ ನಿತ್ಯದ ವಿಶೇಷ ಸುದ್ದಿಗಳೊಂದಿಗೆ ಜನರಿಗೆ ಅರಿವು ಮೂಡಿಸುವ ಉದ್ದೇಶವಾಗಿ ಪಂಚಾಯತ್ ವತಿಯಿಂದ ಬಡಜನರ ಕೆಲವು ಕೊಲನಿಗಳಲ್ಲಿ ಸ್ಥಾಪಿಸಿದ ಸಾರ್ವಜನಿಕ ದೂರ ದರ್ಶನ ಸೆಟ್‌ಗಳಿವೆ. ಅಲ್ಲದೆ ಪಂಚಾಯತ್ ವ್ಯಾಪ್ತಿಯಲ್ಲಿ ಸಾಧಾರಣ 300ಕ್ಕಿಂತ ಹೆಚ್ಚು ದೂರದರ್ಶನಗಳಿವೆ. ಪಂಚಾಯತ್ ವತಿಯಿಂದ ಲಭ್ಯವಾದ ಏಳು ದೂರದರ್ಶನಗಳು ಕಜಂಪಾಡಿ, ಕೊಡೆಂಕೇರಿ, ಸ್ವರ್ಗ, ಬದಿ, ಸರ್ಪಂಗಳ, ಬಾಳೆಮೂಲೆ, ಪೆರ್ಲ ಎಂಬಲ್ಲಿದ್ದು ಜನರು ತಂಡೋಪತಂಡವಾಗಿ ಬಂದು ಕಾರ್ಯಕ್ರಮವನ್ನು ನೋಡುವ ಅಭಿರುಚಿ ಹೊಂದಿದ್ದಾರೆ.

ಮಹಿಳಾ ಕ್ಷೇಮ

'ಸಮ್ರಾಜ್ಞಿಭವ' ಹೀಗೆಂದು ವಿವಾಹಕಾಲದಲ್ಲಿ ವೈದಿಕರು ಮಂತ್ರದಲ್ಲಿ ಹೇಳುತ್ತಾರೆ. ವಿವಾಹವಾಗಿ ಗಂಡನ ಮನೆಗೆ ಹೋಗುವ ಹಕ್ಕು ಅಲ್ಲಿ ಸಾಮ್ರಾಜ್ಞಿಯಾಗಿ ಬಾಳಬೇಕು ಎನ್ನುವುದು ವೇದ ಕಾಲದಲ್ಲಿಯೇ ಜನರಲ್ಲಿತ್ತು. ಆದರೆ ಅನಂತರದಲ್ಲಿ ಸಮಾಜ ಅವಳನ್ನು ಮಾತೆಯ ಗೃಹಿಣಿಯ, ಸೋದರಿಯ, ಸತೀ ಪಟ್ಟವನ್ನಿತ್ತು, ಜಗತ್ತಿನ ಅನುಭವಗಳಿಂದ ಅವಳನ್ನು ವಂಚಿಸಲಾಗಿದೆ. ಅವಳನ್ನು ಪ್ರೀತಿಸಿ, ಓಲೈಸಿ, ಅವಳಲ್ಲಿ ವಿಶ್ವಾಸತೋರಿ ಸೂಕ್ಷ್ಮವಾಗಿಯೇ ಸ್ತ್ರೀ ಪುರುಷರೆಂಬ ಭೇದವನ್ನು ತೋರುತ್ತದೆ. ಸಮಾಜ ಮತ್ತು ದೇಶದ ಅಭಿವೃದ್ಧಿಗೆ ಸ್ತ್ರಿಯೇ ಕಾರಣಳು. ಪುರುಷ ಕೇವಲ ಸೂತ್ರಧಾರಿಯಿದ್ದಂತೆ. ಆದುದರಿಂದ ಸ್ತ್ರೀಯರನ್ನು ನಾವು ಎಷ್ಟು ಅಭಿವೃದ್ಧಿಯನ್ನು ಹೊಂದುತ್ತದೆ ಎಂದರೆ ತಪ್ಪಾಗಲಾರದು.

ನಮ್ಮ ಎಣ್ಮಕಜೆ ಪಂಚಾಯತಿನಲ್ಲಿ ಎಲ್ಲಾ ವಲಯಗಳಲ್ಲಿಯೂ ಸ್ತ್ರೀಯರು ಅಭಿವೃದ್ಧಿಯ ಮಟ್ಟದಲ್ಲಿ ತುಂಬಾ ಹಿಂದುಳಿದಿದ್ದಾರೆ. ಅದರಲ್ಲೂ ಇದು ಗ್ರಾಮಾಂತರ ಪ್ರದೇಶವಾದುದರಿಂದ, ಇಲ್ಲಿಯ ಮಹಿಳೆಯರ, ಸಾಮಾಜಿಕವಾಗಿಯೂ, ಶೈಕ್ಷಣಿಕವಾಗಿಯೂ, ಆರ್ಥಿಕವಾಗಿಯೂ ತೀರಾ ಹಿಂದುಳಿದಿದ್ದಾರೆ.

ಎಣ್ಮಕಜೆ ಪಂಚಾಯತಿನಲ್ಲಿರುವ ಒಟ್ಟು ಜನಸಂಖ್ಯೆ 24,166 ಅದರಲ್ಲಿ 11,861 ಮಂದಿ ಸ್ತ್ರೀಯರಾಗಿದ್ದಾರೆ 1991ರ ಜನಗಣತಿಯ ಪ್ರಕಾರ ವಿವಿಧ ವಲಯಗಳಲ್ಲಿ ಮಹಿಳೆಯರ ಸ್ಥಾನದ ಅಂಕಿ ಅಂಶ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಕ್ಷೇತ್ರ	ಒಟ್ಟು ಸಂಖ್ಯೆ	ಶೇಕಡವಾರು.
1.	ವಿದ್ಯಾಭ್ಯಾಸ ಪಡೆದವರು (1991 ಜನಗಣತಿಯಂತೆ)	6,823	57.52%
2.	ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಈಗ ಕಲಿಯುತ್ತಿರುವವರು	1,611	13.58%
3.	ಪ್ರೌಢ ಶಾಲೆಯಲ್ಲಿ ಈಗ ಕಲಿಯುತ್ತಿರುವ ಮಕ್ಕಳು	1,078	9.08%
4.	ಹಿಂದುಳಿದ ವರ್ಗಕ್ಕೆ ಸೇರಿದವರು (1991 ಜನಗಣತಿ)	3,144	26.5%
5.	ಹಿಂದುಳಿದ ಜಾತಿಗೆ ಸೇರಿದವರು (1991 ಜನಗಣತಿ)	941	2.03%
6.	ನಿರುದ್ಯೋಗಿಗಳು (1991 ಜನಗಣತಿಯಂತೆ)	3,500	29.5%
7.	ಉದ್ಯೋಗಿಗಳು (ಕಾರ್ಮಿಕರು) 1996ರ ಅಂದಾಜು	5,361	45.19%
8.	ವಿಧವಾ ವೇತನ ಸಿಗುವ ಮಹಿಳೆಯರ ಸಂಖ್ಯೆ	114	0.96%

ಮಹಿಳೆಯರ ಸಮಸ್ಯೆಗಳು

ನಮ್ಮ ಪಂಚಾಯತಿನಲ್ಲಿ 95%ದಷ್ಟು ಪಿತೃ ಪ್ರಧಾನ ಕುಟುಂಬವಾದುದರಿಂದ ಸ್ತ್ರೀಯು ಸ್ವತಂತ್ರಳಾಗಿ ಕಾರ್ಯ ನಿರ್ವಹಿಸಲು ಅಥವಾ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಅಸಮರ್ಥಳಾಗಿದ್ದಾಳೆ.

2. ಇಲ್ಲಿ ಸ್ತ್ರಿಯರು ಹಲವು ಕಟ್ಟುಪಾಡುಗಳಿಗೆ ಒಳಗಾಗಿರುವುದರಿಂದ ಸ್ವತಃ ತಾವೇ ಯಾವುದೇ ಸಂಘಟನೆಗಳಲ್ಲಿ ಭಾಗವಹಿಸಲು ಅಥವಾ ನೇತೃತ್ವ ವಹಿಸಲು ಮುಂದೆ ಬರುವುದಿಲ್ಲ. ಕೇವಲ 4-5 ಮಹಿಳಾ ಸಂಘಟನೆಗಳಿದ್ದು ಅವು ಕೂಡಾ ಕಾರ್ಯಪ್ರವೃತ್ತವಾಗಿಲ್ಲ.

3. ಹೆತ್ತವರು ತಮ್ಮ ಹೆಣ್ಮಕ್ಕಳನ್ನು ಮಾಧ್ಯಮಿಕ ಶಾಲಾ ಮಟ್ಟದಲ್ಲಿಯೇ ಶಾಲೆ ಬಿಡಿಸುತ್ತಾರೆ. ಅವರು ಮನೆಯ ಕೆಲಸಗಳನ್ನು ಕಲಿತೋ ಅಥವಾ ಬೀಡಿ ಕಟ್ಟಲು ಕಲಿತೋ ಕುಟುಂಬಕ್ಕೆ ಆರ್ಥಕವಾಗಿ ಆಧಾರವಾಗಿರಲು ಬಯಸುತ್ತಾರೆ. ಕಾಲೇಜು ವಿದ್ಯಾಭ್ಯಾಸಕ್ಕಾಗಿ ದರದ ಕಾಸರಗೋಡಿಗೂ, ಮಂಜೇಶ್ವರಕ್ಕೋ ಕರ್ನಾಟಕದ, ಪುತ್ತೂರು, ವಿಟ್ಲಗಳಿಗೋ ಹೋಗಬೇಕಾದುದರಿಂದ ಕಾಲೇಜು ಮಟ್ಟದಲ್ಲಿ ಹುಡುಗಿರಯ ಮಟ್ಟ ಗಣನಿಯವಾಗಿ ಕಡಿಮೆಯಾಗಿದೆ.

4. ಕೃಷಿ ಮತ್ತು ಕೃಷಿಗೆ ಪೂರಕವಾಗಿರುವಂತಹ ಪಶು ಸಂಗೋಪನೆ ವನಿತೆಯರ ಪ್ರಧಾನ ಕಾರ್ಮಿಕ ವಲಯಗಳಾದರೂ ಇಲ್ಲಿಯ ಮಹಿಳೆಯರು ಹೆಚ್ಚಾಗಿ ಬೀಡಿಕಟ್ಟಿಯೋ ನೇಯ್ಗೆಯ ಕೆಲಸದಲ್ಲಿಯೋ ತನ್ನ ಹೊಟ್ಟೆ ಪಾಡನ್ನು ನೋಡಿಕೊಳ್ಳುತ್ತಾರೆ. ಉನ್ನತ ಶಿಕ್ಷಣ ಪಡೆದ ಮಹಿಳೆಯರು ಸರಕಾರಿ ಸಂಸ್ಥೆಗಳಲ್ಲೊ ಖಾಸಗಿ ಸಂಸ್ಥೆಗಳಲ್ಲೋ ಉದ್ಯೋಗವನ್ನು ಬಯಸುತ್ತಾರೆ. ಇದಕ್ಕೆಲ್ಲ ಮುಖ್ಯ ಕಾರಣ ಮಹಿಳಾ ಕೃಷಿ ಕಾರ್ಮಿಕರ ಮತ್ತು ಪುರುಷ ಕೃಷಿ ಕಾರ್ಮಿಕರ ಕೂಲಿದರದಲ್ಲಿ ವ್ಯತ್ಯಾಸ. ಹೆಂಗಸು ಗಂಡಸಿನಷ್ಟೇ ಶ್ರಮದ ಕೆಲಸ ಮಾಡಿದರೂ ಅವರಿಗೆ ಗಂಡಸಿನ

ಕೂಲಿದರದ 50% ಮಾತ್ರ ಸಿಗುತ್ತದೆ.

5. D.W.C.R.A. ಸ್ಕೀಮಿನಲ್ಲಿ ಸರಕಾರ ಮಹಿಳಾ ಸ್ವಯಂ ಉದ್ಯೋಗ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಟ್ಟರೂ, ನಮ್ಮ ಈ ಪಂಚಾಯತಿನಲ್ಲಿ ಕೇವಲ ಅಂತಹ ಮೂರು ಘಟಕಗಳು ಮಾತ್ರ ಪ್ರಾರಂಭವಾಗಿದೆ. ಸರಕಾರದ ಯಾವ ಕಾರ್ಯಕ್ರಮಗಳೂ ಭಾಷಾ ಮಾಧ್ಯಮದ ತೊಡಕಿನಿಂದ ಅರಿವಿಗೆ ಬರುವುದಿಲ್ಲವಾದುದರಿಂದ ಜನರು ಅದರಲ್ಲೂ ಮಹಿಳೆಯರು ಇಂತಹ ಘಟಕಗಳನ್ನು ಸ್ಥಾಪಿಸಲು ಮುಂದೆ ಬರುವುದಿಲ್ಲ. ಮಹಿಳೆಯರಿಗೆ ಸಾಲ ಕೊಡುವಲ್ಲಿ ಬ್ಯಾಂಕುಗಳೂ ಪೂರ್ಣ ರೀತಿಯ ಸಹಕಾರವನ್ನು ಕೊಡುವುದಿಲ್ಲ.

6. ನಮ್ಮ ಎಣ್ಮಕಜೆ ಪಂಚಾಯತಿನಲ್ಲಿ ಮಹಿಳಾ ಸಂಘಗಳು ಹೆಚ್ಚಾಗಿ ಕಾರ್ಯ ಪ್ರವೃತ್ತವಾಗಿಲ್ಲ. ಒಂದೇ ತೆರವಾದ ಜೀವನಕ್ರಮಕ್ಕೆ ಹೊಂದಿಕೊಂಡ ಮಹಿಳೆಯರು ಸಂಘಟನೆಗಳ ಮಲಕ ಕ್ರಿಯಾತ್ಮಕವಾಗಿರಲು ಉತ್ಸಾಹ ತೋರುವುದಿಲ್ಲ. ಬೆಳಗ್ಗೆ 6ಗಂಟೆಗೆ ಎದ್ದು ಅಡುಗೆ ಮನೆಯ ಜವಾಬ್ದಾರಿಯೊಂದಿಗೆ, ನೀರು ತರುವುದು, ಒಲೆ ಉರಿಸಲು ಕಟ್ಟಿಗೆ ತರುವುದು ಮಕ್ಕಳ ಪಾಲನೆ ಪೋಷಣೆಯೊಂದಿಗೆ, ಪೊಟ್ಟೆಪಾಡಿಗೆ ಬೇಕಾಗಿ ಬೇರೆ ಮನೆಗಳಲ್ಲಿ ನೌಕರಿ ಮಾಡಬೇಕಾದ ಕಷ್ಟ ನಮ್ಮೂರಿನ ಮಹಿಳೆಯರಿಗೆ, ಅದರೊಡನೆ ಪುರುಷ ಪ್ರಧಾನವಾದ ಇಲ್ಲಿಯ ಕುಟುಂಬಗಳಲ್ಲಿ, ಹೊರ ಜಗತ್ತಿಗೆ ಕಾಲಿಡುವ ಸ್ವಾತಂತ್ರ್ಯವೂ ಸೊನ್ನೆಯಾಗಿ, ಹೆಚ್ಚು ಹೆಚ್ಚಾಗಿ ಸಾಮಾಜಿಕ ಕ್ಷೇತ್ರಗಳಿಗೆ ಬರಲು ಅಸಹಾಯಕಳಾಗಿದ್ದಾಳೆ.

7. ನಮ್ಮ ಈ ಎಣ್ಮಕಜೆ ಪಂಚಾಯತಿನಲ್ಲಿ ಆಸ್ಪತ್ರೆಗಳಿಗೆ ಬರುವ ರೋಗಿಗಳಲ್ಲಿ ವನಿತೆಯರೇ ಹೆಚ್ಚಾಗಿರುತ್ತಾರೆ. ಬೆಳಗ್ಗೆಯಿಂದ ರಾತ್ರಿ ತನಕ ಬಿಡುವಿಲ್ಲದೆ ದುಡಿಯುವ ಮಹಿಳೆಯರು ತಮಗೆ ಅಗತ್ಯವಿದ್ದುದಕ್ಕಿಂತಲೂ ಕಡಿಮೆ ತಿನ್ನುತ್ತಾರೆ. ಅದಲ್ಲದೆ ಗರ್ಭಿಣಿಯಾಗಿರುವಾಗಲು, ಬಾಣಂತಿಯಾಗಿರುವಾಗಲೂ ಬಡ ಮಹಿಳೆಯರಿಗೆ ಸಾಕಷ್ಟು ಪೌಷ್ಟಿಕ ಆಹಾರ ಸೇವಿಸಲು ಸಾಧ್ಯವಾಗದೇ ಇರುವುದರಿಂದ ಅವರು ಬೇಗನೇ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಬಹುಸಂತಾನ ಆರ್ಥಿಕ ಮುಗ್ಗಟ್ಟಿಗೆ ದಾರಿಯೆಂದು ತಿಳಿಯದೆ, ಇನ್ನೂ ಹೆಚ್ಚು ಮಕ್ಕಳನ್ನು ಅಪೇಕ್ಷಿಸುವ ಜನರು ಈ ಪಂಚಾಯತಿನಲ್ಲಿ ಕುಟುಂಬ ಕಲ್ಯಾಣದ ಯೋಜನೆಯಲ್ಲಿ ಪಾಲುಗೊಳ್ಳುವುದಿಲ್ಲ. ಬಹುಸಂಖ್ಯೆಯಲ್ಲಿ ದುಡಿಯುವ ಮಹಿಳಾ ಬೀಡಿ ನೌಕರರು ಹೊಗೆ ಸೊಪ್ಪಿನೊಡನೆ ನೇರ ವ್ಯವಹರಿಸುವುದರಿಂದ ಅವರು ಬೇಗನೆ ಅನಾರೋಗ್ಯಕ್ಕೆ ಬಲಿ ಬೀಳುತ್ತಾರೆ.

8. ನಮ್ಮ ಪಂಚಾಯತಿನ 50% ಮಹಿಳೆಯರು ಮಧ್ಯಪಾನದ ಪರಿಣಾಮವಾಗಿ ಯಾತನೆಯನ್ನು ಅನುಭವಿಸುತ್ತಿದ್ದಾರೆ. ಕೇಳವರ್ಗದ 90% ಜನರೂ ರಾತ್ರಿಯಾಗುವಾಗ ಕಂಠಪೂರ್ತಿ ಕುಡಿದು ಆರ್ಥಿಕವಾಗಿಯೂ ದಿವಾಳಿ ಹೊಂಡಿ ಕುಟುಂಬದ ಸ್ತ್ರಿಯರ ಮಾನಸಿಕ ನೆಮ್ಮದಿಯನ್ನು ಹಾಳುಮಾಡುವುದಲ್ಲದೆ ಅನಾರೋಗ್ಯಕ್ಕೂ ತುತ್ತಾಗುತ್ತಾರೆ. ನಮ್ಮ ಸರಕಾರವು ಮಧ್ಯಾಪಾನ ನಿಷೇಧವನ್ನು ಜಾರಿಗೆ ತಂದರೂ ಕೂಡ ಅದು ಮಧ್ಯಪಾನಿಗಳ ಮೇಲೆ ಯಾವುದೇ ಪರಿಣಾಮವನ್ನು ಬೀರಲಿಲ್ಲ. ಕಾನೂನಿನ ಅವ್ಯವಸ್ಥೆಯಿಂದಾಗಿ ಕಳ್ಳಭಟ್ಟಿ ಸಾರಾಯಿಗಳೂ, ಕರ್ನಾಟಕದಿಂದ ಗಡಿ ಪ್ರದೇಶವಾದ ನಮ್ಮ ಎಣ್ಮಕಜೆಗೆ ಸರಬರಾಜಾಗುವ ಸಾರಾಯಿಗಳೂ ಯಥೇಚ್ಚವಾಗಿ ಕುಡಿಯಲು ಸಿಗುವುದರಿಂದ ಮಧ್ಯಪಾನಿಗಳ ಮನೆಗಳ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ.

9. ಸ್ತ್ರೀಧನದ ಪೀಡನೆಯನ್ನು ಇಲ್ಲಿಯ ಕೆಲವು ಮನೆಗಳಲ್ಲಿ ಹೆಂಗಸರು ಅನುಭವಿಸುತ್ತಾ ಇದ್ದಾರೆ. ಬಡವರ್ಗದ ಜನರಿಗಂತೂ ಇದೊಂದು ಪರಿಹರಿಸಲಾಗದ ಸಮಸ್ಯೆಯಾಗಿದೆ. ಈ ಸ್ತ್ರೀಧನದ ಪೀಡನೆಯಿಂದಾಗಿ ಹೆಣ್ಣು ತವರು ಮನೆಗೂ ಒಂದು ಹೊರೆಯಾಗಿ ಬಿಟ್ಟಿದ್ದಾಳೆ.

10. ಸ್ತ್ರೀಯರ ಮೇಲಿನ ದೌರ್ಜನ್ಯವು ನಮ್ಮಲ್ಲಿ ತುಂಬಾ ಹೆಚ್ಚಾಗಿದೆ. ಸ್ತ್ರೀಯರ ಮೇಲಿನ ಲೈಂಗಿಕ ಅತ್ಯಾಚಾರಗಳು, ಪುರುಷನಾದವನು ಸ್ತ್ರೀಯನ್ನು ದೈಹಿಕವಾಗಿಯೂ ಮಾನಸಿಕವಾಗಿಯೂ ಹಿಂಸಿಸುವುದು. ಹೆಣ್ಣಿನ ಸಂಪಾದನೆಯನ್ನು ಅವಳ ಅನುಮತಿಯಿಲ್ಲದೆ ತೆಗೆದು ಮೋಜು ಮಾಡುವುದು, ಉದ್ಯೋಗಸ್ಥ ಸ್ತ್ರೀಯರಿಗೆ ಆಫೀಸಿನಲ್ಲಿ ಪುರುಷ ಉದ್ಯೋಗಸ್ಥರು ಕೊಡುವ ಕಿರುಕುಳ, ಬಸ್ಸಿನಲ್ಲಿ, ಪ್ರಯಾಣಿಸುವಾಗ, ಮತ್ತು ಬೀದಿಯಲ್ಲಿ ನಡೆಯುವಾಗ ರೋಡ್ ರೋಮಿಯೋಗಳಿಂದ ಚುಡಾಯಿಸಲ್ಪಡುವುದು ಇವೆಲ್ಲ ಮಹಿಳೆಯರ ಮೇಲಿನ ದೌರ್ಜನ್ಯಗಳಾಗಿವೆ.

11. ಸ್ತ್ರೀಯರನ್ನು ಅಶ್ಲೀವಾಗಿ ಚಿತ್ರೀಕರಿಸಿದ ಪೋಸ್ಟರುಗಳು ಮತ್ತು ವೀಡಿಯೋ ಕ್ಯಾಸೆಟ್‌ಗಳಿಂದ ತಮ್ಮ ಕಿಸೆ ತುಂಬಿಸಿಕೊಳ್ಳುವ ಜನ ಹೆಚ್ಚಾಗಿದ್ದಾರೆ.

12. ಆರ್ಥಿಕವಾಗಿ ನಮ್ಮ ಪಂಚಾಯತಿನ ಇಡೀ ಮಹಿಳಾ ಸಮುದಾಯವೇ ತೀರಾ ಕೆಳಮಟ್ಟದಲ್ಲಿದೆ. ಕೂಲಿ ಕೆಲಸಗಳಲ್ಲಿ ಮಹಿಳೆಯರ ಕೂಲಿದರ ಪುರುಷರಿಗಿಂತ ಕಡಿಮೆಯಾದರೆ, ಮದ್ಯಮವರ್ಗದ ಹೆಂಗಸರಿಗೆ ಯಾವುದೇ ಆರ್ಥಿಕ ಆದಾಯವಿಲ್ಲ.

13. ಬಾಲ್ಯ ವಿವಾಹವು ಈಗಲೂ ಕೆಲವು ಕುಟುಂಬಗಳಲ್ಲಿ ನಡೆಯುವುದರಿಂದ ಅದು ಒಂದು ದೊಡ್ಡ ಸಮಸ್ಯೆಯಾಗಿದೆ.

ಪರಿಹಾರ ಸಾಧ್ಯತೆಗಳು:-

1. ಪಂಚಾಯತು ಮಟ್ಟದಲ್ಲಿ, ಸ್ತ್ರೀಯರ ಅಭಿವೃದ್ಧಿಯ ಕುರಿತು ಸೆಮಿನಾರುಗಳನ್ನು ನಡೆಸಿ, ಶಾಶ್ವತ ಪರಿಹಾರವನ್ನು ಕಂಡುಹಿಡಿದು ಹೊಸ

ಪೀಳಿಗೆಯಲ್ಲಿ, ಸ್ವತಂತ್ರ ಚಿಂತನೆಯ ಜಾಗೃತಿಯನ್ನು ನೆಲೆಗೊಳಿಸಲು ಪ್ರಯತ್ನಿಸಬೇಕು.

2. ನಮ್ಮ ಪಂಚಾಯತಿನಲ್ಲಿ ಪ್ರತಿ ಸಾವಿರ ಜನರಿಗೆ ಒಂದರಂತೆ ಅಂಗನವಾಡಿಗಳನ್ನು ತೆರೆದು ಸ್ತ್ರೀಯರ ಸಮಾಜಿಕ ಕ್ಷೇಮ ಚಟುವಟಿಕೆಗಳ ಪ್ರಧಾನ ಕೇಂದ್ರವಾಗಿ ಅಂಗನವಾಡಿಗಳನ್ನು ಬದಲಾಯಿಸಬೇಕು. ಆಗ ಮಹಿಳೆಯರು ಅವರ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಿಕೊಳ್ಳಲು ಅನುಕೂಲವಾಗುತ್ತದೆ.

3. ಪೆರ್ಲದಲ್ಲಿ ಮಹಿಳೆಯರಿಗಾಗಿಯೇ ಕಾಲೇಜು ಒಂದನ್ನು ಸ್ಥಾಪಿಸಿ ಆ ಮೂಲಕ ಮಹಿಳೆಯರ ಕಾಲೇಜು ಶಿಕ್ಷಣಕ್ಕೆ ಸೌಕರ್ಯವನ್ನು ಮಾಡಿ ಕೊಡಬೇಕು. ಪ್ರತೀ ಅಂಗನವಾಡಿಗಳಲ್ಲಿ ಒಂದೊಂದು ವಾಚನಾಲಯವನ್ನು ತೆರೆದು ಮಹಿಳೆಯರಲ್ಲಿ ಜ್ಞಾನವನ್ನು ವೃದ್ಧಿಮಾಡಬೇಕು. ನಮ್ಮ ಪಂಚಾಯತಿನ ಮಹಿಳೆಯರಲ್ಲಿ ಈಗಲೂ ಅನಕ್ಷರಸ್ತರು ಇರುವುದರಿಂದ ಅಂಗನವಾಡಿಕೇಂದ್ರಗಳ ಮೂಲಕ ಅವರಿಗೆ ಶಿಕ್ಷಣವನ್ನು ನೀಡಲು ವ್ಯವಸ್ಥೆ ಮಾಡಬೇಕು. ಬಡ ಕುಟುಂಬದ ಹೆಣ್ಮಕ್ಕಳಿಗೆ ತಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿದರದ ಸಾಲವನ್ನೂ, ಸಹಾಯ ಧನವನ್ನೂ ಕೊಡಬೇಕು.

4. ಕೃಷಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಕೃಷಿಯು ಒಂದು ಲಾಭದಾಯಕ ಉದ್ದಿಮೆಯಾಗುವಂತೆ ಮಾಡಬೇಕು. ಮಹಿಳಾ ಕೂಲಿದರ ಹೆಚ್ಚಿಸಲು ಕಾಯಿದೆಗಳನ್ನು ಜಾರಿಗೆ ತಂದು ಆ ಮೂಲಕ ಮಹಿಳೆಯರು ಹೆಚ್ಚು ಹೆಚ್ಚು ಕೃಷಿಕಾರ್ಯಗಳಲ್ಲಿ ತೊಡಗುವಂತೆ ಮಾಡಬೇಕು. ಇತರ ಕಾರ್ಮಿಕರಿಗಿರುವಂತೆ ಕೃಷಿ ಕಾರ್ಮಿಕರಿಗೂ ನೌಕರಿಯ ಭದ್ರತೆ ಮತ್ತು ರಕ್ಷಣೆಯನ್ನು ಕೊಡಬೇಕು. ಹೆಂಗಸರೇ ಮಾಡಲು ಸಾಧ್ಯವಿರುವಂತಹ, ತರಕಾರೀ ಕೃಷಿ, ಔಷಧಿ ಗಿಡಗಳ ಕೃಷಿ, ಹೂವಿನ ಗಿಡದ ಕೃಷಿ ಮುಂತಾದುವುಗಳಿಗೆ, ಸಾಲ ಸೌಲಭ್ಯವನ್ನೂ ಧನ ಸಹಾಯವನ್ನೂ, ಪ. ಜಾತಿ. ಮತ್ತು ಪ. ವರ್ಗಗಳೆಂಬ ಬೇಧ ವಿಲ್ಲದೆ ಎಲ್ಲಾ ಬಡ ಮಹಿಳೆಯರಿಗೂ ವಿಸ್ತರಿಸಬೇಕು. ಕೃಷಿಗೆ ಪೂರಕವಾದಂತಹ ಪಶುಸಂಗೋಪನೆಯನ್ನು ಹೆಚ್ಚಾಗಿ ಹೆಂಗಸರೇ ನೋಡಿಕೊಳ್ಳುವುದರಿಂದ ಅದಕ್ಕೂ ಬೇಂಕುಗಳ ಮೂಲಕ ಸಾಲ ಸೌಲಭ್ಯವನ್ನು ಕಡಿಮೆ ಬಡ್ಡಿದರದಲ್ಲಿ ಎಲ್ಲಾ ಮಹಿಳೆಯರಿಗೂ ಕೊಡಬೇಕು.

5. ಮಹಿಳೆಯರ ಸ್ವ-ಉದ್ಯೋಗಕ್ಕಾಗಿ ಸರಕಾರ ಸಾಲ ಸೌಲಭ್ಯವನ್ನೂ ಧನಸಹಾಯವನ್ನೂ ಕೊಡುತ್ತಾ ಇದ್ದರೂ ಅದೆಲ್ಲ ಸ್ತ್ರೀಯರ ಅರಿವಿಗೆ ಬಾರದೆ ಹೋಗುತ್ತದೆ. ಆದುದರಿಂದ ಸರಕಾರದ ಎಲ್ಲ ಯೋಜನೆಗಳು ಸ್ತ್ರೀಯರಿಗೆ ತಲುಪುವಂತೆ ಮಾಡಲು ಪ್ರತೀ ಪಂಚಾಯತಿನಲ್ಲಿ ಒಬ್ಬ ಪ್ರತ್ಯೇಕ ಮಹಿಳಾ V.E.O.ಗಳನ್ನು ನೇಮಿಸಬೇಕು. ನಮ್ಮ ಎಣ್ಮಕಜೆಯಲ್ಲಿ 8-10 D.W.C.R.A. ಘಟಕಗಳನ್ನಾದರೂ ಪ್ರಾರಂಭಿಸಬೇಕು. ಸ್ವ-ಉದ್ಯೋಗದ ತರಬೇತಿಯನ್ನು ಪಂಚಾಯತು ಮಟ್ಟದಲ್ಲಿ ಕೊಡಿಸಬೇಕು.

6. ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸಂರಕ್ಷಣೆಗಾಗಿ ನಮ್ಮ ಎಣ್ಮಕಜೆ ಪಂಚಾಯತಿನ ಪ್ರತಿ ವಾರ್ಡುಗಳಲ್ಲಿ ಆರೋಗ್ಯ ಕೇಂದ್ರಗಳನ್ನು ತೆರೆಯಬೇಕು. ಆರೋಗ್ಯ ವಿಷಯದಲ್ಲಿ ಮಹಿಳೆಯರು ಹೆಚ್ಚಿನ ತಿಳುವಳಿಕೆಯನ್ನು ಪಡೆಯಲು ಪ್ರತಿ ವಾರ್ಡುಗಳಲ್ಲಿಯೂ ಮಹಿಳಾ ಸ್ವಸ್ಥ ಸಂಘಗಳನ್ನು ಪ್ರಾರಂಭಿಸಬೇಕು. ಆ ಮೂಲಕ ಸಾಮಾಜಿಕ ರೋಗ ರುಜಿನಗಳನ್ನು ಶ್ರೀಘ್ರವಾಗಿ ನಿವಾರಣೆ ಮಾಡಬಹುದು. ಈ ಪಂಚಾಯತಿನ ಕೇಂದ್ರ ಬಿಂದುವಾದ ಪೆರ್ಲದಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ನಿರ್ಮಿಸಬೇಕು. ಇಲ್ಲಿರುವ P.H.C.ಯಲ್ಲಿ ಮಹಿಳೆಯರಿಗಾಗಿ ಸ್ತ್ರೀರೋಗ ತಜ್ಞೆಯೊಬ್ಬರನ್ನು ನೇಮಿಸಬೇಕು. ಗರ್ಭಿಣಿ ಸ್ತ್ರೀಯರಿಗೆ ಮತ್ತು ಬಾಣಂತಿಯರಿಗೆ ಬೇಕಾದ ಪೋಷಕ ಆಹಾರಗಳನ್ನು ಅಂಗನವಾಡಿಗಳ ಮುಖಾಂತರ ಪೂರೈಸಬೇಕು. ಕುಟುಂಬ ಯೋಜನೆಯನ್ನು ಪ್ರತಿ ಕುಟುಂಬಕ್ಕೂ ಕಡ್ಡಾಯಗೊಳಿಸಿ ಆ ಮೂಲಕ ಮಹಿಳೆಯರ ಆರೋಗ್ಯವನ್ನು ಸುಧಾರಿಸಿ, ದೇಶದ ಜನಸಂಖ್ಯೆಯನ್ನು ನಿಯಂತ್ರಿಸಬೇಕು. ಬೀಡಿ ಕಾರ್ಮಿಕರ ಆರೋಗ್ಯ ಸಂರಕ್ಷಣೆಗಾಗಿ ಅವರ ಉಸಿರಾಟದಲ್ಲಿ ಈ ವಾಸನೆ ಬಾರದಂತೆ ತಡೆಗಟ್ಟಲು ಯಾವುದಾದರೂ ಪ್ರತಿ ನಿರೋಧಕವನ್ನು ಅಳವಾಡಿಸಬೇಕು.

7. ಸಾರಾಯಿ ದಂದೆಗಳನ್ನು ಮಾಡುವ ಜನರನ್ನು ಪತ್ತೆ ಹಚ್ಚಿ ಅವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕು. ಗಡಿ ಪ್ರದೇಶವಾದ ನಮ್ಮ ಎಣ್ಮಕಜೆಗೆ ಹೊರರಾಜ್ಯದಿಂದ ಬರುವ ಸಾರಾಯಿ ಸರಬರಾಜನ್ನು ತಡೆಹಿಡಿಯಬೇಕು ಹೀಗೆ ಪಾನ ನಿಷೇಧವನ್ನು ಫಲ ಪ್ರದವಾಗಿ ಜಾರಿಗೊಳಿಸಿ ಮದ್ಯಪಾನಿಗಳಿಂದ ಮಹಿಳೆಯರ ಮೇಲಾಗುವ ದೌರ್ಜನ್ಯಗಳನ್ನು ಕಷ್ಟನಷ್ಟಗಳನ್ನು ಸಂಪೂರ್ಣವಾಗಿ ದೂರ ಮಾಡಬೇಕು.

8. ಸ್ತ್ರೀಧನದ ಪೀಡನೆಯನ್ನು ನಿಲ್ಲಿಸಲು ಕಟ್ಟು ನಿಟ್ಟಾದ ಶಾಸನಗಳನ್ನು ಜಾರಿಗೊಳಿಸಬೇಕು. ಆಗಾಗ ವರದಕ್ಷಿಣೆ ವಿರೋಧದ ವಿಷಯವಾಗಿ ಸೆಮಿನಾರ್‌ಗಳನ್ನು ಮಾಡಿ ಯುವಕರ ಮನ ಪರಿವರ್ತನೆಯಾಗುವಂತೆ ಮಾಡಬೇಕು. ವರದಕ್ಷಿಣೆಯ ವಿರುದ್ಧ ಹೋರಾಡುವ ಮಹಿಳಾ ಸಂಘಟನೆಗಳಿಗೆ ಪ್ರೋತ್ಸಾಹವನ್ನು ಕೊಡಬೇಕು.

9. ಮಹಿಳೆಯರ ಅಭಿವೃದ್ಧಿಯ ಪಥಕ್ಕೆ ಸವಾಲಾಗಿ ನಿಂತಿರುವ ಮಹಿಳೆಯರ ಮೇಲಾಗುವ, ಸಾಂಸ್ಕೃತಿಕ, ಸಾಮಾಜಿಕ, ಮಾನಸಿಕ ಹಾಗೂ ಶಾರೀರಿಕ ಆಕ್ರಮಗಳನ್ನು ತಡೆಯಲು ಮಹಿಳೆಯರಿಗೆ ಸೂಕ್ತ ಕಾನೂನಿನ ರಕ್ಷಣೆಯನ್ನು ನೀಡಬೇಕು. ಆ ಮೂಲಕ ವನಿತೇಯರ ಯಾವುದೇ ಹಕ್ಕುಗಳಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕು.

10. ಕೇರಳದಲ್ಲಿ ಹೆಚ್ಚಾಗಿ ಮಾತೃಪ್ರಧಾನ ಕುಟುಂಬಗಳಿದ್ದರೂ ನಮ್ಮ ಎಣ್ಮಕಜೆಯಲ್ಲಿ ಮಾತ್ರ ಪಿತೃಪ್ರಧಾನ ಕುಟುಂಬಗಳೇ ಹೆಚ್ಚು. ಮಾತೃ ಪ್ರಧಾನ ಕುಟುಂಬಗಳಿದ್ದುದರಿಂದಲೇ ಕೇರಳವು ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಿತು ಎಂದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ನಮ್ಮ ಎಣ್ಮಕಜೆಯಲ್ಲಿಯೂ ಮಾತೃ ಪ್ರಧಾನ ಕುಟುಂಬಗಳನ್ನು ಪರಿಗಣನೆಗೆ ತೆಗೆದುಕೊಂಡು ಅವುಗಳಿಗೆ ಪ್ರೋತ್ಸಾಹವನ್ನು ಕೊಡಬೇಕು.

11. ರಸ್ತೆ ಬದಿಯಲ್ಲಿಯೋ, ಅಂಗಡಿಗಳ ಎದುರಿನಲ್ಲೋ ನಿಂತು ಹುಡುಗಿಯರನ್ನು ಚುಡಾಯಿಸುವ, ಬಸ್ಸಿನಲ್ಲಿ ಪ್ರಯಾಣಿಸುವಾಗ ಮಹಿಳಾ ಪ್ರಯಾಣಿಕರಿಗೆ ಕಿರುಕುಳ ಕೊಡುವ ರೋಡ್ ರೋಮಿಯೋಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.

12. ಮಹಿಳೆಯರು ಕ್ರೀಡಾರಂಗದಲ್ಲಿ ಮಿಂಚುವಂತೆ ಮಾಡಲು ಪಂಚಾಯತು ಮಟ್ಟದಲ್ಲಿಯೇ ಅವರಿಗೆ ತರಬೇತಿಯನ್ನು ಕೊಡಬೇಕು. ಹೆಣ್ಮಕ್ಕಳಿಗೆ ಕರಾಟೆ, ಸೈಕಲ್ ಸವಾರಿ ಮುಂತಾದುವುಗಳನ್ನು ಕಲಿಸಿ ಅವರಲ್ಲಿ ಆತ್ಮ ವಿಶ್ವಾಸವನ್ನು ತುಂಬಬಹುದು. ಆದ್ದರಿಂದ ಪ್ರತೀ ವಾರ್ಡಿನಲ್ಲಿಯೂ ಮಹಿಳೆಯರಿಗಾಗಿ ಕರಾಟೆ ಕ್ಲಾಸುಗಳನ್ನು ತೆರೆಯಬೇಕು.

13. ವಿಧವೆಯರಿಗೆ ಸಿಗುತ್ತಿರುವ ವಿಧವಾ ವೇತನವನ್ನು ರೂ. 100ರಿಂದ ರೂ.150ಕ್ಕೆ ಹೆಚ್ಚಿಸಬೇಕು. ಅವರ ಮಕ್ಕಳಿಗೆ ಉದ್ಯೋಗದಲ್ಲಿ ಮಿಸಲಾತಿಯನ್ನು ಇಡಬೇಕು.

14. ಬಾಲ್ಯವಿವಾಹ ತಡೆಯಲು ಕಾನನುಗಳಿದ್ದರೂ ಈಗಲೂ ಕೆಲವು ಕುಟುಂಬಗಳಲ್ಲಿ ಬಾಲ್ಯವಿವಾಹವು ನಡೆಯುತ್ತಿದೆ. 18 ವರ್ಷಕ್ಕಿಂತ ಕಿರಿಯ ಹುಡುಗಿಯರು ವಿವಾಹವಾಗಲು ಮಾನಸಿಕವಾಗಿ ಪ್ರಬುದ್ಧರಾಗಿರುವುದಿಲ್ಲವಾದುದರಿಂದ ಬಾಲ್ಯವಿವಾಹಗಳನ್ನು ಕಡ್ಡಾಯವಾಗಿ ವಿರೋಧಿಸಬೇಕು.

15. ಯಾವುದೇ ಸಾಮಾಜಿಕ ಚಟುವಟಿಕೆಗಳಲ್ಲಿ ಮಹಿಳೆಯರಿಗೂ ನೇತೃತ್ವವನ್ನು ಕೊಟ್ಟು, ಅವರೂ ರಾಷ್ಟ್ರಾಭಿವೃದ್ಧಿಯಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.

16. ಮನೆಯ ಒಳಗೂ ಹೊರಗೂ ದುಡಿಯುವ ಮಹಿಳೆ ಅನಾರೋಗ್ಯಕ್ಕೆ ತುತ್ತಾಗಿ ಬೇಗನೆ ವೈದ್ಯಾಪ್ಯವನ್ನು ಡೆಯುತ್ತಾಳೆ. ಆದುದರಿಂದ ಮಹಿಳೆಯರಿಗೆ ವೈದ್ಯಾಪ್ಯವೇದನೆಯನ್ನು 55 ವರ್ಷದಿಂದಲೇ ಕೊಡಬೇಕು. ಮತ್ತು ಹೆರಿಗೆ ಭತ್ತೆಯನ್ನು ರೂ. 500ಕ್ಕೆ ಹೆಚ್ಚಿಸಬೇಕು.

17. ಬಡ ವಿಧವೆಯರ ಹೆಣ್ಣು ಮಕ್ಕಳ ವಿವಾಹಕ್ಕೆ ಈಗ ಕೊಡುವ ಮೊತ್ತವನ್ನು ರೂ. 5,000/-ಕ್ಕೆ ಹೆಚ್ಚಿಸಬೇಕು.

18. ವಾರ್ಡುಗಳ ಅಭಿವೃದ್ಧಿಗಾಗಿ ಪಂಚಾಯತು ಮೀಸಲಿರಿಸಿದ ಸಹಾಯಧನದಲ್ಲಿ 20%ವನ್ನು ಮಹಿಳಾ ಕ್ಷೇಮಕ್ಕಾಗಿ ಮೀಸಲಿರಿಸಬೇಕು.

'ಮಹಿಳೆಯರ ಪ್ರಗತಿಯಿಂದ ಮಾತ್ರ ಸಮಾಜದ ಪ್ರಗತಿ' ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ಜಾತಿ, ಮತ, ಬೇದಗಳೆನ್ನಿಸದೆ ಎಲ್ಲಾ ಮಹಿಳೆಯರನ್ನೂ, ವಿದ್ಯಾವಂತರನ್ನಾಗಿ ಮಾಡಿ ಅವರಲ್ಲಿ ಮಹತ್ವಾಕಾಂಕ್ಷೆಯನ್ನು ಭಿತ್ತಿ ಅವರಿಗೆ ಮಹಾ ಭವಿಷ್ಯವಿದೆಯೆಂಬ ಆಸೆಯನ್ನುಚಿಗುರಿಸಿ ಅವರಲ್ಲಿರುವ ದೈನ್ಯ ಪ್ರಪೃತ್ತಿಯನ್ನು ತೊಲಗಿಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ನಮ್ಮ ಈ 9ನೇ ಪಂಚವಾರ್ಷಿಕ ಯೋಜನೆಯಲ್ಲಿ 30%ರಷ್ಟು ಹಣವನ್ನು ಸ್ತ್ರೀಯರಿಗಾಗಿ ಮಿಸಲಿಡಬೇಕು. ಆ ಮೂಲಕ ನಮ್ಮ ಕೇರಳ ರಾಜ್ಯವು ಪ್ರಗತಿಯನ್ನು ಸಾಧಿಸಬಹುದು.

ಸಹಕಾರಿ ರಂಗ

ಮಾನವ ಸಮಾಜ ಜೀವ. ಸಹಕಾರದ ತತ್ವ ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿದೆ. ಪರಸ್ಪರ ಸಹಕಾರ, ಸಹಾನುಭೂತಿ, ವಿಶ್ವಾಸ, ಪ್ರಾಮಾಣಿಕತೆಗಳು ಈ ಕ್ಷೇತ್ರದ ಬೆಳವಣಿಗೆಗೆ ಅನಿವಾರ್ಯವಾಗಿದೆ. ಒಂದು ಯಾ ಹಲವು ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಹಲವಾರು ಮಂದಿ ಸೇರಿ, ಪರಸ್ಪರ ಒಗ್ಗಟ್ಟಿನಿಂದ ಸೇವಾ ಮನೋಭಾವದಿಂದ ದುಡಿದರೆ, ನಾವು ನಮ್ಮ ಸಂಘಗಳ ಮೂಲಕ ಅಭಿವೃದ್ಧಿ ಪಡೆಯಬಹುದು. ರಾಷ್ಟ್ರದ ಆರ್ಥಿಕೋನ್ನತಿಯಲ್ಲಿ ಸಹಕಾರೀ ಸಂಘಟನೆಗಳು ಈಗಾಗಲೇ ಬಹುಮುಖ ಅಭಿವೃದ್ಧಿ ಪಡೆದಿವೆ. ಸಹಕಾರೀ ಸಂಘಟನೆಗಳ ಮೂಲಕ ನಾವು ಧಾರ್ಮಿಕ, ಸಾಮಾಜಿಕ, ಆರ್ಥಿಕ ಉನ್ನತಿಯನ್ನು ಪಡೆಯಲು ಸಾಧ್ಯ ಎನ್ನುವುದಕ್ಕೆ, ಎಣ್ಮಕಜೆ ಪಂಚಾಯತಿನಲ್ಲಿ ಈಗಾಗಲೇ ಕೈಗೊಂಡ ಹತ್ತು ಹಲವು ಸಹಕಾರೀ ಸಂಘಗಳು ಸಾಕ್ಷಿ.

ಪೆರ್ಲ ಪೇಟೆ ಎಣ್ಮಕಜೆ ಗ್ರಾಮದಲ್ಲಿದೆ. ಎಣ್ಮಕಜೆ, ಪಡ್ರೆ, ಕಾಟುಕುಕ್ಕೆ ಮತ್ತು ಮೈರೆ ಗ್ರಾಮಗಳನ್ನೊಳಗೊಂಡ 'ಎಣ್ಮಕಜೆ ಪಂಚಾಯತ್' ಕ್ಷೇತ್ರಕ್ಕೆ ಇದು ಒಂದು ವ್ಯಾವಹಾರಿಕ ಕೇಂದ್ರ ಬಿಂದುವಾಗಿದೆ. ಇಲ್ಲಿ ಹಲವು ಶಿಕ್ಷಣ ಸಂಸ್ಥೆಗಳು ತಲೆ ಎತ್ತಿವೆ. ಈ ಗ್ರಾಮೀಣ ಪ್ರದೇಶದ ಮುಖ್ಯ ವೃತ್ತಿ ಕೃಷಿ. ಕೃಷಿಕನಾದ ಮೇಲೆ, ಆತನಿಗೆ 'ಕೊಂಡು ಕೊಳ್ಳುವ' ವ್ಯವಹಾರ ಇದ್ದೇ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಎಂದರೆ 1919 ಜೂನ್ 26ರ ರಂದು ಮೇಲೆ ಹೇಳಿದ ಗ್ರಾಮಸ್ಥರ ಉಪಯೋಗಕ್ಕಾಗಿ 'ಪೆರ್ಲ ಸಹಕಾರೀ ಸಂಘ' ಸ್ಥಾಪಿಸಲ್ಪಟ್ಟಿತು.

1938ರ ಮಾರ್ಚ್ 8ರಂದು ಪೆರ್ಲ ಸತ್ಯನಾರಾಯಣ ನೇಕಾರರ ಸಹಕಾರಿ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಇದರ ಮೂಲ ಉದ್ದೇಶ ಖಾದಿ ಗ್ರಾಮೋದ್ಯೋಗವನ್ನು ಪ್ರಚಾರಪಡಿಸುವುದು. ಮಾತ್ರವಲ್ಲ, ನೇಕಾರರನ್ನು ಒಂದುಗೂಡಿಸಿ, ಸಂಘದ ಮೂಲಕ ಉದ್ಯೋಗವನ್ನು ಬಲಪಡಿಸುವುದು. ಇದರಿಂದಾಗಿ ನೇಕಾರರ ಜೀವನ ಮಟ್ಟ ಸುಧಾರಿಸಲು ಕಾರಣವಾಯಿತು. ಈ ಎರಡು ಸಂಸ್ಥೆಗಳ ಮೂಲಕ ಸದಸ್ಯರು ಸಕ್ರಿಯ ಪಾಲುಗೊಂಡು, ಆಗ ನಡೆಯುತ್ತಿದ ಸ್ವಾತಂತ್ರ್ಯ ಆಂದೋಲನದಲ್ಲಿ ಪ್ರೋತ್ಸಾಹವನ್ನು ಕೊಟ್ಟಿದ್ದು ಈ ಸಂಸ್ಥೆಗಳು ತಮ್ಮ ಸದಸ್ಯರಿಗೆ ಆರ್ಥಿಕ ಸಹಾಯವನ್ನು ನೀಡುತ್ತಿದ್ದರು. ಇದರಿಂದಾಗಿ ಈ ಎರಡು ಸಂಸ್ಥೆಗಳು ಬೆಳೆದು ಬಂದುವು.

1955 ಸೆಪ್ಟೆಂಬರ್ 5ರಂದು ಕಾಟುಕುಕ್ಕೆಯಲ್ಲಿ ಒಂದು ಸಹಕಾರಿ ಸಂಘದ ಸ್ಥಾಪನೆಯಾದುದರಿಂದ, ಪೆರ್ಲ ಸಹಕಾರೀ ಸಂಘದ ಆ ಗ್ರಾಮದ ಸದಸ್ಯರನ್ನು ಬೇರ್ಪಡಿಸಲಾಯಿತು. ಸದ್ರಿ ಸಂಘವು ಸದಸ್ಯರ ಸತತ ಪ್ರೋತ್ಸಾಹ ಹಾಗೂ ಆಡಳಿತ ಮಂಡಳಿಯ ಸೇವಾ ಮನೋಭಾವದಿಂದ 1980ರಲ್ಲಿ 'ಬೇಂಕ್' ಆಗಿ ಪರಿವರ್ತನೆಗೊಂಡು, ಸದಸ್ಯರಿಗೆ ಆರ್ಥಿಕ ನೆರವನ್ನು ನೀಡುತ್ತಾ ಬರುತ್ತಿದೆ.

'ಅವಶ್ಯಕತೆಯೇ ಅನ್ವೇಷಣೆಯ ತಾಯಿ' ಎಂಬ ಮಾತಿನಂತೆ ಈ ಪ್ರದೇಶದ ಬೀಡಿ ಕಾರ್ಮಿಕರ ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ' ಬದಿಯಡ್ಕ ಬೀಡಿ ಕಾರ್ಮಿಕರ ಸಹಕಾರೀ ಸಂಘದ ಮೂರು ಶಾಖೆಗಳು ಪೆರ್ಲ, ಬೆದ್ರಂಪಳ್ಳ ಮತ್ತು ವಾಣೀ ನಗರದಲ್ಲಿ ಕಾರ್ಯಪ್ರವೃತ್ತವಾಗಿವೆ. ಬೀಡಿ ಉದ್ಯಮವು ಕಳೆದ ಒಂದೆರಡು ದಶಕಗಳಲ್ಲಿ ಬಹಳಷ್ಟು ಈ ಪ್ರದೇಶದಲ್ಲಿ ಬೆಳೆದು ಬಂದಿದೆ. ಗುಡಿ ಕೈಗಾರಿಕೆಯಾದ ಈ ಉದ್ಯಮದಿಂದ ನಿರುದ್ಯೋಗ ನಿವಾರಣೆಯಾದುದು ಮಾತ್ರವಲ್ಲದೆ ಜನ ಜೀವನದ ಆರ್ಥಿಕ ಮಟ್ಟವು ಬಹಳಷ್ಟು ಸುಧಾರಿಸಿದೆ.

1990-91ನೇ ಆರ್ಥಿಕ ವರ್ಷದಲ್ಲಿ ಪೆರ್ಲದಲ್ಲಿ ಜಿಲ್ಲಾ ಸಹಕಾರೀ ಬೇಂಕಿನ ಒಂದು ಶಾಖೆಯನ್ನು ಸ್ಥಾಪಿಸಲಾಗಿದೆ. ಪೆರ್ಲದ ಪರಿಸರದಲ್ಲಿ ಹರಿಜನ, ಗಿರಿಜನರ ಸಂಖ್ಯೆ ಗಣನೀಯವಾದುದರಿಂದ, ಅವರ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ, ಪ್ರತ್ಯೇಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರೀ ಸಂಘವನ್ನು ಸ್ಥಾಪಿಸಲಾಗಿದೆ.

ಪೆರ್ಲ ಸೇವಾ ಸಹಕಾರೀ ಸಂಘವು 1983ರಲ್ಲಿ ಸಹಕಾರೀ ಬೇಂಕ್ ಆಗಿ ಪರಿವರ್ತಿಸಲಾಯಿತು. ಇದರಿಂದಾಗಿ ಸದಸ್ಯರಿಗೆ ಹೆಚ್ಚಿನ ಆರ್ಥಿಕ ಸಹಾಯವನ್ನು ಪಡೆಯಲು ಕಾರಣವಾಯಿತು. ಇದೇ ಸಂಘದ ವತಿಯಿಂದ ಸದಸ್ಯರು ಉತ್ಪಾದನೆ ಮಾಡಿದ 'ಅಡಿಕೆ'ಯನ್ನು 'CAMPCO' ಸಂಸ್ಥೆಯ ಸಸಭಾಗಿತ್ವದಲ್ಲಿ ಖರೀದಿ ಮಾಡುವ ವ್ಯವಸ್ಥೆಯನ್ನೂ ಕೈಗೊಂಡು ಸದಸ್ಯರ ಉತ್ಪಾದನೆಗೆ ಉತ್ತಮ ಕ್ರಯ ಸಿಗಲು ಕಾರಣವಾಯಿತು.

ಸಹಕಾರೀ ಸಂಘ ಸಂಸ್ಥೆಗಳ ಯಶಸ್ಸು, ಸದಸ್ಯರನನು ಮತ್ತು ಆಡಳಿತ ಕಮಿಟಿಯನ್ನು ಹೊಂದಿಕೊಂಡಿದೆ. ಕೆಲಸದಲ್ಲಿ ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವಿದ್ದಾಗ ಈ ಕ್ಷೇತ್ರ ಆರ್ಥಿಕವಾಗಿ ಬೆಳೆಯುತ್ತದೆ ಮತ್ತು ಸದಸ್ಯರನ್ನು ಆರ್ಥಿಕವಾಗಿ ಸ್ವತಂತ್ರರನ್ನಾಗಿ ಮಾಡುತ್ತದೆ.

ಅವಶ್ಯಕತೆಗಳು

ಸಹಕಾರೀ ಕ್ಷೇತ್ರದಲ್ಲಿ ಈ ಕೆಳಗಿನ ವಿಚಾರಗಳಲ್ಲಿ ಹೊಸದಾಗಿ ಸಂಘಗಳು ಸ್ಥಾಪಿಸಬೇಕಾಗಿದೆ. 9ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಇವನ್ನು ಕಾರ್ಯ ರೂಪಕ್ಕೆ ಬರಲು ನಿರೀಕ್ಷಿಸುತ್ತೇವೆ. ಗ್ರಾಮ ಸಭೆಗಳ ವರದಿಯಂತೆ ಇವು ನಮಗೆ ಅನಿವಾರ್ಯವಾಗಿವೆ.

1. ಸಹಕಾರೀ ಕ್ಷೀರ ಉತ್ಪಾದಕರ ಸಂಘ

2. ಸಹಕಾರೀ ವಿವಿಧೋದ್ದೇಶಗಳ ಸಂಘ

3. ಸಹಕಾರೀ ನ್ಯಾ ಬೆಲೆ ಅಂಗಡಿ ಪ್ರತೀವಾರ್ಡಿಗೆ ಒಂದರಂತೆ ಇರಬೇಕು

4. ಸಹಕಾರೀ ಪ್ರಾಥಮಿಕ ಆರೋಗ್ಯ ಕೇಂದ್ರ

5. ಸಹಕಾರೀ ಕೃಷಿ ವ್ಯವಹಾರ ಸಂಘ (ಮಾರ್ಕೇಟಿಂಗ್)

6. ಸಹಕಾರೀ ಲೇಬರ್ ಕೋಂಟ್ರೇಕ್ಟ್ ಸಂಘ L ಪ್ರತಿ ವಾರ್ಡಿಗೆ ಒಂದರಂತೆ

7. ಸಹಕಾರೀ ವಿದ್ಯಾ ಸಂಸ್ಥೆಗಳು.

8. ವನಿತಾ ಸಹಕಾರೀ ವಿವಿಧೋದ್ದೇಶ ಸಂಘ

9. ಪಂಚಾಯತ್ ಮಟ್ಟದಲ್ಲಿ 'ಗೃಹ ನಿರ್ಮಾಣ ಸಹಕಾರೀ ಸಂಘವನ್ನು' ಸ್ಥಾಪಿಸುವುದು.

ಮೇಲೆ ಹೇಳಿದ ಸಹಕಾರೀ ಸಂಘಗಳ ಒಂದೊಂದು ಶಾಖೆಯನ್ನು ಪ್ರತೀ ಗ್ರಾಮದಲ್ಲೂ ಒಂದೊದರಂತೆ ತೆರೆಯಬೇಕು.

ಈ ರೀತಿ ಸ್ಥಾಪಿಸಲ್ಪಡುವ ಸಂಘ ಸಂಸ್ಥೆಗಳಲ್ಲಿ ಆಡಳಿತ ಸಮಿತಿಯಲ್ಲಿ ರಾಜಕೀಯ ಬರಬಾರದು.ಆದುದರಿಂದ ರಾಜಕೀಯೇತರರನ್ನೇ ಆಯ್ಕೆ ಮಾಡಬೇಕು. ಈ ಆಡಳಿತ ಮಂಡಳಿಗೆ ಬ್ಲೋಕ್ ಮತ್ತು ಜಿಲ್ಲಾ ಮಟ್ಟದ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು.

ಸಾಧ್ಯತೆಗಳು

1. ಔದ್ಯೋಗಿಕ ಆಡಳಿತ ತರಬೇತಿಯನ್ನು ಪ್ರತಿ 6 ತಿಂಗಳಿಗೊಮ್ಮೆ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಿ, ಕಚೇರಿಗಳ ಆಡಳಿತಾತ್ಮಕ ಆಗು ಹೋಗುಗಳನ್ನು ವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸುವುದು.

2. ಕಾರ್ಮಿಕರಿಗೆ ತಾಂತ್ರಿಕ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ಪ್ರತಿ 6 ತಿಂಗಳಿಗೊಮ್ಮೆ ನಡೆಸುವುದು.

3. ಸಂಘಗಳ ಎಲ್ಲಾ ಚಟುವಟಿಕೆಗಳು ಪ್ರಜಾಪ್ರಭುತ್ವದ ತಳಹದಿಯಲ್ಲಿ ನಡೆಸುವುದು.

PROFORMA - 1

ಪಂಚಾಯತಿನ ಒಟ್ಟು ಸಹಕಾರೀ ಸಂಘಗಳ ವಿವರ

ಸ್ಥಾಪನೆ	ಸಹಕಾರೀ ಸಂಘದ ಹೆಸರು	ಸದಸ್ಯರ	ನೌಕರ/ಕಾರ್ಮಿಕರ ಸಂಖ್ಯೆ	ಪಾಲು ಮೂಲ ಸಂಖ್ಯೆ	ವಾರ್ಷಿಕ ಟರ್ನ್ ಧನ	ಲಾಭ/ನಷ್ಟ ಓವರ್
1919	ಪೆರ್ಲ ಸೇವಾ ಸಹಕಾರೀ ಸಂಘ	4331	5+3(8)	25,00,000/-	3,50,00,000/-	ಲಾಭದಲ್ಲಿದೆ
1955	ಕಾಟುಕುಕ್ಕೆ ಸೇವಾ ಸಹಕಾರಿ ಬೇಂಕ್	1859	6	6,74,405/-	1,50,00,000/-	ಲಾಭದಲ್ಲಿದೆ
1938	ಪೆರ್ಲ ಸ. ನಾ. ನೇಕಾರರ					
	ಸೇವಾ ಸಹಕಾರೀ ಸಂಘ	132	41	10,00,000	-	ನಷ್ಟದಲ್ಲಿದೆ
	ಬದಿಯಡ್ಕ, ಬೀಡಿ ಕಾರ್ಮಿಕರ					
	ಸಹಕಾರಿ ಸಂಘದ ಬ್ರಾಂಚ್					
	ಪೆರ್ಲ, ವಾಣೀನಗರ, ಬೆದ್ರಂಪಳ್ಳ	1163	192	3,00,000	-	-
1988	ಪೆರ್ಲ SC/ST ಸಹಕಾರೀ ಸಂಘ	-	1	-	-	-
1990	ಕಾಸರಗೋಡು ಜಿಲ್ಲಾ ಸೇವಾ					
	ಸಹಕಾರೀ ಸಂಘದ ಶಾಖೆ	-	3	-	-	-

ಕೊರತೆಗಳು

1. ಸಹಕಾರೀ ಸಂಘದಿಂದ ಸಾಲ ತೆಗೆಯುವುದು ಮುಖ್ಯವಲ್ಲ, ಕ್ಲಪ್ತ ಕಾಲಕ್ಕೆ ಅದನ್ನು ಬಡ್ಡಿ ಸಹಿತ ಕಟ್ಟುವುದು ಅತೀ ಪ್ರಾಮುಖ್ಯವಾಗಿದೆ.

2. ನಾವಿಂದು ಯಾವುದೇ ಸಹಕಾರೀ ಸಂಘದ ಚುನಾವಣೆಯಲ್ಲಿ ಪಕ್ಷ ರಾಜಕೀಯ ಕಾಣುತ್ತೇವೆ, ಆದರೆ ಸಂಘದ ಹಿತ ದೃಷ್ಟಿಯಿಂದ ಇದು ಅವನತಿಗೆ ಹೋಗಲು ಕಾರಣವಾಗುತ್ತದೆ. ನಿರ್ದೇಶಕರಲ್ಲಿ ಸಹಮತವಿಲ್ಲದಿರುವುದು, ಗುಂಪುಗಾರಿಕೆ, ದೋಷರೋಪಣೆ, ಸ್ವಜನ ಪಕ್ಷಪಾತ, ನೇಮಕಾತಿಯಲ್ಲಿ ಭ್ರಷ್ಟಾಚಾರ, ಸಾರ್ವಜನಿಕ ಹಣವನ್ನು ಕೆಲವೇ ಮಂದಿ ವಂಚಿರಿ 'ಗುಳುಂ' ಮಾಡುವು, ಮೋಸದ ವ್ಯವಹಾಗಳು, ಸಹಕಾರೀ ತತ್ವಕ್ಕೆ ಕೊಡಲಿಯೇಟಾಗಿದೆ.

3. ಸಹಕಾರೀ ಸಂಘಗಳ ಹೆಸರಲ್ಲಿ 'ಸೇವಾ' ಎಂಬ ವಿಶೇಷಣವಿದೆ. ಆದರೆ ನೌಕರರಲ್ಲಿ ಆ ಸೇವಾ ಭಾವನೆ ಕಾಣದಿರುವುದು ದುರದೃಷ್ಟಕರ. ಮಾತ್ರವಲ್ಲ ಸಹಕಾರೀ ಸಂಘಗಳ ನಿರ್ದೇಶಕರೂ ಸೇವಾ ಮೋಭಾವವುಳ್ಳವರಾಗಿರಬೇಕು.

4. ನೌಕರರು 'ತಾವು ಸೇವಕರೆಂದು' ತಿಳಿದು, ಸದಸ್ಯರಲ್ಲಿ ವಿನಯ, ಸೌಜನ್ಯಗಳಿದೊಂಡಗೂಡಿದ ವ್ಯವಹಾರ ಮಾಡಬೇಕು.

5. (SC/ST) ಪರಿಶಿಷ್ಟ ಜಾತಿ / ವರ್ಗಗಳಿಗೆ ಹಲವು ಸಬ್ಸಿಡಿಗಳನ್ನು ಸಹಕಾರಿ ಸಂಘಗಳ ಮೂಲಕ ನೀಡುತ್ತದೆ. ಈ ಸದವಕಾಶ ಅವರೀಗೆ ನೇರವಾಗಿ ದೊರಕುತ್ತದೋ ಎಂದು ನೋಡಲು ಪ್ರತ್ಯೇಕವಾದ ಒಂದು 'ಕಮಿಟಿ' ಇರುವುದು ಒಳ್ಳೆಯದು.

6. ನಿರ್ದೇಶಕರು ಹಾಗೂ ಅಧ್ಯಕ್ಷರೀಗೆ ತಿಳಿಯದೆ ಅದೆಷ್ಟೋ ಸಹಕಾರೀ ಸಂಘಗಳಲ್ಲಿ ಒಳಗಿಂದೊಳಗೇ ವ್ಯವಹಾರಗಲು ನಡೆಯುತ್ತದೆ. ಅಧ್ಯಕ್ಷರು ಕೇವಲ 'ರಬ್ಬರ್ ಸ್ಟೇಂಪ್' ಆಗಬಾರದು. ಇದರಿಂದಾಗಿ ಅದೆಷ್ಟೋ ಸಂಘಗಳು ಕೊನೆಯುಸಿರುಬಿಡುತ್ತವೆ.

ಉಪಸಂಹಾರ

ಸಹಕಾರೀ ತತ್ವ ನಿಜಕ್ಕೂ ಅನುಪಮವಾದುದು. ಇದರಿಂದ ಸಮಾಜ ಆರ್ಥಿಕವಾಗಿ ಮುಂದುವರಿಯುವುದು. ಮಾತ್ರವಲ್ಲದೆ ಸದಸ್ಯರಲ್ಲಿ ಏಕತೆ, ಸದ್ ಚಿಂತನೆ, ಸಮಾನತೆ ಸೋದರತೆಗಳು ಉಂಟಾಗುತ್ತವೆ. ಜಾತಿಮತಗಳ, ವರ್ಣದ್ವೇಷಗಳ ಬದಲು ಆತ್ಮೀಯ ವಾತಾವರಣ ಉಂಟಾಗುತ್ತದೆ ಪರಸ್ಪರ ತಿಳುವಳಿಕೆ ಮಾನವನ ಅಡ್ಡ ಗೋಡೆಯನ್ನು ಕಳಚುತ್ತದೆ. ಆದುದರಿಂದ ಬರುವ 21ನೇ ಶಮಾನದ ಹೊಸ್ತಿಲನ್ನು ದಾಡಲು ಈ ಸಹಕಾರೀ ಸಂಘಗಳೇ ಕೈದೀವಿಗೆಗಳಾಗಲಿ ಎಂದು ಹಾರೈಸುತ್ತೇನೆ.

'ಸರ್ವೇ ಜನಾಃ ಸುಖಿನೋ ಭವಂತು'

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಕ್ಷೇಮ :

ಎಣ್ಮಕಜೆ ಗ್ರಾಮ ಪಂಚಾಯತಿನ ಹೆಚ್ಚಿನ ಹಳ್ಳಿ ಪ್ರದೇಶಗಳಲ್ಲಿ ವಾಸಿಸುವವರು ಈ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಕಾಸರಗೋಡು ಜಿಲ್ಲೆಯಲ್ಲಿಯೇ ಪಂಚಾಯತಿಯಲ್ಲಿ ಈ ವರ್ಗದವರ ಸಂಖ್ಯೆ ಬಹಳ ಹೆಚ್ಚು ಎಂದು ಹೇಳಬಹುದು. ಈ ವರ್ಗಕ್ಕೆ ಸೇರಿದವರು ಹೆಚ್ಚಿನವರೂ ಬಡತನ ರೇಖೆಗಿಂತ ಕೆಳಗಿನ ಮಟ್ಟದವರಾಗಿದ್ದಾರೆ. ಈ ಪಂಚಾಯತಿಗೆ ವರ್ಗದವರಿಗೆ ಸಿಕ್ಕಿದ ಸೌಲಭ್ಯಗಳು ತೀರಾ ಕಡಿಮೆ, ಎಂದು ಹೇಳಬಹುದು. ಈ ವರ್ಗದವರು ಇನ್ನೂ ಪುರೋಗತಿಯನ್ನು ಹೊಂದ ಬೇಕಾದರೆ ಸರಕಾರದಿಂದ ಬರುವ ಅನುದಾನವನ್ನು ಸರಿಯಾದ ಸಮಯಕ್ಕೆ ಸರಿಯಾದ ಕ್ರಮದಲ್ಲಿ ದೊರೆಯುವಂತೆ ಮಾಡಿದರೆ ಮಾತ್ರ ಸಾಧ್ಯವಾದೀತು.

ಈ ಗ್ರಾಮದ ಪಂಚಾಯತಿನ ಒಟ್ಟು ಜನ ಸಂಖ್ಯೆಯು 1991ನೇ ಜನಗಣತಿ ಪ್ರಕಾರ 24.166 ಮಂದಿ. ಇದರಲ್ಲಿ ಪ.ಜಾತಿ, ಪ. ವರ್ಗದವರು ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ವಿಭಾಗ	ಗಂಡರು	ಹೆಂಗಸರು	ಒಟ್ಟು	ಶೇಕಡಾ	ಇರುವ ಕಾಲನಿಗಳು
1.	ಪರಿಶಿಷ್ಟ ಜಾತಿ SC	1037	941	1978	12.32	46
2.	ಪರಿಶಿಷ್ಟ ವರ್ಗ ST	3357	3244	6501	27	200
	ಎರಡೂ ವಿಭಾಗಕ್ಕೆ ಸೇರಿದವರು	4394	4085	8479.	39.32	246

ಇದು 1991ನೇ ಜನಗಣತಿ ಪ್ರಕಾರವಾಗಿ ದೊರಕಿದ್ದಾಗಿರುವುದರಿಂದ ಈಗ ಈ ಜನಸಂಖ್ಯೆಯೂ, ಅವರು ವಾಸಿಸುವ ಕಾಲನಿಗಳ ಸಂಖ್ಯೆಯೂ ಬದಲಾಗಿ ಈಗ ಬಹಳ ಹೆಚ್ಚಾಗಿರುತ್ತದೆ ಎಂದು ಗ್ರಾಮ ಸಭಾ ವರದಿಯಿಂದ ತಿಳಿಯಲು ಸಾಧ್ಯವಿದೆ.

ಪರಿಶಿಷ್ಟ ಜಾತಿಯವರಲ್ಲಿ ಒಟ್ಟಿಗೆ ಒಂದು ಪ್ರದೇಶದಲ್ಲಿ ಹತ್ತು ಮನೆಗಳು ಇದ್ದರೆ ಆ ಪ್ರದೇಶವನ್ನು ಕಾಲನಿಯೆಂದು ಸರಕಾರ ಅಂಗೀಕರಿಸುತ್ತದೆ. ಈ ಅಂಗೀರವನ್ನು ಬದಲಿಸಿ ಅದರಿಂದ ಕಡಿಮೆ ಮನೆಗಳು ಇದ್ದರೂ ಆ ಮನೆಗಳಿಗೆ ಕಾಲನಿಗೆ ಸಿಗುವ ಸೌಲಭ್ಯಗಳು ಸಿಗುವಂತೆ ಮಾಡಬೇಕೆಂದು ಗ್ರಾಮ ಸಭಾ ವರದಿಯು ತಿಳಿಯಪಡಿಸುತ್ತದೆ. ಅದೇ ರೀತಿ ಪ. ವರ್ಗದವರು ಒಂದು ಪ್ರದೇಶದಲ್ಲಿ ಐದಕ್ಕಿಂತ ಹೆಚ್ಚು ಮನೆಗಳಿದ್ದರೆ ಮಾತ್ರ ಕಾಲನಿಯಾಗಿ ಅಂಗೀಕಾರವಾದುದರಿಂದ ಅದರಿಂದ ಕಡಿಮೆ ಮನೆಗಳಿದ್ದರೂ ಆ ಪ್ರದೇಶದ ಮನೆಯವರಿಗೂ ಕಾಲನಿಯ ಸೌಲಭ್ಯಗಳು ದೊರೆಯುವಂತಾಗಬೇಕು. ವಿದ್ಯಾಭ್ಯಾಸ ರಂಗದಲ್ಲಿ ಈ ವರ್ಗಗಳಿಗೆ ಸೇರಿದ ಜನರು ಕೆಲವು ಕಡೆ ಮುಂದುವರಿದಿದ್ದರೂ ಇನ್ನೂ ಅನೇಕ ಕಾಲನಿಗಳಲ್ಲಿ ಬಹಳಷ್ಟು ಹಿಂದುಳಿದಿದ್ದಾರೆ. ಇದಕ್ಕೆಲ್ಲಾ ಅನೇಕ ಕಾರಣಗಳೂ ಇವೆ. ಈ ಕಾಲನಿಗಳಲ್ಲಿ ವಾಸಿಸುವ ಕೆಲವರಿಗೆ ಸ್ವಂತ ಮನೆಗಳಿದ್ದರೂ ಇನ್ನೂ ಸ್ವಂತವಾಗಿ ಸ್ಥಳದ ದಾಖಲೆ ಪತ್ರಗಳು ಸಿಗದ ಕುಟುಂಬದವರೂ ಇರುವರು. ಆದುದರಿಂದ ಅವರಿಗೆ ಸ್ವಾಧೀನವಿರುವ ಸ್ಥಳಗಳನ್ನು ಸರಿಯಾದ ಕ್ರಮದಲ್ಲಿ ಅಳತೆ ಮಾಡಿಕೊಟ್ಟರೆ ಅವರಿಗೆ ತಮ್ಮ ಸ್ವಂತ ಸ್ಥಳದಲ್ಲಿ ಕೃಷಿ ಮಾಡಿ ಜೀವಿಸಲು ಸಾಧ್ಯವಾದೀತು. ಮಾತ್ರವಲ್ಲದೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯಲೂ ಸಾಧ್ಯವಾದೀತು.

ಸರಕಾರದಿಂದ ಸಿಗುವ ಸೌಲಭ್ಯಗಳು : ಈ ವರ್ಗದವರ ಹೆಚ್ಚಿನ ಕಾಲನಿಗಳಿಗೂ, ಇತರ ಪ್ರದೇಶಗಳಲ್ಲಿ ವಾಸಿಸುವವರಿಗೂ ಸರಿಯಾದ ಮಾಹಿತಿದೊರೆಯದೇ ಇದ್ದುದರಿಂದಾಗಿ ಇದನ್ನು ಪಡೆಯುವಲ್ಲಿ ವಿಫಲರಾಗಿರುವರು. ಸರಕಾರದಿಂದ ಅನೇಕ ರೀತಿಯ ಸೌಲಭ್ಯಗಳು ಈ ವರ್ಗದವರಿಗೆ ಸಿಗುವಂತಹ ವ್ಯವಸ್ಥೆಗಳಿವೆ. ಇವುಗಳನ್ನು ಪಡೆಯುವಲ್ಲಿ ವಿಫಲರಾಗುವ ಅನೆಕ ಕಾರಣಗಳಿವೆ. ಜನ ಸಾಮಾನ್ಯರಿಗೆ ಸರಿಯಾದ ವಿದ್ಯಾಭ್ಯಾಸದ ಕೊರತೆ, ವಿದ್ಯಾಭ್ಯಾಸ ಇದ್ದರೂ ಸರಿಯಾದ ಮಾಹಿತಿ ದೊರೆಯದೇ ಇರುವುದು. ಅಷ್ಟು ಮಾತ್ರವಲ್ಲದೇ ಕೆಲವು ಸೌಲಭ್ಯಗಳನ್ನು ಪಡೆಯಲು ಅರ್ಜಿ ಸಲ್ಲಿಸುವಾಗ ಇರುವ ಕೆಲವು ಅನಗತ್ಯವಾದ ಕರಾರುಗಳು. ಇದರಿಂದಾಗಿ ಜನ ಸಾಮಾನ್ಯರು ಆಸಕ್ತಿಯನ್ನು ಕಳಕೊಳ್ಳುವರು. ಸರಕಾರದಿಂದ ಸಿಗುವ ಸೌಲಭ್ಯಗಳು ಸರಿಯಾದ ಕ್ರಮದಲ್ಲಿ ದೊರೆಯುವಂತೆ ಮಾಡಲು ಜನ ಸಾಮಾನ್ಯರು ಹೋಗುವ ಸ್ಥಳಗಳಲ್ಲಿ ಮಾಹಿತಿ ಕೇಂದ್ರಗಳನ್ನು ತೆರೆಯುವುದು. ಹಾಗೂ ಯೋಗ್ಯರಾದ ಮಾಹಿತಿದಾರರನ್ನು ನೇಮಿಸುವುದು. ಗ್ರಾಮಗಳಿಗೆ ಒಂದರಂತೆಯಾದರೂ ಮಾಹಿತಿ ಕೇಂದ್ರಗಳನ್ನು ತೆರೆಯಬೇಕು. ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ಅರ್ಜಿ ಹಾಗೂ ಸಂಬಂಧಿಸಿದ ಇತರ ವಿಷಯಗಳು ಆಯಾ ಮಾಹಿತಿ ಕೇಂದ್ರಗಳಲ್ಲಿಯೇ ಸಿಗುವಂತೆ ವ್ಯವಸ್ಥೆಯಾಗಬೇಕು. ವಿದ್ಯಾಭ್ಯಾಸ ಇಲ್ಲದೇ ಇದ್ದವರಿಗೆ ಸರಿಯಾದ ವಿದ್ಯಾಭ್ಯಾಸವನ್ನು ನೀಡಬೇಕು. ಬಾಲ್ಯದಲ್ಲಿಯೇ ಕೂಲಿ ಕೆಲಸಕ್ಕೆ ಹೋಗುವ ಮಕ್ಕಳನ್ನು ಸರಿಯಾಗಿ ಶಾಲೆಗೆ ಹೋಗುವ ವ್ಯವಸ್ಥೆಯಾಗಬೇಕು. ಬಾಲ ಕಾರ್ಮಿಕರನ್ನು ನೇಮಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತಾಗಬೇಕು. ಆದರೆ ಮಾತ್ರ ಇವರಿಗೆ ಸರಿಯಾದ ರೀತಿಯಲ್ಲಿ ಶಾಲೆಗೆ ಹೋಗಿ ವಿದ್ಯಾಭ್ಯಾಸ ಪಡೆಯುವಂತಾಗಬಹುದು.

ಅರ್ಧದಲ್ಲೇ ಶಾಲೆ ಬಿಡುವಂತಹ ತೊಂದರೆಗಳನ್ನು ಪರಿಹರಿಸಿ ಅವರ ವಿದ್ಯಾಭ್ಯಾಸದ ಮುಂದುವರಿಕೆಗೆ ಪ್ರೋತ್ಸಾಹ ನೀಡಬೇಕು. ಕೆಲವು ಧನ ಸಹಾಯವನ್ನು ಪಡೆಯಲು ಜಾಮೀನುದಾರರ ಆವಶ್ಯಕತೆ ಇರುವುದರಿಂದ ಸಾಲ ಪಡೆಯಲು ವಿಫಲರಾಗುತ್ತಾರೆ. ಸಾಲ ಪಡೆಯುವವರಿಗೆ ಜಾಮೀನು ನಿಲ್ಲಲು ಯಾರೂ ಆಸಕ್ತಿ ತೋರುವುದಿಲ್ಲ. ಕೆಲವು ಸೌಲಭ್ಯಗಳು ಸಿಗುವಾಗ ಮದ್ಯವರ್ತಿಗಳು ಮಧ್ಯ ಪ್ರವೇಶಿಸದಂತೆ ಕ್ರಮಗಳನ್ನು ಕೈಗೊಳ್ಳಬೇಕು. ನೇರವಾಗಿ ಈ ವಿಭಾದವರಿಗೆ ಸಿಗುವಂತಾಗಬೇಕು.

ವಿದ್ಯಾಭ್ಯಾಸ : ನಮ್ಮ ಕೇರಳ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆಯಾಗಿದೆ, ಎಂದು ಘೋಷಿಸಿದರೂ ಈ ಪ. ಜಾತಿ, ವರ್ಗದವರು ಪಾಸಿಸುವಲ್ಲಿ ಎಷ್ಟೊ ಮಂದಿ ಅನಕ್ಷರಸ್ತರನ್ನು ಕಾಣಬಹುದು. ಕೆಲವರಿಗೆ ಕೇವಲ ದಸ್ಕತ್ತು ಹಾಕುವುದಕ್ಕೆ ಮಾತ್ರ ಸಾಧ್ಯವಾಗಿದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇನ್ನೂ ಅನೇಕ ಯೋಗ್ಯ ಕಾರ್ಯಗಳು ನಡೆಯಬೇಕಾದಿದೆ. ಕೆಲವು ಕಡೆಗಳಲ್ಲಿ ವಂಚಿತರಾಗಿದ್ದಾರೆ. ಯಾಕೆಂದರೆ ಇವರ ರಕ್ಷಕರಿಗೆ ವಿದ್ಯಾಭ್ಯಾಸದ ಕೊರತೆ ಇರುವುದರಿಂದ ಹಾಗೂ ಆರ್ಥಿಕ ಕೊರತೆ, ಇದರಿಂದ ಇವರಲ್ಲಿ ಹೆಚ್ಚಿನವರೂ ಕೂಲಿ ಕೆಲಸಗಳಿಗೆ ಶರಣರಾಗುತ್ತಾರೆ. ವಿದ್ಯಾಭ್ಯಾಸದ ಪ್ರಯೋಜನದ ಬಗ್ಗೆ ಹೆಚ್ಚು ಮಾಹಿತಿಯನ್ನು ಹೊಂದೇ ಇದ್ದುದರಿಂದಲೂ ಈ ರೀತಿಯಾಗಿದೆ ಎಂದು ಹೇಳಬಹುದು. ವಿದ್ಯಾಭ್ಯಾಸವು ತನ್ನ ಭವಿಷ್ಯದ ಜೀವನಕ್ಕೆ ಎಷ್ಟು ಮಹತ್ವ ಪೂರ್ಣವಾಗಿದೆ ಎಂಬುದನ್ನು ಜನ ಸಾಮಾನ್ಯರಿಗೆ ಮೂಡಿಸುವಂತಾಗಬೇಕು.

ಪ. ವರ್ಗಗಳಿಗೆ ಸೇರಿದ ಜನಾಂಗ ವಿದ್ಯಾಭ್ಯಾಸದಲ್ಲಿ ಹಿಂದುಳಿದ್ದಾರೆ. ಶೈಶವದಿಂದಲೇ ಅಂಗನವಾಡಿಗಳ ಮೂಲಕ ಅವರಿಗೆ ವಿದ್ಯೆಯಲ್ಲಿ ಆಸಕ್ತಿ ಮೂಡಿಸುವಂತೆ ಅಂಗನವಾಡಿಗಳನ್ನು ಕೊಲನಿ ಪ್ರದೇಶಗಳಲ್ಲಿ ಕಾರ್ಯ ಪ್ರವೃತ್ತಗೊಳಿಸಿದರೆ ಹಿಂದುಳಿದ ವರ್ಗದ ಶೋಚನೀಯವಸ್ಥೆಗೆ ಒಂದು ಪರಿಹಾರ ಮಾರ್ಗವನ್ನು ತೋರಿಸಿದಂತಾಗಬಹುದು.

ಪ. ವರ್ಗದ ಕೊರಗ ಸಮುದಾಯಕ್ಕೆ ಸೇರಿದವರು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇತರ ಪಂಗಡದವರಿಗಿಂತ ಬಹಳ ಹಿಂದೆ ಬಿದ್ದಿರುತ್ತಾರೆ. ಆದುದರಿಂದ ಎಲ್ಲರಿಗಿಂತಲೂ ಅವರಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿದೆ.

ಶಾಲಾ ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿರುವುದರಿಂದ ತುಂಬಾ ಪ್ರಯೋಜನವಿದೆ. ಆದರೆ ಅದು ಸರಿಯಾದ ಕ್ರಮದಲ್ಲಿ ಸದುಪಯೋಗವಾಗುವುದಿಲ್ಲ. ಇದರೊಟ್ಟಿಗೆ ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯಪುಸ್ತಕ, ಸಮ ವಸ್ತ್ರವು ಸರಿಯಾದ ಸಮಯದಲ್ಲಿ ಒದಗಿಸಿಕೊಟ್ಟರೆ ಇನ್ನು ಉಪಯುಕ್ತ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಾಲಾ ವಿದ್ಯಾಭ್ಯಾಸವನ್ನು ಮುಂದುವರಿಸಬಹುದು. ಪ್ರಾಥಮಿಕ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಬೇಕಾದ ಪೀಠೋಪಕರಣಗಳನ್ನು ಸೂಕ್ತ ಸಮಯದಲ್ಲಿ ಒದಗಿಸಿ ಕೊಡಬೇಕು. ಪ್ರಾಥಮಿಕ ವಿದ್ಯಾಭ್ಯಾಸದ ಸಮಯದಲ್ಲಿ ಆಯಾ ಶಾಲೆಗಳ ಅಧ್ಯಾಪಕರು ವಿದ್ಯಾರ್ಥಿಗಳ ಮನೆಗೆ ಚೀಟಿ ನೀಡಿ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ತಿಳಿದು ಅದರ ಪರಿಹಾರದ ಬಗ್ಗೆ ಹೆತ್ತವರಲ್ಲಿ ತಿಳಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ವಿಭಾಗದವರು ವಿದ್ಯಾಭ್ಯಾಸ ಮಾಡಿದರೂ ಪ್ರೌಢ ಶಾಲಾ ಹಂತದಲ್ಲಿ ಗಣನೀಯವಾಗಿ ಆ ಸಂಖ್ಯೆ ಇಳಿಮುಖವಾಗುತ್ತದೆ. ಎಂದು ದ್ವಿತೀಯ ಮಾಹಿತಿ ಸಂಗ್ರಹದಿಂದ ಲಭಿಸುತ್ತದೆ.

ಈ ಪ. ಜಾತಿ, ವರ್ಗದ ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ತರಗತಿಗೆ ಸಂಬಂಧಪಟ್ಟ ವಿಶೇಷ ತರಬೇತಿಯನ್ನು ನೀಡಬೇಕು.

ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾಗುವಂತೆ ಮೊದಲೇ ಅವರಿಗೆ ಪ್ರತೇಕ ವ್ಯವಸ್ಥೆಯನ್ನು ಮಾಡಬೇಕು.

ತೇರ್ಗಡೆಯಾಗದೇ ಇದ್ದ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಗುರುತಿಸಿ ಅವರಿಗೆ ಉಚಿತವಾಗಿ ತರಬೇತಿಯನ್ನು ಕೊಟ್ಟು ಅವರು ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಪ್ರೋತ್ಸಾಹಿಸಬೇಕು. ಈಗ ಇರುವ ಸೌಲಭ್ಯಗಳು ಸರಿಯಾದ ಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಿಗುವಂತೆ ಆಗಬೇಕು. ಆದರೆ ಕೇವಲ ನಾಮ ಮಾತ್ರವಾಗಿ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುವಂತಾಗಬಾರದು. ಅದೇ ರೀತಿ ಪಿ.ಡಿ.ಸಿ.ಗಳಲ್ಲಿಯೂ ಉತ್ತೀರ್ಣರಾಗದವರಿಗೆ ಸರಿಯಾದ ಕ್ರಮದಲ್ಲಿ ಮುಂದಿನ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಇರುವ ಕ್ರಮವನ್ನು ಸರಿಯಾದ ವ್ಯವಸ್ಥೆಗಳಲ್ಲಿ, ಸಿಗುವಂತೆ ಮಾಡಬೇಕು.

ಪ್ರೌಢ ಶಾಲಾ ವಿದ್ಯಾಭ್ಯಾಸವು ಮುಗಿದೊಡನೇ ಈ ವಿಭಾಗದ ಮಕ್ಕಳು ತಾಂತ್ರಿಕ ವಿದ್ಯಾಭ್ಯಾಸವನ್ನು ಪಡೆಯುವಂತಹ ವ್ಯವಸ್ಥೆಯಾಗಬೇಕು. ಹೆಚ್ಚಿನ ವಿದ್ಯಾರ್ಥಿಗಳಿಗೂ ಈ ತಾಂತ್ರಿಕ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ. ಮಾತ್ರವಲ್ಲದೇ ಆರ್ಥಿಕ ತೊಂದರೆಯೂ ಇರುತ್ತದೆ. ಆದುದರಿಂದ ಯೋಗ್ಯ ವಿದ್ಯಾರ್ಥಿಗಳಿಗೆ ತಾಂತ್ರಿಕ ವಿದ್ಯಾಭ್ಯಾಸವನ್ನು ಪಡೆಯಲು ಅನುಕೂಲಕರವಾದ ವ್ಯವಸ್ಥೆಯಾಗಬೇಕು. ಪ. ಜಾತಿಗೆ ಸೇರಿದವರಲ್ಲಿ ತಾಂತ್ರಿಕ ಪದವಿಯನ್ನು ಪಡೆದವರು ವಿರಳ. ಬೆರಳೆಣಿಕೆಯಷ್ಟು ಮಾತ್ರ ಎಂ.ವಿ. ಮೊದಲಾದ ಉನ್ನತ ಮಟ್ಟದ ವಿದ್ಯಾಭ್ಯಾಸವನ್ನು ಪಡೆದರೂ ನಿರುದ್ಯೋಗಿಗಳಾಗಿ ನೊಂದು ಬವಣೆ ಪಡುತ್ತಿದ್ದರೆ. ಅಧ್ಯಾಪಕ ತರಬೇತಿ ಪಡೆದಂತಹ ಎಷ್ಟೊ ಮಂದಿ ಯುವಕ ಯುವತಿಯರು ಈ ವಿಭಾಗಕ್ಕೆ ಸೇರಿದವರಲ್ಲಿದ್ದಾರೆ. ಆದರೆ ಇಲ್ಲಿ ಸರಕಾರಿ ಶಾಲೆಗಳು ಕಡಿಮೆ ಇರುವುದರಿಂದ ಅವರಿಗೆ ಶಾಲೆಗಳಲ್ಲಿ ಸೇರಲು ಕಷ್ಟವಾಗುತ್ತದೆ. ಅರವನ್ನು ಖಾಸಗೀ ಶಾಲೆಗಳಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಖಸಗೀ ಶಾಲೆಗಳಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಖಾಸಗೀ ಶಾಲೆಗಳಲ್ಲಿಯೂ ಮೀಸಲಾತಿ ಸೀಟುಗಳನ್ನು ಇರಿಸಿ ಖಾಸಗೀ ಶಾಲೆಗಗಳಿಗೆ ಸೇರುವಂತೆ ಮಾಡಬೇಕು. ಸಾಂಪತ್ತಿಕ ಕಾರಣದಿಂದಾಗಿ ಅವರು ತಾವಗಿಯೇ ಶಾಲೆಗಳಲ್ಲಿ ಸೇರುವುದಿಲ್ಲ. ಅದೇ ರೀತಿ

ಸಹಕಾರೀ ಸಂಘಗಳಲ್ಲಿಯೂ ಈ ವಿಭಾಗದ ಜನರನ್ನು ಹೆಚ್ಚು ಸಂಖ್ಯೆಯಲ್ಲಿ ನೇಮಿಸುವಂತಾಗಬೇಕು. ಸಹಕಾರಿ ಸಂಘಗಳಲ್ಲಿ ದುಡಿಯಲು ಯೋಗ್ಯವಾದ ತರಬೇತಿಯನ್ನು ನೀಡುವಂತಹ ಕೇಂದ್ರಗಳನ್ನು ಆಯಾಯ ಜಿಲ್ಲೆಗಳಲ್ಲಿಯೇ ಸ್ಥಾಪಿಸಿದರೆ ಮಾತ್ರ ಅದರ ಪ್ರಯೋಜನವನ್ನು ಹೆಚ್ಚಿನವರೂ ಪಡೆಯಬಹುದು.

ಶಾಲಾ ಕಾಲೇಜುಗಳಲ್ಲಿ ಪ.ವರ್ಗದವರಿಗೆ ಇರುವ ಮೀಸಲಾತಿ ಸೀಟುಗಳನ್ನು ಸಂಖ್ಯೆಯನ್ನುಅಧಿಕಗೊಳಿಸಿದರೆ ಮಾತ್ರ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸವನ್ನು ಪಡೆಯಲು ಸಾಧ್ಯವಾಗಬಹುದು.

ಈಗಿರುವಂತೆ ಕೆಲವರು ಮಾತ್ರ ವಿದ್ಯಾ ರಂಗದಲ್ಲಿ ಮುಂದುವರಿದಿದ್ದಾರೆ ಎಂದು ದ್ವಿತೀಯ ಮಾಹಿತಿ ಸಂಗ್ರಹದಿಂದಲೂ, ಗ್ರಾಮ ಸಭಾ ವರದಿಯಿಂದಲೂ ತಿಳಿಯಲ್ಪಡುತ್ತದೆ. ಆದರೆ ಇನ್ನು ಕೂಡಾ ಉತ್ತಮ ವ್ಯವಸ್ಥೆಗಳನ್ನು ಮಾಡಿದರೆ ಉತ್ತಮ ಪುರೋಗತಿಯಾಗಬಹುದು.

ಶಾಲೆಗಳ ಲೆಕ್ಕಾಚಾರದ ಪ್ರಕಾರ ದ್ವಿತೀಯ ಮಾಹಿತಿ ಸಂಗ್ರಹದಿಂದ ಈ ರೀತಿಯಾಗಿ ವಿದ್ಯಾರ್ಥಿಗಳು ಅಂಕಿ ಸಂಖ್ಯೆಗಳು ದೊರೆಯುತ್ತದೆ.

	ಗಂಡಸರು	ಹೆಂಗಸರು	ಒಟ್ಟು	ಶೇಕಡಾಮಾನ
ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ	1023	963	1986	35%

ನೆಲೆಯಲ್ಲಿರುವ ಪ್ರತಿಯೊಂದು ಕಾಲನಿಗಳಿಗೂ ವಾಚನಾಲಯದ ಮತ್ತು ದೂರದರ್ಶನ ಶೆಡ್ (TV) ಗಳ ಅವಶ್ಯ ಕತೆಗಳನ್ನು ಎಲ್ಲಾ ಗ್ರಾಮ ಸಭಾವರದಿಯಿಂದಲೂ ಪಡೆದಿರುತ್ತೇವೆ. ದೂರದರ್ಶನ ಕೇಂದ್ರಗಳಲ್ಲಿ ಕೇವಲ ಸಿನೀಮಾ ಮಾದರಿಯ ಪ್ರಚಾರವನ್ನು ಕಡಿಮೆಗೊಳಿಸಿ ಜನ ಸಾಮಾನ್ಯರಿಗೆ ಅಗತ್ಯವಿರುವ ಕೆಲವು ವಿಷಯಗಳನ್ನು ಮಾತ್ರ ಪ್ರಸಾರ ಮಾಡಿದರೆ ಉತ್ತಮ.

ಪ. ಜಾತಿ, ವರ್ಗದ ಜನರು ಇತರ ಜನರೊಡನೆ ಬೆರೆಯುವಂತಹ ಉತ್ತಮ ವಿಷಯಗಳಿದ್ದರೆ ಉತ್ತಮ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನ ಮಾನ :

ಪ. ಜಾತಿ, ವರ್ಗದವರು ಸರ್ವ ಸಾಮಾನ್ಯವಾಗಿ ಹೇಳುವದದಾರೆ ಉನ್ನತ ಪದವಿಗೆ ತಲುಪಿಲ್ಲ. ಹಳೆಯ ಪದ್ಧತಿಯಿಂದ ಹೊಸ ಸಂಸ್ಕೃತಿಯತ್ತ ಕಾಲಿಟ್ಟಿದ್ದಾರೆ ಎಂದು ಸಾಮಾನ್ಯವಾಗಿ ಹೇಳಬಹುದು. ಆದರೂ ಹಳ್ಳಿ ಪ್ರದೇಶಗಳಲ್ಲಿ ಅವರ ಸ್ತಾನ ಕೀಳು ಮಟ್ಟದಲ್ಲಿಯೇ ಇದೆ. ಕೆಲವು ಸಾಂಸ್ಕೃತಿಕ ವಿಷಯಗಳಲ್ಲಿ ಈ ವರ್ಗದವರು ಉತ್ತಮ ಸೇವೆಗಳನ್ನು ಸಲ್ಲಿಸುವವರೂ ಬಹಳಷ್ಟು ಮಂದಿ ಇದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿಸಕ್ರಿಯವಾಗಿ ದುಡಿಯುತ್ತಿರುವ ಮಂದಿಯೂ ಇದ್ದಾರೆ.

ಪ್ರಸಿದ್ಧ ಕ್ಷೇತ್ರಗಳಲ್ಲಿ ಜಾತಿ ಬೇಧವಿಲ್ಲದೇ ಕೆಲವು ನಿಬಂಧನೆಗಳೊಂದಿಗೆ ಎಲ್ಲಾ ಜಾತಿಯವರಿಗೂ ಪ್ರವೇಶವಿದೆ. ಆದರೆ ಎಣ್ಮ ಕಜೆ ಗ್ರಾಮ ಪಂಚಾಯತಿನ ಕೆಲವು ಗ್ರಾಮಗಳಲ್ಲಿ ಪ. ಜಾತಿ, ಪ. ವರ್ಗದವರಿಗೆ ಇನ್ನೂ ಪ್ರವೇಶವಿಲ್ಲ. ಭಕ್ತಿ ಪೂರ್ವಕ ಕಾಣಿಕೆ ಹಾಕಿ ಪ್ರಸಾದವನ್ನು ಸ್ವತಃ ಪ. ಪಡೆಯುವ ಹಾಗಿಲ್ಲ. ಸಾರ್ವಜನಿಕವಾಗಿರುವ ದೇವಾಲಯಗಳಲ್ಲಿ ಅನ್ನ ಸಂತರ್ಪಣೆಯ ಹೊತ್ತು ಹಿಂದೂ ಸಂಸ್ಕೃತಿಯ ಕ್ರಮದಂತೆ ಕುಳಿತು ಸಾಮೂಹಿಕ ಊಟ ಮಾಡುವ ಹಾಗಿಲ್ಲ. ಭೂತಗಣಗಳು ಪ. ಜಾತಿಯವರಿಗೆ ಮಾತ್ರ ಮೈ ಸೇರುವುದಲ್ಲದೇ ಬೇರೆ ಯಾರಿಗೂ ಮೈ ಸೇರುವುದಿಲ್ಲ. ಆದರೆ ಈಜಾತಿಗೆ ಸೇರಿದವರಿಗೆ ಕಾಣಿಕೆ ಮೊದಲಾದವುಗಳನ್ನು ಹಾಕಬೇಕಾದರೆ ಒಳ ಪ್ರವೇಶವಿರು ಮತ್ತೊಬ್ಬ ಜಾತಿಯವನ ಮಧ್ಯವರ್ತಿಕೆ ಬೇಕಾಗಿರುವುದು. ಈ ಕಾಣಿಕೆ ಅವರ ಮನೆಯಿಂದ ತರುವಂತಹ ಹಾಲು ಅಥವಾ ಇನ್ನಿತರ ವಸ್ತುಗಳು ದೇವಾಲಯಕ್ಕೆ ಸ್ವೀಕಾರ್ಯವಾಗುವುದು. ಆದರೆ ಈ ವಸ್ತುಗಳಿಗೆ ಅಷ್ಪೃಶ್ಯತೆ ಇಲ್ಲ. ಇಂತಹ ಪದ್ಧತಿ ಕೇವಲ ಒಂದೋ ಎರಡೋ ಕಿಲೋ ಮೀಟರ್ ಅಂತರದ ವ್ಯತ್ಯಾಸವಾಗಿರುತ್ತದೆ. ಪ. ಜಾತಿಗೆ ಸೇರಿದ ಹರಿಜನರು ಹರಿಯಿಂದ ತುಂಬಾ ದೂರವಾಗಿದ್ದಾರೆ. ಇದು ಈ ಗ್ರಾಮಗಳಲ್ಲಿ ಅಸ್ಪೃಶ್ಯತೆ ಇದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಆದರೆ ಇದು ಸಂಪ್ರದಾಯವಾಗಿ ಬಂದದ್ದು ಎಂದು ಕೆಲವರ ವಾದ! ಸಾಮಾಜಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರಿದಿದ್ದರೂ ಖಾಸಗೀ ಕ್ಷೇತ್ರಗಳಲ್ಲಿಯೂ ಈ ವಿಭಾಗದವರು ಬಹಳಷ್ಟು ಉತ್ಸಹದಿಂದ ಕೆಲಸ ಕಾರ್ಯಗಳಲ್ಲಿ ಭಾಗವಹಿಸಿದರೂ ಉನ್ನತ ಸ್ಥಾನದಿಂದ ಮಾತ್ರ ವಂಚಿತರೆಂದು ಹೇಳಬಹುದು. ಈ ರೀತಿಯಾಗಿ ಕಾರಣಾಂತರಗೆ ಸಾಮಾಜಿಕವಾಗಿ ಅವರು ಕೆಲವು ಕಾರ್ಯ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ ಎಂದು ಹೇಳಬಹುದು.

ಈಗ ವಿದ್ಯಾ ರಂಗದಲ್ಲಿ ಕೆಲವರು ಮುಂದುವರಿರುವುದರಿಂದ ಸಾಮಾಜಿಕ ಪದವಿಯಲ್ಲಿ ಉನ್ನತ ಸ್ಥಾನವನ್ನು ಪಡೆದಿರುವರು. ಈ ಪ. ಜಾತಿ,

ವರ್ಗದ ಜನರಲ್ಲಿ ಸಾಹಿತ್ಯದ ಆಸಕ್ತಿಯನ್ನು ಅಭಿವೃದ್ಧಿಗೊಳಿಸಲು ಪ್ರೋತ್ಸಾಹವನ್ನು ನೀಡಬೇಕು.

ಸಾಂಸ್ಕೃತಿಕವಾಗಿ ಈ ವಿಭಾಗದವರು ಉನ್ನತ ಮಟ್ಟದಲ್ಲಿಲ್ಲದಿದ್ದರು ಕೆಲವರು ಮಾತ್ರ ಯಕ್ಷಗಾನ, ನಾಟಕ ಇನ್ನಿತರ ವಿಷಯಗಳಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿದ್ದಾರೆ. ಶಾರೀರಿಕ ಸ್ಪರ್ಧೆಗಳಲ್ಲಿಯೂ ಇವರ ಸಾಧನೆ ಇದೆ. ಈ ಪ. ಜಾತಿಯ ನಲ್ಕೆದಾಯ ಸಮುದಾಯದವರು ಮಾತ್ರ ಈ ಪಂಚಾಯತಿನಲ್ಲಿ ಭೂತ ಕಟ್ಟುವ ಕೆಲಸವನ್ನು ಮಾಡುತ್ತಾರೆ. ಭೂತಾರಾಧನೆ ಸಂಪ್ರದಾಯವನ್ನು ಪ್ರತಿಯೊಬ್ಬ ಹಿಂದೂ ಧರ್ಮದವನೂ ಪರಿಪಾಲಿಸುತ್ತಾ ಇರುತ್ತಾನೆ. ಈ ಭೂತ ಕಟ್ಟುವವರು ಆಯಾಯ ಪ್ರದೇಶಗಳಲ್ಲಿ ಭೂತಾರಾಧನೆಯ ಗುರಿಕಾರ ಸ್ಥಾನವನ್ನು ಪಡೆದಿರುತ್ತಾರೆ. ಆದರೂ ಅವರು ಕೆಲವು ಮೂಲಭೂತ ಹಕ್ಕುಗಳಿಂದ ವಂಚಿತರೆಂದು ಹೇಳಬೇಕು. ಸಾಂಪ್ರದಾಯಿಕವಾಗಿ ಬಂದಂತಹ ಕೆಲವು ಭೂತಗಳನ್ನು ಕಟ್ಟುವುದಕ್ಕಾಗಿ ಬೇರೆ ಬೇರೆ ಕಡೆಗಳಿಂದ ಅದಕ್ಕೆ ಯೋಗ್ಯರಾದ ಸಮುದಾಯದವರನ್ನು ಕರೆಸಿ ಕಟ್ಟುವ ಸಂಪ್ರದಾಯವೂ ಇಲ್ಲಿ ನೆಲೆಯಲ್ಲಿದೆ. ಇದೇ ರೀತಿ ಪ. ಜಾತಿಯ ಮೊಗೇರ ಸಮುದಾಯದವರೂ ಕೆಲವು ಗುರಿಕಾರ ಸ್ಥಾನವನ್ನು ಪಡೆದಿರುತ್ತಾರೆ. ಈ ಭೂತಾರಾಧನೆ ಸಮಯದಲ್ಲಿ ಅವರದೇ ಪಾತ್ರವಿರುತ್ತದೆ. ಅಲ್ಲದೇ ನಾಡ ಪಾರ್ದ್ದನ, ಜಾನಪದ ಹಾಡುಗಳು, ಶೋಭಾನೆಗಳು ಮೊದಲಾದವುಗಳು ಇವರಲ್ಲಿ ಪ್ರಚಲಿತವಾಗಿದೆ. ಪ. ಜಾತಿಯವರ ಮನೆಗಳಲ್ಲಿಯೂ ಈ ತುಳುನಾಡ ಭೂತರಾಧನೆಯನ್ನು ಪರಿಪಾಲಿಸಿಕೊಂಡು ಬರುತ್ತಾರೆ. ಪ. ವರ್ಗದವರು ಭೈರವ, ಗೋಂದೋಲು ಪೂಜೆ ಮೊದಲಾವುಗಳನ್ನು ಆಚರಿಸುತ್ತಾರೆ. ಪ. ಜಾತಿ, ವರ್ಗದವರ ಶವ ಸಂಸ್ಕಾರ ಕಾರ್ಯಗಳು ಹಿಂದೂ ಧರ್ಮಕ್ಕನುಗುಣವಾಗಿ ನಡೆಯುತಾ ಇದೆ.

ಇನ್ನು ಕೂಡಾ ಈ ಸಮುದಾಯದವರು ಸಾಮಾಜಿಕವಾಗಿ ಹೆಚ್ಚು ಪುರೋಗತಿಯನ್ನು ಹೊಂದಬೇಕಾದರೆ ಪ್ರೇಮ ವಿವಾಹಕ್ಕೆ ಪ್ರೋತ್ಸಾಹವಿತ್ತು. ಅಂತರ್ಜಾತಿ ವಿವಾಹಕ್ಕೆ ಹೆಚ್ಚು ಒತ್ತು ಕೊಡಬೇಕು. ಆದರೆ ಅದು ಕೇವಲ ಹಣದ ವ್ಯಾಮೋಹಕ್ಕೆ ನಿಲುಕುವಂತಾಗಬಾರದು. ಆದುದರಿಂದ ಈ ಅಂತರ್ಜಾತಿ ವಿವಾಹಕ್ಕೆ ಹಣದ ಆಸೆಯನ್ನೂ ಇತರ ನೆಪವನ್ನೂ ತೋರಿಸಬಾರದು.

ಪರಂಪರಾಗತ ಕೆಲಸಗಳು : ಸರ್ವ ಸಾಮಾನ್ಯವಾಗಿ ಪ. ಜಾತಿಯವರೂ, ಪ. ವರ್ಗದಲ್ಲಿ ಕೊರಗ ಸಮುದಾಯದವರೂ ಈ ಪರಂಪರಾಗತ ಗುಡಿ ಕೈಗಾರಿಕೆಗಳನ್ನು ಮಾಡುತ್ತಾರೆ. ಚಾಪೆ ಹೆಣೆಯುವುದು, ಮುಟ್ಟಾಳೆ ತಯಾರಿ, ಅದೇ ರೀತಿ ಬುಟ್ಟಿ ತಯಾರಿಸುವ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಆದರೆ ಈಗ ಈ ಗುಡಿ ಕೈಗಾರಿಕೆಗಳು ಗಣನೀಯವಾಗಿ ಇಳಿಮುಖವಾಗುತ್ತಾ ಬಂದಿರುತ್ತದೆ. ಆದುದರಿಂದ ಈ ಚಾಪೆ ತಯಾರಿ, ಮುಟ್ಟಳೆ ತಯಾರಿ, ಬುಟ್ಟಿ ಮೊದಲಾದುವುಗಳನ್ನು ತಯಾರಿಸುವುದು, ಇವುಗಳಿಗೆ ಉಚಿತವಾಗಿ ಧನ ಸಹಾಯವನ್ನು ನೀಡದರೆ ಅದು ಇನ್ನು ಕೂಡಾ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗಿ ಪ್ರಾದೇಶಿಕ ವಸ್ತುಗಳಿಂದಲೇ ತಯಾರಿಸುವ ವಸ್ತುಗಳನ್ನು ಜನ ಸಾಮಾನ್ಯರಿಗೆ ಕಡಿಮೆ ಖರ್ಚಿನಲ್ಲಿ ಪಡೆಯಲು ಸಾಧ್ಯವಾದೀತು. ಈ ವಿಭಾಗದವರಿಗೆ ಇದರಿಂದಾಗಿ ಆರ್ಥಿಕವಾಗಿ ಮುಂದುವರಿಯಲು ಸಾಧ್ಯವಾದೀತು.

ಈ ವರ್ಗಕ್ಕೆ ಸೇರಿದವರು ಹೆಚ್ಚಿನವರೂ ಕೂಲಿ ಕಾರ್ಮಿಕರಾಗಿದ್ದಾರೆ. ಆದರೆ ಇವರು ಬಹಳ ಕಡಿಮೆ ಸಂಬಳಕ್ಕೆ ಕೂಲಿ ಕೆಲಸ ಮಾಡುವವರಾಗಿದ್ದಾರೆ. ಕೆಲವರು ಈಗ ಕೂಡಾ ಒಕ್ಕಲು ತನದ ಮನೆಗಳಿರುವುದರಿಂದ ಒಂದು ರೀತಿಯಲ್ಲಿ ಖಾಯಂ ಆಗಿ ಕೆಲಸ ಮಾಡುವವರಾಗಿದ್ದಾರೆ. ಆದರೆ ಅವರಿಗೆ ಕೊಡುವ ಕೂಲಿ ದರ ಬಹಳ ಕಡಿಮೆ. ಈಗ ಕೂಡಾ ಸ್ತ್ರೀಯರಿಗೆ ಕೇವಲ 20 ರೂಪಾಯಿ ಮಾತ್ರ ಸಂಬಳವಿರುತ್ತದೆ. ಅದೇ ರೀತಿ ಗಂಡಸರಿಗೆ 30 ರಿಂದ 40 ರೂಪಾಯಿ ವರೇಗೆ ಸಂಬಳವಿರುವುದು. ಆದುದರಿಂದ ಇವರ ಆರ್ಥಿಕ ಮಟ್ಟ ಬಹಳ ಕೆಳಗಿನ ಮಟ್ಟದಲ್ಲಿದೆ. ತಾತ್ಕಾಲಿಕವಾಗಿ ಕೆಲಸ ಮಾಡುವವರಿಗೆ ಈಗ 50 ರಿಂದ 80 ರೂಪಾಯಿಯ ವರೇಗೂ ದಿನ ಒಂದಕ್ಕೆ ಸಂಪಾದನೆಯಿರುತ್ತದೆ. ಅದೇ ರೀತಿ ಕೆಲವು ಹೆಂಗಸರು ಬೀಡಿ ಕಟ್ಟುವ ಕೆಲಸವನ್ನು ಮಾಡುತ್ತಾರೆ. ಇದರಲ್ಲಿ ಸಣ್ಣ ಮಟ್ಟಿನ ಸಂಪಾದನೆಯಾಗುತ್ತದೆ.

ಎಷ್ಟಾದರೂ ಈ ವಿಭಾದವರಿಗೆ ತಮಗೆ ಸಿಕ್ಕಿದ ಸಂಪಾದನೆಯನ್ನು ಸರಿಯಾದ ಕ್ರಮದಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವಾಗಿಲ್ಲವೆಂದೇ ಹೇಳಬಹುದು.

ಇವರಿಗೆ ಕೃಷಿ ಮಾಡಲು ಸ್ವಂತವಾದ ಸ್ಥಳವಿರುವುದಿಲ್ಲ. ಅದು ಕೂಡಾ ಗುಡ್ಡ ಪ್ರದೇಶವಾಗಿರುವುದರಿಂದ ಕೃಷಿ ಮಾಡಲು ಯೋಗ್ಯವಾಗಿರುವುದಿಲ್ಲ. ಆದುದರಿಂದ ಅವರು ಸ್ವಂತ ಕೃಷಿ ಮಾಡಿ ಜೀವಿಸಲು ಇಲ್ಲಿ ಸಾಧ್ಯವಾಗಿಲ್ಲ.

ಈ ಪಂಚಾಯತ್‌ನಲ್ಲಿ ಕೆಲವರಾದರೂ ವಿದ್ಯಾ ಸಂಮನ್ನರು ಈ ವಿಭಾಗಕ್ಕೆ ಸೇರಿದ್ದು ಇಲ್ಲಿ ವಾಸಿಸುತ್ತಾರೆ. ಇಲ್ಲಿ ಅನೇಕ ಮಂದಿ ವ್ಯವಸಾಯಗಳನ್ನು ಮಾಡುವಂತಹ ಯುವಕ ಯುವತಿಯರು ಇಲ್ಲಿದ್ದಾರೆ. ಆದುದರಿಂದ ಇವರಿಗೆ ಕೈಗಾರಿಕಾ ಘಟಕಗಳನ್ನು ಇಲ್ಲಿ ಬೇರೆ ಬೇರೆ ಕಡೆಗಳಲ್ಲಿ ಸ್ಥಾಪಿಸಿ ಇವರ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬಹುದು. ಹೊಲಿಗೆ ತರಬೇತಿಯನ್ನು ಪಡೆದವರೂ ಇಲ್ಲಿರುತ್ತಾರೆ. ಅದೇ ರೀತಿ ಕೋಳಿ ಸಾಕಣೆ, ಹಂದಿ ಸಾಕಣೆ, ಗೋವು ಸಾಕಣೆ ಮೊದಲಾದ ಸ್ವ ಉದ್ಯೋಗಗಳನ್ನು ಮಾಡುವಂತೆ ಪ್ರೋತ್ಸಾಹವನ್ನಿತ್ತು ಧನ ಸಹಾಯವನ್ನು ನೀಡಬಹುದು. ಈ ರೀತಿ ಧನ ಸಹಾಯವನಿತ್ತು ಕಾರ್ಯವೆಸಗುವ ಕಸುಬುಗಳಲ್ಲಿ ಸುಸಜ್ಜಿತವಾಗಿ ಕಾರ್ಯವೆಸಗುವಂತೆ ನೋಡಿಕೊಳ್ಳಲು, ಮೇಲ್ವಿಚಾರಕರನ್ನು ನೇಮಿಸಬೇಕು. ಇದು ಕೇವಲ ನಾಮ ಮಾತ್ರವಾಗಬಾರದು. ಇದಕ್ಕೆ ಕೆಲವು ಶರತ್ತುಗಳೂ ಇರಬೇಕು. ನಿರುದ್ಯೋಗಿ ಯುವಕ ಯುವತಿಯರಿಗೆ ಹೊಲಿಗೆ ಮೊದಲಾದವುಗಳ ಸಂಸ್ಥೆಗಳನ್ನು ಸ್ಥಾಪಿಸಿದರೆ ಉತ್ತಮವಾದ ಸಾಂಪತ್ತಿಕ ಸ್ಥಿತಿಗತಿಗೆ ತಲುಪಬಹುದು.

ಇಲ್ಲಿ ಎಷ್ಟೋ ನಿರುದ್ಯೋಗಿಗಳಿಗೆ ಆರ್ಥಿಕ ಸಹಾಯವನಿತ್ತು ದೊಡ್ಡ ಮಟ್ಟದ ಕೈಗಾರಿಕೆ ನಡೆಸುವಂತೆ ಪ್ರೋತ್ಸಾಹ ನೀಡಬಹುದು.

ಇಲ್ಲಿ ಈ ವಿಭಾಗದವರೇ ಸೇರಿ ನಡೆಸಿಕೊಂಡು ಬರಲು ಒಂದು ಗೇರು ಬೀಜ ಕಾರ್ಖಾನೆಯನ್ನು ಇಲ್ಲಿ ತೆರೆಯಲು ಸಾಧ್ಯವಿದೆ. ಆದುದರಿಂದ ಈ ವಲಯದಲ್ಲಿ ಸರಿಯಾದ ಕ್ರಮದಲ್ಲಿ ಜನರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಅದರ ಸಂಪೂರ್ಣ ಪ್ರಯೋಜನಪಡೆಯುವಂತೆ ಆದರೆ ಮಾತ್ರ ಅದು ಲಾಭದಾಯಕವಾದೀತು. ಕೇವಲ ನಾಮ ಮಾತ್ರವಾಗದಂತೆ ವ್ಯವಸ್ಥೆಯಾಗಬೇಕು. ಪ. ಜಾತಿ, ವರ್ಗದವರಿದಿದಂಗತೆ ಭೂಮಿಯ ಫಲವನ್ನು ಅನುಭವಿಸದ ಕುಟುಂಬದವರಿಗೆ ಅದರ ಫಲಾನುಭವಗಳನ್ನು ಅನುಭವಿಸುವಂತೆ ಮಾಡಬೇಕು.

ಎಣ್ಮಕಜೆ ಗ್ರಾಮ ಪಂಚಾಯತಿನಲ್ಲಿ IRDP ಸರ್ವೆ ಪ್ರಕಾರ ಪ. ಜಾತಿ, ಪ. ಪಂ. ವರ್ಗದವರ ಒಟ್ಟು 793 ಕುಟುಂಬಗಳಿವೆ ಎಂದು ದ್ವಿತೀಯ ಮಾಹಿತಿ ಸಂಗ್ರಹದಿಂದ ಸಿಕ್ಕಿದೆ. ಆದರೆ ಅದು 3000 ಕ್ಕಿಂತಲೂ ಹೆಚ್ಚು ಎಂದು ಮನೆಗಳ ಲೆಕ್ಕಾಚಾರದಿಂದ ವಿದಿತವಾಗುತ್ತದೆ.

ಈ ತನಕ IRDP ಸರ್ವೆ ಪ್ರಕಾರ ಆರ್ಥಿಕ ಸಹಾಯ ಸಿಕ್ಕಿದವರು ಕೇವಲ 81 ಮಂದಿ ಮಾತ್ರವಾಗಿರುತ್ತದೆ. ಆದುದರಿಂದ ಬಾಕಿ ಇರುವ ಕುಟುಂಬಗಳಿಗೆ ಆದಷ್ಟು ಬೇಗನೆ ಆರ್ಥಿಕ ಸಹಾಯ ಸಿಗುವಂತೆ ಒತ್ತಾಯ ನೀಡಬೇಕಾಗಿರುತ್ತದೆ.

ಈ ಪಂಚಾಯತಿನಲ್ಲಿ ಒಟ್ಟು 400 ಮನೆಗಳಲ್ಲಿ ಪ. ಜಾತಿಗೆ ಸೇರಿದವರೂ, 1400 ಮನೆಗಳಲ್ಲಿ ಪ. ವರ್ಗದವರೂ ವಾಸಿಸುತ್ತಿದ್ದಾರೆ. ಈ ಎಲ್ಲಾ ಹೆಚ್ಚಿನ ಮನೆಗಳು ಗುಡಿಸಲುಗಳಾಗಿರುವುವು. ಇಲ್ಲಿ ಒಟ್ಟು ಸಾಧಾರಾಮ 3000 ಪ. ಜಾತಿ, ಪ. ವರ್ಗದವರ ಕುಟುಂಬಗಳಿವೆ ಎಂದು ತಿಳಿಯಬಹುದು. ಇಲ್ಲಿ ಕೆಲವು ಮನೆಗಳಿಗೆ ಮಾತ್ರ ಹಂಚು ಹೊದಿಸಲಾಗಿದೆ. ಹೆಚ್ಚಿನವು ಆರ್ಥಿಕ ಸಹಾಯ ಪಡೆದು ನಿರ್ಮಿಸಿದುದಾಗಿದೆ. ಇಲ್ಲಿ ಭವನ ನಿರ್ಮಾಣ ಕಾರ್ಯಗಳು ಶೀಘ್ರವಾಗಿ ನಡೆಯಬೇಕಾಗಿದೆ. ಸೌಲಭ್ಯಗಳು ಮೊದಲು ಯಾರು ಭೂಮಿ ಸಮತಟ್ಟು ಮಾಡಿ ಮನೆ ಕಟ್ಟಲು ಯಾರು ಮುಂದಾಗುತ್ತಾರೋ ಅವರಿಗೆ ಆದ್ಯತೆಯನ್ನು ನೀಡಬೇಕು ಆದರೆ ಮಾತ್ರ ಅವರು ಸಂಪೂರ್ಣ ಮನೆಯ ಕೆಲಸಗಳನ್ನು ಮುಗಿಸಿ ಸುಖವಾಗಿ ಜೀವಿಸಲು ಸಾಧ್ಯವಾದೀತು. ಇದನ್ನು ನೋಡಿ ಬಾಕಿ ಇದ್ದವರು ಕೂಡಾ ಮನೆಕಟ್ಟಿಯುವ ಯೋಜನೆಯಲ್ಲಿ ಸ್ವಲ್ಪ ಮಟ್ಟದ ಕೆಲಸಗಳನ್ನು ಮಾಡುವರು. ಮನೆ ಕಟ್ಟುವಾಗ ಕೊಡುವ ಹಣವನ್ನು ಸರಿಯಾದ ಕ್ರಮದಲ್ಲಿ ಕೆಲಸ ಊಪರ್ತಿಯಾದವರಿಗೆ ನೀಡಬೇಕು. ಕೆಲವು ಶರತ್ತುಗಳನ್ನು ಸಡಿಲಗೊಳಿಸಬೇಕು. ಕಲ್ಲಿನ ಬದಲು ಮಣ್ಣಿನಿಂದಾದರೂ ಗೋಡೆ ಮಾಡಬಹುದು. ಎನ್ನುವ ವ್ಯವಸ್ಥೆಯಾಗಬೇಕು. ಯಾಕೆಂದರೆ ಭೌಗೋಳಿಕ ಸ್ಥಿತಿಗತಿಗನುಗುಣವಾಗಿ ಕೆಲವು ಕಡೆಗಳಲ್ಲಿ ಕಲ್ಲುಗಳು ಸಿಗುವುದಿಲ್ಲ ಕೆಲವು ಕಡೆಗಳಿಗೆ ಮಾರ್ಗದ ವ್ಯವಸ್ಥೆ ಇರುವುದಿಲ್ಲ. ಮನೆ ಕೆಲಸಗಳಿಗೆ ನೀಡುವ ಧನ ಸಾಹಯವನ್ನು ಸ್ಥಳೀಯ ಸಂಸ್ಥೆಗಳಲ್ಲಿಯೂ ಸಿಗುವಂತಹ ವ್ಯವಸ್ಥೆ ಇದ್ದರೆ ಉತ್ತಮ. ಇಲ್ಲವಾದರೆ ಜನ ಸಾಮಾನ್ಯರು ದೂರ ದೂರ ಸ್ಥಳಗಳಿಗೆ ಹೋಗುವುದಕ್ಕೆ ಕಷ್ಟ. ಈಗ ಕೆಲವು ಮನೆಗಳು ಪೂರ್ತಿಯಾಗಿದ್ದರೂ ಕೆಲವು ಮನೆಗಳ ಕೆಲಸಗಳು ಇನ್ನೂ ಬಾಕಿ ಇರುವುದರಿಂದ ಅವುಗಳ ಕೆಲಸಗಳನ್ನು ಬೇಗನೇ ಮುಗಿಸುವಂತಹ ವ್ಯವಸ್ಥೆಗಳನ್ನು ಮಾಡಬೇಕು. ಮನೆಗಳು ದುರಸ್ತಿಕರಣಗಳನ್ನು ಮಾಡುವಂತಹ ವ್ಯವಸ್ತೆಯಾಗಬೇಕು. ಭವನ ನಿರ್ಮಾಣಕ್ಕೆ ಕೊಡುವ ಧನಸಹಾಯದ ಒಟ್ಟಿಗೆ ವಿದ್ಯುತ್, ಶೌಚಾಲಯಗಳಿಗೆ ಕೊಡುವ ಧನ ಸಹಾಯವನ್ನೂ ಕೊಟ್ಟು ಅದನ್ನು ನಡೆಸಿಯೋತೀರಬೇಕು. ಕೆಲವರು ಹಣ ಪಡೆದವರೂ ವಿದ್ಯುತ್ ಶೌಚಾಲಯದತ್ತ ಹೆಚ್ಚಿನ ಗಮನವನ್ನು ಕೊಡುವುದಿಲ್ಲ. ಆ ರೀತಿಯಲ್ಲಿ ನಡೆಯದಂತೆ ವ್ಯವಸ್ಥೆಯಾಗಬೇಕು. ಪರಿಶಿಷ್ಟ ಜಾತಿ ವರ್ಗದವರಿಗೆ ಇರುವ ಭವನ ನಿರ್ಮಾಣ ಧನ ಸಹಾಯವನ್ನು ಈಗ ಇರುವುದಕ್ಕಿಂತ ಹೆಚ್ಚಿಸಿ 30,000 ಕ್ಕಾದರೂ ಏರಿಸಬೇಕು.

ಯಾವ ಕಾಲನಿಗಳಲ್ಲಿ (ಪ. ಜಾತಿ, ವರ್ಗದವರ) ಮನೆಗಳಿಗೆ ಶೌಚಾಲಯದ ವ್ಯವಸ್ಥೆಯಾಗಲಿಲ್ಲವೋ ಅಂತಹ ಮನೆಗಳನ್ನು ಗುರುತಿಸಿ ಆದಷ್ಟು ಬೇಗನೇ ಈ ಶೌಚಾಲಯ ವ್ಯವಸ್ಥೆಯನ್ನು ಮಾಡಬೇಕು. ಪ್ರತಿಯೊಂದು ಮನೆಗಳಿಗೂ ಶೌಚಾಲಯದ ಅಗತ್ಯವಿರುವುದು. ಅದೇ ರೀತಿ ವಿದ್ಯುತ್ ಪೂರೈಕೆ ಕೂಡಾ ಹೆಚ್ಚಿನ ಕಾಲನಿಗಳಿಗೂ ಪಂಚಾಯತಿನಲ್ಲಿ ನಡೆದಿಲ್ಲ. ವಿದ್ಯುತ್ ಸೌಕರ್ಯವಾದೇ ಇರುವ ಪ್ರತಿಯೊಂದು ಪ. ಜಾತಿ ಮತ್ತು ಪ. ವರ್ಗದವರ ಮನೆಗಳಿಗೆ ವಿದ್ಯುತ್ ಸೌಕರ್ಯ ಆದಷ್ಟು ಶೀಘ್ರವಾಗಿ ಆಗಬೇಕಾಗಿದೆ. ಅಲ್ಲದೇ ಕೃಷಿಗೆ ಬೇಕಾದ ನೀರಿಗಾಗಿಯೇ ಸಿಗುವಂತಹ ವ್ಯವಸ್ತೆಯನ್ನು ಮಾಡಬೇಕು. ಕೃಷಿ ನೀರಿಗಾಗಿ ಸ್ಥಳ ಇರುವ ಎಲ್ಲ ಕುಟುಂಬದವರಿಗೂ ಪಂಪ್ ಸೆಟ್ ಬಾವಿಗಳ ಅಗತ್ಯ ಇದೆ.

ಇಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಇರುವ ಈ ವರ್ಗಗಳಿಗೆ ಸೇರಿದವರು ತುಂಬಾ ಇದ್ದಾರೆ. ಆದುದರಿಂದ ಈ ಕಾಲನಿಗಳಿಗೆ ಎಲ್ಲರಿಗೂ ಕುಡಿಯುವ ನೀರಿಗಾಗಿ ಬಾವಿಗಳ ವ್ಯವಸ್ಥೆಯಾಗಬೇಕು. ಮಾತ್ರವಲ್ಲದೆ, ಬಾವಿಗಳಿಗೆ ಧನ ಸಾಹಯ ಸಿಗುವಂತೆ ಭೌಗೋಳಿಕ ಸ್ಥಿತಿಗತಿಯನ್ನು ನೋಡಿಕೊಂಡು ಸುರಂಗ ತೋಡುವುದಕ್ಕೂ ಧನ ಸಹಾಯವನ್ನು ನೀಡಬೇಕು. ಉಚಿತವಾಗಿ ಕೃಷಿಗಾಗಿ ಕೊಡುವ ಪಂಪ್ ಸೆಟ್‌ಗಳನ್ನು ಭೌಗೋಳಿಕ ಸ್ಥಿತಿಗತಿಗನುಣವಾಗಿ ವಿತರಿಸಬೇಕು. ಈ ರೀತಿಯಾಗಿ ಸಿಗುವ ಯಂತ್ರೋಪಕರಣಗಳನ್ನು ಬೇರೆಯವರಿಗೆ ದೂರುವಂತಹ ಸಂದರ್ಭವಿದ್ದರೆ ಅದನ್ನು ಕಡ್ಡಾಯವಾಗಿ ನಿಲ್ಲಿಸುವ ಶರತ್ತುಗಳನ್ನು ಹಾಕಬೇಕು. ಪ. ವರ್ಗದವರಲ್ಲಿ ಕೊರಗ ಸಮುದಾಯದವರನ್ನು ಪ್ರತ್ಯೇಕ ಗುರುತಿಸಿ ಅವರಿಗೆ ಸಿಗುವ ಸೌಲಭ್ಯಗಳನ್ನು ಅವರಿಗೆ ತಕ್ಕ ಸಮಯದಲ್ಲಿ ದೊರೆಯುವಂತಹ ವ್ಯವಸ್ತೆಯಾಗಬೇಕು. ಕುಡಿಯುವ ನೀರಿಗಾಗಿ ಅಲ್ಲಲ್ಲಿ ಸಹಕಾರೀ ಬಾವಿಗಳ ವ್ಯವಸ್ಥೆಗಳನ್ನು ಮಾಡಿಕೊಡಬೇಕು.

ಆರೋಗ್ಯದ ದೃಷ್ಟಿಯಲ್ಲಿ ಇದರ ಮಟ್ಟ ಸಾಮಾನ್ಯದಾಗಿರುತ್ತದೆ. ಕಾಲನಿಯಲ್ಲಿ ಮಕ್ಕಳ ತಾಯಂದಿರಿಗೆ ಆರೋಗ್ಯದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನೀಡುವಂತಾಗಬೇಕು. ತಾಯಂದಿರಿಗೆ ಆರೋಗ್ಯದ ಬಗ್ಗೆ ತಿಳುವಳಿಕೆ ಇಲ್ಲದೇ ಇರುವುದರಿಂದ ಮಕ್ಕಳ ಆರೋಗ್ಯವು ಕೆಟ್ಟು

ಹೋಗುತ್ತದೆ. ಅಲ್ಲದೇ ಪ್ರತಿಯೊಂದು ಮನೆಗೂ ಪ್ರಾ. ಆರೋಗ್ಯ ಕೇಂದ್ರವರು ಭೇಟಿ ಇತ್ತು ಇದರ ಬಗ್ಗೆ ತಿಳುವಳಿಕೆ ಮೂಡಿಸಬೇಕು. ಪ್ರತಿರೋಧ ಚುಚ್ಚುಮದ್ದುಗಳನ್ನು ಮಾಡಬೇಕು. ಆರೋಗ್ಯದ ದೃಷ್ಟಿಯಲ್ಲಿ ಎಲ್ಲಾ ಮನೆಗಳಿಗೂ ಶೌಚಾಲಯದ ವ್ಯವಸ್ಥೆಗಳು ಅಗತ್ಯವಿರುತ್ತದೆ. ತುಂಬಾ ಅಗತ್ಯವಿದ್ದಲ್ಲಿ ಅತೀ ಬಡವರಾದ ಈ ಪ. ಜಾ, ವರ್ಗದವರ ಕುಟುಂಬದ ರೋಗಿಗಳಿಗೆ ಆರ್ಥಿಕ ಧನ ಸಹಾಯವನ್ನು ನೀಡುವಂತಾಗಬೇಕು.

ಆಕ್ರಮಣ ಅತಿ ಕ್ರಮಗಳು ನಡೆದಾಗ ಈ ಕುಟುಂಬದವರಿಗೆ ನೀಡುವ ಸಹಾಯ ಧನ ಜೊತೆಗೆ ಅತಿ ಕ್ರಮಣ ಮಾಡಿದವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಲೇಬೇಕು. ಅತಿಕ್ರಮಣ ಎಲ್ಲಿಯೂ ನಡೆಯುವುದು ತಿಳಿದರೆ ಅಲ್ಲಿ ಮುಂಜಾಗರೂಕತೆಯ ಕ್ರಮವನ್ನು ವಹಿಸಬೇಕು. ಪ. ಜಾಕಿ. ವರ್ಗದವರ ಹೆಚ್ಚಿನ ಕಾಲನಿಗಳು ಹಳ್ಳಿ ಪ್ರದೇಶಗಳಲ್ಲಿ ಇರುವುದು. ಆದರೆ ಹೆಚ್ಚಿನ ಕಾಲನಿಗಳಿಗೆ ಮಾರ್ಗದ ವ್ಯವಸ್ಥೆಯಾಗಿಲ್ಲ. ಸಾರಿಗೆ ವ್ಯವಸ್ತೆ ಮಾಡುವುದರಲ್ಲಿ ತುಂಬಾ ಗಮನ ನೀಡಬೇಕಾಗಿದೆ. ಆದುದರಿಂದ ಪ್ರತಿಯೊಂದು ಕಾನಿಗೂ ಮಾರ್ಗದ ವ್ಯವಸ್ಥೆಯಾಗಬೇಕು.

ಪಂಚಾಯತ್ ಮಟ್ಟದ ಗ್ರಾಮ ಸಭೆಯ ವರದಿಯಿಂದ ಈ ಪ. ಜಾತಿ, ವರ್ಗ ಕ್ಷೇಮ ಇದರ ಬಗ್ಗೆ ಸಿಕ್ಕಿದ ಸಮಸ್ಯೆಗಳ ಕ್ರೋಢೀಕರಣವು ಈ ಕೆಳಗಿನಂತಿವೆ (11 ವಾರ್ಡುಗಳೂ ಸೇರೀ)

1. SC/ST ಜನರು ಹೆಚ್ಚು ಇರುವ ಕ್ಷೇತ್ರಗಳಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಬೇಕು.
2. SC/ST ಜನರು ಹೆಚ್ಚು ಇರುವ ಸ್ಥಳವನ್ನು ಕಾಲನಿಯಾಗಿ ಪರಿವರ್ತಿಸಿ ಅಂಗೀಕರಿಸಿ, ವಿದ್ಯುತ್, ಮಾರ್ಗ ಇತರ ಸೌಲಭ್ಯಗಳನ್ನು ಒದಗಿಸುವುದು. ಶೌಚಾಲಯದ ವ್ಯವಸ್ಥೆಯಾಗಬೇಕು.
3. ಇವರಿಗೆ ವಾಸಿಸಲು ಸ್ಥಳವಿಲ್ಲದಿದ್ದಲ್ಲಿ ಯೋಗ್ಯ ಸ್ಥಳಗಳನ್ನು ಒದಗಿಸಿಕೊಡಬೇಕು. ಮಾತ್ರವಲ್ಲದೇ ಸ್ವಂತ ಮನೆ ಇದ್ದು ಸ್ವಂತವಾಗಿ ಸ್ವಾಧೀನವಿದ್ದ ಸ್ಥಳವನ್ನು ಅಳತೆ ಮಾಡಿ ಪಟ್ಟಿ ವಿತರಿಸುವುದು.
4. ಪ್ರತೀ ವಾರ್ಡುಗಳಲ್ಲಿಯೂ ಸಹಕಾರಿ ಸಂಘಗಳನ್ನು ತೆರೆಯುವುದು.
5. ಪೆರ್ಲದಲ್ಲಿ SC/ST ಹಾಸ್ಟೆಲನ್ನು ಪುನರಾರಂಭಿಸುವುದು.
6. STಯಲ್ಲಿ ಕೊರಗರನ್ನು ಬೇರ್ಪಡಿಸಿ ಅವರಿಗೆ ಪ್ರತ್ಯೇಕ ವ್ಯವಸ್ಥೆಗಳನ್ನು ಜಾರಿಗೆ ತರುವುದು.
7. SC/ST ಯವರಿಗೆ ಕೃಷಿಗೆ ಬೇಕಾಗಿ ಸಬ್ಸಿಡಿ ದರದಲ್ಲಿ ಸಾಲ ಸೌಲಭ್ಯ ಮತ್ತು ಗುಡಿ ಕೈಗಾರಿಕೆಗಳಿಗೆ ಸಾಲ ಸೌಲಭ್ಯಗಳನ್ನು ನೀಡುವುದು.
8. ಕೊಲನಿಗಳಿಗೆ ಇರುವ ಮಾರ್ಗಗಳಿಗೆ ಡಾಮರೀಕರಣದ ವ್ಯವಸ್ಥೆಯನ್ನು ಮಾಡಬೇಕು.
9. ಉಚಿತ ಪಂಪ್‌ಸೆಟ್, ಬಾವಿ ಮತ್ತು ಮದ್ದು ಬಿಡುವ ಪಂಪಿನ ವ್ಯವಸ್ಥೆ.
10. SC/ST ಗಳ ಮಕ್ಕಳಿಗೆ ಪ್ರೋತ್ಸಾಹ, ಧನ ಸಹಾಯ ಮತ್ತೆ ಪಂಚಾಯತಿನ ಉಚಿತ ಸಮವಸ್ತ್ರ ವಿತರಣೆ.
11. SC/ST ಯವರ ನಿರುದ್ಯೋಗ ಸಮಸ್ಯೆ ನಿವಾರಣೆ.
12. ಪ್ರತಿ ಕಾಲನಿಗಳಿಗೂ TV ಶೆಡ್ಡುಗಳ ವ್ಯವಸ್ಥೆಯಾಗಬೇಕು.
13. ಕಾಲನಿಗಳಿಗೆ ಕಮ್ಯುನಿಟಿ ಹಾಲ್ ಮತ್ತು ಆರೋಗ್ಯ ಕೇಂದ್ರ.
14. ಪ್ರತಿ ಕಾಲನಿಗಳಿಗೆ ಪಬ್ಲಿಕ್ ಟೆಲಿಫೋನ್ ವ್ಯವಸ್ಥೆ.
15. ಪ್ರತಿ ಕಾಲನಿಗಳಿಗೂ ಸರಕಾರದಿದ ಸಿಗುವ ಸವಲತ್ತುಗಳು ತಿಳಿಸುವಂತಹ ತಜ್ಞರ ಕಮಿಟಿ ರಚನೆ.
16. ಪ್ರತೀ ವಾರ್ಡಿನಲ್ಲೂ SC/ST ಯವರ ಕುಟುಂಬದವರಿಗೆ ಅಗತ್ಯವಿದ್ದಷ್ಟು ಮನೆಗಳ ಮಂಜೂರಾತಿ.
17. ಹೆಚ್ಚು ಮನೆಗಳಿರುವ ಕಾಲನಿಗಳನ್ನು 1 HDP ಕಾಲನಿಯಾಗಿ ಬಡ್ತಿಗೊಳಿಸುವುದು.
18. ಕುಡಿಯುವ ನೀರುನ ಸಮಸ್ಯೆಗಳನ್ನು ಪರಿಹರಿಸುವುದು.
19. ಪ್ರತೀ ಕಾಲನಿಗೂ ಒಂದು ಅಂಗನವಾಡಿ ಕೇಂದ್ರ ತೆರೆಯುವುದು.
20. ಪ್ರತೀ ಕಾಲನಿಗೂ ಆರೋಗ್ಯ ಕೇಂದ್ರದವರು ಕಡ್ಡಾಯ ಭೇಟಿ ಇತ್ತು ಆರೋಗ್ಯದ ಬಗ್ಗೆ ಮಾಹಿತಿ ನೀಡುವುದು ಮತ್ತು ಮಕ್ಕಳಿಗೆ ಪ್ರತಿರೋಧ ಚುಚ್ಚುಮದ್ದು ನೀಡುವುದು.

21. ಬಡ ಮಕ್ಕಳು ಹೆಚ್ಚು ಇರುವಲ್ಲಿ ಉಚಿತವಾಗಿ ಹಾಸ್ಟೆಲ್ ವ್ಯವಸ್ತೆಗಳನ್ನೂ ಮಾಡಬೇಕು.

22. ಅಗತ್ಯವಿದ್ದ ಸ್ಥಳಗಳಲ್ಲಿ ಕುಡಿಯುವ ನೀರಿಗಾಗಿ ಟಾಂಕಿ ನಳ್ಳಿ ನೀರಿನ ವ್ಯವಸ್ಥೆ ಮಾಡಬೇಕು.

23. ಪ. ಜಾತಿ, ವರ್ಗದವರ ಮಕ್ಕಳಲ್ಲಿ ಹೆಚ್ಚು ಅಂಕ ಪಡೆದವರಿಗೆ ಪ್ರತ್ಯೇಕ ಬಹುಮಾನಗಳನ್ನು ನೀಡುವುದು.

29. SC/ST ಯವರಲ್ಲಿ ಯೋಗ್ಯ ಬರಹಗಾರರಿಗೆ ನಾಕಟಗಾರರಿಗೆ ಸಾಹಿತಿಗಳಿಗೆ ಪ್ರತ್ಯೇಕ ಧನ ಸಹಾಯ ಪ್ರೋತ್ಸಾಹವನ್ನು ನೀಡುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ತೀರಾ ಹಿಂದುಳಿದವರಾಗಿರಲು ಕಾರಣ ಈ ಕೆಳಗಿನಂತಿವೆ.

1. ವಿದ್ಯಾಭ್ಯಾಸದ ಕೊರತೆ.

2. ಸವರ್ಣರೆನ್ನಿಸಿದವರಿಂದ ತುಳಿತ ಮತ್ತು ಸ್ವಯಂ ಅಜ್ಞಾನ.

3. ಇವರಿಗೆ ಸರಿಯಾದ ಸಮಯದಲ್ಲಿ ಸರಿಯಾದ ವಿವರ ಸಿಕ್ಕದಿರುವುದು.

4. ಸರಿಯಾದ ಮಾರ್ಗದರ್ಶನವಿಲ್ಲದೆ, ಮತ್ತು ಅರ್ಹತೆಗೆ ಪ್ರಾಶಸ್ತ್ಯ ದೊರಕದಿರುವುದು.

5. ಊರಿನಲ್ಲಿ ಈ ವರ್ಗದ/ ಪಂಗಡದ ಬೇರೆ ಬೇರೆ ಕೆಲಸಗಾರರು ಇದ್ದರೂ ಇವರಲ್ಲಿ ಸಂಘಟನೆಗಳು ಇಲ್ಲದಿರುವುದು.

6. SC/ST ಗೆ ಇರುವ ಮೀಸಲಾತಿಯನ್ನು ಜನ ಸಂಖ್ಯೆಗುಣುವಾಗಿಹೆಚ್ಚಿಸದಿರುವುದು.

7. ಇಲ್ಲಿ ಹೆಚ್ಚಿನ ಸಂಖ್ಯೆಯು SC/ST ಯಾಗಿರುವುದು.

8. ಸಹಕಾರದಿಂದ ಸಿಗುವ ಸೌಲಭ್ಯಗಳನ್ನು ಸರಿಯಾದ ಕ್ರಮದಲ್ಲಿ ಉಪಯೋಗಿಸಲು ತಿಳಿಯಗದೇ ಇರುವುದು.

9. ಸರಕಾರದಿಂದ ಸಿಗುವ ಸೌಲಭ್ಯಗಳನ್ನು ದುರುಪಯೋಗವಾಗುವುದು.

10. ಎಣ್ಮಕಜೆ ಪಂಚಾಯತಿನಲ್ಲಿ ವಾಸಿಸುವ ಎಲ್ಲಾ SC/ST ಗಳು ತುಳು ಮತ್ತು ಕನ್ನಡ ಮಾತ್ರ ಬಲ್ಲವರಾಗಿದ್ದಾರೆ. ಮಲಯಾಳದಲ್ಲಿ ಬರುವ ಮಾಧ್ಯಮಗಳನ್ನು ತಿಳಿಯಲು ಇವರಿಗೆ ಅಸಾಧ್ಯವಾಗಿರುತ್ತದೆ. ಉದಾ : SC/ST ಜಿಲ್ಲಾ ಕಚೇರಿಯಲ್ಲಿ ನೀಡುವ ಮಲಯಾಳದ ಮಾಹಿತಿಯನ್ನು ಕನ್ನಡಿಗರಾದ ಇವರಿಗೆ ಅರ್ಥವಿಸಲಾಗದು.

ಇತರ ಸಮಸ್ಯೆಗಳು :

1. ಈಗ ಇರುವ ಮನೆಗಳು ಹಳತಾದುದು.

2. ಪ್ರತಿ ಮನೆಗೂ ವಿದ್ಯುತ್, ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ.

3. ಆರೋಗ್ಯ ಸ್ಥಿತಿ ತೃಪ್ತಿಕರವಲ್ಲ.

4. IRDP ಪದ್ಧತಿ ಸರಿಯಾಗಿ ಫಲ ಪದ್ರವಾಗಿಲ್ಲ.

5. ಪ. ಜಾತಿ, ವರ್ಗದವರಿಗೆ ಸ್ವಂತ ಉದ್ಯೋಗಕ್ಕೆ ಸಿಕ್ಕಿದ ಸಾಲ ಸೌಲಭ್ಯಗಳು ಸಿಕ್ಕಿದರೂ ಫಲ ಪ್ರದವಲ್ಲ.

6. SC/ST ಯವರ ಶವ ಸಂಸ್ಕಾರ ಮಾಡುವ ಸ್ಥಳವನ್ನು ಇನ್ನೂ ಮಂಜೂರು ಮಾಡಿಲ್ಲ.

ಸಾಧ್ಯತೆಗಳು

1. ಯೋಗ್ಯ ರೀತಿಯಲ್ಲಿ ಗುಡಿ ಕೈಕಾರಿಕೆಗಳಿಗೆ ಪ್ರೋತ್ಸಾಹವಿತ್ತು ಧನ ಸಹಾಯವನ್ನಿತ್ತರೆ ಅದು ಸರಿಯಾದ ಕ್ರಮದಲ್ಲಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರೆ ಸಾಂಪತ್ತಿಕವಾಗಿ ಮುಂದುವರಿಯಬಹುದು.

2. ಸ್ವಂತ ಉದ್ಯೋಗಕ್ಕೂ ಸಹಾಯವನ್ನಿತ್ತು ಅದು ಸರಿಯಾದ ಕ್ರಮದಲ್ಲಿ ನಡೆಯುವಂತೆ ಮಾಡುವ ವ್ಯವಸ್ಥೆ ಮಾಡಬೇಕು.

3. ಮನೆ ಇಲ್ಲದವರಿಗೆ ಉಚಿತ ಧನ ಸಹಾಯವನಿತ್ತು ಮನೆ ಶೌಚಾಲಯ, ವಿದ್ಯುತ್, ಕುಡಿವ ನೀರನ್ನು ಒದಗಿಸಿಕೊಡುವುದು.

4. ಆರೋಗ್ಯದ ವಿಷಯದಲ್ಲಿ ರೋಗಗಳ ಬಗ್ಗೆ ಮಾಹಿತಿ ಮತ್ತು ಶಿಬಿರಗಳನ್ನು ನಡೆಸುವುದು.

5. ಕಾಲನಿಗಳಿಗೆ ಮಾರ್ಗ, ದೂರದರ್ಶನ ಶೆಡ್ಡು ಕಮ್ಯೂನಿಟಿ ಹಾಲ್ ಮೊದಲಾದುವುಗಳನ್ನು ವ್ಯವಸ್ಥೆ ಮಾಡುವುದು.

6. ಸ್ವಂತ ಉದ್ಯೋಗಕ್ಕೆ ಯೋಗ್ಯ ರೀತಿಯಲ್ಲಿ ಬ್ಯಾಂಕ್ ಸಹಾಯ.

7. ಸ್ವಂತ ಮನೆ ಇದ್ದು ಸ್ಥಳ ಇಲ್ಲದಿರುವವರಿಗೆ ಅವರಲ್ಲಿ ಸ್ವಾಧೀನವಿದ್ದು ಸ್ಥಳವನ್ನು ಯೋಗ್ಯ ರೀತಿಯಲ್ಲಿ ಅಳತೆ ಮಾಡಿ ಪಟ್ಟಿಯನ್ನು ವಿತರಿಸುವುದು.

8. SC/ST ಯವರಿಗೆ ಸಿಗುವ ಸೌಲಭ್ಯಗಳನ್ನು ಸರಿಯಾದ ಕ್ರಮದಲ್ಲಿ ಸಿಗುವಂತೆಯೂ, ಅದೇ ರೀತಿ ಅದರ ಉಪಯೋಗದ ಬಗ್ಗೆಯೂ ಸರಿಯಾದ ಮಾಹಿತಿಯನ್ನು ನೀಡಬೇಕು.

ಕಾಲನಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾದ ಕುರಿತು ಮಾಹಿತಿಗಳು

ವಾರ್ಡು ನಂಬ್ರ	ಕಾಲನಿಯ ಹೆಸರು	ವಿದ್ಯುತ್ ಸಂಪರ್ಕ ದೊರೆತ ಕುಟುಂಬಗಳ ಸಂಖ್ಯೆ	ಉಚಿತ ಸ್ಥಾಬನಲ್ಲಿ ನೀಡಲಾದ ವಿದ್ಯುತ್ ಸಂಪರ್ಕಗಳ ಸಂಖ್ಯೆ	ಹಣತೆತ್ತು ವಿದ್ಯುತ್ ಪಡೆದ ಕುಟುಂಬಗಳ ಸಂಖ್ಯೆ
I	ಸಾಯ	20	10	10
VI	ಕಜಂಪಾಡಿ	15	15	-
VIII	ಬಾಳೆಮೂಲೆ	40	40	-
V	ಕೊಡೆಂಕಿರಿ	15	-	15
VI	ಕುತ್ತಾಜೆ	10	11	-

ಗ್ರಾಮ ಸಭಾ ವರದಿಯಿಂದ ಸಿಕ್ಕಿದ ಅಂಗೀಕರಿಸಲ್ಪಟ್ಟ ಹಾಗೂ ಅಂಗೀಕರಿಸಲ್ಪಡಬೇಕಾದ ಕಾಲನಿಗಳ ಪಟ್ಟಿ

ವಾರ್ಡು ನಂಬ್ರ	ಕಾಲನಿಗಳ ಹೆಸರು	ಅಂಗೀಕೃತ ಅಂಗೀಕೃತವಲ್ಲ	ವಿದ್ಯುತ್	ಮಾರ್ಗ	ಶೌಚಾಲಯ
I	1. ಸಾಯ	ಅಂಗೀಕೃತ	ಇದೆ	ಇಲ್ಲ	ಇಲ್ಲ
	2. ಪಾಂಡಿಗಯST	ಅಂಗೀಕೃತ	ಇಲ್ಲ	ಇಲ್ಲ	ಇಲ್ಲ
	3. ಬಾಕಿಲಪದವು ST	ಅಂಗೀಕೃತವಲ್ಲ	ಇಲ್ಲ	ಇಲ್ಲ	ಇಲ್ಲ
	4. ಚವರ್ಕಾಡು	"	"	"	"
	5. ಕೊಂಬರ ಬೆಟು SC	"	"	"	"
	6. ಮುಳಿಯಾಳ SC	"	"	"	"
II	1. ನಲ್ಕ ST	"	"	"	"
	2. ಬನಾರಿ ಮೂಲೆ SC	"	"	"	"
	3. ಪರ್ತಾಜೆ SC, ST	"	"	"	"
	4. ಕೊಂಕಣಿ ಶಾಲೆ ST	"	"	"	"
	5. ಗುಂಡಿಯಡ್ಕ ST	"	"	"	"

III	1. ಪೆಲ್ಲಾಜೆ ST	ಅಂಗೀಕೃತ	ಇಲ್ಲ	ಇಲ್ಲ	ಇಲ್ಲ
	2. ಸರ್ಪಂಗಲ ST	ಅಂಗೀಕೃತವಲ್ಲ	"	"	"
	3. ಸೊರಾಜೆ ST	"	"	"	"
	4. ಅರೆ ಮಂಗಿಲ ST	"	"	"	"
	5. ನೀರೆಲ ST	"	"	"	"
	6. ಸರ್ಪಂಗಲ SC	"	"	"	"
	7. ಪೇರಾಜೆ SC	"	"	"	"
	8. ಮುಂಗ್ಲಿಕಾನ SC	"	"	"	"
IV	1. ಕೆಜಕಾರು	ಅಂಗೀಕೃತವಲ್ಲ	ಇಲ್ಲ	ಇಲ್ಲ	ಇಲ್ಲ
	2. ಮಾಯಿಲೆಂಗಿ	"	"	"	"
	3. ಸೂರ್ಡೆಲು	"	"	"	"
	4. ಮಿತ್ತೂರು	"	"	"	"
	5. ಬೋಳು ಬೈಲು	"	"	"	"
	6. ಪೆರ್ಲತಡ್ಕ	"	"	"	"
	7. ನೀರ್‌ಟಾಲು	"	"	"	"
	8. ಕೆಂಗಣಾಜೆ SC, ST	"	"	"	"
V	1. ಬದಿಯಾರು ST, SC	ಅಂಗೀಕೃತ	ಇಲ್ಲ	ಇಲ್ಲ	ಇಲ್ಲ
	2. ಕೊಡೆಂಕಿರಿ SC, ST		ಇದೆ	ಇದೆ	ಇಲ್ಲ
	3. ಸ್ವರ್ಗ SC, ST		ಇಲ್ಲ	ಇದೆ	ಇಲ್ಲ
	4. ವಾಣೀನಗರ ST		ಇಲ್ಲ	ಇಲ್ಲ	ಇಲ್ಲ
	5. ಪಡ್ಪು SC	ಇಲ್ಲ			
	6. ದುರ್ಗ ST, SC				
	7. ದೇಲಂತರು ST		ಇದೆ	ಇದೆ	ಇಲ್ಲ
	8. ಪೆರ್ಲಾಜೆ ST	ಇದೆ	ಇದೆ	ಇಲ್ಲ	
	9. ಕನ್ಯಾರ ಮೂಲೆ ST	ಇಲ್ಲ	ಇದೆ	ಇಲ್ಲ	
	10. ದುಗ್ಗಜ್ಜ ಮೂಲೆ ST	ಇಲ್ಲ	ಇದೆ	ಇಲ್ಲ	
	11. ಅಪ್ಪಯ ಮೂಲೆ SC,ST				
	12. ಗಾಳಿಗೋಪುರ ST				

VI	1. ಕುತ್ತಾಜೆ	ಅಂಗೀಕೃತ	ಇದೆ	ಇದೆ	ಇಲ್ಲ
	2. ಈಳಂತೋಡಿ	ಅಂಗೀಕೃತ	ಇಲ್ಲ	ಇಲ್ಲ	ಇಲ್ಲ
	3. ಕಜಂಪಾಡಿ	ಅಂಗೀಕೃತ	ಇದೆ	ಇದೆ	ಇಲ್ಲ
	4. ಸೆಟ್ಟಿಬೈಲ್		ಇಲ್ಲ	ಇದೆ	ಇಲ್ಲ
	5. ಪೆರಿಯಾಲು	ಅಂಗೀಕೃತವಲ್ಲ	ಇಲ್ಲ	ಇದೆ	ಇಲ್ಲ
	6. ಸರ್ಪಮಲೆ	"	"	"	"
	7. ಜವುಗೆಗುಡ್ಡೆ	"	"	"	"
	8. ಅಣಪ್ಪತಡ್ಕ	"	"	"	"
	9. ಪಳ್ಳತ ಮೂಲೆ	"	"	"	"
	10. ದೇಶ ಮಲೆ	"	"	"	"
VII	1. ಅಲಾರ್ ಪದವು	ಅಂಗೀಕೃತವಲ್ಲ	ಇಲ್ಲ	ಇಲ್ಲ	ಇಲ್ಲ
	2. ಬಳತ್ತ ಕಲ್ಲು	"	"	"	"
	3. ಓಣಿ ಬಾಗಿಲು	"	"	"	"
	4. ಪೊಯಕೆರೆ	"	"	"	"
	5. ಸೇರಮೆ	ಅಂಗೀಕೃತ			
	6. ಬಳತ್ತಕಲ್ಲು				
	7. ಕಾರೆ ಕೊರಗ ಕಾಲನಿ				
VIII	1. ಬಾಳೆ ಮೂಲೆ	ಅಂಗೀಕೃತ	ಇದೆ	ಇಲ್ಲ	ಇಲ್ಲ
	2. ಕೆಂಗಾಣಾಜೆ		ಇಲ್ಲ		
	3. ವಾಚೆ	ಅಂಗೀಕೃತವಲ್ಲ	ಇಲ್ಲ	ಇಲ್ಲ	ಇಲ್ಲ
	4. ಒಡ್ಕ	"	"	"	"
	5. ಬಳ್ಳ	"	"	"	"
	6. ಕೊಲ್ಯ	"	"	"	"
	7. ಮುಗೇರು	"	"	"	"
	8. ಮಾಯಿಲಕಾನ	"	"	"	"
	9. ಖಂಡೇರಿ	"	"	"	"
	10.				

IX	1. ಖಂಡಿಗೆ SC,ST	ಅಂಗೀಕೃತ	ಇಲ್ಲ	ಇದೆ	ಇಲ್ಲ
	2. ಬಜಕೂಡ್ಲು			ಇಲ್ಲ	
	3. ಕುರೆಡ್ಕ	ಅಂಗೀಕೃತವಲ್ಲ	ಇಲ್ಲ	ಇಲ್ಲ	ಇಲ್ಲ
	4. ಬಜಕೂಡ್ಲು ST	ಇಲ್ಲ	ಇಲ್ಲ	ಇಲ್ಲ	
	5. ಸೋಮಾಜೆ ST (ಕೊರಗ)	ಅಂಗೀಕೃತ	ಇಲ್ಲ	ಇಲ್ಲ	ಇಲ್ಲ
X	1. ನೂಜಿಲ	ಅಂಗೀಕೃತವಲ್ಲ	ಇಲ್ಲ	ಇಲ್ಲ	ಇಲ್ಲ
	2. ಏಳ್ಕಾನ	"	"	"	"
	3. ಕೊಡ್ಯಾಲ ಮೂಲೆ	"	"	"	"
	4. ಬಳಮುಗೇರು	"	"	"	"
	5. ಮೈರೆ	"	"	"	"
XI	1. ಕೂರಿ ಪುಡೆ	ಅಂಗೀಕೃತವಲ್ಲ	ಇಲ್ಲ	ಇದೆ	ಇಲ್ಲ
	2. ಕನ್ನಟಿಕಾನ	"	"	"	"
	3. ಪರ್ಪಕರಿಯ SC	"	"	"	"
	4. ಸರ್ಪಂಗಳ SC	"	"	ಇಲ್ಲ	"
	5. ಸರ್ಪಂಗಳ ST	"	"	"	"
	6. ಪರ್ಪಕರಿಯ SC	"	"	ಇಲ್ಲ	"

ಸಂಪನ್ಮೂಲ ಸಂಗ್ರಹ

ನಮ್ಮ ಎಣ್ಮಕಜೆ ಪಂಚಾಯತು ಸಂಪನ್ಮೂಲದ ಉಗಮವಾದ ಕೈಗಾರಿಕಾ ಕ್ಷೇತ್ರದಲ್ಲಿ ತುಂಬಾ ಹಿಂದುಳಿದಿದೆ. ಇಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆ ಮತ್ತು ಕಿರು ಕೈಗಾರಿಕಾ ಸಂಸ್ಥೆಗಳು ಇಲ್ಲ. ಈ ಎರಡೂ ಕೈಗಾರಿಕೆಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿದ್ದಲ್ಲಿ ಮಾತ್ರ ನಮ್ಮ ಪಂಚಾಯತಿನ ಸಂಪನ್ಮೂಲದಲ್ಲಿ ಹೆಚ್ಚು ಅಭಿವೃದ್ಧಿಯನ್ನು ಹೊಂದಬಹುದು.

ಬ್ಯಾಂಕಿನಿಂದ ಸ್ವ ಉದ್ಯೋಗಕ್ಕೆ ದೊರೆಯುವ ಸಾಲವನ್ನು ಕೈಗಾರಿಕಾ ಕ್ಷೇತ್ರದಲ್ಲಿ ಹೇಗೆ ಉಪಯೋಗಿಸಬಹುದೆಂಬ ತಿಳುವಳಿಕೆಯ ಅಭಾವದಿಂದಾಗಿ ಈ ವಲಯದಲ್ಲಿ ಸರಿಯಾದ ಅಭಿವೃದ್ಧಿ ಕಂಡು ಬಂದಿಲ್ಲ. ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಜನರಿಗೆ ನೀಡಿ ಈ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿಯನ್ನು ಸಾಧಿಸಬಹುದು. ಈ ಪಂಚಾಯತಿನಿಂದ ಕೊಲ್ಲಿ ರಾಷ್ಟ್ರಗಳಿಗೆ ಹೋಗಿ ಕೆಲಸ ಮಾಡುವ ಎಷ್ಟೋ ಜನರಿರುವರು. ಅಂತಹ ಜನರ ಆದಾಯದ ಸ್ವಲ್ಪ ಅಂಶವನ್ನು ಕೈಗಾರಿಕಾ ಕ್ಷೇತ್ರದಲ್ಲಿ ವಿನಿಯೋಗಿಸಿ, ಈ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿನ ಅಭಿವೃದ್ಧಿಯನ್ನು ಸಾಧಿಸಬಹುದು.

ನಮ್ಮ ಈ ಪಂಚಾಯತಿನಲ್ಲಿ ಹೆಚ್ಚಿನ ಜನರು ಕೃಷಿ ಕ್ಷೇತ್ರದಲ್ಲಿ ದುಡಿಯುವವರಾಗಿದ್ದಾರೆ. ಆದರೆ ನಮ್ಮಲ್ಲಿಯ ಕೃಷಿ ಕ್ಷೇತ್ರದ ಕಾರ್ಯಗಳು ಹಳೆಯ ರೀತಿಯಲ್ಲಿಯೇ ಈಗಲೂ ಕೂಡಾ ನಡೆಯುತ್ತಿರುತ್ತದೆ. ಇದು ಯೋಗ್ಯ ರೀತಿಯಲ್ಲಿ. ಆದುದರಿಂದ ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಬೇಕಾದರೆ, ಶಾಸ್ತ್ರೀಯವಾದ ರೀತಿಯಲ್ಲಿ ಕೃಷಿಯನ್ನು ಮಾಡಿದರೆ ಮಾತ್ರ ಈ ವಲಯದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಬಹುದು. ಆದರೆ ಈ ಕ್ಷೇತ್ರದಿಂದ ಪಂಚಾಯತಿಗೆ ಯಾವುದೇ ರೀತಿಯ ವರಮಾನಗಳು ಬರುವುದಿಲ್ಲ. ಸರಕಾರದಿಂದ ದೊರೆಯುವ ಗ್ರಾಂಟ್ ತಕ್ಕ ಸಮಯದಲ್ಲಿ ಪಂಚಾಯತಿಗೆ ತಲುಪುವಂತಾಗಬೇಕು. ಒಟ್ಟು ಜನಸಂಖ್ಯೆ, ದಾರಿದ್ರ್ಯ ರೇಖೆಗಿಂತ ಕೆಳಗಿನ ಜನರ ಸಂಖ್ಯೆ, ಪ. ಜಾತಿ ಪ. ವರ್ಗದವರ ಜನಸಂಖ್ಯೆ, ಮಹಿಳೆಯರ ಸಂಖ್ಯೆ, ಪಂಚಾಯತಿನ ಒಟ್ಟು ವಿಸ್ತೀರ್ಣ ಮುಂತಾದವುಗಳ ತಳಹದಿಯಾಗಿಟ್ಟು ಪಂಚಾಯತಿಗೆ ಸಲ್ಲಬೇಕಾದ ಗ್ರಾಂಟುಗಳನ್ನು ಒದಗಿಸಬೇಕು.

	ತೆರಿಗೆಯ ಮೂಲಗಳು	1991-1992	1995-1996	ವ್ಯತ್ಯಾಸ	ಶೇಕಡಾ
1. a.	ಕಟ್ಟಡ ತೆರಿಗೆ	61651-95	142334.30	+80682.35	13%
b.	ವಿನೋದ ತೆರಿಗೆ	54.00	360.00	+306.00	565%
c.	ವೃತ್ತಿ ತೆರಿಗೆ	97870.00	109695.00	+11825.00	12%
2.	ನಿರ್ಬಂಧ ಹರಿತ ಫಂಡ್	286000.00	451141.00	+165140.00	58%
	ಎಸ್.ಸಿ.ಪಿ.	-	-	-	-
3.	ಜೆ.ಆರ್.ವೈ.	9722302.00	1158810.00	+186507.80	19%
4.	ಗ್ರಾಂಟ್‌ಗಳು ಮತ್ತು ದೇಣಿಗೆಗಳು	460071.00	1153600.30	+693528.45	37%
5.	ಒಟ್ಟು ಆದಾಯ	1877950.05	3015939.60	+1137989.60	60%
	ಎಸ್ಟಾಬ್ಲಿಷ್‌ಮೆಂಟ್ ಖರ್ಚು	211090.00	352308.00	141218.00	67%

ನಮ್ಮ ಪಂಚಾಯತಿನಿಂದ ವ್ಯಾಪಾರಿಗಳ ಲೈಸೆನ್ಸ್ ಫೀಸ್ ಆಗಿ ಕಳೆದ ವರ್ಷ 4,709 ರೂಪಾಯಿ ಮಾತ್ರ ವಸೂಲಾಗಿರುತ್ತದೆ. ಎಲ್ಲಾ ರೀತಿಯ ವ್ಯಾಪಾರ ಸ್ಥರಗಳಿಂದಲೂ ನಮ್ಮ ಪಂಚಾಯತಿಗೆ ತೆರಿಗೆ ವಸೂಲಿ ಮಾಡಲು ಸಾಧ್ಯವಾಗಿಲ್ಲ. ಯಾಕೆಂದರೆ ಕೆಲವು ವ್ಯಾಪಾರಸ್ಥರು ಕೆಲವೇ ಸಮಯಗಳಲ್ಲಿ ತಮ್ಮ ವ್ಯಾಪಾರವನ್ನು ನಿಲ್ಲಿಸುವ ಪರಿಸ್ಥಿತಿಯೂ ಇರುವುದು. ಬ್ಯಾಂಕಿನಿಂದ ಲೋನ್ ಪಡೆಯುವ ಉದ್ದೇಶಕ್ಕಾಗಿ ಮತ್ತು ಇತರ ಅತ್ಯಗತ್ಯ ಕಾರ್ಯಗಳಿಗೆ ಬರುವ ಸಂದರ್ಭದಲ್ಲಿ ಮಾತ್ರ ತೆರಿಗೆಯನ್ನು ಕೊಡುವ ಸಂಪ್ರದಾಯವು ನಮ್ಮ ಜರನಲ್ಲಿರುವುದು.

ನಮ್ಮ ಪಂಚಾಯತಿನ ಕೆಲ ಮಂದಿ ಜನರು ಮಾತ್ರ ಕೃಷಿ ಮತ್ತು ಕೃಷಿಯೇತರ ಕಸುಬುಗಳಲ್ಲಿ ನಿರತರಾಗಿರುವವರಾಗಿದ್ದಾರೆ. ಇವರ ಆದಾಯಕ್ಕನುಸಾರವಾಗಿ ಒಂದು ವಸ್ತು ನಿಷ್ಪವಾದ ತೆರಿಗೆಯನ್ನು ವಿಧಿಸಿದರೆ ನಮ್ಮ ಪಂಚಾಯತಿನ ಅಭಿವೃದ್ಧಿಗೆ ಸ್ವಲ್ಪ ಮಟ್ಟಿಗೆ ಸಹಾಯವಾಗಬಹುದು.

ತೆರಿಗೆ ಕೊಡುವುದರಿಂದ ಈ ಪಂಚಾಯತಿನ ಅಭಿವೃದ್ಧಿಯಲ್ಲಿ ನಾವು ಪಾಲುದಾರರಾಗುತ್ತೇವೆ. ಎನ್ನುವ ಮನೋಭಾವ ಜನರಲ್ಲಿ ಉಂಟಾಗುವಂತೆ ಮಾಡಬೇಕು. ಇದರ ಬಗ್ಗೆ ಹೆಚ್ಚಿನ ಮಾಹಿತಿ ಜನರಿಗೆ ತಿಳಿಯುವಂತಾಗಬೇಕು. ಹಾಗೂ ಪಂಚಾಯತ್ ವಾರ್ಡು ಕಮಿಟಿ ಮತ್ತು ವಾರ್ಡಿನ ಪ್ರತಿನಿಧಿಗಳು ಒಟ್ಟಾಗಿ ವಾರ್ಡಿನ ಪ್ರತಿಯೊಬ್ಬರಿಂದಲೂ ತೆರಿಗೆಯನ್ನು ವಲೂಸಿ ಮಾಡುವ ಜವಾಬ್ದಾರಿಯನ್ನು ವಹಿಸುವ ವ್ಯವಸ್ಥೆ ಮಾಡಿದರೆ ಪಂಚಾಯತಿನ ವರಮಾನಗಳನ್ನು ಹೆಚ್ಚಿಸಬಹುದು.

ಕೆಲವು ನಿರ್ದೇಶನಗಳು

1. ವರಮಾನದ ಸಣ್ಣ ಶೇಕಡಾ ಮಾನವಾದರೂ ತೆರಿಗೆಯಾಗಿ ವಿಧಿಸಿದರೆ ಮಾತ್ರ ಎಲ್ಲರೂ ಪಾವತಿಸಲು ಸಾಧ್ಯ.
2. ಕಟ್ಟಡ ತೆರಿಗೆಯನ್ನು ಸರಿಯಾದ ಕ್ರಮದಲ್ಲಿ ವಸೂಲಿ ಮಾಡುವುದು ಮತ್ತು ಕಟ್ಟಡಗಳಿಂದ ಪ್ರಕೃತ ಸಿಗುವ ಬಾಡಿಗೆಯನ್ನು ಸರಿಯಾಗಿ ಪರಿಶೀಲಿಸಿ ಕಟ್ಟಡ ತೆರಿಗೆಯನ್ನು ವಿಧಿಸುವುದರ ಮೂಲಕ.
3. ಪ್ರತಿಯೊಬ್ಬನ ಆದಾಯ ತೆರಿಗೆಯನ್ನು ಪಂಚಾಯತಿನಲ್ಲಿಯೇವಸೂಲಿ ಮಾಡುವುದು.
4. ನಮ್ಮ ಪಂಚಾಯತಿನ ಪೆರ್ಲ ಬಸ್ಸು ತಂಗುದಾಣಕ್ಕೆ ಬರುವ ಎಲ್ಲಾ ಬಸ್ಸುಗಳಿಗೂ 5 ರೂಪಾಯಿಯಂತೆಯಾದರೂ ತೆರಿಗೆಯನ್ನು ವಿಧಿಸುವುದು.
5. Shoping Complex ಸ್ಥಾಪಿಸಿ ಬಾಡಿಗೆಗೆ ಕೊಡುವುದು.
6. ಜಾಹೀರಾತು ತೆರಿಗೆಯನ್ನು ಪಂಚಾಯತು ಜಾರಿಗೊಳಿಸಿರುವುದನ್ನು ಕಾರ್ಯ ರೂಪಕ್ಕೆ ತರುವುದು.
7. ವಾಹನ ತೆರಿಗೆಯನ್ನು ಆಯಾ ಪಂಚಾಯತಿನಲ್ಲಿಯೇ ವಿಧಿಸುವ ಹಾಗೆ ಮಾಡುವುದು.
8. ಪ್ರತಿ ಮದುವೆಗಳನ್ನು ಪಂಚಾಯತಿನಲ್ಲಿ ರಿಜಿಸ್ಟ್ರೇಶನ್ ಮಾಡಿ ಅದರಿಂದ ಪ್ರೀಸ್ ಪಡೆಯುವುದು.
9. ಪಂಚಾಯತ್ ಪ್ರದೇಶದಲ್ಲಿ ಕೆಂಪುಕಲ್ಲು ಕಡಿಯುವ ಯಂತ್ರಗಳಿಗೆ ತೆರಿಗೆಯನ್ನು ವಿಧಿಸುತ್ತಾರೆ.
10. ಪೊರಂಬೋಕು ಸ್ಥಳಗಳಿಂದ ಹೆಚ್ಚಿನ ಆದಾಯವನ್ನು ಪಡೆಯುವುದಕ್ಕಾಗಿ ತಕ್ಕ ಕ್ರಮ ತೆಗೆದು ಕೊಳ್ಳಬೇಕು.
11. ವಿನೋದ ತೆರಿಗೆಯನ್ನು ಹೆಚ್ಚುಗೊಳಿಸುವುದಕ್ಕಾಗಿ ಒಂದು ಕಲಾ ಮಂದಿರವನ್ನು ನಿರ್ಮಿಸಿ ಬಾಡಿಗೆಗೆ ಕೊಡುವುದು.
12. ಪಂಚಾಯತ್ ಮಟ್ಟದಲ್ಲಿ ಒಂದು ಸಿನಿಮಾ ಥಿಯೇಟರ್ ತೆರೆಯುವುದು.
13. ವೃತ್ತಿ ತೆರಿಗೆಗಳನ್ನು ಹೆಚ್ಚಿಸುವಾಗ ಇರುವ ಕ್ರಮಗಳನ್ನು ಬದಲಾಯಿಸಿ ಕ್ರಮ ಪ್ರಕಾರವಾಗಿ ಕಡಿಮೆ ಕೃಷಿ ಉತ್ಪತಿಯವರಿಗೆ ಮತ್ತು ಹೆಚ್ಚು ಉತ್ಪತ್ತಿ ಇರುವವರಿಗೆ ಅವರವರ ಉತ್ಪತ್ತಿಗನುಸಾರವಾಗಿ ತೆರಿಗೆಯನ್ನು ನಿಶ್ಚೈಯಿಸುವುದರಿಂದ ಮತ್ತು ಮಿಲ್, ಕಂಪೆನಿಗಳಿಗೆ ವೃತ್ತಿ ತೆರಿಗೆ ಹೊರಿಸುವುದು. ಕೆಂಪು ಕಲ್ಲಿನ ಕೋರೆಗಳಿರುವುದರಿಂದ ಅವುಗಳಿಗೂ ಫೀಸು ವಿಧಿಸುವುದು. ಅದೇ ರೀತಿ ಕಾಂಟ್ರಕ್ಟುದಾರರಿಗೂ ವೃತ್ತಿ ತೆರಿಗೆಯನ್ನು ವಿಧಿಸುವುದು.
14. ಪೆರ್ಲದಲ್ಲಿ ತಂಗುವ ಎಲ್ಲಾ ಬಸ್ಸಿನ ಉದ್ಯೋ ಗಸ್ತರಿಂದಲೂ ವೃತ್ತಿ ತೆರಿಗೆಯನ್ನು ವಸೂಲು ಮಾಡುವುದು.
15. ಪ್ರತೀ ಬಸ್ಸಿನ ಮಾಲಕರಿಗೆ ಆದಾಯದ ಮೇಲೆ ತೆರಿಗೆಯನ್ನು ವಿಧಿಸುವುದು.
16. ಹೊಳೆಯಿಂದ ತೆಗೆಯುವ ಹೊಯಿಗೆಯ ಮೇಲೆ ನಿರ್ಬಂಧ ತೆರಿಗೆ ವಸೂಲಿ ಮಾಡುವುದು.
17. ಪರಂಬೋಕು ಸ್ಥಳಗಳಲ್ಲಿರುವ ಕೃಷಿ ಉತ್ಪನ್ನಗಳನ್ನು ಏಲಂ ಗೊಳಿಸುವುದು.
18. ಉತ್ಸವ ಸ್ಥಳಗಳಲ್ಲಿ ಸ್ಯಾನಿಟರಿ ಸೌಕರ್ಯವನ್ನು ಒದಗಿಸಿ, ತಾತ್ಕಾಲಿಕ ವ್ಯಾಪಾರಿಗಳಿಂದ ಹೆಚ್ಚು ಫೀಸುಗಳನ್ನು ವಸೂಲಿ ಮಾಡುವುದು.
19. ಪಂಚಾಯತಿನಲ್ಲಿ ಗುಡಿ ಕೈಗಾರಿಕೆಗಳನ್ನು ತೆರೆದು ತೆರಿಗೆಯನ್ನು ವಿಧಿಸುವುದು.
20. ಪಂಚಾಯತಿನಲ್ಲಿ ಕಲ್ಯಾಣ ಮಂಟಪಗಳನ್ನು ಕಟ್ಟಿ ಬಾಡಿಗೆಗೆ ಕೊಡುವುದರಿಂದ ಹೆಚ್ಚಿನ ಬಾಡಿಗೆ ಲಭಿಸುವುದು.
21. ಖಾಸಗೀ ಬೀಡಿ ಕಾಂಟ್ರಾಕ್ಟುದಾರರಿಂದ ಹೆಚ್ಚಿನ ತೆರಿಗೆಯನ್ನು ವಸೂಲಿ ಮಾಡುವುದು.

ಕಟ್ಟಡ ತೆರಿಗೆ : ಈಗ ಕಟ್ಟಡ ತೆರಿಗೆ ವಸೂಲಿ ಮಾಡುವ ರೀತಿಯು ಶಾಸ್ತ್ರೀಯವಾಗಿಲ್ಲ. ಪ್ರತಿ ಮನೆಯ ಅಡಿಪಾಯದ ವಿಸ್ತೀರ್ಣ ನೋಡಿಕೊಂಡು ತೆರಿಗೆಯನ್ನು ವಿಧಿಸಲಾಗುತ್ತದೆ. ಆರ್ಡಬರ ರೀತಿಯಲ್ಲಿ ಮನೆಗಳ ನ್ನು ನಿರ್ಮಿಸುವವರಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸಬಹುದು. ಯಾವ ಮಾನ ದಂಡವನ್ನು ಇಟ್ಟುಕೊಂಡು ತೆರಿಗೆಯನ್ನು ವಸೂಲಿ ಮಾಡುತ್ತೇವೆಯೋ ಅದರ ಕುರಿತು ಒಡೆಯನಿಗೆ ಮಾಹಿತಿ ನೀಡಬೇಕು. ಇದಕ್ಕಾಗಿ Assessement Committeeಯನ್ನು ನೇಮಿಸೂಬೇಕು.

ವೃತ್ತಿ ತೆರಿಗೆ : ಪಂಚಾಯತಿಗೊಳಪಟ್ಟ ಎಲ್ಲಾ ಸರಕಾರೀ ಉದ್ಯೋಗಸ್ತರಿಂದ ವೃತ್ತಿ ತೆರಿಗೆಯನ್ನು ವಸೂಲಿ ಮಾಡಲಾಗುತ್ತದೆ. ಸರಕಾರೀ ಉದ್ಯೋಗದಲ್ಲಿರುವ ಜನರು ಕಡಿಮೆ ಇರುವುದರಿಂದಾಗಿ ಬೇರೆ ಕೆಲಸ ಮಾಡುವ ಎಲ್ಲರಿಂದಲೂ ವೃತ್ತಿ ತೆರಿಗೆಯನ್ನು ಆಯಾ ವೃತ್ತಿಗನುಸಾರವಾಗಿ ತೆರಿಗೆಯನ್ನು ವಿಧಿಸಬೇಕು. ಅದು ಮಾತ್ರವಲ್ಲದೇ ಎಲ್ಲಾ ನಿರ್ಮಾಣ ಕೆಲಗಾರರಿಗೂ ಇದು ಬಾದಿಸುವಂತಿರಬೇಕು. ಇದಕ್ಕೆ ಬೇಕಾಗಿ ಎಲ್ಲರನ್ನೂ ಪಂಚಾಯತ್ ಮಟ್ಟದಲ್ಲಿ Group Insurence Schemನಲ್ಲಿ ಸೇರಿಸಿ, ಈ ಮೆಂಬುರುಗಳಿಂದ ತೆರಿಗೆಯನ್ನು ವಸೂಲಿ ಮಾಡುವಂತಾಬೇಕು. ಅದೇ ರೀತಿ ಇದು ಎಲ್ಲಾ ವರ್ಗದ ವ್ಯಾಪಾರಸ್ಥರಿಗೂ ಭಾದಕವಾಗುವಂತಿರಬೇಕು.

ಮನೋರಂಜನೆ : ಈ ಪಂಚಾಯತಿನಲ್ಲಿ ಟಿಕೇಟು ಇಟ್ಟು ನಡೆಸುವಂತಹ ಯಕ್ಷಗಾನ ಬಯಲಾಟ ಮೊದಲಾದ ಮನೋರಂಜನಾ ಪ್ರದರ್ಶನಕ್ಕೆ ಹಣ ಸಂಗ್ರಹದ ಆಧಾರದ ಮೇಲೆ ತೆರಿಗೆಯನ್ನು ವಿಧಿಸಬೇಕು. ಅದೇ ರೀತಿ ಮನೋರಂಜನೆಗಾಗಿ ಇರುವ ಒಂದು ಸಿನೇಮಾ ಥಿಯೇಟರನ್ನು ಪಂಚಾಯತ್ ಮಟ್ಟದಲ್ಲಿ ತೆರೆಯುವಂತೆ ಪ್ರೋತ್ಸಾ ನೀಡುವುದು. ಇದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ತೆರಿಗೆ ರೂಪದ ವರಮಾನವು ಸಿಗುವಂತಾಗುವುದು. ಇದಲ್ಲದೇ ಪಂಚಾಯತ್ ಮಟ್ಟದಲ್ಲಿ ಒಂದು ಕಲಾ ಮಂದಿರವನ್ನು ಸ್ಥಾಪಿಸಿ ವಿವಿಧ ಕಲಾ ಪ್ರದರ್ಶನಗಳನ್ನು ನಡೆಸುವಂತೆ ಪ್ರೋತ್ಸಾಹವನ್ನು ಕೊಟ್ಟರೆ ಹೆಚ್ಚಿನ ಪ್ರಮಾಣದಲ್ಲಿ ಬಾಡಿಗೆ ರೂಪದಲ್ಲಿ ಪಂಚಾಯತ್ ವರಮಾನವಾಗಿ ಬರಬಹುದು.

ಉದಾ : ವಿವಿಧ ಸಂಘ ಸಂಸ್ಥೆಗಳಿಂದ ಈ ಕಲಾ ಮಂದಿರದಲ್ಲಿ ನಾಟಕವೇ ಮೊದಲಾ ಕಲಾ ಪ್ರದರ್ಶನಗಳನ್ನು ಮಳೆಗಾಲದಲ್ಲಿಯೂ ಕೂಡಾ ಪ್ರವೇಶ ಶುಲ್ಕ ವಿಧಿಸಿ ಏರ್ಪಡಿಸಬಹುದು.

ಇತರ ಧನಾಗಮ ಮಾರ್ಗಗಳು : ಪಂಚಾಯತಿನ ಅಧೀನದಲ್ಲಿ ಒಟ್ಟು 535.30 Accr. ಪರಂಬೋಕು ಭೂಮಿ ಇದೆ. ಈಗ ಪಂಚಾಯತಿಗೆ ಇದರಿಂದ ಸರಿಯಾದ ತೆರಿಗೆಯು ದೊರೆಯುವುದಿಲ್ಲ. ಆದುದರಿಂದ ಪಂಚಾಯತು ಪರಂಬೋಕು ಸ್ಥಳಗಳನ್ನು ಗುರುತಿಸಿ ಯಾರ ಯಾರ ಅಧೀನದಲ್ಲಿ ಎಂಬುದನ್ನು ತಿಳಿದು ಆಯಾ ಅನುಭವಿ ಕೃಷಿಕನಿಗೆ ಸರಿಯಾದ ತೆರಿಗೆಯನ್ನು ಕೊಟ್ಟಲ್ಲಿ ಅಧಿಕ ಆಧಾಯ ನಮ್ಮ ಪಂಚಾಯತಿಗೆ ದೊರೆಯುವುದು.

ಕೃಷಿ ಸಂಖ್ಯೆ	ಗ್ರಾಮಗಳು	ಇರುವ ಪರಂಬೋಕು ಸ್ಥಳ Hecter
1	ಎಣ್ಮಕಜೆ	279.89
2	ಕಾಟುಕುಕ್ಕೆ	85.72
3	ಪಡ್ರೆ	53.61
4	ಮೈರೆ	114.08
	ಒಟ್ಟು	535.30 Hecter

ಈ ಪಂಚಾಯತಿನಲ್ಲಿ ಎಷ್ಟೋ ಅಲೆಮಾರಿ ನಾಯಿಗಳಿರುತ್ತವೆ. ಇದರಿಂದ ಸಾರ್ವಜನಿಕರಿಂದ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ಪ್ರತಿ ಮನೆಗಳಲ್ಲಿಯೂ ಸಾಕುವ ನಾಯಿಗಳಿಗೆ ಲೈಸೆನ್ಸ್ ಮಾಡಿಸಬೇಕು. ಮಾತ್ರವಲ್ಲದೇ ವಿಶೇಷ ಲೈಸೆನ್ಸ ನೀಡಿ ತೆರಿಗೆಯನ್ನು ವಸೂಲಿ ಮಾಡುವುದಲ್ಲೇ ಚುಚ್ಚು ಮದ್ದನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕು.

ಖನಿಜ ಸಂಪತ್ತು

ಈ ಪಂಚಾಯಿತಿನ ವ್ಯಾಪ್ತಿಯಲ್ಲಿ ವಿಶೇಷ ತರದ ಖನಿಜ ಸಂಪತ್ತುಗಳು ಇರುವುದಾಗಿ ತಿಳಿದು ಬಂದಿಲ್ಲ. ಆದರೆ ಈ ಪ್ರದೇಶದಲ್ಲಿ ಯಂತ್ರಗಳನ್ನು ಉಪಯೋಗಿಸಿ ಕೆಂಪು ಕಲ್ಲು ಕಡಿಸುವ ಮಾಲಕರು ಇದ್ದಾರೆ. ಇವರಿಂದ ಸರಿಯಾದ ಲೆಸನ್ಸ್ ಫೀ ಮತ್ತು ತೆರಿಗೆಯನ್ನು ವಸೂಲು ಮಾಡುವುದರಿಂದ ಪಂಚಾಯತಿಗೆ ಅಧಿಕ ವರಮಾನ ದೊರೆಯುವುದು. ಆದ್ದರಿಂದ ಪಂಚಾಯತಿನ ಸರಹದ್ದಿನಲ್ಲಿ ಕಲ್ಲು ಕಡಿಸುವ ಎಲ್ಲಾ ಮಾಲಕರಿಗೂ ಈ ನಿಯಮವು ಅನ್ವಯಿಸತಕ್ಕದ್ದು.

ಬ್ಯಾಂಕಿಂಗ್ ಸೌಲಭ್ಯಗಳು

ನಮ್ಮ ಈ ಪಂಚಾಯತ್‌ನಲ್ಲಿ ಎರಡು ಸರ್ವೀಸ್ ಸಹಕಾರೀ ಬ್ಯಾಂಕ್. ಜಿಲ್ಲಾ ಸಹಕಾರಿನ ಬ್ಯಾಂಕಿನ ಒಂದು ಶಾಕೆ, ಅದೇ ರೀತಿ ಮಲಬಾರ್ ಗ್ರಾಮೀಣ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕಂ, ವಿಜಯಾ ಬ್ಯಾಂಕ್‌ಗಳ ಒಂದೊಂದು ಶಾಖೆಗಳಿರುತ್ತವೆ. ಈ ಬ್ಯಾಂಕುಗಳು ವಿವಿಧ ರೀತಿಯಲ್ಲಿ ಹಣ ಸಂಗ್ರಹಿಸುತ್ತದೆ. ಅದೇ ರೀತಿ ವಿವಿಧ ವಲಯಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಮದಲ್ಲಿ ಸಾಲದ ರೂಪದಲ್ಲಿ ಹಣವನ್ನು ನೀಡುತ್ತವೆ. ಇದರಿಂದಾಗಿ ಕೃಷಿ, ವ್ಯಾಪಾರ, ಸಣ್ಣ ಸಣ್ಣ ಕಿರು ಕೈಗಾರಿಕೆಗಳನ್ನು ಈ ಪಂಚಾಯತ್‌ನಲ್ಲಿ ಮಾಡಲು ಸಾಧ್ಯವಾಗಿರುತ್ತದೆ. ಈ ಬ್ಯಾಂಕುಗಳ ಮಾಹಿತಿ ಸಂಗ್ರಹವು ಈ ರೀತಿಯಾಗಿರುತ್ತವೆ.

ಬ್ಯಾಂಕುಗಳ ಮಾಹಿತಿ ಸಂಗ್ರಹ

ಕ್ರಮ ಸಂಖ್ಯೆ	ಬ್ಯಾಂಕುಗಳ ಹೆಸರು	ಖಾಯಂ ಠೇವಣಿ	ಅಲ್ಪಾವಧಿ	ಸಾಲಗಳು
1	ನೋರ್ತ್ ಮಲಬಾರ್ ಗ್ರಾಮೀಣ ಬ್ಯಾಂಕ್	38,00,000	16,00,000	60,00,000
2	ಸಿಂಡಿಕೇಟ್ ಬ್ಯಾಂಕ್ ಪೆರ್ಲ	1,7,282,502	1,33,34,759	13,40,30,48
3	ವಿಜಯಾ ಬ್ಯಾಂಕ್	56,28,705	22,67,923	64,52,261
4	ಜಿಲ್ಲಾ ಬ್ಯಾಂಕ್	40,04,166	10,71,305	24,72,139
5	ಪೆರ್ಲ ಎಸ್.ಸಿ. ಬ್ಯಾಂಕ್	72,39,836	39,21,711	2,06,29,291
6	ಕಾಟುಕುಕ್ಕೆ ಎಸ್.ಸಿ. ಬ್ಯಾಂಕ್	43,60,064	12,17,357	83,25,579

ನಮ್ಮ ಪಂಚಾಯತಿನ ಆದಾಯದ 50 ಶೇ. ವನ್ನು ರಸ್ತೆ ನಿರ್ಮಾಣ ಮತ್ತು ರಸ್ತೆ ದುರಸ್ತಿಗಾಗಿ ವಿನಿಯೋಗಿಸಲಾಗುತ್ತದೆ. ಈಹಣವನ್ನು ಪ್ರತೀ ವಾರ್ಡಿಗೆ ಒಂದು ನಿರ್ದಿಷ್ಟ ಶೇ. ದರದಲ್ಲಿ ವಿನಿಯೋಗಿಸಲಾಗುತ್ತಿದೆ. ಇದರಿಂದಾಗಿ ಪ್ರತೀ ವಾರ್ಡುಗಳಲ್ಲಿ ಕೆಲವು ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. ಹೀಗೆ ವಿನಿಯೋಗಿಸಿ ಈ ಸಣ್ಣಪುಟ್ಟ ಕೆಲಸಗಳನ್ನು ಮಾಡುವುದರ ಬದಲು ಇದನ್ನು ಪಕ್ಕಾ ರಸ್ತೆ (ಡಾಮರೀಕರಣಕ್ಕಾಗಿ) ಉಪಯೋಗಿಸಬಹುದು. ಹೀಗೆ ನಿರ್ಮಿಸುವುದರಿಂದ ದುರಸ್ತಿಯ ಖರ್ಚು ಕಡಿಮೆ ಮಾಡಬಹುದು. ಪಂಚಾಯತ್ತು ದುರಸ್ಥಿಯ ಕೆಲಸವನ್ನು ಆ ಊರಿನ ಫಲಾನುಭವಗಳಿಗೆ ವಹಿಸಿಕೊಡುವುದರಿಂದ ಅದರ ಗುಣಮಟ್ಟವನ್ನು ಹೆಚ್ಚಿಸಬಹುದು.

ಭೂ ತೆರಿಗೆ : ಈಗ ಎಲ್ಲಾ ಪಂಚಾಯತುಗಳಂತೆ ನಮ್ಮ ಪಂಚಾಯತಿಗೂ ಭೂ ತೆರಿಗೆಯನ್ನು ವಸೂಲು ಮಾಡುವ ಅಧಿಕಾರವಿಲ್ಲ. ಭೂ ತೆರಿಗೆಯನ್ನು ವಸೂಲು ಮಾಡುವ ಅಧಿಕಾರವನ್ನು ಪಂಚಾಯತಿಗೆ ವಹಿಸಿಕೊಡಬೇಕು. ಈಗೆ ಎಕ್ರೆಗೆ 20 ರೂಪಾಯಿಯಂತೆ ಭೂ ತೆರಿಗೆಯನ್ನು ವಸೂಲು ಮಾಡಲಾಗುತ್ತದೆ ಆದರೆ ಕೆಲವು ಕಡಿಮೆ ಭೂಮಿಯು ವ್ಯತ್ಯಸ್ತ ರೀತಿಯಲ್ಲಿರುತ್ತದೆ. ಆದುದರಿಂದ ಭೂಮಿಯ ತರಗತಿಯನ್ನು ಹೊಂದಿಕೊಂಡು ಫಲವತ್ತತೆಯನ್ನು ನೋಡಿಕೊಂಡು ತೆರಿಗೆಯನ್ನು ವಿಧಿಸಬೇಕು.

ಪಂಚಾಯತಿನ ವಾರ್ಡುಗಳ ಸಾರಿಗೆ ಸೌಕರ್ಯಗಳು ಇರುವ ಭಾಗಗಳ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಮಾಡುವುದರಿಂದ ಏಲಂನ ಮೂಲಕ ಅತ್ಯಧಿಕ ತೆರಿಗೆಯನ್ನು ಪಡೆಯಬಹುದು.

ದೇಶೀಯ ಉಳಿತಾಯ ಯೋಜನೆ

ದೇಶೀಯ ಉಳಿತಾಯ ಯೋಜನೆ (National Saving Scheme) ಯ ಪ್ರಕಾಸ ಸಂಗ್ರಹ ಮಾಡುವ ಇಂದಿರಾ ವಿಕಾಸ ಪತ್ರ 25% ದಷ್ಟು ಪರಮಾನವು ಪಂಚಾಯತಿಗೆ ಗ್ರಾಂಟ್ ಆಗಿ ದೊರೆಯುತ್ತದೆ. ಈ ಬಗ್ಗೆ ಠೇವಣಿಗಳನ್ನು ಸಂಗ್ರಹಿಸುವುದಕ್ಕಾಗಿ ಪಂಚಾಯತಿನಿಂದ ವಿದ್ಯಾವಂತ ನಿರುದ್ಯೋಗಿಗಳನ್ನು ನೇಮಿಸುವುದರಿಂದ ಪಂಚಾಯತಿಗೆ ಆದಾಯವನ್ನು ಹೆಚ್ಚಿಸಲು ಸಾಧ್ಯವಿದೆ.

ಮನುಷ್ಯ ಶ್ರಮ : ಪಂಚಾಯತಿನ ಎಲ್ಲಾ ಕ್ಷೇತ್ರಗಳಲ್ಲಿ ನಡೆಯುವ ಕಾಮಗಾರಿ ಅಭಿವೃದ್ಧಿ ಕೆಲಸಗಳಿಗೆ ಪಂಚಾಯತಿನ ಮತ್ತು ಸರಕಾರದಿಂದ ಸಿಕ್ಕುವ ಗ್ರೇಂಟ್ ವಗೈರೆಗಳು ಸಾಕಾಗದೆ ಇರುವಲ್ಲಿ ಆಯಾಯ ಗ್ರಾಮದ ಜನರೆಲ್ಲ ಸೇರಿ ಮನುಷ್ಯ ಶ್ರಮ ನಡೆಸುವುದರಿಂದ ಪಂಚಾಯತಿನ ಕೆಲಸಗಳನ್ನು ನಿರ್ವಹಿಸಬಹುದು. ಇದಕ್ಕಾಗಿ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದಿಂದ ಇದನ್ನು ಹೆಚ್ಚು ಫಲಪ್ರದವಾಗಿ ಮಾಡಬಹುದು.

ದ್ವಿತೀಯ ಮಾಹಿತಿ ಸಂಗ್ರಹದ ಪ್ರಕಾರ ಕಟ್ಟಡ ತೆರಿಗೆ ಕುರಿತಾದ ಮಾಹಿತಿ

ವಾರ್ಡುಗಳು	ಕಟ್ಟಡಗಳ ಸಂಖ್ಯೆ	ಒಂದಕ್ಕಿಂತ ಹೆಚ್ಚು ಅಂತಸ್ತುಗಳ ಕಟ್ಟಡ	ಮಾಡಿನ ಸ್ವಭಾವ ಒಂದು ಹಂತದ ಕಟ್ಟಡ				ವಿವಿಧ ಗೃಹ ನಿರ್ಮಾಣ ಯೋಜನೆಗಳ ಮೂಲಕ ನಿರ್ಮಿಸಲಾದ ಮನೆಗಳು
			ಕಾಂಕ್ರೀಟು	ಹಂಚು	ಸೋಗೆ	ಇತರ	
1	616	15	25	336	240	-	100
2	440	10	25	330	75	-	75
3	400	50	75	225	50	-	50
4	420	30	50	240	100	-	50
5	594	10	10	499	75	-	100
6	496	8	25	403	60	-	70
7	605	16	29	432	128	-	40
8	460	6	8	229	150	-	60
9	480	5	10	365	100	-	280
10	380	16	10	270	84	-	28
11	800	40	80	652	28	-	15

ಪಂಚಾಯತಿ ನಲ್ಲಿರುವ ಒಟ್ಟು ಕಟ್ಟಡಗಳ ಸಂಖ್ಯೆ	
1991-92	5393
92-93	5413
93-94	5473
95-95	5571
95-96	5691

ಖರ್ಚಿಗೆ ಸಂಬಂಧಿಸಿದ ಮಾಹಿತಿಗಳು

ಬಾಬ್ತು	ಮೊತ್ತ
ಆಡಳಿತ	418478.00
ಕಾಮಗಾರಿ	869247.00
ಶಿಕ್ಷಣ	24082.00
ನೀರು, ವಿತರಣೆ, ಕಾಲುವೆ	
ಸಾಮಾಜಿಕ ಆರೋಗ್ಯ	54,742.00
ಬೀದಿ ದೀಪಗಳನ್ನು ಉರಿಸಲು	22002.00
ಇತರ	74,281.00
ಒಟ್ಟು	14,62832.00

ಸಾಮಾನ್ಯ ಆರ್ಥಿಕ ಸ್ಥಿತಿ

ಆದಾಯ	1738740.00
ಖರ್ಚು	1462832.00

ಕಾಮಗಾರಿ ಕೆಲಸಗಳ ವಿವರಗಳು

ಕೆಲಸದ ಸ್ವಭಾವ	ಎಸ್ಟಿಮೇಟ್ ಮೊತ್ತ	ಗ್ರಾಂಟ್	ಯಥಾರ್ಥ ಖರ್ಚು ಪಂಚಾಯತ್ ನಿಧಿ	ಒಟ್ಟು
ರಸ್ತೆ	153027.00	52521.00	49497.00	102018.00
ತೋಡು	-	-	-	-
ಕಟ್ಟಡ	-	-	-	-
ಕಾಲುಸಂಕ	65,000.00	-	51182.00	51182.00
ಇತರ	25,000.00	-	22891.00	22,891.00
ಒಟ್ಟು	243027.00	52521.00	123560.00	1,76,081.00

ಹಿನ್ನುಡಿ

ಇದೊಂದು, ಎಣ್ಮಕಜೆ ಗ್ರಾಮ ಪಂಚಾಯತಿನ ಒಂಭತ್ತನೇ ಪಂಚ ವಾರ್ಷಿಕ ಯೋಜನೆಯ ಕುರಿತಾಗಿ ಕೈಗೊಂಡ ಅಧ್ಯಯನಾತ್ಮಕ ವರದಿಯಾಗಿದೆ. ಅಲ್ಪ ಸಮಯದಲ್ಲಿ ಈ ಪಂಚಾಯತಿನ ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ತಯಾರಿಸಲಾದ, ಇದರಲ್ಲಿ ಸಮಗ್ರ ಪಂಚಾಯತಿನ ಕುರಿತು ಬರೆಯಲಾಗಿದೆ. ಆದರೆ ಇದು ಪರಿಪೂರ್ಣವಾಗಿದೆ ಎನ್ನುವ ಧೈರ್ಯವಿಲ್ಲ. ತಪ್ಪುಗಳು, ಲೋಪದೋಷಗಳು, ಮುದ್ರಾದೋಷಗಳಿದ್ದಲ್ಲಿ 'ಹಂಸಕ್ಷೀರ ನ್ಯಾ'ದಂತೆ ಒಳಿತನ್ನು ಸ್ವೀಕರಿಸಿ ತಪ್ಪುಗಳಿದ್ದರೆ ಮನ್ನಿಸಿ ಆಗ ಮಾತ್ರ ನಾವು ಧನ್ಯರು.

ಇಪ್ಪತ್ತೊಂದನೇಯ ಶಮಾನದೆಡೆಗೆ ಮುನ್ನುಗ್ಗಲು ನಾವು ತಯಾರಾಗಬೇಕಾಗಿದೆ ಕೇರಳ ರಾಜ್ಯದ ಅತೀ ಉತ್ತರದ ಪಂಚಾಯತಿಗೆ ತಿರುವನಂತಪುರದಿಂದ ಹೊರಟ ಆರ್ಥಿಕ ಸಂಪನ್ಮೂಲ ಅರ್ಧದಲ್ಲೇ ಮಾಯವಾಗುವ ಅಚಾತುರ್ಯಗಳು ಹಿಂದೆ ನಡೆದು ಹೋಗಿರಬಹುದು. ಕಳೆದ ಯೋಗನೆಗಳನ್ನು ಸಿಂಹಾವಲೋಕನ ಮಾಡಿದಾಗ, ನಾವು ನಡೆದು ಬಂದ ಅಭಿವೃದ್ಧಿಯ ದಾರಿ, ಹೇಳುವಷ್ಟು ಕ್ರಮಿಸಲಿಲ್ಲ. ನಾವು ಅಭಿವೃದ್ಧಿಯೆಡೆಗೆ ನಾಗಾಲೋಟದಿಂದ ಸಾಗಬೇಕಾಗಿದೆ. ನಮ್ಮ ಮಾನವ ಸಂಪನ್ಮೂಲವು ನಿಜವಾಗಿಯೂ ಉಪಯೋಗಿಸಿಲ್ಲ. ಈ ಪ್ರದೇಶ ಎಲ್ಲಾ ಕ್ಷೇತ್ರಗಳಲ್ಲೂ ಒಂದುಳಿದಿದೆ. ಇಲ್ಲಿ ವಾಸಿಸುವ ಶೇ. 35 ಮಂದಿ ಪ. ಜಾತಿ ಮತ್ತು ಪ. ವರ್ಗಕ್ಕೆ ಸೇರಿದವರು

ಭವಿಷ್ಯತ್ತಿನ ಯೋಜನೆಯ ಕುರಿತು ನಾವು ಆಶಾವಾದಿಗಳಾಗಿದ್ದೇವೆ. ನಮ್ಮೀ ಆಯಯ, ಆಕಾಂಕ್ಷೆ, ಅತೀ ಅಗತ್ಯವಾಗಿ ಗಾಲೇಬೇಕಾದ ಕಾರ್ಯಕಲಾಪಗಳ, ಕುರಿತು ಗ್ರಾಮ ಸಭೆ, ಪಂಚಾಯತ್ ಸಭೆಗಳಲ್ಲಿ ಚಿಂತನ ಮಂಥನ ಮಾಡಿ ಚರ್ಚಿಸಿ ಈ ವರದಿಗಳನ್ನು ತಯಾರಿಸಲಾಗಿದೆ.

ನಾವಿಂದು ಅನಾರೋಗ್ಯ, ಅನಕ್ಷರತೆ, ಬಡತನ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮುಂತಾದುವುಗಳ ವಿರುದ್ಧ ಸಮರವನ್ನೇ ಸಾರಬೇಕಾಗಿದೆ. ಅಧಿಕಾರಶಾಹಿಯ ನಿರ್ಮೂಲನ, ಜನರ ಆಶೋತ್ತರಗಳಿಗೆ ತೊಂದರೆಯಾಗುವ ಇತರ ತೊಡುಕುಗಳನ್ನು ಪರಿಹರಿಸುವುದೇ ಮೊದಲಾದ ಹಲವು ಕಾರ್ಯಕ್ರಮಗಳನ್ನು ನಾವು ಚ್ಯಾರಿಗೊಳಿಸಬೇಕಾಗಿದೆ.

ನಮ್ಮ ಯೋಜನೆಗಳ ಯಶಸ್ಸಿಗೆ ಸಂಪನ್ಮೂಲ ಪ್ರವಾಹ ರೂಪದಲ್ಲಿ ಹರಿಯಬೇಕಾಗಿದೆ. ಗಾಂಧೀಜಿಯವರ ಗ್ರಾಮ ರಾಜ್ಯ - ರಾಮ ರಾಜ್ಯದ ಕನಸು ನನಸಾಗಬೇಕಾಗಿದೆ. ಅದಕ್ಕಾಗಿ ಅಹರ್ನಿಶಿ ದುಡಿಯೋಣ ಎಂದು ಹಾರೈಸುತ್ತೇವೆ.